UNIVERSAL LIBRARY

OU_198625

UNIVERSAL LIBRARY

# ಕರ್ನಾಟಕಕ್ಕೆ
# ದೇವತೆಗಳ ಆಗಮನ.

ಲೇಖಕ ಹಾಗು ಪ್ರಕಾಶಕ

ಭಿ. ಪ. ಕಾಳೆ,
ಮ್ಯಾ. ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್, ಮತ್ತು ಗ್ರಂಥಮಾಲೆ
ಆನಂದವನ.

( ೨ನೇ ಆವೃತ್ತಿ. )

೧೯೩೦

ಬೆಲೆ ೧೦ ಆಣೆ.

# ದೇವತೆಗಳು ಕರ್ನಾಟಕದಲ್ಲಿ ಸಂಚರಿಸಿದ ಊರುಗಳು.


| | ಊರುಗಳು | ಪುಟ | | ಊರುಗಳು | ಪುಟ |
|---|---|---|---|---|---|
| | ಅಮರಾವತಿ | ೧ | ೧೮ | ಆನಂದವನ | ೭೨ |
| | ಬ್ರಹ್ಮಲೋಕ | ೮ | ೧೯ | ವೈಲಾರ | ೭೪ |
| | ವೈಕುಂಠ | ೧೨ | ೨೦ | ದೇವರಗುಡ್ಡ | ೭೫ |
| | ಕೈಲಾಸ | ೧೫ | ೨೧ | ಹರಿಹರ | ೭೭ |
| ೧ | ನೃಸಿಂಹವಾಡಿ | ೧೯ | ೨೨ | ದಾವಣಗೇರಿ | ೭೮ |
| ೨ | ಮಿರಜ | ೨೪ | ೨೩ | ಶಿವಮೊಗ್ಗೆ | ೮೩ |
| ೩ | ಗೋಕಾಕಫಾಲ್ಸ | ೩೩ | ೨೪ | ಶೃಂಗೇರಿ | ೮೩ |
| ೪ | ಬೆಳಗಾವ | ೩೩ | ೨೫ | ಉಡುಪಿ | ೮೫ |
| ೫ | ಪುರಗೋಡ | ೩೬ | ೨೬ | ತಲೆಕಾವೇರಿ | ೮೭ |
| ೬ | ಬಡಲಿ | ೩೭ | ೨೭ | ಮಡಿಕೇರಿ | ೮೯ |
| ೭ | ಗುರ್ಲಹೊಸೂರ | ೩೯ | ೨೮ | ಅರ್ಸೀಕೆರೆ | ೯೦ |
| ೮ | ಯಲ್ಲಮ್ಮನ ಗುಡ್ಡ | ೪೦ | ೨೯ | ತುಮಕೂರು | ೯೨ |
| ೯ | ರಾಮದುರ್ಗ | ೪೪ | ೩೦ | ಬೆಂಗಳೂರು | ೯೩ |
| ೧೦ | ಬನಶಂಕರೀ ಕ್ಷೇತ್ರ | ೪೫ | ೩೧ | ಕೋಲಾರ | ೯೯ |
| ೧೧ | ಬದಾಮಿ | ೪೬ | ೩೨ | ಶಿವಸಮುದ್ರಂ | ೧೦೫ |
| ೧೨ | ವಿಜಾಪುರ | ೪೮ | ೩೩ | ಫ್ರೆಂಚರಾಕ್ಸ | ೧೦೯ |
| ೧೩ | ಹಂಪಿಕ್ಷೇತ್ರ | ೫೨ | ೩೪ | ಶ್ರೀರಂಗಪಟ್ಟಣ | ೧೧೨ |
| ೧೪ | ಗದಗ | ೫೫ | ೩೫ | ಮೈಸೂರ | ೧೧೪ |
| ೧೫ | ಹುಬ್ಬಳ್ಳಿ | ೬೦ | ೩೬ | ನಂಜನಗೂಡು | ೧೧೯ |
| ೧೬ | ಧಾರವಾಡ | ೬೫ | ೩೭ | ಕೃಷ್ಣರಾಜಸಾಗರ | ೧೨೦ |
| ೧೭ | ಗೋಕರ್ಣ | ೬೮ | | ದೇವಲೋಕದೊಳಗಿನ ಸಭೆ. | ೧೨೫ |

# ಲೇಖಕರ ಸದುದ್ದೇಶದ ಬಗ್ಗೆ ಎರಡು ಮಾತುಗಳು

ಕನ್ನಡದಲ್ಲಿ ಇಲ್ಲದ ಪುಸ್ತಕಗಳನ್ನು ಬರೆಯುವದು ಲೇಖಕರ ಕರ್ತವ್ಯವಷ್ಟೇ; ಅದರಂತೆ "ಕರ್ನಾಟಕಕ್ಕೆ ದೇವತೆಗಳ ಆಗಮನ"ವೆಂಬ ಈ ಹೊಸ ಮಾದರಿಯ ಪುಸ್ತಕವನ್ನು ಬರೆದು ಪ್ರಸ್ತುತ ಲೇಖಕರು ಕನ್ನಡಿಗರಿಗೆ ಮಹದುಪಕಾರ ಮಾಡಿರುತ್ತಾರೆ. ಈ ಪುಸ್ತಕದ ಮುಖಾಂತರವಾಗಿ ಕರ್ನಾಟಕದೊಳಗಿನ ಐತಿಹಾಸಿಕ-ಪೌರಾಣಿಕ-ಆಧುನಿಕ ಪ್ರಸಿದ್ಧ ಸ್ಥಳಗಳ ಪರಿಚಯ, ಕರ್ನಾಟಕದಲ್ಲಿಯ ಜನರ ನಡೆ-ನುಡಿಗಳ ದಿಗ್ದರ್ಶನ, ಪರಪ್ರಾಂತದವರ ಆಚಾರ-ಸ್ವಭಾವಾದಿಗಳ ಯಥಾರ್ಥಜ್ಞಾನ ಇವು ತಕ್ಕ ಮಟ್ಟಿಗಾದರೂ ಆಗಬೇಕೆಂದು ಲೇಖಕರು ಇದರಲ್ಲಿ ಪ್ರಯತ್ನಿಸಿರುವರು. ಇದರಲ್ಲಿ ವರ್ಣಿತ ಸ್ಥಳ-ಪಾತ್ರಗಳಿಂದ ಅದು ಸಾಧಿಸಿರುವದೆಂದು ಹೇಳಬಹುದು. ಸ್ಥಳಸಂಕೋಚಕ್ಕಾಗಿ ಸೇರಿಸತಕ್ಕ ಅನೇಕ ವಿಷಯಗಳು ಉಳಿದಿರುವವು. ಮುಖ್ಯವಾಗಿ ಕರ್ನಾಟಕದ ಸಾಮಾಜಿಕ-ಧಾರ್ಮಿಕ-ಪ್ರಾಕೃತಿಕ ನಕಾಶವನ್ನು ವಾಚಕರ ಕಣ್ಣಮುಂದಿರಿಸುವದೇ ಲೇಖಕರ ಉದ್ದೇಶವಾಗಿರುವದು. ಈ ಮಾದರಿಯ ಪುಸ್ತಕಗಳು ನಮ್ಮ ಭರತಖಂಡದಲ್ಲಿಯ ಅನ್ಯಭಾಷೆಗಳಲ್ಲಿ ಪ್ರಕಟವಾಗಿರುವವು. ಕನ್ನಡದಲ್ಲಿ ಈ ಬಗೆಯ ಗ್ರಂಥಗಳ ಕೊರತೆಯನ್ನು ಪೂರೈಸುವದಕ್ಕೆ ಈ ಮೇರೆಗೆ ಯತ್ನಿಸಿದ್ದು ಸ್ತುತ್ಯವಾಗಿರುವದು. ಪ್ರಸ್ತುತದ ಈ ಪುಸ್ತಕವು ನಮ್ಮ ಕನ್ನಡ ವಾಚಕರಿಗೆ ರುಚಿಸಿದರೆ ಮುಂದೆ ಪ್ರಸಂಗ ನೋಡಿ ಕರ್ನಾಟಕದ ಉಳಿದ ಭಾಗಗಳ ವರ್ಣನೆಯನ್ನು ಮನೋರಂಜಕವಾಗುವಂತೆ ಬರೆಯಬೇಕೆಂದು ಲೇಖಕರ ಉದ್ದೇಶವಿರುವದು. ಅವರ ಈ ಸದುದ್ದೇಶದ ಲಾಭ ಪಡೆಯುವದು ನಮ್ಮ ಕನ್ನಡ ವಾಚಕವೃಂದದ ಕರ್ತವ್ಯವಾಗಿರುವದು.

ವಿಧೇಯ,

ತಾ|| ೪-೨-೨೪ ಆರ್. ಟಿ. ಕರ್ಪೂರ

Printed by
B. P, KALE, at the
Shri Sheshachal Press
Anandvan.

ಶ್ರೀ

ಕರ್ನಾಟಕಕ್ಕೆ

# ದೇವತೆಗಳ ಆಗಮನ.

## ಅಮರಾವತಿ.

ಕೆಲವು ವರ್ಷಗಳ ಮುಂಚೆ ಪುಷ್ಯಮಾಸದಲ್ಲಿ ಒಂದು ದಿನ ಶಚೀಪತಿಯಾದ ಇಂದ್ರನು ವರುಣನೊಡನೆ ಸ್ವಂತದ ಬೈಠಕಖಾನೆಯಲ್ಲಿ ಕುಳಿತುಕೊಂಡು ಹರಟೆ ಹೊಡೆಯುತ್ತಿದ್ದನು. ಶೀತಕಾಲದಲ್ಲಿ ಅಷ್ಟೊಂದು ನೀರಿನ ಅವಶ್ಯಕತೆಯಿದ್ದಿಲ್ಲವೆಂದೋ, ಅಥವಾ ಮತ್ತಾವ ಕಾರಣದಿಂದಲೋ ಆಗ್ಗೆ ಜಲಾಧಿಪತಿಯಾದ ವರುಣನು ಕೆಲವು ದಿವಸಗಳ ರಜೆ ಪಡೆಕೊಂಡು ಭೂಲೋಕದಿಂದ ಸ್ವರ್ಗಕ್ಕೆ ಬಂದಿದ್ದನು. ಬಹು ದಿನಗಳ ಪ್ರವಾಸದ ನಂತರ ಮನೆಗೆ ಬಂದಿರಲು, ಮನೆಯಲ್ಲಿ ಸುಮ್ಮನೆ ಕುಳಿತು ಕಾಲಹರಣ ಮಾಡುವದು ಯಾರಿಗಾದರೂ ಬಹು ಕಷ್ಟಕರವಾದದ್ದಷ್ಟೆ? ಆದುದರಿಂದ ಕೂಡಿದಾಗಲ್ಲ ವರುಣನು ದೇವರಾಜನ ಮನೆಗೆ ಹೋಗಿ, ಲೆತ್ತವಾಡುವದರಲ್ಲಿ ಮಗ್ನನಾಗುತ್ತಿದ್ದನು. ಇಂದು ಲೆತ್ತದಾಟವನ್ನು ಬಿಟ್ಟು ಅವರಿಬ್ಬರೂ ಅನೇಕ ಪ್ರಕಾರದ ಸಂಭಾಷಣ ಮಾಡಹತ್ತಿದರು. ಮಾತಿಗೆ ಮಾತು ಬೆಳೆಯಲು, ಇಂದ್ರನು ಅಂದದ್ದೇನಂದರೆ:--ವರುಣಾ, ಕೃತ-ತ್ರೇತ-ದ್ವಾಪರಯುಗಗಳು ಸಂದಿಹೋದವು ಈಗ ಕಲಿಯು ಅವತಾರವು ನಡೆದಿರುತ್ತದೆ. ಪೂರ್ವಕಾಲದಲ್ಲಿ ಕರ್ಣಾಟಕದೊಳಗಿನ ಪ್ರಖ್ಯಾತ ರಾಜರು ಅಶ್ವಮೇಧಪ್ರಭೃತಿ ಯಾಗಗಳ ಸಲುವಾಗಿ ನಮ್ಮನ್ನು ಕರೆಯಿಸುತ್ತಿದ್ದರು; ಮತ್ತು ಆ ನೆವದಿಂದ ಆಗಾಗ್ಗೆ ನಮಗೆ ಆ

ಪುಣ್ಯಪ್ರದ ಕರ್ಣಾಟಕದ ದರ್ಶನವೂ ಘಟಿಸುತ್ತಿತ್ತು; ಆದರೆ ಪ್ರಸ್ತುತಕಾಲದಲ್ಲಿ ಅಂಥ ಯಜ್ಞ-ಯಾಗಗಳೆಲ್ಲಿಯೂ ನಡೆಯುವದಿಲ್ಲ. ಆದುದರಿಂದ ಅಲ್ಲಿಗೆ ನಮ್ಮ ಹೋಗೆ-ಬರೋಣವು ಸಂಪೂರ್ಣವಾಗಿ ನಿಂತು ಹೋಗಿದೆ. ಆಧುನಿಕ ಜನರು ಸರ್ವಸಾಧಾರಣ ಕರ್ಮಗಳಲ್ಲಿ "ಓಂ ಪ್ರಜಾಪತೇ", "ಓಂ ಇಂದ್ರಾದಿ ದಶದಿಕ್ಪಾಲೇಭ್ಯಃ" ಎಂದು ನಮ್ಮನ್ನು ಆಗಾಗ್ಗೆ ಸ್ಮರಿಸುತ್ತಿರುವದೇನೋ ನಿಜ; ಆದರೆ ಆವರಲ್ಲಿಗೆ ಹೋದರೆ, ಆಕಂಠವಾಗಿ ಆಹಾರ-ಪಾನಾದಿಗಳು ಸಿಗುವವೋ ಇಲ್ಲವೋ ಎಂಬ ಆಶಂಕೆಯಿಂದ ನಾವು ಅಲ್ಲಿಗೆ ಹೋಗುತ್ತಿರುವದಿಲ್ಲ; ಅಂತೂ ನಮ್ಮ ಪ್ರತ್ಯಕ್ಷ ಬರುವಿಕೆಯ ಬಗ್ಗೆ ಅಷ್ಟು ಲವಲವಿಕೆಯನ್ನು ತೋರುವದಿಲ್ಲ. ವರುಣಾ, ನೀನು ಸದೋದಿತ ಪೃಥ್ವಿಯಲ್ಲೇ ವಾಸವಾಗಿರುತ್ತಿ; ಯಾಕಂದರೆ ಅಲ್ಲಿಯ ಸಮಸ್ತ ದೇಶಗಳಲ್ಲಿ, ಸಮಸ್ತ ಸ್ಥಳಗಳಲ್ಲಿ ಹಾಗು ಸಮಸ್ತ ಜೀವ-ಜಂತುಗಳಿಗೆ ಯಥಾಕಾಲದಲ್ಲಿ ಜಲವನ್ನೊದಗಿಸುವ ಕೆಲಸವು ನಿನ್ನ ಕಡೆಗೇ ಇರುತ್ತದೆ. ಆದುದರಿಂದ, ಈಗ ಕರ್ಣಾಟಕದಲ್ಲಿ ಯಾವ ರಾಜನು ಆಳುತ್ತಿರುವನು? ಅಲ್ಲಿಯ ಪರಿಸ್ಥಿತಿಯು ಹೇಗಿರುತ್ತದೆ? ಮುಂತಾದುದನ್ನು ಹೇಳು ನೋಡೋಣ.

ವರುಣ:— "ಬ್ರಿಟನ್‌ವೆಂಬ ಪುಟ್ಟ ದ್ವೀಪದಲ್ಲಿ ಇಂಗ್ಲಿಷರೆಂಬ ಜನಾಂಗದವರು ವಾಸಿಸುತ್ತಿರುವರು. ಸಾಂಪ್ರತ ಕಾಲದಲ್ಲಿ ಅವರೇ ಭಾರತಭೂಮಿಯನ್ನು ಏಕಛತ್ರಾಧಿಪರಾಗಿ ಆಳುತ್ತಿರುವರು. ಅವರಂಥ ಬುದ್ಧಿವಾನ್‌ಜನರನ್ನು ನಾನು ಎಲ್ಲಿಯೂ ಯಾವ ಯುಗದಲ್ಲಿಯೂ ನೋಡಿರುವದಿಲ್ಲ. ಪೃಥ್ವಿಯ ಇಂಥದೊಂದು ಖಂಡದಲ್ಲಿ ಅವರ ರಾಜ್ಯವಿರುವದಿಲ್ಲೆಂದು ಹೇಳಲಿಕ್ಕೆ ಶಕ್ಯವಿಲ್ಲ. ಸ್ವರ್ಗಲೋಕದೊಳಗೆ ಇಂಗ್ಲಿಷರ ರಾಜ್ಯವಿರುವದಿಲ್ಲೆಂಬದೇನೋ ನಿಜ; ಆದರೆ ಕ್ಷಿಪ್ರದಲ್ಲಿಯೇ ಈ ಸ್ವರ್ಗರಾಜ್ಯವು ಕೂಡ ಇಂಗ್ಲಿಷರ ವಶವಾಗದೆ ಇರದು."

ಇಂದ್ರ(ನಗುತ್ತ):--ವರುಣಾ, ಕೇವಲ ಪೋರನಂತೆ ಹೀಗೇಕೆ ಮಾತನಾಡುತ್ತಿರುವೆ? ಸ್ವರ್ಗಕ್ಕೆ ಬರಲಿಕ್ಕೆ ಇಂಗ್ಲಿಷರಿಗೆ ದಾರಿಯಾದರೂ ಉಂಟೆ?

ವರುಣ:—ದಾರಿ ಗೊತ್ತಾಗದ್ದರಿಂದಲೇ ಈ ವರೆಗೆ ಅವರು ಇಲ್ಲಿಗೆ ಬಂದಿರುವದಿಲ್ಲ; ಆದರೆ ಅವರು ಹಳ್ಳೇ ಸಾಹಸಿಗರೂ, ಸತತ

ಪ್ರಯತ್ನ ಮಾಡುವವರೂ ಇರುವದರಿಂದ, ಶೀಘ್ರವೇ ಸ್ವರ್ಗದ ದಾರಿಯನ್ನು ಕಂಡುಕೊಳ್ಳದೆ ಬಿಡಲಾರರು. ಸ್ವರ್ಗದ ಮಾರ್ಗ ಶೋಧಕ್ಕಾಗಿ ಅವರು 'ವಿಮಾನ'ವೆಂಬ ಆಕಾಶದಲ್ಲಿ ಸಂಚರಿಸುವ ರಥವನ್ನು ಎಷ್ಟೋ ವರ್ಷಗಳ ಪೂರ್ವದಲ್ಲಿಯೇ ಸಿದ್ಧಮಾಡಿರುತ್ತಾರೆ; ಮತ್ತು ಈಗಲೀಗ ಆ ವಿಮಾನವು ನೀರಿನಲ್ಲಿ ಬಿದ್ದರೆ ಹಡಗು ಆಗುವಂತೆಯೂ, ನೆಲದ ಮೇಲೆ ಇಳಿದರೆ ಧೂಮ್ರರಥ(ಮೋಟಾರ)ಆಗುವಂತೆಯೂ ಅದರಲ್ಲಿ ಸುಧಾರಣೆ ಮಾಡಿರುತ್ತಾರೆ. ಇಂಥ ಶ್ರೇಷ್ಠ ಸಾಧನಗಳ ದ್ವಾರದಿಂದ ಅವರಲ್ಲಿಯ ಬಹು ಜನ ಸಾಹಸಿಗರು ಅರ್ಥ-ಪ್ರಾಣಗಳ ಹಂಗು ಸಹ ತೊರೆದು, ಧ್ರುವಾದಿಗಳ ಶೋಧದಲ್ಲಿರುತ್ತಾರೆ. ಕೆಲವು ಜನ ಸಂತತ ಪರಿಶ್ರಮಿಗಳು ಹಿಮಾಲಯ ಪರ್ವತದೊಳಗಿನ ಶ್ರೀ ಗೌರೀಶಂಕರರ ಗುಪ್ತಸ್ಥಾನವಾದ 'ಗೌರೀಶಂಕರ'ವೆಂಬ ಹೆಸರಿನ ಅತ್ಯುಚ್ಚ ಶಿಖರವನ್ನೇರುವ ಪ್ರಯತ್ನದಲ್ಲಿರುತ್ತಾರೆ. ಒಟ್ಟಿನಲ್ಲಿ ತಿಳಿಸತಕ್ಕದ್ದೇನಂದರೆ. ಈ ಕಡು ಸಾಹಸಿಗ ಜನಾಂಗದವರು, ಇಂದಿಲ್ಲ ನಾಳೆ ಈ ಸ್ವರ್ಗಕ್ಕೆ ಸಸೈನ್ಯವಾಗಿ ಬಂದು ನಿಮ್ಮ ರಾಜ್ಯ ಹರಣಮಾಡುವದು ಖಂಡಿತವು

ಇಂದ್ರ:—ವರುಣಾ, ನಿನ್ನ ತರ್ಕದಂತೆ ಆ ಕೃತನಿಶ್ಚಯಿ ಜನರು ಸ್ವರ್ಗದ ಪಥವನ್ನು ಕಂಡುಹಿಡಿದು, ಸ್ವದಳದೊಡನೆ ಸ್ವರ್ಗಕ್ಕೆ ಬಂದರೆಂದು ತಿಳಿಯೋಣ; ಆದರೆ ಅವರು ನನ್ನ ಅತ್ಯಂತ ಪ್ರಖರವಾದ ವಜ್ರಾಯುಧದ ಮುಂದೆ ಎಷ್ಟು ಹೊತ್ತಿನ ವರೆಗೆ ನಿಂತುಕೊಂಡಾರು? ನಿನಗೆ ನನ್ನ ವಜ್ರಾಯುಧದ ಪ್ರಭಾವವು ತಿಳಿಯದೇನು?

ವರುಣ:—ಇಂದ್ರಾ, ಚನ್ನಾಗಿ ಬಲ್ಲೆನು; ಆದರೆ ಇಂಗ್ಲಿಷರು ನಿನ್ನ ಆ ಸೊಟ್ಟ ವಜ್ರಾಯುಧದ ಏಟಿಗೆ ಹೆದರುವಂಥ ಭೀರುಗಳಿರುವದಿಲ್ಲ. ನಿನ್ನ ವಜ್ರದ(ಸಿಡ್ಲಿನ)ಏಟು ತಪ್ಪಿಸುವದಕ್ಕಾಗಿ ಅವರು ಈ ಮೊದಲೇ ಒಂದು ಯುಕ್ತಿಯನ್ನು ಕಂಡು ಹಿಡಿದಿರುತ್ತಾರೆ. ನಿನ್ನ ವಜ್ರದ ಆಕಸ್ಮಿಕ ಏಟಿನಿಂದ ಪೂರ್ವದಲ್ಲಿ ಎಷ್ಟೋ ಸುಂದರ ಹಾಗು ವಿಶಾಲಗಳಾದ ದೇವಮಂದಿರ, ಮಸೀದಿ, ರಾಜಭವನಗಳು ಕ್ಷಣದಲ್ಲಿ ಮಣ್ಣುಪಾಲಾಗುತ್ತಿದ್ದವು; ಆದರೆ ಇಂಗ್ಲಿಷರು ಅಂಥ ಸುಪ್ರಸಿದ್ಧ ಕಟ್ಟಡಗಳ ಮೇಲೆ ಅತ್ಯುನ್ನತವಾದೊಂದು ಲೋಹ ಸಲಾಕಿಯನ್ನು ನಿಲ್ಲಿಸಿ, ಅದರ ತುದಿಯಲ್ಲಿ ತುಸ ಲೋಹ

ಚುಂಬಕವನ್ನು ಕೂರಿಸಿರುವರು. ಆದರಿಂದ ನಿನ್ನ ವಜ್ರವು(ಸಿಡ್ಲು) ಆ ಲೋಹಚುಂಬಕದಿಂದ ಈಚೆಗೆ ಏನೂ ಅಪಾಯ ಮಾಡುವಂತಿಲ್ಲ. ಆದುದರಿಂದ ಅಂಥ ಲೋಹಚುಂಬಕದ ಮಡಾಸದಿಂದ ತಯಾರಿಸಿದ ವಿಮಾನುಗಳುಳ್ಳವರೂ, ಲೋಹಚುಂಬಕ ಶಸ್ತ್ರಧಾರಿಗಳೂ ಆದ ಆ ಇಂಗ್ಲಿಷರು ಹಿಂದಾನೊಂದು ದಿನ ನಿನ್ನೆದುರಿಗ ಬಂದು ನಿಂತುಕೊಂಡರೆ ಅವರನ್ನು ನೀನೇನು ಮಾಡುವೆ? ಇಂದ್ರಾ, ನೀನು ಇಂಗ್ರೆಜರ ಯಂತ್ರಸಾಮರ್ಥ್ಯವನ್ನು ನೋಡಿರುವದಿಲ್ಲ. ಕೂಪಮಂಡೂಕದಂತೆ ನಿನ್ನ ಅಮರಾವತಿಯೇ ಸರ್ವಶ್ರೇಷ್ಠವೂ, ನಿನ್ನ ಪ್ರಜೆಗಳೇ ಸರ್ವವಿಶಾರದರೂ ಎಂದು ಭಾವಿಸಿಕೊಂಡು ಜಂಭ ಬಡಿಯುತ್ತಿರುವೆ; ಆದರೆ ಹಿಂದುವೇಳೆ ನೀನು ಕರ್ನಾಟಕದೊಳಗಿನ ಬೆಂಗಳೂರ, ಮಹಿಷೂರ ಪಟ್ಟಣಗಳನ್ನು ಕಣ್ಣಾರೆ ಕಂಡು ಬಂದರೆ, ಈ ನಿನ್ನ ತುಚ್ಛ ಅಮರಾವತಿಗೆ ತಿರುಗಿ ಬರಬೇಕೆಂಬ ವಾಸನೆಯು ಕೂಡ ನಿನ್ನಲ್ಲುಳಿಯಲಾರದು. ಸಾಮಾನ್ಯಸುಂದರಿಯಾದ ಶಚೀದೇವಿಯನ್ನೇ ಪರಮಸುಂದರಿಯೆಂದು ನೀನು ಭಾವಿಸಿಕೊಂಡಿರುವೆ; ಆದರೆ ಬೆಂಗಳೂರಲ್ಲಿಯ ನಾನಾದೇಶದ ಸೊಬಗಿನ ಆ ನವಯುವತಿಯರನ್ನು ಕಂಡರೆ, ನೀನು ನಿನ್ನ ಈ ಶಚೀದೇವಿಯ ಕಡೆಗೆ ಹಣಿಕಿ ಕೂಡ ನೋಡುವಿಯೋ ಇಲ್ಲವೋ ಎಂಬುದು ಸಂಶಯಾಸ್ಪದದ ಮಾತೇ ಆಗಬಹುದು ಇಲ್ಲಿಯ ಸಾಧಾರಣ ವನಕ್ಕೇ ನಂದನವನವೆಂಬ ಶ್ರೇಷ್ಠ ಹೆಸರನ್ನಿಟ್ಟುಕೊಂಡು, ಇದರಲ್ಲಿ ನೀನು ಎಷ್ಟೋ ರಾತ್ರಿಯ ವರೆಗೆ ವಿಹರಿಸುತ್ತಿರುತ್ತೀ ಆದರೆ ಬೆಂಗಳೂರಿಗೆ ಹೋಗಿ ಆ ಲಾಲ್‌ಬಾಗಿನಲ್ಲಿ ಕ್ಷಣಕಾಲ ಅಡ್ಡಾಡಿದರೆ, ಅಲ್ಲಿಂದ ತಿರುಗಿ ಬರುವ ಇಚ್ಛೆಯೂ ಕೂಡ ನಿನಗುಳಿಯಲಾರದು ಈ ಸ್ವರ್ಗರಾಜ್ಯದೊಳಗಿನ ಆಕಳ ಹಾಲಿಗೇ 'ಸುಧೆ' ಎಂದಂದುಕೊಂಡು ಗರ್ವಿಸುತ್ತೀ; ಆದರೆ ಇಂಗ್ಲಿಷರ ರಾಜ್ಯಕ್ಕೆ ಹೋಗಿ ಸರಾಯಿ, ಚ್ಯಾಂಪಿಯನ್, ಬ್ರಾಂಡಿ, ವ್ಹಿಸ್ಕಿಗಳ ರುಚಿಯನ್ನು ಒಮ್ಮೆಯಾದರೂ ಸವಿದರೆ, ಬಳಿಕ ಈ ಸುಧೆಯನ್ನು ನೀನು ನಿನ್ನ ಹತ್ತರ ಕೂಡ ಬರಗೊಡಲಾರೆ. ಇಂಗ್ಲಿಷ ರಾಜ್ಯದಲ್ಲಿ ಎಣ್ಣೆ-ಬತ್ತಿಗಳಿಲ್ಲದ ಜ್ಯೋತಿಗಳು ಬೆಳಗುವವು. ಲೋಹತಂತಿಗಳಿಂದ ಸುದ್ದಿಗಳು ತಿಳಿಯುವವು. ನಳಗಳಿಂದ ತೋಟ-ಪಟ್ಟಿಗಳಾಗುವವು ಕ್ವಿನಾಯಿನ್ನು ಎಲ್ಲ ರೋಗಗಳಿಗೂ ರಾಮಬಾಣ ಔಷಧವು. ಇಂಗ್ಲಿಷರಿಂದ ಶೋಧಿಸಲ್ಪಟ್ಟ ಆ ಕ್ವಿನಾಯಿನ್ನಿನ ಸಹಾ

ಯದಿಂದ ಅನಂತಮೂರ್ಖರು ವೈದ್ಯಪಂಡಿತರೆಂದು ಪ್ರಸಿದ್ಧಿ ಹೊಂದಿ, ನೂರಾರು ರೂಪಾಯಿಗಳನ್ನು ಸುಲಭವಾಗಿ ಸಂಪಾದಿಸುತ್ತಿರುತ್ತಾರೆ. ಇಂದ್ರಾ, ಆ ಕುಶಾಗ್ರಬುದ್ಧಿಯ ಇಂಗ್ಲಿಷರು ಹಿಂದು ಪ್ರಕಾರದ ನಳಗಳನ್ನು ಯೋಜಿಸಿ, ನನಗೆ ಭೂಲೋಕದಲ್ಲೆಲ್ಲಿಯೂ ಕೂಲಿ-ಕುಂಬಳಿ ಹತ್ತದ ಹಾಗೆ ಏರ್ಪಾಟು ಮಾಡಿ, ನನ್ನ ಬಡವನ ಸಂಸಾರವನ್ನು ಅನನ್ಯಗತಿಕವನ್ನಾಗಮಾಡಿರುತ್ತಾರೆ.

ಇಂದ್ರ:—ನಳವೆಂದರೇನು? ವಿದರ್ಭರಾಜನ ಜಾಮಾತೃವಾದ ನಳರಾಜನಲ್ಲವಷ್ಟೇ?

ವರುಣ:—ದಮಯಂತೀ ಪತಿಯಾದ ನಳನಾಗಿರದಿದ್ದರೂ, ದಮಯಂತಿಯರಿಗೆ (ಹೆಂಗಳೆಯರಿಗೆ) ಪ್ರಿಯವಾದ ನಳವೇನೋ ನಿಜ; ನಳವೆಂದರೆ ನೀರಿನ ಯಂತ್ರವು. ಆ ಕೃಷ್ಣವರ್ಣದ ಶರೀರವುಳ್ಳ ನಳವು-ವನವಾಸಕಾಲದಲ್ಲಿ ಕಪ್ಪಿಟ್ಟ ನಳರಾಜನ ಕಾಯದಂತೆ ಇದ್ದು,-ನೆಲದೊಳಗಿಂದ ಹಾದು ಪ್ರತಿಯೊಬ್ಬರ ಮನೆಮನೆಗೆ ತನ್ನ ಶುದ್ಧ ಮುಖದಿಂದ-ಹಿತ್ತಾಳಿಯ ತೊಟ್ಟಿಯಿಂದ-ಶುದ್ಧ ಜಲವನ್ನು ಪೂರೈಸುತ್ತದೆ. ಜನರು ತಮ್ಮ ತಮ್ಮ ಅಡಿಗೆ ಮನೆ, ಬಚ್ಚಲಮನೆಗಳಲ್ಲಿ ಈ ನಳಗಳನ್ನು ಬರಮಾಡಿಕೊಂಡಿರುವದಲ್ಲದೆ, ಕೆಲಕೆಲವು ಸ್ವೇಚ್ಛಾಚಾರಿಗಳು ಅವನ್ನು ತಮ್ಮ ಶೌಚಕೂಪಗಳಲ್ಲಿ ಕೂಡ ಹಿಯ್ದಿರುತ್ತಾರೆ. ನಳದಂತೆ ವಿದ್ಯುತ್ತನ್ನು ಕೂಡ ಬೇಕಾದಲ್ಲಿ ಬೇಕಾದ ಬಗೆಯಾಗಿ-ತಾರಾಯಂತ್ರ-ಟೆಲಿಫೋನ್-ವಿದ್ಯುಲ್ಲಾಯಿಟಗಳಾಗಿ—ಉಪಯೋಗಿಸಿಕೊಳ್ಳುವರು.

ಇಂದ್ರ:—ತಾರಾಯಂತ್ರ, ಎಂದರೇನು?

ವರುಣ:—ನಿನ್ನ ವಜ್ರದಂಥ ವಿದ್ಯುತ್ತನ್ನು ಕೃತ್ರಿಮಪ್ರಯತ್ನದಿಂದ ತಯಾರಿಸಿಕೊಂಡು, ಅದನ್ನು ಲೋಹತಂತಿಗಳಲ್ಲಿ ಪ್ರವಹಿಸುವರು. ಅದಕ್ಕೆ ತಾರಾಯಂತ್ರ ಅನ್ನುವರು. ಅದರಿಂದ ಸುದ್ದಿ ತಿಳಿಯುವ ಯುಕ್ತಿ ಮಾಡಿರುವರು. ಇದರಂತೆಯೇ ವಿದ್ಯುತ್ತಿನ ಟೆಲಿಫೋನ-ಅಂದರೆ ಹಿಂದು ಕಡೆಯ ಯಂತ್ರದ ಮುಖದಲ್ಲಿ ಮಾತಾಡಿದ ಶಬ್ದಗಳು ಸಾವಿರಾರು ಮೈಲುಗಳಾಚೆಯ ಮತ್ತೊಂದು ಕಡೆಯ ಅಂಥ ಯಂತ್ರದ ಕಿವಿಯಲ್ಲಿ ಸಹಜವಾಗಿ ಕೇಳುವದು.-ಹಾಗು ವಿದ್ಯುಲ್ಲಾಯಿಟ್-ಎಣ್ಣೆ-ಬತ್ತಿಗಳಿಲ್ಲದ ದೀಪಗಳು-ವ್ಯವಹರಿಸಲ್ಪಡುತ್ತಿರುವವು.

ಇಂದ್ರ:—ವರುಣಾ, ನಿನ್ನ ಬಾಯಿಂದ ಕೇಳಿದ ಇಂಗ್ಲಿಷರ ಆ ಯುಕ್ತಿಗಳನ್ನೂ, ಕರ್ನಾಟಕದೊಳಗಿನ ಬೆಂಗಳೂರ-ಮೈಸೂರ ಪಟ್ಟಣಗಳನ್ನೂ ಒಮ್ಮೆ ಕಣ್ಣಾರೆ ಕಂಡು ಬರುವ ಅಭಿಲಾಷೆಯು ನನಗಾಗಿರುತ್ತದಲ್ಲ!

ವರುಣ:—ಹಾಗಾದರೆ ಒಮ್ಮೆ ಹೋಗಿ ಬರೋಣ ನಡೆ. ನಿನ್ನನ್ನು ಇಂಗ್ಲಿಷರಿಂದ ನಿರ್ಮಿತವಾದ ಉಗಿಬಂಡಿಯಲ್ಲಿ ಕೂರಿಸಿ, ಬೆಂಗಳೂರಿಗೆ ಕರೆದೊಯ್ಯುವೆನು. ಬೆಂಗಳೂರು-ಮೈಸೂರುಗಳು ಇಲ್ಲಿಂದ ಬಹು ದೂರದಲ್ಲಿದ್ದರೂ ಆ ಬಂಡಿಯಲ್ಲಿ ಕುಳಿತು ಹೋದರೆ ಶೀಘ್ರವಾಗಿಯೇ ಹೋಗಿಬರಬಹುದು; ಯಾವ ತರದ ಕಷ್ಟವೂ ಆಗಲಾರದು. ನಡುವೆ ರೈಲುಮಾರ್ಗದ ಬದಿಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿಳಿದು ಒಂದೆರಡು ದಿನ ವಿಶ್ರಾಂತಿ ತಕ್ಕೊಳ್ಳುವಾ. ಹಾಗೆ ಮಾಡುವದರಿಂದ ನಮಗೆ ಕೊಲ್ಹಾಪೂರ, ಬೆಳಗಾವ, ವಿಜಾಪೂರ, ಧಾರವಾಡ, ಗದಗ, ಹುಬ್ಬಳ್ಳಿ, ಗೋಕರ್ಣ, ಆನಂದವನ, ಹರಿಹರ, ದಾವಣಗೇರಿ, ಶಿವಮೊಗ್ಗ, ಶೃಂಗೇರಿ ಮುಂತಾದ ಪ್ರಾಚೀನ ಹಾಗು ಅರ್ವಾಚೀನ ಸುಪ್ರಸಿದ್ಧ ಸ್ಥಳಗಳು ನೋಡಲಿಕ್ಕೆ ದೊರೆತು, ನಮ್ಮ ಆಹಾರ-ಪಾನಗಳಿಗೂ ಅನುಕೂಲವಾಗುವದು.

ಇಂದ್ರ:— ನೀನನ್ನುವದು ನಿಜವು. ಹಾಗೆ ನಡುನಡುವೆ ಇಳಿದು ಹೋಗುವದರಿಂದ ನಮಗೆ ನಿಜವಾದ ದೇಶಪರ್ಯಟನದ ಲಾಭವಾಗುವದಲ್ಲದೆ, ಪೂರ್ವದ ಮರಾಟ, ಮುಸಲ್ಮಾನ, ಕರ್ನಾಟಕರಾಜರ ರಾಜ್ಯಗಳು ಯಾವ ಸ್ಥಿತಿಯಲ್ಲಿರುವವೆಂಬದೂ ಚೆನ್ನಾಗಿ ತಿಳಿದು ಬರುವದು. ಇರಲಿ. ವರುಣಾ, ಉಗಿಬಂಡಿಯೆಂದರೇನು?

ವರುಣ:—ಇಂಗ್ರಜರಿಂದ ತಯಾರಾದ ಒಂದು ಬಗೆಯ ಅಗ್ನಿರಥವು ಆ ರಥವು ನಡೆಯಲಿಕ್ಕೆ ಎತ್ತು, ಕುದುರೆ, ಆನೆಗಳ ಅವಶ್ಯಕತೆಯಿಲ್ಲ. ಅದು ಉಗಿಯಿಂದ ನಡೆಯುವದೆಂದು ಅದಕ್ಕೆ ಉಗಿಬಂಡಿಯೆಂದೆನ್ನುತ್ತಾರೆ ನೀರನ್ನು ಉಗಿಯಾಗಿ ಮಾಡಿಕೊಳ್ಳಲಿಕ್ಕೆ ಆ ಗಾಡಿಯಲ್ಲಿ ಬೆಂಕಿಯನ್ನು ಉಪಯೋಗಿಸುವದರಿಂದ ಕೆಲಕೆಲವರು ಅದಕ್ಕೆ ಅಗ್ನಿರಥವೆಂದೂ ಕರೆಯುತ್ತಾರೆ. ಆ ಗಾಡಿ ಅಡ್ಡಾಡಲಿಕ್ಕೆ ಲೋಹದ ಹಳಿಗಳಿಂದ (ರೈಲಿನಿಂದ) ಮಾರ್ಗ ಮಾಡಿರುವದರಿಂದ, ಅದಕ್ಕೆ ರೈಲಗಾಡಿಯೆಂದೂ ಅನ್ನುವ ಪರಿಪಾಠವಿದೆ. ಆ ರೈಲಗಾಡಿಗೆ 1ನೇ, 2ನೇ, ನಿಮ್ನ(ಇಂಟರ) ಹಾಗು 3ನೇ ತರಗತಿ

ಗಳ ಮನುಷ್ಯರು ಕೂರುವ ಹಾಗು ಸಾಮಾನು ತುಂಬುವ ಎಷ್ಟೋ ಡಬ್ಬಿಗಳು ಜೋಡಿಸಲ್ಪಟ್ಟಿರುತ್ತವೆ. ಯಾರು ಯಾವ ಬಗೆಯ ದರದ ತಿಕೀಟ ಕೊಳ್ಳುವರೋ ಅವರಿಗೆ ಆಯಾ ತರಗತಿಗಳಲ್ಲಿ ಸ್ಥಳಗಳು ಏರ್ಪಟ್ಟಿರುತ್ತವೆ. ಅದರಂತೆ ಸಾಮಾನುಗಳಿಗಾದರೂ ತೂಕ ಮೈಲುಗಳ ಮೇಲಿಂದ ದರಗಳು ವಸೂಲ ಮಾಡಲ್ಪಡುವವು.

ಇಂದ್ರ: —ಆಹಾ! ವರುಣಾ, ಇಂಗ್ಲಿಷರು ಈ ಬಗೆಯ ಆಶ್ಚರ್ಯಕರವಾದ ಉಗಿಬಂಡಿಯನ್ನು ಹೇಗೆ ನಿರ್ಮಿಸಿರುವರಲ್ಲವೆ! ನಡೆ, ನಿಮ್ಮ ಕರ್ನಾಟಕಕ್ಕೆ ಹೋಗಿ ನಮ್ಮ ದೃಷ್ಟಿಯ ಸಾರ್ಥಕತೆಯನ್ನು ಮಾಡಿಕೊಂಡು ಬರೋಣ; ಹಾಗು ಮನಸ್ಸಿನ ಇಚ್ಛೆಯನ್ನೂ ಪೂರೈಸಿಕೊಳ್ಳೋಣ. ವರುಣಾ, ನಾವು ಈಗಲೆ ಬ್ರಹ್ಮಲೋಕಕ್ಕೆ ಹೋಗಿ, ಪಿತಾಮಹನನ್ನು ಸಂಗಡ ಕರಕೊಂಡು ಹೋಗುವ ಎತ್ತುಗಡೆ ಮಾಡೋಣ. ಇಂದಿಲ್ಲ ನಾಳೆ, ನಾವು ಆ ಸೋಜಿಗದ ವಿಷಯಗಳನ್ನು ನೋಡಿ ಬರಬಹುದು. ಆದರೆ ಪಾಪ! ಆ ಮುದುಕನ ಅವಸ್ಥೆಯು ಹೀಗಾಗಿರುವದಿಲ್ಲ. ಅವನು ತೀರ ಹಣ್ಣಾಗಿರುವದರಿಂದ ತಿಂಗಳೊಪ್ಪತ್ತಿನಲ್ಲಿ ಗೋರಿಗಂಡನೆಂದರೆ, ಅಂಥ ಸುಂದರ ಬೆಂಗಳೂರ- ಮಹಿಸೂರ ನಗರಗಳೂ ಇಂಗ್ಲಿಷರ ಆ ಅದ್ಭುತ ಚಮತ್ಕೃತಿಗಳೂ ಅವನ ಕಣ್ಣಿಗೆ ಹೇಗೆ ಕಂಡಾವು? ಅವನ್ನು ಅವನು ನೋಡದೆ ಗತಿಸಿದರೆ, ನಮಗೆ ಎಂದೂ ಸಮಾಧಾನವಾಗಲಾರದು. ಅದಕ್ಕಾಗಿ ಮುಂದೆ ನಾವು ಅವನ ಶ್ರಾದ್ಧಾದಿಗಳನ್ನು ಅಲ್ಲಿಗೇ ಹೋಗಿ ಮಾಡಬೇಕಾದೀತು! ಆದುದರಿಂದ ಆ ಮುದುಕನಿಗೆ ಆ ಎಲ್ಲ ಸೋಜಿಗದ ಸಂಗತಿಗಳನ್ನು ಮೊದಲೇ ಬಿಚ್ಚಿ ಹೇಳದೆ, ಯಾವದೊಂದು ಬೇರೆ ಯುಕ್ತಿಯಿಂದ ನಾವು ಅವನನ್ನು ಕರ್ನಾಟಕಕ್ಕೆ ಎಳೆದೊಯ್ಯಬೇಕು. ಅಂದರೆ ಅವನು ಅಲ್ಲಿಗೆ ಹೋಗಿ, ನಿಜಸೃಷ್ಟಿಯೊಳಗಿನ ಆ ಆಶ್ಚರ್ಯಕರ ದೃಶ್ಯವನ್ನು ಅಕಸ್ಮಾತ್ತಾಗಿ ನೋಡಿ, ಬೆಪ್ಪಾಗದೆ ಇರನು.

ಹೀಗೆಂದು ನುಡಿದು ಇಂದ್ರನು ನಿಜಸಾರಥಿಯಾದ ಮಾತಲಿಗೆ ರಥವನ್ನು ಸಜ್ಜುಗೊಳಿಸಲು ಆಜ್ಞಾಪಿಸಿದನು; ಹಾಗು ಒಳಗೆ ಹೋಗಿ ವರುಣನೊಡನೆ ತುಸ ಉಪಹಾರ ತೀರಿಸಿಕೊಂಡು, ರಥವನ್ನೇರಿ ಬ್ರಹ್ಮಲೋಕವನ್ನು ಕುರಿತು ಗಮನ ಮಾಡಿದನು.

# ಬ್ರಹ್ಮಲೋಕ.

ಬ್ರಹ್ಮನ ಮಾನಸ ಸರೋವರದಲ್ಲಿ ಇತ್ತಿತ್ತಲಾಗಿ ನೀರು ಬಹಳ ಕಡಿಮೆಯಾಗಿತ್ತು. ಬಹಳ ವರ್ಷಗಳಿಂದ ನಡೆದಿದ್ದ ವೃಷ್ಟಿಯ ಅಭಾವವೇ ಅದಕ್ಕೆ ಕಾರಣವಾಗಿತ್ತು. ಆದುದರಿಂದ ಅದರೊಳಗಿನ ದೊಡ್ಡ ದೊಡ್ಡ ಮೀನಗಳು ಸಾಯುಹತ್ತಿದ್ದವು ಆ ಸತ್ತ ಮೀನಗಳನ್ನು ಎತ್ತಿಕೊಂಡು ಹೋಗುವದಕ್ಕಾಗಿ ಮಾನಸ ಸರೋವರವನ್ನು ಮುತ್ತುತ್ತಿದ್ದ ಕಾಗೆಗಳನ್ನು ಸುಂದರವಾದ ಘಾಟಿನಲ್ಲಿ ಕುಳಿತಿದ್ದ ವೃದ್ಧಪಿತಾಮಹನು "ಹುಶ್" "ಹುಶ್" ಎನ್ನುತ್ತ ಬೆದರಿಸಿ, ಆ ಸತ್ತ ಮೀನಗಳನ್ನು ಒತ್ತಟ್ಟಿಗೆ ಗುಂಪುಗೂಡಿಸುತ್ತಿದ್ದನು. ಕಾಗೆಗಳು ಅವನ ಒದರಾಟಕ್ಕೆ ಬೆದರಿ ಹೋಗುತ್ತಿದ್ದರೂ, ಹದ್ದು, ಲಕಮುಕಹಕ್ಕಿ, ಗಿಡಗ ಮುಂತಾದ ಪ್ರಚಂಡ ಹಕ್ಕಿಗಳು ಅವನ ಕಣ್ಣುತಪ್ಪಿಸಿ ಅವುಗಳೊಳಗಿನ ಎಷ್ಟೋ ಮೀನಗಳನ್ನು ಎತ್ತಿ ಹಾಕದೆ ಬಿಡುತ್ತಿದ್ದಿಲ್ಲ ಪಿತಾಮಹನು ಅಪರಾಹ್ಣಕಾಲದಲ್ಲಿ ಸಮವಯಸ್ಕರಾದ ಕೆಲಜನ ವೃದ್ಧರೊಡನೆ ತನ್ನ ಮಾನಸಸರೋವರದ ಬಳಿಯ ಉದ್ಯಾನದಲ್ಲಿ ವಿಹರಿಸುತ್ತಿದ್ದನು ಆಗ ಅವನು ಪಾಣೀ ಕಂಪನಿಯ ಜಿನಗು ದೋತರವನ್ನು ಉಟ್ಟಿದ್ದನು. ಶ್ವೇತವರ್ಣದ ರೋಮಾಂಚಿತ ವಕ್ಷಸ್ಥಳದ ಮೇಲೆ ಶುಭ್ರವಾದ ಯಜ್ಞೋಪವೀತವು ಶೋಭಿಸುತ್ತಿತ್ತು. ಕಾಲಲ್ಲಿ ಪುಣೆಯ ಮೆಟ್ಟುಗಳಿದ್ದು, ಕೈಯಲ್ಲಿ ಬೆತ್ತದ ಛಡಿಯಿತ್ತು. (ಇಂಥ ಎಲ್ಲ ಸಾಮಾನುಗಳನ್ನು ವರುಣನು ಭೂಲೋಕದಿಂದ ಒಯ್ದು, ದೇವ-ದೇವತೆಗಳಿಗೆ ಕಾಣಿಕೆ ಕೊಡುತ್ತಿದ್ದನು ) ಇಂಥ ಸಮಯದಲ್ಲಿ ಇಂದ್ರನು ವರುಣನೊಡನೆ ಬಂದು, ಬ್ರಹ್ಮನನ್ನು ಕುರಿತು—'ಅಜ್ಜಾ, ನಮಸ್ಕರಿಸುವೆನು,' ಎಂದು ನುಡಿದು, ಸಾಷ್ಟಾಂಗ ನಮಸ್ಕಾರ ಮಾಡಿದನು.

ಬ್ರಹ್ಮ(ಹುಬ್ಬಿನ ಮೇಲೆ ಕೈಯಿಟ್ಟು ಅವರ ಕಡೆಗೆ ಟಕಮಕ ನೋಡುತ್ತಾ):—'ನೀವು ಯಾರು'

ಇಂದ್ರ:—ಅಜ್ಜಾ, ಗುರುತು ಹತ್ತಲೊಲ್ಲದೇನು? ನಾವು ವರುಣ ಹಾಗು ಇಂದ್ರರು

ಬ್ರಹ್ಮ:—ಬನ್ನಿರಿ; ಮಕ್ಕಳಿರಾ ಬನ್ನಿರಿ. ತಮ್ಮಾ, ಈಗಲೀಗ ನನ್ನ ಕಣ್ಣುಗಳು ಕಾಣುವದಿಲ್ಲ ಈ ಮುದುಕನದೇನು, ಕೋಲು ಮುಂದೆ ಕಾಲು ಹಿಂದಾಗಿ ಹೋದವು ಮಕ್ಕಳಿರಾ, ಇಂಥ ಹೊತ್ತಿಲ್ಲದ ಹೊತ್ತಿನಲ್ಲಿ ಇಲ್ಲಿಗೆ ನೀವು ಬಂದ ಕಾರಣವೇನು? ಸ್ವರ್ಗದಲ್ಲಿ ದೈತ್ಯರ ಕಾಟವೇನೂ ಇಲ್ಲವಷ್ಟೇ?

ಇಂದ್ರ:—ಈ ವರೆಗೆ ಯಾವ ದೈತ್ಯರ ಕಾಟವೂ ಇರುವದಿಲ್ಲ; ಆದರೆ ಇನ್ನು ಮೇಲೆ ಬೇಗನೆ ಆಗುವ ಸಂಭವವಿರುತ್ತದೆ.

ಬ್ರಹ್ಮ:—ಅದಾವ ಅಂಥ ಉನ್ಮತ್ತ ದೈತ್ಯನು?

ಇಂದ್ರ:—ಪ್ರಾಚೀನ ದೈತ್ಯರಲ್ಲ; ಅಧುನಿಕ ದೈತ್ಯರಾದ ಇಂಗ್ಲಿಷರು.

ಈ ಸಂಗತಿಯನ್ನು ಕೇಳಿ ಬ್ರಹ್ಮನ ಮುಖವು ಬಾಡಿತು. ಪೂರ್ವಕಾಲದಲ್ಲಾದ ದೈತ್ಯರ ಉಪಟಳವು ನೆನಪಿಗೆ ಬರಲು, ಅವನ ದೇಹಯಷ್ಟಿಯು ಥರಥರನೆ ನಡುಗಲಾರಂಭಿಸಿತು ಆಗ ಅವನು ಗದ್ಗದಕಂಠದಿಂದ ಇಂದ್ರನನ್ನು ಕುರಿತು—'ಈ ಬಗ್ಗೆ ವೇದದಲ್ಲಿ ಏನು ಬರೆದಿದೆಂಬದನ್ನು ನೋಡೋಣ ನಡೆ' ಎಂದು ನುಡಿದು, ಅವರೊಡನೆ ತನ್ನ ಬಿಡಾರಕ್ಕೆ ನಡೆದನು. ಮನೆಯ ಒಂದು ಮೂಲೆಯಲ್ಲಿ ಜೀರ್ಣಅರಿವೆಯ ಗಂಟುಗಳಲ್ಲಿ ಕಟ್ಟಿಟ್ಟ ತಾಡವಾಲೆಯ ಪುಸ್ತಕಗಳನ್ನು ತಕ್ಕೊಂಡು, ಕಣ್ಣಿಗೆ ಜಾಳೀಸ ಹಾಕಿಕೊಂಡು ನೋಡತೊಡಗಿದನು. ಎಷ್ಟೋ ಕಾಲದ ವರೆಗೆ ಏಕಾಗ್ರಚಿತ್ತದಿಂದ ನೋಡಿದ ಬಳಿಕ:—ಇಂದ್ರಾ, ಈ ಇಂಗ್ಲಿಷರಿಂದ ದೇವತೆಗಳಿಗೇನೂ ತೊಂದರೆಯಾಗುವದಿಲ್ಲ. ಇವರ ರಾಜ್ಯಕಾಲದಲ್ಲಿ ನಮಗೆ ಒಂದು ಬಗೆಯಿಂದ ಹಿತವೇ ಆಗಬಹುದಾಗಿದೆ, ಎಂದು ನುಡಿದು ಮುಗುಳು ನಗೆಯುಳ್ಳವನಾದನು.

ಆಗ ಇಂದ್ರನು ಬ್ರಹ್ಮನನ್ನು ಕುರಿತು ಕೇಳಿದನೇನಂದರೆ:— 'ಅಜ್ಜಾ, ಇಂಗ್ಲಿಷರ ರಾಜ್ಯದಲ್ಲಿ ತಮಗೆ ನಗೆ ಬರುವಂಥ ಅಂಥ ಯಾವ ಪ್ರಸಂಗಗಳು ಉಂಟಾಗುವವು?'

ಬ್ರಹ್ಮ:—ಮಕ್ಕಳಿರಾ, ಈ ಇಂಗ್ಲಿಷರ ರಾಜ್ಯಕಾಲದಲ್ಲಿ ಪತಿತಪಾವನಿಯೂ ದ್ರವಮಯಿಯೂ ಆದ ಭಾಗೀರಥಿಯು-ಕಾವೇರಿಯು-ಪುನಃ ನನ್ನ ಕಮಂಡಲುವಿನಲ್ಲಿ ಪ್ರಾಪ್ತಳಾಗುವಳು ಅಯ್ಯೋ ಪಾಪ! ಆ ಹುಡುಗಿಯನ್ನು ಭಗೀರಥನು ಯಾವಾಗ ಭೂಲೋ

ಕಕ್ಕೆ ಎಳೆದೊಯ್ದನೋ, ಆಗ ಆಕೆಯು ಎಷ್ಟು ಅತ್ತಳು! ಎಷ್ಟು ಕರೆದಳು! ಅವಳು ಇಲ್ಲಿಂದ ಹೊರಡುವಾಗ ನನ್ನನ್ನುದ್ದೇಶಿಸಿ ಹೇಳಿರುವಳೇನಂದರೆ:—ಅಪ್ಪಾ, ನನ್ನನ್ನು ಮರೆಯಬೇಡಿರಿ; ಆಗಾಗ್ಗೆ ಕ್ಷೇಮಸಮಾಚಾರದ ಪತ್ರಗಳನ್ನು ಬರೆಸಿರಿ. ಈಗ ಅವಳ ದುಃಖ ನಿವಾರಣೆಯ ಕಾಲವು ಪ್ರಾಪ್ತವಾಗಿದ್ದು, ಇನ್ನು ಕುಸ ದಿನಗಳಲ್ಲಿಯೇ ಆಕೆಯು ಭೂಲೋಕದಿಂದ ಬರುವಳು.

ವರುಣ:—ಅಜ್ಜಾ, ಈಚೆಗೆ ಕಾವಕ್ಕನ ದುಃಖಕ್ಕೆ ಸೀಮೆಯೇ ಇಲ್ಲದಂತಾಗಿರುತ್ತದೆ ಈ ವರೆಗೆ ಬೆಂಗಳೂರ-ಮಹಿಷೂರ-ಕೋಲಾರ ಪಟ್ಟಣಗಳಲ್ಲಿ ನೀರು-ಬೆಳಕುಗಳನ್ನು ಪೂರೈಸುವ ಹಾಗು ಅಲ್ಲಿಯ ಕಾರಖಾನೆಗಳ ಕೆಲಸ ಸಾಗಲಿಕ್ಕೆ ಸಹಾಯ ಮಾಡುವ ಕೆಲಸಗಳಿಗಾಗಿ ಅವಳನ್ನು ನಿಯೋಜಿಸಿದ್ದರಷ್ಟೇ? ಆದರೆ ಇತ್ತಿತ್ತಲಾಗಿ ಆಯಾಪಟ್ಟಣಗಳ ಹೊಲಸ(ನರಕವ)ನ್ನು ಎತ್ತೊಯ್ಯುವ ಕೇವಲ ಗರ್ಹ್ಯಹೋರೆಯನ್ನು ಕೂಡ ಅವಳೇ ಮಾಡಬೇಕಾಗಿರುತ್ತದೆ. ಪೂರ್ವದಲ್ಲಿ ಕಾವೇರಿಯ ಪ್ರಚಂಡ ಪ್ರವಾಹವನ್ನು ಐರಾವತದಂಥ ಮತ್ತ ಗಜಗಳು ಕೂಡ ದಾಟಲು ಅಸಮರ್ಥವಾಗುತ್ತಿದ್ದವು; ಆದರೆ ಈಚೆಗೆ ಇಂಗ್ಲಿಷರ-ಸುಧಾರಣೆಯ-ಯುಗದಲ್ಲಿ ಅಂಥ ಆ ಭಯಂಕರ ಪ್ರವಾಹವು ಎತ್ತೋ ಮಾಯವಾಗಿ ಹೋಗಿರುವದರಿಂದ, ಈಗ ಅದರಲ್ಲಿ ದಾರಿಕಾರರ ಪಾದಗಳು ಕೂಡ ಮುಣುಗದಾಗಿವೆ! ಅವಳನ್ನು ಅಲ್ಲಲ್ಲಿ ಬಂಧಿಸಿ ಬೇಕಾದವರು ಬೇಕಾದಲ್ಲಿಗೆ ಕರೆದುಕೊಂಡು ನಡೆದಿದ್ದಾರೆ. ಈಗಲೀಗ ಮಹಿಷೂರ ರಾಜಧಾನಿಯ ಸಮೀಪಕ್ಕೆ ಕನ್ನಂಬಾಡಿಯ ಹತ್ತರ ಕಾವೇರಿಯನ್ನು ಬಹು ಬಿಗುವಾಗಿ ಕಟ್ಟುತ್ತಲಿರುವರು; ಹಾಗು ಅವಳ ಜಲವು "ಕೃಷ್ಣರಾಜ"ವೆಂಬ ಹೆಸರಿನ ಪ್ರಚಂಡವಾದ ಸಾಗರದಲ್ಲಿ ಸಂಚಯಿಸಲ್ಪಡುತ್ತಿರುವದು.

"ಅಯ್ಯೋ ದೈವವೇ! ತಮ್ಮಾ, ವರುಣಾ, ಸದಾಸರ್ವಕಾಲ ನೀನು ಅಲ್ಲಿಯೇ ಇರುತ್ತಿದ್ದು, ಅವಳ ಈ ಪರಿ ದುಃಖದ ಸಂಗತಿಯನ್ನು ಈ ವರೆಗೆ ನನಗೇಕೆ ತಿಳಿಸಲಿಲ್ಲಪ್ಪಾ" ಎಂದದು, ವೃದ್ಧ ಪಿತಾಮಹನು ಮಗಳ ದುಃಖವನ್ನು ನೆನೆನೆನಿಸಿ ದುಃಖಿಸಲಾರಂಭಿಸಿದನು.

ವರುಣನು ಪುನಃ ಹೇಳುತ್ತಾನೆ:—ಅಜ್ಜಾ, ಮೊನ್ನೆ ನಾನು

ಇತ್ತ ಬರಲಿಕ್ಕೆ ಹೊರಟಾಗ ಕಾವಕ್ಕನು ಕಲಕಲ ಶಬ್ದಮಾಡಿ ಅಳುತ್ತ ಹೇಳಿದಳೇನಂದರೆ:—"ತಮ್ಮಾ ವರುಣಾ, ನನ್ನ ತಲೆಯು ಬುರುಡಿ ಹಾರದ ಹೊರತು, ನನಗೀ ಖಳರಿಂದ ಮುಕ್ತಿ ದೊರಕದು ನಮ್ಮಪ್ಪನು ಬದುಕಿರುವಂತೆ ಕಾಣುವದಿಲ್ಲ. ಇದ್ದಿದ್ದರೆ ನನ್ನೀ ಕಡು ಶೋಚನೀಯ ಸ್ಥಿತಿಯನ್ನು ತಿಳಿದು, ಅವನು ಎಂದೂ ಹೀಗೆ ನಿಶ್ಚಿಂತನಾಗಿ ಕೂರುತ್ತಿರಲಿಲ್ಲ.''

ಇಂದ್ರ:—ಅಜ್ಜಾ, ತಾವು ಒಮ್ಮೆ ಕರ್ನಾಟಕಕ್ಕೆ ಹೋಗಿ, ಕಾವಕ್ಕನನ್ನು ಕಣ್ಣಾರೆ ಕಂಡು ಬರುವದು ಉಕ್ತವಲ್ಲವೆ?

ಬ್ರಹ್ಮ:—ಅಪ್ಪಗಳಿರಾ, ನಾನು ಅಲ್ಲಿಯ ವರೆಗೆ ಹೋಗಿ ಬರುವದು ಹೇಗೆ? ಗಳಿಗೆ ಬಿಟ್ಟು ಮತ್ತೊಂದು ಗಳಿಗೆ ಕುಳಿತು ನಿಮ್ಮೊಡನೆ ಮಾತಾಡಬೇಕೆಂದರೆ, ಅತ್ಯಂತ ವೃದ್ಧಾಪ್ಯದ ಮೂಲಕ ನನ್ನ ತಲೆ ಕೂಡ ಸ್ಥಿರವಾಗಿ ನಿಲ್ಲದಾಗಿರುತ್ತದೆ. ಅಯ್ಯೋ, ತಂಗೀ! ಕಾವಕ್ಕಾ! ಈ ಸ್ಥಿತಿಯಲ್ಲಿ ನನ್ನಿಂದ ನಿನ್ನ ದುಃಖನಿವಾರಣವು ಹೇಗಾಗಬೇಕು?

ವರುಣ:—ಅಜ್ಜಾ, ಹೇಗಾದರೂ ಮಾಡಿ ನೀವು ಒಮ್ಮೆ ಕಾವಕ್ಕನ ಬಳಿಗೆ ಹೋಗಲೇ ಬೇಕು. ಹೋಗದಿದ್ದರೆ 'ಮಗಳನ್ನು ಹೊಳೆಯಲ್ಲಿ ತೇಲಿಬಿಟ್ಟು, ಈ ಮುದುಕನು ಪ್ರೀತಿಯ ಮಡದಿಯೊಡನೆ ಹೇಗೆ ಸುಖವಾಗಿರುತ್ತಾನೆ ನೋಡಿರಿ!' ಎಂದು ಜನರಾಡಿಕೊಳ್ಳುತ್ತಿರುವ ಮಾತಿಗೆ ಇಂಬುಗೊಟ್ಟಂತಾಗುವದಿಲ್ಲವೆ?

ಬ್ರಹ್ಮ:—ನನ್ನಲ್ಲಿ ಶಕ್ತಿಯಿದ್ದರೆ, ನಾನು ಹೀಗೆ ಮನೆ ಹಿಡಕೊಂಡು ಕೂರುತ್ತಿರಲಿಲ್ಲ; ಹಾಗು ಕರ್ನಾಟಕಕ್ಕೆ ಹೋಗಿ ಬರಲಿಕ್ಕೆ ಹಿಂದು ಮುಂದು ನೋಡುತ್ತಿರಲಿಲ್ಲ; ಆದರೆ ವೃದ್ಧಾಪ್ಯದ ಮೂಲಕ ಯತ್ನವೇ ಮೀರಿರಲು, ಈ ಸ್ಥಿತಿಯಲ್ಲಿ ಅಲ್ಲಿಯ ವರೆಗೆ ಹೋಗುವ ಬಗೆ ಹೇಗೆ?

ವರುಣ:— ಅಜ್ಜಾ, ನಡೆಯಿರಿ. ನಾವು ನಿಮ್ಮನ್ನು ಇಂಗ್ಲಿಷ ಕೃತ ಉಗಿಬಂಡಿಯೊಳಗೆ ಸುಖರೂಪವಾಗಿ ಕರದೊಯ್ಯುವೆವು.

ಬ್ರಹ್ಮ(ದುಃಖದಿಂದ):— ಹೇಗಾದರೂ ಮಾಡಿ ನನ್ನನ್ನು ನನ್ನ ಕಂದಮ್ಮನ ಬಳಿಗೆ ಒಯ್ಯಿರಿ ಅಡಿಗಡಿಗೆ ಬಂಧಿಸಿ, ಅವಳನ್ನು ಅಸಹ್ಯಕಷ್ಟಕ್ಕೊಳಪಡಿಸಿರುವದನ್ನು ಕೇಳಿ, ನನ್ನಂಥ ಯಾವ ಹೆಣ್ಣುಗಳಿ,ನವನು ಸುಮ್ಮನೆ ಕುಳಿತಾನು? ಈಗಲೆ ವೈಕುಂಠಕ್ಕೆ

ಹೋಗಿ ನಾನು ಕರೆಯುವೆನೆಂದು ಹೇಳಿ ನಾರಾಯಣನನ್ನು ಕರೆತನ್ನಿರಿ. ಆಧುನಿಕ ದೈತ್ಯರು ಅವನ ಪರಿವಾರದವರನ್ನು ಎಷ್ಟು ಕಷ್ಟಪಡಿಸುತ್ತಿರುವರೆಂಬದರ ಸುದ್ದಿ ಕೂಡ ಆ "ದುಷ್ಟಸಂಹಾರಕ-ಶಿಷ್ಟಪರಿಪಾಲಕ"ನಾದ ನಾರಾಯಣನಿಗೆ ತಿಳಿದಿಲ್ಲೆಂಬಂತೆ ಕಾಣುತ್ತದೆ.

ಹೀಗೆಂದ ಪಿತಾಮಹನ ಆಜ್ಞಾನುಸಾರವಾಗಿ ಇಂದ್ರ-ವರುಣರು ಆಗಲೇ ರಥಾರೋಹಣವಂಗೈದು ವೈಕುಂಠಪುರಿಗಭಿಮುಖವಾಗಿ ಸಾಗಿದರು.

## ವೈಕುಂಠ.

ಭೋಜನಾನಂತರ ಲಕ್ಷ್ಮಿಯು ತನ್ನ ಕೋಣೆಯಲ್ಲಿ ಕುಳಿತು ಪ್ರಿಯಪತಿಯ ಸಲುವಾಗಿ ಕೈ ರುಮಾಲ (ಹ್ಯಾಂಡಕರಚೀಫ)ನ್ನು ಹೆಣೆಯುತ್ತಿದ್ದಳು. ಅವಳು ಅತ್ಯಂತ ನಯವಾದ ಮಧುರೆಯ ಸೀರೆಯನ್ನುಟ್ಟದ್ದಳು. ಕೈಯಲ್ಲಿ ರಾಣೀಛಾಪಿನ ಬಿಲ್ಲಾವರದ ಬಳೆಗಳಿದ್ದವು. ಕಿವಿಗಳಲ್ಲಿ ಕೋರ್ಟ-ತಾಲೂಕಗಳೆಂಬ ಆಧುನಿಕ ಯುಗದ ಸೂಕ್ಷ್ಮ ಆಭರಣಗಳು ಮಿನುಗುತ್ತಿದ್ದವು. ಅವಳ ಸ್ವಾಭಾವಿಕ ರಕ್ತವರ್ಣದ ಬಿಂಬೋಷ್ಠಗಳು, ತ್ರಯೋದಶ ಗುಣತಾಂಬೂಲಚರ್ವಣದಿಂದ ಮತ್ತಿಷ್ಟು ಆರಕ್ತವಾಗಿ ಪ್ರಕಾಶಿಸುತ್ತಿದ್ದವು. ಶ್ರೀಮನ್ನಾರಾಯಣನು ಅವಳ ಬಳಿಯಲ್ಲಿಯೇ ತೆಕ್ಕೆಗೆ ಆತು ಕುಳಿತು ಯಾವದೋ ಒಂದು ವೃತ್ತಪತ್ರವನ್ನು ಓದುತಲಿದ್ದನು; ಹಾಗು ನಡುನಡುವೆ ಪ್ರಿಯವಲ್ಲಭೆಯ ಲಾವಣ್ಯಮಯ ಮುಖಮಂಡಲವನ್ನು ಇಣಿಕಿ ನೋಡಿ, ಮನದಲ್ಲಿ ಏನೇನೋ ಭಾವಿಸುತಲಿದ್ದನು. ಇಂಥೀ ಸಮಯದಲ್ಲಿ ದ್ವಾರಪಾಲಕನಾದ ವಿಜಯನು ಬಂದು:— ಸ್ವಾಮಿಾ ನಾರಾಯಣಾ, ದೇವರಾಜನಾದ ಇಂದ್ರನತಿ ವರುಣನೊಡನೆ ನಿನ್ನ ಭೇಟಿಗಾಗಿ ಹೊರಗೆ ಕಾದಿದ್ದಾನೆ, ಎಂದನು.

ಈ ವಾರ್ತೆಯನ್ನು ಕೇಳಿ, ನಾರಾಯಣನು ವಿಷಣ್ಣವದನದಿಂದ:— ಪ್ರಿಯೇ, ಮಹಾಲಕ್ಷ್ಮೀ, ಸ್ವರ್ಗಲೋಕಕ್ಕೆ ಪುನಃ ದೈತ್ಯರ ಉಪಟಳವು ಪ್ರಾರಂಭವಾದಂತೆ ತೋರುತ್ತದೆ. ನೀನು ಇಲ್ಲಿಯೇ ಇರು. ನಾನು ಈಗ ಹೊರಗೆ ಹೋಗಿ ಸುದ್ದಿಯೇನೆಂಬದನ್ನು ವಿಚಾರಿಸಿಕೊಂಡು ಬರುವೆನೆಂದು ಹೆಂಡತಿಗೆ ಹೇಳಿ, ಹೊರಗೆ

ಬಂದು, ಇಂದ್ರ-ವರುಣರಿಂದ ಎಲ್ಲ ಸಂಗತಿಯನ್ನು ತಿಳಿದು ಪುನಃ ಅಂತಃಪುರಕ್ಕೆ ಹೋದನು; ಹಾಗು ಲಕ್ಷ್ಮಿಯನ್ನು ಕುರಿತು:— ಪ್ರಿಯಸಖೀ, ಕರ್ಣಾಟಕಕ್ಕೆ ಹೋಗಿ ಬರಲಿಕ್ಕೆ ನನಗೆ ಅನುಮತಿಯನ್ನು ಕೊಡು, ಎಂದು ಕೇಳಿಕೊಂಡನು

ಅದಕ್ಕೆ ಲಕ್ಷ್ಮಿಯು;—ಪ್ರಿಯರೇ, ಈಗಲೀ ಆಸಮಯದಲ್ಲಿ ಕರ್ಣಾಟಕಕ್ಕೆ ಏಕೆ? ಕಲ್ಕಿರೂಪ ತಾಳಲಿಕ್ಕೆ ತಮಗಿನ್ನೂ ಅವಕಾಶವಿರುವದಷ್ಟೇ?

ನಾರಾಯಣ:—ಒಮ್ಮೆ ಬೆಂಗಳೂರ-ಮಹಿಷೂರ ನೋಡಬೇಕೆಂದೂ, ಉಗಬಂಡಿಯನ್ನು ಹತ್ತಬೇಕೆಂದೂ ಇಚ್ಛೆಯುಂಟಾದ್ದರಿಂದ ಹೋಗಿ ಬರುವೆನು.

"ನೀವು ಹಿತ್ತಾಳಿಯ ಕಿವಿಯವರೆಂಬದೇನೂ ಸುಳ್ಳಲ್ಲ. ಇಷ್ಟಾನಿಷ್ಟ ವಿಚಾರ ಮಾಡದೆ ಮಂದಿಯ ಮಾತಿಗೆ ಒಮ್ಮೆಲೆ ತಲೆ ಹಾಕುತ್ತಿರುತ್ತೀರಿ. ನಿಮ್ಮ ಸಂಸಾರದ, ನಿಮ್ಮ ಆದಾಯ-ವ್ಯಯಗಳ ಪರಿವೆಯನ್ನು ನೀವು ಕೊಂಚವೂ ಮಾಡುವದಿಲ್ಲ ಛೀ, ನಿಮ್ಮ ಕರೇ ಮುಸುಡಿಗೆ........! ಆ ಕರ್ಣಾಟಕದ ಹೆಸರು ತೆಗೆಯಲಿಕ್ಕೂ, ಅಲ್ಲಿಗೆ ಹೋಗಲಿಕ್ಕೂ ನಿಮಗೆ ನಾಚಿಕೆ-ಅಂಜಿಕೆಗಳು ಬರುವದಿಲ್ಲವೆ? ತಿಳಿದು ನೋಡಿರಿ, ಕೃತ-ತ್ರೇತ-ದ್ವಾಪರ ಯುಗಗಳಲ್ಲಿ ಅಲ್ಲಿಗೆ ಹೋದಾಗ ನಿಮಗೂ, ನನಗೂ ಎಷ್ಟು ಅಸಹ್ಯಕಷ್ಟವೇದನೆಗಳಾದವೆಂಬದನ್ನು! ಆ ಮರ್ತ್ಯಭೂಮಿಯೊಳಗಿನ ನಿಮ್ಮ ಆ ಪರಮಭಕ್ತ-ಭೃಗುಋಷಿಯು ತನ್ನ ಪಾದದಿಂದ ಪೂಜೆ ಮಾಡಿ ಕಳಿಸಿದ್ದು ಸಾಕಾಗಲಿಲ್ಲವೆ?" ಎಂದೆಂದು, ನಾರಾಯಣಿಯು ದೋತರ-ಪಂಚೆಗಳನ್ನು ಬಗಲಲ್ಲಿ ಹಿಡಕೊಂಡು ನಡೆದಿದ್ದ ನಾರಾಯಣನನ್ನು ತರುಬಿ, ಪುನಃ—'ಸ್ವಲ್ಪ ತಡೆಯಿರಿ. ಸುಟ್ಟಿತು, ಆ ನಿಮ್ಮ ಹಾಳು ಇಚ್ಛೆಯು! ಹ್ಯಾಗೂ ತುಸ ದಿನಗಳಲ್ಲಿಯೇ ನೀವು ಕಲ್ಕಿಅವತಾರವನ್ನು ತಾಳಲೇ ಬೇಕಾಗಿರುತ್ತದೆ. ಆಗ ಅಲ್ಲಿಗೆ ಹೋಗಿ, ಎಷ್ಟು ಸಾರೆ ಬೆಂಗಳೂರ-ಮಹಿಷೂರುಗಳನ್ನು ನೋಡುವಿರೋ, ಎಷ್ಟು ಸಾರೆ ಉಗೆಬಂಡಿಯಲ್ಲಿ ಕೂಡುವಿರೋ ಕೂಡಿರಂತೆ' ಎಂದಳು.

"ಅದು ಅನಂತರದ ಕಾರ್ಯಕ್ರಮವು. ಸದ್ಯಕ್ಕೆ ಮೂರೇ ದಿನಗಳಲ್ಲಿ ಹೋಗಿ ಬರುವೆನು"ಎಂದು ಹೇಳಿ, ಶ್ರೀ ಹರಿಯು ಹೊರಡಲುದ್ಯುಕ್ತನಾಗಲು,

ಲಕ್ಷ್ಮಿಯು ಅವನ ಉತ್ತರೀಯವನ್ನು ಹಿಡಿದು ನಿಲ್ಲಿಸಿ:— ನಾಥ, ಹೀಗೇಕೆ ಈ ದಾಸಿಯನ್ನು ತಿರಸ್ಕರಿಸಿ ನಡೆದಿರುವಿರಿ? ನೀವು ಕರ್ನಾಟಕಕ್ಕೆ ಒಮ್ಮೆ ಹೋದಿರೆಂದರೆ, ಮೂರು ದಿನಗಳಿಗೇಕೆ, ಮೂರುಸಾವಿರ ವರ್ಷಗಳಾದರೂ ತಿರುಗಿ ಬರಲಾರಿರಿ; ಯಾಕಂದರೆ, ಆ ಬೆಂಗಳೂರಲ್ಲಿಯ ಲಾವಣ್ಯವತಿ ಲಲನೆಯರನ್ನು ನೋಡಿದಿರೆಂದರೆ, ನಿಮಗೆ ನನ್ನ ನೆನಪಾದರೆ, ತಾನೆ ನೀವು ಇಲ್ಲಿಗೆ ತಿರುಗಿ ಬರುವದು? ಅವರೊಡನೆ ಬೆರೆತು ಮದ್ಯ-ಮಾಂಸ, ರೋಟಿ-ಬಿಸ್ಕೀಟುಗಳನ್ನು ಭಕ್ಷಿಸಲಿಕ್ಕೂ, ಜಾತಿ-ಕುಲಭ್ರಷ್ಟರಾಗಲಿಕ್ಕೂ ನಿಮ್ಮ ಗಂಡಸರಜಾತಿಯು ಹಿಂದುಮುಂದು ನೋಡಲಾರದು. ಇಷ್ಟೇ ಅಲ್ಲ; ಅಲ್ಲಿಗೆ ಹೋಗಿ ನೀವು ಪತಿತೋದ್ಧಾರಕಪಂಥದಲ್ಲಿ ಸೇರಿ, ಅಗಣ್ಯ ಹೀನಜಾತಿಯ ಹಾಗು ವಿಧವಾ ಸ್ತ್ರೀಯರನ್ನು ಕೂಡ ವರಿಸುವಿರಿ; ಮತ್ತು ಕೆಲ ಜನ ವಿದೂಷಿಯರೊಡನೆ ಬೆರೆತು, ನಾಟಕ-ಸಿನೇಮಾಗಳಲ್ಲಿ ವೇಷಗಳನ್ನು ಕಟ್ಟಿಕೊಂಡು ಮೆರೆಯುವಿರಿ. ಆದ್ದರಿಂದ ಭಗವಾನ್, ಇಂಥ ಅನರ್ಥಕ್ಕೊಳಪಡಿಸುವದಕ್ಕಾಗಿ ಯಾವ ಸತಿಯು ತನ್ನ ಪತಿಯನ್ನು ಹೋಗಗೊಟ್ಟಾಳು? ಎಂದು ನುಡಿದಳು.

ಆಗ ನಾರಾಯಣನು ಮನದಲ್ಲಿ ಆಲೋಚಿಸಿದನೇನಂದರೆ:— "ನಾನು ಇವಳೊಬ್ಬಳ ಪ್ರೇಮಪಾಶದಲ್ಲಿ ಸಿಕ್ಕು, ಕೃತನಿಶ್ಚಯದಿಂದ ಪರಾಙ್ಮುಖನಾದರೆ, ನನಗೆ ಇಂಥ ಹದಿನಾರು ಸಾವಿರ ಹೆಂಗಸರಿರುವರು. ಅವರೆಲ್ಲರ ಇಷ್ಟಾನುಸಾರ ನಡೆಯಲಿಕ್ಕೆ ನಾನು ಟೊಂಕ ಕಟ್ಟಿದರೆ, ನನ್ನ ಲೋಕೋದ್ಧಾರದ ಮುಖ್ಯ ಕಾರ್ಯವು ನಿಂತೇ ಹೋದೀತು. ಆದ್ದರಿಂದ ಈಗ ನಾನು ಇವಳ ಪ್ರಾರ್ಥನೆಗೆ ಲಕ್ಷ್ಯಗೊಡದೆ ನನ್ನ ಕೆಲಸಕ್ಕೆ ಹತ್ತುವೆನು" ಕೂಡಲೆ ಅವನು ಲಕ್ಷ್ಮಿಯು ಕಸುವಿನಿಂದ ಹಿಡಿದ ತನ್ನ ಆ ಉತ್ತರೀಯವನ್ನು ಅವಳ ಕೈಯಲ್ಲಿಯೇ ಬಿಟ್ಟು, ಹೊರಗೆ ಬಂದು ತನ್ನ ಸೇವಕರಾದ ಗರುಡ-ಶೇಷ ಹಾಗು ಜಯ-ವಿಜಯರಿಗೆ ಮನೆಯ ಕಡೆಗೆ ಎಚ್ಚರಿಕೆಯಿಂದ ನೋಡ ಹೇಳಿ, ತಾನು ಹೊರಟು ನಡೆಯಲು, ನಾರಾಯಣಿಯು ಬಾಗಿಲವರೆಗೆ ಬಂದು ಗದ್ಗದಕಂಠದಿಂದ:— "ನಾಥ! ಶೀಘ್ರವಾಗಿ ತಿರುಗಿ ಬನ್ನಿರಿ. ಬಹು ಜಾಗರೂಕರಾಗಿರಿ. ಆ ಹೊಸಪಟ್ಟಣಗಳ ಮಿಠಾಯಿಯ ಅಂಗಡಿಗಳಲ್ಲಿ ಅಖಾದ್ಯ ಖಾದ್ಯ, ಅಪೇಯ ಪೇಯಗಳನ್ನು ಭಕ್ಷಿಸಬೇಡಿರಿ. ಅದರಿಂದ ಶೀಲಭ್ರಷ್ಟತೆಗೆ ಕಾರಣವಾಗುವದಲ್ಲದೆ,

ದೇಹಕ್ಕೂ ಅನಾರೋಗ್ಯವಾಗದಿರದು. ಬರುವಾಗ್ಗೆ ಮರೆಯದಲೆ ಕೊರಳಪಟ್ಟಿಗಾಗಿ ಬಿಳೇಉಂಡೆಯನ್ನು ತಕ್ಕೊಂಡು ಬನ್ನಿರಿ" ಎಂದು ಹೇಳಿದಳು.

ಬಳಿಕ ನಾರಾಯಣನು ಇಂದ್ರ-ವರುಣರ ಬಳಗೆ ಬಂದು:— ನಡೆಯಿರಿ, ನಮ್ಮ ಭೋಲಾನಾಥನನ್ನೂ ಕರೆದೊಯ್ಯೋಣ. ಅವನು ಸಂಗಡ ಬರದಿದ್ದರೆ ಮೋಜು ಆಗಲಿಕ್ಕಿಲ್ಲ, ಎಂದಂದು ರಥವನ್ನಾರೋಹಿಸಲು, ಅವರೆಲ್ಲರೂ ಧೃತಗತಿಯಿಂದ ಕೈಲಾಸಕ್ಕೆ ನಡೆದರು.

## ಕೈಲಾಸ.

ಒಂದು ಮಕರಸಂಕ್ರಾಂತಿಯಾದುದರಿಂದ ಪಾರ್ವತಿಯು ಹಿಟ್ಟಿನ ಹೋಳಿಗೆಗಳನ್ನು ಮಾಡುತ್ತ ಪಾಕಶಾಲೆಯಲ್ಲಿ ಕುಳಿತಿದ್ದಳು; ಹಾಗು ದೇವಾಧಿದೇವನಾದ ಮಹಾದೇವನು ಅವಳ ಬಳಿಯಲ್ಲಿಯೇ ಕುಳಿತುಕೊಂಡು ಷಣ್ಮುಖನಿಗೆ ಪಿಟ್ಟು ಮಾಡುತ್ತಿದ್ದನು. ಆಗ ಪಾರ್ವತಿಯು:— ಇದ್ದ ಎರಡು ಮಕ್ಕಳನ್ನು ಪಿಸಿಹಿಡಿದವರ ಹಾಗೆ ಹಗಲೆಲ್ಲ ಹೀಗೇಕೆ ಬಯ್ಯುತ್ತಿರುತ್ತೀರಿ? ಈ ಕಾರ್ತಿಕನು ಮೊದಲೇ ತುಸ ಗರ್ವಿಷ್ಠನು ಬಹಳ ದಿವಸಗಳ ತರುವಾಯ ಈಗೆಲ್ಲಿಯೋ ಮನೆಗೆ ಬಂದಿರುತ್ತಾನೆ. ನಿಮ್ಮ ಈ ಪರಿಯ ಬಿರಿನುಡಿಯಿಂದ ಮತ್ತೆ ಇವನೆಲ್ಲಾದರೂ ಓಡಿ ಹೋದನೆಂದರೆ, ಇವನನ್ನು ಹುಡುಕಿ ತರುವದಕ್ಕಾಗಿ ನೀವೇ ಎಡತಾಕಬೇಕಾಗುವದಲ್ಲವೆ? ಎಂದು ಪತಿಯನ್ನು ಕುರಿತು ಒಂದಿಷ್ಟು ಉಚ್ಚ ಕಂಠದಿಂದ ಗದ್ದರಿಸಿದಳು. ಇದೇ ಸಮಯದಲ್ಲಿ ನಂದಿಯು ಅಲ್ಲಿಗೆ ಬಂದು ಶಿವನನ್ನು ಕುರಿತು:— ಅಪ್ಪಾ, ಸಣ್ಣಧಣೀರು ಮತ್ತೆ ಇಬ್ಬರು ಗೃಹಸ್ಥರೊಡನೆ ಮಹಾದೇವರ ಭೆಟ್ಟಿಗೆಂದು ಹೊರಗೆ ಬಂದಿರುತ್ತಾರೆ, ಎಂದು ನಿವೇದಿಸಿದನು.

ನಂದಿಯ ನುಡಿಯನ್ನು ಕೇಳಿ ಮಹಾದೇವನು ಅಂತರಂಗದಲ್ಲಿ ಸಂಪೂರ್ಣವಾಗಿ ಬೆದರಿ, ಅಪರ್ಣೆಯನ್ನುದ್ದೇಶಿಸಿ:—ಪ್ರಿಯೇ, ನನ್ನ-ಮೂರ್ಖನ-ಯಾವ ಅನಿಷ್ಟವಂದ ವಾಣಿಯ ಲಭ್ಯಾಂಶದಿಂದ ಮತ್ತಾವ ದೈತ್ಯನೋ ಮತ್ತನಾಗಿ ಪುನಃ ಸ್ವರ್ಗಕ್ಕೆ ದಾಳಿಯಿಟ್ಟಂತೆ ತೋರುತ್ತದೆ. ಅದರಿಂದಲೇ ನಾರಾಯಣಾದಿ ದೇವತೆಗಳು ನನ್ನ

ಬಳಿಗೆ ಬಂದಿರಬಹುದಾಗಿದೆ. ಆ ಸಂಗತಿಯೇನೇ ಇರಲಿ. ನಾನು ಈಗ ಬರುವೆನು, ತುಸ ತಡೆ ಎಲ್ಲ ಹೋಳಿಗೆಗಳನ್ನು ಈ ನಿನ್ನ ತುಂಟ ಹುಡುಗರಿಗೇ ಕೊಟ್ಟು ತೀರಿಸಬೇಡ; ಎಂದವನೇ ನಂದಿಯೊಡನೆ ಪಡಸಾಲೆಗೆ ಬಂದನು. ಕೂಡಲೆ ನಾರಾಯಣಾದಿ ದೇವತೆಗಳು ಒಬ್ಬೊಬ್ಬರಾಗಿ ಮುಂದೆ ಬಂದು, ಮಹಾದೇವನಿಗೆ ಪ್ರಣಿಪಾತವಂಗೈದರು.

ಮಹಾ:—ಸ್ವರ್ಗಲೋಕದಲ್ಲಿ ಕುಶಲವಷ್ಟೆ?

ನಾರಾ:—ಮಹಾದೇವರ ಕೃಪೆಯಿಂದ ಈ ವರೆಗೆ ಎಲ್ಲವೂ ಕ್ಷೇಮವು.

ಮಹಾ:—ಹಾಗಾದರೆ ಈ ಅಸಮಯದಲ್ಲಿ ಇಲ್ಲಿಗೆ ಬಂದ ಕಾರಣವೇನು?

ನಾರಾ:—ನಾವೆಲ್ಲರೂ ಬೆಂಗಳೂರು ನೋಡಿಕೊಂಡು ಬರುವದಕ್ಕಾಗಿ ಹೊರಡಬೇಕೆಂದಿದ್ದೇವೆ. ಹಿರಿಯಣ್ಣನು ನಿನ್ನನ್ನು ಕರೆತರಲು ಹೇಳಿದ್ದರಿಂದ ಬಂದೆವು.

ಮಹಾ:—ತಮ್ಮಗಳಿರಾ, ನಿಮ್ಮ ಯೋಜನೆಯು ಅತ್ಯುತ್ಕೃಷ್ಟವಾದದ್ದೇನೋ ನಿಜ; ಆದರೆ ಈಚೆಗೆ ನಮ್ಮ ಹುಡುಗರ ಹಾಗು ಮನೆಯ ಹಿರಿಯಳ ಅಜಾಗರೂಕತೆಯ ಮೂಲಕ ಮನೆಗೆಲಸಗಳೆಲ್ಲ ಸರಿಯಾಗಿ ನಡೆಯದ್ದರಿಂದಲೂ, ಬೆಳಗಾದರೆ ಸುಗ್ಗೀ ಕಾಲವು ಬಂದಿತಾದ್ದರಿಂದಲೂ ಈ ಸಮಯದಲ್ಲಿ ನಾನು ಇಲ್ಲಿಂದ ಒಂದು ತಾಸು ಕೂಡ ಅಗಲಲಾರೆನು; ಹಾಗೆ ಬಿಟ್ಟು ಹೋದರೆ, ಕೈಗೆ ಬಂದ ತುತ್ತು ಬಾಯಿಗೆ ಬರಲಾರದು. ನನ್ನ ಮನೆಯಲ್ಲಿ ನನ್ನ ಹಿಂದೆ ಕಾಳಜಿಯಿಂದ ನೋಡಿಕೊಳ್ಳುವವರು ಯಾರೂ ಇರುವದಿಲ್ಲ.

ನಾರಾ:—ಅದೇಕೆ? ಷಣ್ಮುಖ ಹಾಗು ಗಜಾನನರಿರುವರಲ್ಲ? ಅವರು ಕೆಲದಿನಗಳ ವರೆಗೆ ಗೃಹಕೃತ್ಯಗಳನ್ನು ಸಾಗಿಸಲಿಕ್ಕಿಲ್ಲವೇ? ಅವರು ಈಗ ಹ್ಯಾಗೂ ವಯಸ್ಸಿಗೆ ಬಂದಿರುವರು. ಈಗ ಕಲಿಯದಿದ್ದರೆ, ಮತ್ತ್ಯಾವಾಗ ಅವರು ಇದನ್ನು ಕಲಿಯಬೇಕು?

ಮಹಾ:—ಮಹಾಭಾರತಾ, ನಾರಾಯಣಾ! ಈ........! ಮಕ್ಕಳಲ್ಲಿ ಸ್ವಲ್ಪಾದರೂ ವಿವೇಕವಿದ್ದರೆ ನನ್ನ ಗತಿಯು ಹೀಗೇಕಾಗುತ್ತಿತ್ತು? ಇವರಿಬ್ಬರಲ್ಲಿ ಒಬ್ಬನೂ ಯೋಗ್ಯನಿರುವದಿಲ್ಲ ಕಾರ್ತಿಕ

ನಂತೂ ಮಹಾ ವಿದ್ವಾಂಸನಾಗಿರುತ್ತಾನೆ. ಹಗಲೂ-ರಾತ್ರಿ ಅವನ ಕೈಯಲ್ಲಿ ವ್ಯಾಸಲಿನ್ನ ಶೀಸೆ, ಕನ್ನಡಿ, ಬ್ರಶ್ಶುಗಳೇ ಇರುತ್ತವೆ. ನಾನು ಭಸ್ಮವನ್ನು ಮೈಗೆ ಬಡಕೊಳ್ಳುವಂತೆ, ಅವನು ಲವ್ಹೆಂಡರ, ಅತ್ತರ ಮುಂತಾದವುಗಳನ್ನು ಹಚ್ಚಿಕೊಳ್ಳುತ್ತಿರುತ್ತಾನೆ ಆ ಮಗನಿಗೆ ಇಷ್ಟಗಲ ಅಂಚಿನ ನಾಗಪುರದ (ಕರವತಕಾಠಿಯ) ಸೂಕ್ಷ್ಮ ಧೋತರಗಳಿಲ್ಲದಿದ್ದರೆ ನಡೆಯುವದಿಲ್ಲ. ಹತ್ತುರೂಪಾಯಿಗೆ ಕಡಿಮೆ ಬೆಲೆಯ ಕಾನಪುರದ ಕರಿಯಬೂಟುಗಳಿಲ್ಲದಿದ್ದರೆ ಸಾಗುವದಿಲ್ಲ. ಖರ್ಚನ್ನು ಕಡಿಮೆ ಮಾಡುವದಕ್ಕಾಗಿ ನಾನು ಹುಲಿ ಮೊದಲಾದ ಹಿಂಸ್ರ ಶ್ವಾಪದಗಳ ಚರ್ಮದಿಂದ ಲಜ್ಜಾ ನಿವಾರಣೆ ಮಾಡಿಕೊಳ್ಳುತ್ತಿರುವೆನು; ಜಡೆ ಬೆಳೆಸಿರುವೆನು; ಆದರೆ ಈ ಅವೇ ಬಾಜೀರಾಯನಂಥ ಮಗನಿಗೆ ಪಂಜಾಬೀ ಪದ್ಧತಿಯ ಇಷ್ಟುದ್ದ ರೇಶ್ಮಿಯ ಕೋಟುಗಳು ಬೇಕಂತೆ!

ನಾರ:—ಅಣ್ಣಾ, ಶತದರಿದ್ರರಾದ ನೀವು ಮಕ್ಕಳ ಈ ಪರಿ ಖರ್ಚಿಗೆ ಹಣವೆಲ್ಲಿಂದ ತಂದುಕೊಡುವಿರಿ?

ಮಹಾ:—ತಮ್ಮಾ, ನಾನೇನು ಕೊಟ್ಟೇನು? ಇವರು ಪ್ರತಿ ವರ್ಷ ಅಶ್ವೀಜಮಾಸದ ನವರಾತ್ರಿಗೆಂದು ತಮ್ಮ ಸೋದರಮಾವನಾದ ವೇಂಕಟಾಚಲದ ಶ್ರೀನಿವಾಸನ ಮನೆಗೆ ಹೋಗಿ, ಅಲ್ಲಿಂದಲೇ ಹಣಕಾಸುಗಳನ್ನು ತಂದುಕೊಳ್ಳುತ್ತಾರೆ. ಇವರ ಮಾವನೇ ನಮ್ಮ ಹುಡುಗರಿಬ್ಬರನ್ನೂ ಈ ಗತಿಗೆ ಮುಟ್ಟಿಸಿದವನು! ಈ ಹುಡುಗರ ಪತ್ರಗಳು ಹೋದಕೂಡಲೆ ನೋಟುಗಳನ್ನೋ-ಏನನ್ನೋ ತುಂಬದಂಥ ಇನ್ಶುಅರ್ಡ ಎಂಬಭಿದಾನದ ಲಕೋಟಗಳನ್ನು ಅವನು ಆಗಾಗ್ಗೆ ಇವರಿಗೆ ರವಾನಿಸುತ್ತಿರುವನು; ಇಷ್ಟೇಅಲ್ಲ, ನಮ್ಮ ಮನೆಯ ಹಿರಿಯಳಾದರೂ ಕಡಿಮೆಯವಳಿರುವದಿಲ್ಲ ತನಗ ಬಂದ ದಾನ-ದಕ್ಷಿಣೆಗಳ ಹಿಂದೆರಡು ದುಡುಗಳನ್ನು ಮಧ್ಯಾಹ್ನವನ್ನು ಹ್ಯಾಗೆ ಸಾಗಿಸುವೆನೋ ಎಂದು ಪೇಚ್ಯಾಡುತ್ತಿರುವ ನನ್ನ ಕೈಗೆ ಕೊಡದೆ, ಬಚ್ಚಿ-ಮುಚ್ಚಿ ಅವನ್ನು ಈ ಕಾರ್ತಿಕ-ಗಣೇಶರಿಗೇ ಕೊಟ್ಟುಬಿಡುವಳು!

ನಾರ:—ಮಹಾದೇವಾ, ಕಾರ್ತಿಕನ ಸ್ವಭಾವವಂತೂ ತಿಳಿದಂತಾಯಿತು ನಿನ್ನ ಚಿಕ್ಕಮಗನಾದ ಗಜಾನನು ಹೇಗಿರುತ್ತಾನೆ

ಮಹಾ:—ಇವನಾದರೂ ಹಿರಿಯಣ್ಣನ ಕಿತ್ತೆ ತೀಡಿದವನೇ

ಸರಿ! ಈ ತಿನಸುಬಕ್ಕನಿಗೆ ಪ್ರತಿದಿನ ಬೆಳಗಾದ ಕೂಡಲೆ ಹಿಂದೂ ಕಾಲು ಮಣ ಸಿದ್ಧಿ (ಪಂಚಖಾದ್ಯವು) ಯು ಬೇಕಂತೆ! ತಮ್ಮಾ, ಜಗತ್ತಿನ ವಿಚಿತ್ರತನವನ್ನೆಷ್ಟೆಂದು ಹೇಳಲಿ! ಇಂಥ ಈ ತಿನಸು ಗೂಳಿಗೆ "ಸಿದ್ಧಿವಿನಾಯಕ"ನೆಂಬ ಪೂಜ್ಯ ಹೆಸರುಬಂದಿದೆ ನೋಡು!

ನಾರಾ:—ಅಣ್ಣಾ, ಮಾಡುವದೇನು? ಕೃತಕರ್ಮದ ಫಲವು ಯಾರಿಗೂ ಬಿಟ್ಟಿರುವದಿಲ್ಲವಲ್ಲ? ತಾರುಣ್ಯದಲ್ಲಿ ನೀನೇ ಸರಿಯಾಗಿ ಸಂಸಾರಮಾಡಿದ್ದರೆ, ವೃದ್ಧಾಪ್ಯದಲ್ಲಿ ನಿನಗೇಕೆ ಈ ಪರಿತಾಪವುಂಟಾ ಗುತ್ತಿತ್ತು? ಇರಲಿ. ಅಣ್ಣಾ, ಮೊದಲಿನಂತೆ ಅತ್ತಿಗೆಯು ಆಗಾಗ್ಗೆ ಸಿಟ್ಟಾಗಿ, ಮಕ್ಕಳನ್ನು ಕಟ್ಟಿಕೊಂಡು ತವರು ಮನೆಯ ಹಾದೀ ಹಿಡಿಯುವದಿಲ್ಲವಷ್ಟೇ?

ಮಹಾ:—ಇಲ್ಲ; ಇಷ್ಟು ವಯಸ್ಸಾದ ಮೇಲೆ, ಮೇಲಾಗಿ ಹಿಂದಲ್ಲ-ಎರಡು ಮಕ್ಕಳು ಆದಮೇಲೆ, ತವರಮನೆಗೆ ಹೋಗುವಬಗೆ ಹೇಗೆ? ಹೋದರೂ ಅಲ್ಲಿ ಅತ್ತಿಗೆ-ನಾದಿನಿಯರ ಉಪಟಳದ ಮುಂದೆ ಇವಳ ಬೇಳೆ ಬೆಯ್ಯುವ ಬಗೆ ಹೇಗೆ?

"ಇರಲಿ ಅಣ್ಣಾ, ನಾವಿನ್ನು ಹೊರಡುವೆವು" ಎಂದು ಹೇಳಿ, ನಾರಾಯಣನು ಇಂದ್ರಾದಿಗಳೊಡನೆ ಮಹಾದೇವನಿಗೆ ನಮಸ್ಕರಿಸಿ ಎದ್ದು ನಿಲ್ಲಲು, "ತಮ್ಮಗಳಿರಾ, ಮಧ್ಯಾಹ್ನಕ್ಕೆ ಬಂದ ತಾವು ಹಾಗೆಯೇ ಹೋಗುವದುಂಟೆ? ಇಂದು ಈ ಬಡವನಲ್ಲಿಯೇ ಮಧ್ಯಾಹ್ನವನ್ನು ತೀರಿಸಿಕೊಂಡು ಹೋಗಿರಿ" ಎಂದು ಕೈಲಾಸಾಧಿ ಪತಿಯು ನಾರಾಯಣಾದಿಗಳನ್ನು ಬಿನ್ನವಿಸಲು, ಸರ್ವಾಂತರ್ಯಾ ಮಿಯಾದ ನಾರಾಯಣನು ಅವನನ್ನು ಕುರಿತು(ಮನದಲ್ಲಿ):— ಅಣ್ಣಾ, ಬರಲಿಕ್ಕೆ ನಾವೇನೂ ಅನುಮಾನ ಮಾಡುವದಿಲ್ಲ; ಆದರೆ ಹಿಳಗ ನಿನಗಾದರೂ ಹಿಟ್ಟಿನ ಹೋಳಿಗಗಳು ಉಳಿದಿವೆಯೋ- ಇಲ್ಲವೋ ಯಾರು ಬಲ್ಲರು? ಎಂದು ಅಂದು, ಬಹಿರಂಗವಾಗಿ:— ಇಂದೇ ಸಂಜೆಯ ರೈಲಿಗೆ ಹೊರಡಬೇಕಾದುದರಿಂದ ಅವಕಾಶವಿಲ್ಲ. ಈಗಲೆ ಹೊರಡುವೆವೆಂದು ಹೇಳಿ ಹೊರಟರು

"ಕರ್ನಾಟಕದೊಳಗಿನ ನನ್ನ ಸ್ಥಾನಗಳಿಗೆ ಬಂದಾಗ, ನನಗೆ ಭೆಟ್ಟಿಕೊಡದೆ ಹೋಗಕೂಡದು ಕಾಕ್ರಪ್ಪಾ" ಎಂದು ಅಂದು, ಶಿವನು ಲಗು ಬಗೆಯಿಂದ ಹಿಳಹೊಕ್ಕನು.

# ನೃಸಿಂಹ ವಾಡಿ.

ಬಳಿಕ ನಾರಾಯಣನು ಮರಳಿ ಬ್ರಹ್ಮಲೋಕಕ್ಕೆ ಬಂದು ಇಂದ್ರ, ವರುಣ, ಬ್ರಹ್ಮದೇವರೊಡನೆ ಕರ್ಣಾಟಕಕ್ಕೆ ಹೊರಡುವ ಸಿದ್ಧತೆ ಮಾಡಿದನು; ಆದರೆ ಮೊದಲು ಎಲ್ಲಿಗೆ ಹೋದರೆ ತಮ್ಮೆಲ್ಲರಿಗೆ ಅನುಕೂಲವಾಗಬಹುದೆಂಬದನ್ನು ಯೋಚಿಸಿ, ಬ್ರಹ್ಮ-ವಿಷ್ಣು-ಮಹೇಶ್ವರರ(ತ್ರಿಮೂರ್ತಿಗಳ)ಅಂಶಸಂಭೂತವಾದ ದತ್ತಾತ್ರಯರ ಅವತಾರಗಳಲ್ಲಿ ಶ್ರೀ ನರಸಿಂಹ ಸರಸ್ವತಿ ಸ್ವಾಮಿಗಳವರ ಕರ್ಣಾಟಕದೊಳಗಿನ ಅವತಾರ ಸ್ಥಾನವಾದ ನೃಸಿಂಹವಾಡಿಗೆ ಮೊದಲು ಹೋಗಬೇಕೆಂದು ನಿರ್ಧರಿಸಿಕೊಂಡರು; ಹಾಗು ಆ ಪ್ರಕಾರ ಆ ದೇವತೆಗಳು ದೇವಲೋಕದಿಂದ ಮರ್ತ್ಯಲೋಕ-ಕರ್ನಾಟಕ-ದೊಳಗಿನ ನೃಸಿಂಹವಾಡಿಗೆ ಎಲ್ಲಕ್ಕೂ ಮೊದಲು ಬಂದರು.

ದೇವತೆಗಳು ಭೂಲೋಕಕ್ಕೆ ಅವತರಿಸುವಾಗ ಅಷ್ಟಭುಜ, ಚತುರ್ಮುಖ, ಸಹಸ್ರನಯನ ಮುಂತಾದ ವಿಶಿಷ್ಟ ಅಂಗಪ್ರತ್ಯಂಗಗಳಿಂದ ಕೂಡಿದ ಶರೀರಗಳನ್ನು ಧರಿಸಿರಲಿಲ್ಲ ಅವರು ದೊಡ್ಡವರ ವಾಣಿಯಂತೆ ಹ್ಯಾಗೆ ದೇಶವೋ, ಹ್ಯಾಗೆ ಕೋಶವೋ ಹಾಗೆ ಪರಿಸ್ಥಿತಿಗನುರೂಪವಾದ ಮಾನವೀ ರೂಪವನ್ನು ಧಾರಣಮಾಡಿಕೊಂಡು ಬಂದರು. ಪಿತಾಮಹನು ಮುಪ್ಪಿನ ಮುದುಕನಾದ ಕರ್ಮಠ ಹಾರುವನಾದನು. ನಾರಾಯಣನು ಚಂಗಿಭಿಂಗೀ ವೇಷದ ಬ್ರಾಹ್ಮಣನಾದನು. ಇಂದ್ರ-ವರುಣರಾದರೂ ಕೆಲವಂಶದಲ್ಲಿ ಬ್ರಹ್ಮನನ್ನೂ, ಕೆಲವಂಶದಲ್ಲಿ ನಾರಾಯಣನನ್ನೂ ಅನುಕರಣ ಮಾಡಿದಂಥ ಬ್ರಾಹ್ಮಣ ವೇಷಗಳನ್ನು ಧರಿಸಿದರು.

ನಮ್ಮ ನಾರಾಯಣಾದಿ ದೇವತೆಗಳು ಭೂಲೋಕದಲ್ಲಿ ಕರ್ನಾಟಕದೊಳಗೆ ಎಲ್ಲಕ್ಕೂ ಮೊದಲು ಬಂದ ನರಸಿಂಹವಾಡಿ ಕ್ಷೇತ್ರವು ಬಹು ಮನೋಹರವಾದ ಪವಿತ್ರ ಸ್ಥಳವಿರುತ್ತದೆ. ನೃಸಿಂಹವಾಡಿಯ ಬಳಿಯಲ್ಲಿ ಕೃಷ್ಣಾ-ಪಂಚಗಂಗಾ ನದಿಗಳ ಸಂಗಮಸ್ಥಾನವು ಬಹು ಪುಣ್ಯಕರವೂ ಪ್ರೇಕ್ಷಣೀಯವೂ ಆಗಿರುತ್ತದೆ ಆ ಸ್ಥಾನದಲ್ಲಿ ಶ್ರೀ ನೃಸಿಂಹ ಸರಸ್ವತೀ ಸ್ವಾಮಿಗಳು ಅನೇಕ ಲೀಲೆಗಳನ್ನು ತೋರಿಸಿ ಭಕ್ತಕೋಟಿಯನ್ನು ಉದ್ಧರಿಸಿರುವರು; ಈಗಲೂ ಉದ್ಧಾರ ಮಾಡುತ್ತಲಿರುವರು. ನೃಸಿಂಹವಾಡಿಯು ಕೊಲ್ಹಾಪುರದ ಛತ್ರ

ಪತಿಗಳ ಜಹಗೀರಿನ ಮುಲುಖವಾಗಿದ್ದು, ವಾಡಿಯ ಸುತ್ತಮುತ್ತಲು ದಕ್ಷಿಣ ಮಹಾರಾಷ್ಟ್ರದೊಳಗಿನ ಬೇರೆ ಬೇರೆ ಪಟವರ್ಧನ ಸಂಸ್ಥಾನಗಳ ಹದ್ದೂ, ಬ್ರಿಟಿಶ ಸೀಮೆಯೂ ಇರುತ್ತದೆ. ಶ್ರೀದತ್ತಾತ್ರಯರ ಪಾದುಕೆಗಳಿಂದ ಪರಿಶೋಭಿತವಾದ ಚಿಕ್ಕ ದೇವಸ್ಥಾನವು ಕೃಷ್ಣಾತಟಾಕದಲ್ಲಿದ್ದು, ಅದರ ಸುತ್ತಮುತ್ತಲು ಪ್ರಶಾಂತವಾದ ಚಿಕ್ಕ ದೊಡ್ಡ ಪೌಳಿಗಳು ಮೆರೆಯುತ್ತಲಿರುವವು.

ವರುಣನು ಅವುಗಳನ್ನು ನೋಡಿ ಬ್ರಹ್ಮದೇವನನ್ನು ಕುರಿತು:- "ಅಜ್ಜಾ, ವಾಡಿಯೊಳಗಿನ ಶ್ರೀ ದತ್ತಜಯಂತಿಯ ಮಹೋತ್ಸವವು ನೆರವೇರಿ ಹೋಗಿರುವದರಿಂದ ಎಲ್ಲ ಪೌಳಿಗಳೂ ತೆರವಿರುತ್ತವೆ. ನಾವು ಇಲ್ಲಿಯೇ ವಿಶ್ರಮಿಸಿ, ಸ್ನಾನ-ಸಂಧ್ಯಾದಿಗಳ ಉದ್ಯೋಗಕ್ಕೆ ಹತ್ತೋಣ ನಡೆಯಿರಿ'' ಎಂದನು.

ಕರ್ನಾಟಕದೊಳಗಿನ ಬೇರೆ ಭಾಗಗಳಿಗಿಂತ ಕೃಷ್ಣಾತಟಾಕದಲ್ಲಿ ಚಳಿಯು ಹೆಚ್ಚು. ಮೊದಲೇ ವೃದ್ಧನಾದ ಪಿತಾಮಹನ ಹಲ್ಲುಗಳು ಆ ಅಸಹ್ಯ ಶೀತದಿಂದ ಗಿಟಿಗರಿಸತೊಡಗಿದವು "ತಮ್ಮಗಳಿರಾ, ನನ್ನಿಂದ ಈ ಚಳಿಯನ್ನು ಸಹಿಸಲಾಗುವದಿಲ್ಲ. ಬೇಗನೆ ಬೆಂಕಿಹೊತ್ತಿಸಿ ನನ್ನ ಕೈಕಾಲುಗಳನ್ನು ಬೆಚ್ಚಗೆ ಮಾಡಿರಿ'' ಎಂದು ಬ್ರಹ್ಮನು ಆರ್ತಧ್ವನಿಯಿಂದ ನುಡಿಯಲು, ನಾರಾಯಣನು ಇಂದ್ರನ ನೆರವಿನಿಂದ ಎಡ-ಬಲದಲ್ಲಿದ್ದ ಕಟ್ಟಿಗೆಗಳನ್ನು ಸಂಚಯಿಸಿ, ಅವಕ್ಕೆ ಬೆಂಕಿಯ ಕಡ್ಡಿಯಿಂದ ಅಗ್ನಿ ಸಂಸ್ಕಾರಮಾಡಿ, ಬ್ರಹ್ಮದೇವನನ್ನು ಆ ಅಗ್ನಿಯ ಬಳಿಯಲ್ಲಿ ಕುಳ್ಳಿರಿಸಿದನು; ಹಾಗು ತಾವೂ ಅದನ್ನು ಸುತ್ತುವರೆದು ಕುಳಿತರು

ಆಗ ಬ್ರಹ್ಮನು ನಾರಾಯಣನನ್ನು ಕುರಿತು:—ತಮ್ಮಾ, ಅರಣಿಯನ್ನು ಮಥಿಸದೆ, ಬಕ್ಕಣದೊಳಗಿನ ಯಾವದೋ ಹಿಂದು ಚಿಕ್ಕ ಪೆಟ್ಟಿಗೆಯಿಂದ ಅಗ್ನಿಯನ್ನು ಹೊತ್ತಿಸಿದೆಯಲ್ಲ? ಅದು ಹೇಗೆ? ಆದಕ್ಕೇನೆನ್ನುವರು?

ನಾರಾಯಣನು ಬೆಂಕಿಯ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದು:- ಅಜ್ಜಾ, ಇದಕ್ಕೆ ಮ್ಯಾಚ್‌ಬಾಕ್ಸ ಅನ್ನುವರು. ಇದು ಈ ನವೀನ ಯುಗದ ಶೋಧಗಳಲ್ಲಿ ಹಿಂದು ಅತ್ಯುಪಯುಕ್ತ ಶೋಧವಾಗಿರುತ್ತದೆ. ಪೂರ್ವದಲ್ಲಿ ಅಗ್ನಿ ಸಂಸ್ಕಾರ ಮಾಡಬೇಕಾದರೆ, ಅರಣಿ ಮಥನವನ್ನು ಮಾಡಿ ಇಲ್ಲವೆ ಚಕಮುಕಿಯನ್ನು ಉಪಯೋಗಿಸಿ ಬಹು

ಪ್ರಯಾಸ ಪಡಬೇಕಾಗಿದ್ದಿತು; ಆದರೆ ಈ ಗೌರಾಂಗದವರ ಆಧು
ತದ ಯುಗದಲ್ಲಿ ಸಹಜವಾಗಿ ಅಗ್ನಿ ಸಂಚಯಿಸಬಹುದಾದ ಈ
ಬೆಂಕಿಯ ಪೆಟ್ಟಿಗೆಗಳು ಬಹು ಸುಲಭವಾಗಿ—ದುಡ್ಡಿಗೆ ಮೂರು
ದೀಪದ ಪಟ್ಣ ಮೇಲೊಂದು ಸೂಜಿ—ದೊರೆಯುವವಲ್ಲದೆ
ಹಿಂದೊಂದು ಪೆಟ್ಟಿಗೆಯಲ್ಲಿ ನೂರಾರು ಸಾರೆ ಅಗ್ನಿಯುತ್ಪನ್ನ
ಮಾಡುವಂಥ ಸಣ್ಣ ಸಣ್ಣ ಕಡ್ಡಿಗಳಿರುತ್ತವೆ, ಎಂದನು

ಬೆಂಕಿಕಾಸಿ ಚಳಿಯ ಬಾಧೆಯು ತುಸ ಹಿಮ್ಮೆಟ್ಟಲು, ಬ್ರಹ್ಮನು
ವರುಣನನ್ನು ಕುರಿತು:—ವರುಣಾ, ಇಲ್ಲಿಯ ಶ್ರೀದತ್ತ ಜಯಂತಿಯು
ಉತ್ಸವವು ನೆರವೇರಿತಂದೆಯಲ್ಲ? ದತ್ತ ಜಯಂತಿಯೆಂದರೇನು?
ಅದು ಯಾವಾಗ ಆಗುವದು? ಎಂದು ಪ್ರಶ್ನ ಮಾಡಲು,

ವರುಣನು:—ಅಜ್ಞಾ, ದತ್ತ ಜಯಂತಿಯೆಂದರೆ, ಹಿಂದಕ್ಕೆ
ಬ್ರಹ್ಮ-ವಿಷ್ಣು-ಮಹೇಶ್ವರರು ಅತ್ರಿ ಋಷಿಯ ಪತ್ನಿಯಾದ
ಅನಸೂಯಾ ಸತಿಯ ಸತ್ವ ಪರೀಕ್ಷೆಗೆಂದು ಭಿಕ್ಷುಕ ವೇಷಧಾರಣ
ಮಾಡಿ ಭೂಲೋಕಕ್ಕೆ ಬಂದಿದ್ದರು; ಆದರೆ ಆ ಸತಿಯು ಸತ್ವಾತಿಶ
ಯದ ಮುಂದೆ ಅವರ ಆಟವು ಸಾಗದಾಗಲು, ಅವರು ಶಿಶು ರೂಪ
ದಿಂದ ಅವಳಲ್ಲೇ ವಾಸ ಮಾಡಿದರು. ಮುಂದೆ ಅತ್ರಿಋಷಿಯ
ಅನುಗ್ರಹದಿಂದ ಅವರು ಸ್ವಕರ್ಮರತರಾಗುವದಕ್ಕಾಗಿ ದೇವಲೋ
ಕಕ್ಕೆ ತೆರಳುವಾಗ ತಮ್ಮ ತ್ರಿವರ್ಗರ ಅಂಶಸಂಭೂತವಾದ ದತ್ತಾ
ತ್ರೇಯ ಎಂಬ ಮೂರ್ತಿಯನ್ನು ಆ ಅನಸೂಯಾ ಸತಿಯಲ್ಲಿರಿಸಿ
ಹೋದರು. ಅದೇ ಆ ದತ್ತ ಮುನಿಯ ಜಯಂತಿಯು ಮಾರ್ಗ
ಶೀರ್ಷ ಶುದ್ಧ ಚತುರ್ದಶಿಗೆ ಇದ್ದು, ಆ ಉತ್ಸವವನ್ನು ಪ್ರತಿವರ್ಷ
ಈ ನೃಸಿಂಹವಾಡಿಯಲ್ಲಿ ಬಹು ವಿಜೃಂಭಣೆಯಿಂದ ಮಾಡುತ್ತಾರೆ.
ಆ ಉತ್ಸವಕ್ಕೆ ಕರ್ನಾಟಕ ಪ್ರಾಂತದೊಳಗಿನವರಷ್ಟೇ ಅಲ್ಲ, ಮಹಾ
ರಾಷ್ಟ್ರ, ಮಧ್ಯಪ್ರಾಂತ, ಉತ್ತರಹಿಂದುಸ್ಥಾನ ಮುಂತಾದ ಪರ
ಪ್ರಾಂತಗಳ ಭಕ್ತರೂ ಇಲ್ಲಿ ಕಲೆಯುವರು. ಅಜ್ಞಾ, ನಡೆಯಿರಿನ್ನು,
ನಾವು ಆ ಪಾಪವಿನಾಶಿನಿ ತೀರ್ಥದಲ್ಲಿ ಸ್ನಾನ ಮಾಡಿ, ಆಹ್ನಿಕಗಳನ್ನು
ತೀರಿಸಿಕೊಂಡು ಊರೊಳಗೆ ಭವತಿ ಬೇಡಿಕೊಂಡು ಬರುವಾ
ಇಲ್ಲಿಗೆ ಬರುವವರೆಲ್ಲರು ಬಹುಶಃ ಭಿಕ್ಷಾನ್ನವನ್ನೇ ಉಣ್ಣುವದರಿಂದ
ಶಕ್ಯವಿದ್ದಷ್ಟು ತೀವ್ರ ಭವತಿಗೆ ಹೋಗಬೇಕು; ತಡವಾದರೆ ನಿರಾ
ಹಾರ ಮಾಡುವ ಪ್ರಸಂಗ ಬಂದೀತು.

“ಅದೇಕೆ? ಇಲ್ಲಿಗೆ ಬಂದ ಭಕ್ತರೆಲ್ಲ ಭಿಕ್ಷಾನ್ನವನ್ನೇ ಭುಂಜಿಸುವ ಪರಿಪಾಠವೇಕೆ ಬಿದ್ದಿದೆ?” ಎಂದು ಬ್ರಹ್ಮನು ಕೇಳಲು,

“ಶ್ರೀ ದತ್ತಾತ್ರೇಯರೂ, ಅವರ ಅಂಶಸಂಭೂತರಾದ ಶ್ರೀ ನೃಸಿಂಹ ಸರಸ್ವತ್ಯಾದಿ ಸ್ವಾಮಿಗಳೂ ಭಿಕ್ಷಾಟನ ಮಾಡಿಯೇ ಭಕ್ತಜನರನ್ನುದ್ಧರಿಸುತ್ತಿದ್ದರು. ಅದರಿಂದಲೇ ಇಲ್ಲಿಗೆ ಬರುವ ಭಕ್ತಜನರಾದರೂ ಭಿಕ್ಷಾವೃತ್ತಿಯಿಂದಲೇ (ಇಲ್ಲಿ ವಾಸಿಸಿರುವ ಮಟ್ಟಿಗೆ) ಉಪಜೀವಿಸುವರು. ಇದು ಮಹಾ ಜಾಗೃತಸ್ಥಾನವಾದುದರಿಂದ ಇಲ್ಲಿ ಬರುವ ಭಾವಿಕ ಕಾಮುಕ ಭಕ್ತರ ಇಷ್ಟಾರ್ಥಗಳು ಬಹು ಬೇಗ ಈಡೇರುವವು.

ನಂತರ ಎಲ್ಲರೂ ಕೃಷ್ಣಾ-ಪಂಚಗಂಗಾ ನದಿಗಳ ಸಂಗಮದ ಪವಿತ್ರ ತೀರ್ಥದಲ್ಲಿ ಸ್ನಾನಾಹ್ನಿಕಗಳನ್ನು ತೀರಿಸಿದರು; ಹಾಗು ಒಬ್ಬರು ತಮ್ಮ ಸಾಮಾನುಗಳ ಬಳಿಯಲ್ಲುಳಿದು, ಮಿಕ್ಕವರೆಲ್ಲರೂ ಎಡಗೈಯಲ್ಲಿ ಜೋಳಿಗೆ ಹಾಕಿ, ಬಲಗೈಯಲ್ಲೊಂದು ಪಾತ್ರೆ ಹಿಡಕೊಂಡು “ಭವತಿ ಭಿಕ್ಷಾಂದೇಹಿ” ಎಂದು ಅನ್ನುತ್ತ ಪ್ರತಿಯೊಂದು ಮನೆಗೆ ನಡೆದರು ಕೆಲವು ಮನೆಗಳಲ್ಲಿ ಇನ್ನೂ ಅಡಿಗೆಯಾಗಿರಲಿಲ್ಲ ಕೆಲವು ದಸ್ಸಘಂಟೆಯ ಮನೆಗಳಲ್ಲಿ ಊಟಗಳು ಮುಗಿದು ಹೋಗಿದ್ದವು. ಹೀಗಾಗಿ ನಮ್ಮ ದೇವತೆಗಳಿಗೆ ನಾಲ್ಕಾರು ಮನೆಗಳಲ್ಲಿಯೇ ಮಧುಕರಿಯು ದೊರಕಿತು ನಾರಾಯಣಾದಿಗಳು ಭಿಕ್ಷೆ ನೀಡುವವರ ಮಡಿ-ಮೈಲಿಗೆ, ಶುಚಿರ್ಭೂತತನ ಇವುಗಳ ಕಡೆಗೆ ವಿಶೇಷ ಲಕ್ಷ್ಯಗೊಡುತ್ತಿದ್ದಿಲ್ಲ. “ಮಾಡಿದವರ ಪಾಪ ಆಡಿದವರ ಹಿಂದೆ” ಎಂದು ತಿಳಿದು, ಅವರು ಅತ್ತ ದುರ್ಲಕ್ಷಿಸುತ್ತಿದ್ದರು; ಆದರೆ ಮಹಾ ಕರ್ಮಠನಾದ ಬ್ರಹ್ಮನಿಗೆ ಆ ಹುಚ್ಚು ಹುಳುಕುಗಳು ತಡೆಯುವ ಬಗೆ ಹೇಗೆ? ಅವನು ಅಲ್ಲಿಯ ಒಂದು ಪೂಜಾರಿಯ ಮನೆಗೆ ಮಧುಕರಿಗೆ ಹೋಗಿರಲು, ಆ ಮನೆಯ ಒಬ್ಬ ಮುತ್ತೈದೆಯು ನಮ್ಮ ವೃದ್ಧ ಬ್ರಹ್ಮನಿಗೆ ಭಕ್ತಿಪೂರ್ವಕವಾಗಿ ಮಧುಕರಿಯನ್ನು ನೀಡಿ ಹೋದ ಬಳಿಕ ಅದೇ ಮನೆಯ ಹಿಳ ಒಕ್ಕಲಾಗಿದ್ದ ಒಬ್ಬ ಗತಭರ್ತೃಕೆಯು(ಸಕೇಶಿಯು) ಒಂದು ಬಕ್ಕರಿಯನ್ನೂ, ಒಂದು ಹುಟ್ಟು ಉರುಳೇಗಡ್ಡಿ ಹಾಕಿದ ಹುಳಿಯನ್ನೂ ತಂದು ನೀಡಿಹೋದಳು. ಆಕೆಯ ಆ ಅವಲಕ್ಷಣವನ್ನು ಕಂಡು ಬ್ರಹ್ಮನಿಗೆ ಕಡುಸಿಟ್ಟು ಬಂದಿತು; ಆದರೆ ಮಾಡುತ್ತಾನೇನು? ತಾನು ನಿರ್ಮಿಸಿದ ಸೃಷ್ಟಿಯೇ ಇದಾದ್ದರಿಂ

ದಲೂ, ತಾನು ಗುಪ್ತವೇಷದಿಂದ ಕರ್ನಾಟಕಕ್ಕೆ ಬಂದುದರಿಂದಲೂ ಅಲ್ಲಿ ಪಿಟ್ಟೆಂದು ಮಾತಾಡದೆ, ಬಂದ ದಾರಿಯಿಂದ ಹಿಂದಿರುಗಿದನು. ಪೌಳಿಗೆ ಬಂದ ಬಳಿಕ ಅವನು ಆ ಸಂಗತಿಯನ್ನು ನಾರಾಯಣಾದಿಗಳಿಗೆ ತಿಳಿಸಿ, ತನ್ನ ಮಧುಕರಿಯ ಅನ್ನವನ್ನೆಲ್ಲ ಜಲಚರಗಳಿಗೆ ನೀಡಿ, ತಾನು ಪುನಃ ಸ್ನಾನಮಾಡಿ ಸಾವಿರ ಗಾಯತ್ರೀ ಜಪ ಮಾಡಿದನು. ಅಂದು ಅವನಿಗೆ ಉಪವಾಸವೇ ಘಟಿಸಿತು "ಈ ಭೂಲೋಕದಲ್ಲಿ ಈ ತರದ ಅನಾಚಾರಗಳಾಗಹತ್ತಿರುವದರಿಂದಲೇ ಇಲ್ಲಿಯ ಪ್ರಾಣಿಗಳಿಗೆ ಈ ಬಗೆಯ ಕಷ್ಟಕರ ಪ್ರಸಂಗಗಳುಂಟಾಗಿರುತ್ತವೆ"ಂದು ಅವನು ಸಂತಾಪದಿಂದ ನುಡಿದನು. "ತಮ್ಮಾ ನಾರಾಯಣಾ, ಈ ಅತ್ಯಾಚಾರದ-ದುರ್ನಡತೆಯ ಜನರ ಸಂಸರ್ಗವು ನನಗೆ ಬೇಕಾಗಿಲ್ಲ. ನಡೆಯಿರಿ, ನೆಟ್ಟಗೆ ನಮ್ಮ ಕಾವೇರಿಯಿದ್ದಲ್ಲಿಗೆ ಹೋಗಿ, ಆಕೆಯ ಯೋಗಕ್ಷೇಮವನ್ನಷ್ಟು ತಿಳಕೊಂಡವರೇ ಮರಳಿ ದೇವಲೋಕಕ್ಕೆ ಹೋಗೋಣ. ಇಲ್ಲಿ ಕೆಲಕಾಲ ವಾಸಿಸಿದರೆ 'ಸಂಗಾತ್ ಸಂಜಾಯತೇ ಕಾಮಃ......... ...' ಎಂಬಂತೆ ಈ ದುರುಳರ ಸಂಸರ್ಗದಿಂದ ನಮಗೂ ನಷ್ಟಬುದ್ಧಿಯುಂಟಾಗಬಹುದು" ಎಂದು ಬ್ರಹ್ಮನಾಡಿದ್ದಕ್ಕೆ ನಾರಾಯಣನು:—ಅಣ್ಣಾ, ಅಷ್ಟು ಭಯಪಡುವ ಕಾರಣವಿಲ್ಲ ಪಾಪ! ಆ ಹೆಣ್ಣುಮಗಳಿಗೆ ನೀವಾರೆಂಬದು ಗೊತ್ತಿರದ್ದರಿಂದಲೇ ಅವಳಿಂದ ಈ ಪ್ರಮಾದವು ಘಟಿಸಿತು. ಈಗ ಈ ಭೂಲೋಕದಲ್ಲಿ ಅಷ್ಟೊಂದು ಮಡಿ-ಮೈಲಿಗೆಯ ಆಡಂಬರವು ಉಳಿದಿರುವದಿಲ್ಲ. ಅಲ್ಪ-ಸ್ವಲ್ಪ ಇದ್ದರೆ ಇನ್ನೂ ಈ ಮಧ್ಯಕರ್ನಾಟಕ ದೇಶದಲ್ಲಿಯೇ ಇರಬೇಕು. ಉತ್ತರ ಹಾಗು ದಕ್ಷಿಣ ಪ್ರಾಂತಗಳಲ್ಲಿ ಅದು ನಾಮಶೇಷವಾಗಿರುತ್ತದೆ ಇದಕ್ಕೆ ಕಾಲಮಾಹಾತ್ಮ್ಯವೇ ಕಾರಣವಲ್ಲದೆ ಮತ್ತೇನು? ಇರಲಿ. ಈಗ ಅಷ್ಟೊಂದು ತ್ವರೆಯಿಂದ ಕಾವೇರಿಯ ಕಡೆಗೆ ಹೋಗುವ ಕಾರಣವಿಲ್ಲ ಮಹಾಸ್ಥಾನಗಳಲ್ಲಿ ತ್ರಿರಾತ್ರಗಳನ್ನಾದರೂ ಕಳೆಯಬೇಕೆಂದು ತಾವೇ ಸ್ಮೃತ್ಯಾದಿಗಳಲ್ಲಿ ಹೇಳಿರುವಿರಲ್ಲವೆ? ಅಂದಮೇಲೆ ಈ ನೃಸಿಂಹವಾಡಿಯಲ್ಲಿ ಮೂರುದಿನ ಇದ್ದು, ನಾಲ್ಕನೆಯದಿನ ಬೆಳಿಗ್ಗೆ ಇಲ್ಲಿಂದ ಹೊರಡೋಣವಂತೆ, ಎಂದು ಹೇಳಿ ಬ್ರಹ್ಮನ, ಸಂತಾಪವನ್ನು ತುಸ ಶಾಂತ ಮಾಡಿದನು.

ಬ್ರಹ್ಮಾದಿ ದೇವತೆಗಳು ನೃಸಿಂಹವಾಡಿಯಲ್ಲಿ ಮೂರುದಿನ

ಗಳ ವರೆಗೆ ಇದ್ದು, ಕುರಂದವಾಡದೊಳಗಿನ ಶ್ರೀವಿಷ್ಣುವಿನ ಮಂದಿರವನ್ನೂ, ಶ್ರೀನರಸಿಂಹ-ಸರಸ್ವತೀ ಸ್ವಾಮಿಗಳವರ ಭಕ್ತವೃಂದದಿಂದ ಶೋಭಿಸುವ ದಾನವಾಡ, ದತ್ತವಾಡ ಮೊದಲಾದವುಗಳನ್ನೂ ನೋಡಿ, ಅಲ್ಲಿಯ ಮಾಹಾತ್ಮ್ಯವನ್ನೂ ತಿಳಿದರು. ನಾಲ್ಕನೆಯದಿನ ಎಲ್ಲರೂ ಬೆಳಗಿನ ಝಾವದಲ್ಲಿದ್ದು ಕೋಟಿತೀರ್ಥದಲ್ಲಿ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು, ಶ್ರೀದತ್ತಾತ್ರೇಯರ ಪಾದುಕೆಗಳಿಗೆರಗಿ, ಅಲ್ಲಿಂದ ಹೊರಟು ಶಿರೋಳಕ್ಕೆ ಬಂದರು. ಅಲ್ಲಿ ಶ್ರೀದತ್ತಾತ್ರೇಯರ ಪ್ರಾಚೀನ ಸ್ಥಾನವನ್ನು ಸಂದರ್ಶಿಸಿ, ರೈಲಗಾಡಿಯನ್ನೇರಿ ಮಿರಜ ಸ್ಟೇಶನ್ನಿಗೆ ನಡೆದರು.

## ಮಿರಜ.

ಉಗಿಬಂಡಿಯು ಮಿರಜ ಸ್ಟೇಶನ್ನಿಗೆ ಬಂದು ನಿಲ್ಲಲು, ಒಬ್ಬ ಪಾದ್ರಿಯವನು ಅನೇಕ ಪ್ರಕಾರದ ಪುಸ್ತಕಗಳನ್ನು ಕೈಯಲ್ಲಿ ಹಿಡಕೊಂಡು "ಯೇಸುವಿನ ಧರ್ಮ! ಯೇಸುವಿನ ಶ್ರೇಷ್ಠ ಆಚರಣೆ! ಜಗತ್ತಿನೊಳಗಿನ ಇತರ ಧರ್ಮಗಳಿಗಿಂತ ಕ್ರೈಸ್ತಧರ್ಮವೇ ಶ್ರೇಷ್ಠವು!!!" ಎಂದು ಕೂಗುತ್ತ, ಆ ಪುಸ್ತಕಗಳನ್ನು ಗಾಡಿಯೊಳಗೆ ಏರುವವರಿಗೂ ಗಾಡಿಯಿಂದ ಇಳಿಯುವವರಿಗೂ ತೋರಿಸುತ್ತ, "ಬೆಲೆ ಒಂದೇ ದು"ಡ್ಡು ಎಂದು ಚೀರುತ್ತ ನಡೆದಿದ್ದನು. ಅದನ್ನು ನೋಡಿ ಬ್ರಹ್ಮನು ವರುಣನಿಗೆ:—ವರುಣಾ, ಇವನಾರು? ಹೀಗೇಕೆ ಕೂಗುತ್ತಿರುವನು? ಇವನ ಕೈಯೊಳಗಿನ ಆ ಚಿಕ್ಕ-ಪುಟ್ಟ ಹೊತ್ತಿಗೆಗಳಾವವು? ವೇದ ಖಂಡಗಳಲ್ಲವಷ್ಟೇ? ಎಂದು ಕೇಳಿದನು

ವರುಣ:—ಅಜ್ಞಾ, ಇವನು ಕ್ರೈಸ್ತಧರ್ಮೋಪದೇಶಕನು. ಕ್ರೈಸ್ತಧರ್ಮವನ್ನು ಹಬ್ಬಿಸುವ ಮುಖ್ಯ ಉದ್ದೇಶದಿಂದಲೇ ಆ ಧರ್ಮದವರು ಈ ಊರಲ್ಲಿ ಒಂದು ಜಗತ್ಪ್ರಸಿದ್ಧ ದವಾಖಾನೆಯನ್ನಿಟ್ಟಿರುತ್ತಾರೆ ಆ ದವಾಖಾನೆಯಲ್ಲಿ ಬಡ-ಬಗ್ಗರಿಗೆ ಪುಕ್ಕಟೆಯಾಗಿ ಔಷಧೋಪಚಾರಗಳು ನಡೆಯುತ್ತಿರುವವೇನೋ ನಿಜ; ಆದರೆ ಆ ಕ್ರಿಸ್ತೀ ಧರ್ಮದವರು ಭಯಂಕರ ಜಾಲದವರಿರುವದರಿಂದ, ಅವರು ಬಡ-ಬಗ್ಗರ ಮೇಲೆ ಔಷಧೋಪಚಾರಗಳಿಂದ ಅತಿಶಯ ದಯೆ ತೋರಿಸಿದಂತೆ ನಟಿಸಿ, ಅವರನ್ನು ಸದ್ದಿಲ್ಲದೆ ತಮ್ಮ ಅನು

ಯಾಯಿಗಳನ್ನಾಗಿ ಮಾಡಿಕೊಳ್ಳುತ್ತಿರುವರು. ಇವರ ಈ ಚಾಲವು ಮೊದಮೊದಲು ನಮ್ಮವರಲ್ಲಿಯು ಸಾಮಾನ್ಯರ ನಿದರ್ಶನಕ್ಕೆ ಬಂದಿರಲಿಲ್ಲ; ಆದರೆ ಈಚೆಗೆ ಈ ಪಾದ್ರಿಗಳ ಹುಳುಕು ಚನ್ನಾಗಿ ಹೊರಬಿದ್ದಿದೆ. ಇವರ ಆ ದವಾಖಾನೆಯಲ್ಲಿ ಈಚೆಗೆ ರೋಗಿಯ ರೋಗನಿವಾರಣದ ಕಡೆಗೆ ವಿಶೇಷ ಲಕ್ಷ್ಯಪೂರೈಸದೆ, ಅವನ ಧರ್ಮಾಂತರವಾಗುವ ಬಗ್ಗೆಯೇ ವಿಶೇಷ ಪ್ರಯತ್ನ ಮಾಡಲ್ಪಡುತ್ತದಂತೆ! ಈಗ ಇಲ್ಲಿ ಪುಸ್ತಕ ಮಾರುವ ಈ ಪಾದರಿಯಾದರೂ ಆ ಸಂಸ್ಥೆಯ ಅನುಯಾಯಿಯೇ ಆಗಿದ್ದು, ಇವನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವನೆಂಬುದು ಇವನ ಮಾತಿನ ಮೇಲಿಂದ ಸಹಜವಾಗಿ ತಿಳಿದು ಬರುತ್ತದೆ.

ಈ ಪ್ರಕಾರ ವರುಣ-ಬ್ರಹ್ಮರು ಮಾತನಾಡುತ್ತಿರಲು, ಅತ್ತ ನಾರಾಯಣನು ಆ ಪಾದ್ರಿಯಿಂದ ಎರಡು-ಮೂರು ಪುಸ್ತಕಗಳನ್ನು ಕೊಂಡುಕೊಂಡನು. ಅದನ್ನು ನೋಡಿ ಬ್ರಹ್ಮನು ತಿರಸ್ಕಾರಯುಕ್ತ ವಾಣಿಯಿಂದ ನಾರಾಯಣನನ್ನು ಕುರಿತು:--ನಾರಾಯಣಾ, ಚೆಲ್ಲು-ಚೆಲ್ಲು; ಆ ಪರಧರ್ಮೀಯರ ಪುಸ್ತಕಗಳನ್ನು ಚೆಲ್ಲಿಕೊಟ್ಟು, ಕೃಷ್ಣಾತಟಾಕಕ್ಕೆ ಹೋಗಿ ಪ್ರಾಯಶ್ಚಿತ್ತ ತಕೊಂಡು ಬಾ. ಕ್ರಿಸ್ತೀಧರ್ಮದ ಪುಸ್ತಕಗಳನ್ನೋದುವಿಯೇನು? ಕುಂದುವೇಳಿ ದೇವಗಣಗಳು ನಿನ್ನೀ ಕೃತಿಯನ್ನು ಕಂಡರೆ, ನಿನ್ನ ಬಾಯಲ್ಲಿ ಗೋಮೂತ್ರ-ಸೆಗಣಿಗಳನ್ನು ಹಾಕಿ, ನಿನಗೆ ಪ್ರಾಯಶ್ಚಿತ್ತವನ್ನು ಕೊಡಿಸದೆ ಬಿಡಲಿಕ್ಕಿಲ್ಲ

ನಾರಾಯಣ:- ಇವು ಕ್ರಿಸ್ತೀಧರ್ಮದ ಪುಸ್ತಕಗಳೋ? ನಾನರಿಯೆನು. ನಿನ್ನೆ ರಾತ್ರಿ ತಂಬಾಕ ಕಟ್ಟಲಿಕ್ಕೆ ಎಲ್ಲಿಯೂ ಕಾಗದದ ತುಂಡು ಸಹ ಸಿಗದ್ದರಿಂದ ಪ್ರಸಂಗದಲ್ಲಿ ಇವು ಉಪಯೋಗಬೀಳಬಹುದೆಂದೆಣಿಸಿ ಇವನ್ನು ಕೊಂಡುಕೊಂಡಿರುತ್ತೇನೆ.

ಬ್ರಹ್ಮ:—ಬೇಡ, ಆ ಪುಸ್ತಕಗಳನ್ನು ಬಿಸುಟುಬಿಡು; ಎಂದಂದು ವರುಣನನ್ನುದ್ದೇಶಿಸಿ, ವರುಣಾ, ಅಕೋ, ಅಲ್ಲಿ ಕಾಣುವ ಆ ಎಲ್ಲ ವಿಧರ್ಮಿಗಳು ಕೃಷ್ಣಾಸ್ನಾನಕ್ಕೆ ಹೋಗಲು ಬಂದಿರುವರೇನು?

ವರುಣ:—ಛೀ, ಇವರಿಗೇತಕ್ಕೆ ಆ ಪವಿತ್ರವಾರಿಯ ಹಳಕವು? ಅವರು ತಾವು ಸದೋದಿತ ಪವಿತ್ರರೇ ಎಂದು ಭಾವಿಸುತ್ತಿರುವರು! ಇಲ್ಲಿಗೆ ಬಂದಿರುವ ಭೋಳೆಭಾವಿಕರಿಗೆ ಇವರು ಇಲ್ಲದ್ದೊಂದು

ಬೋಧಿಸಿ, ಅವರನ್ನು ಸ್ವಧರ್ಮದಿಂದ ಚ್ಯುತರನ್ನಾಗಮಾಡಲು ಪ್ರಯತ್ನಿಸುತ್ತಿರುವರು.

ಬಳಿಕ ಎಲ್ಲರೂ ಗಾಡಿಯಿಂದಿಳಿದು ಊರೊಳಗೆ ಹೊರಟರು. ಮಿರಜ ಪ್ರಾಂತವು ಕೇವಲ ರುಕ್ಷಪ್ರದೇಶವು. ಬಿಸಿಲಿನ ತಾಪವು ಬಹಳ. ಗಿಡ ಮರಗಳು ವಿರಳ ಕುಡಿಯುವ ನೀರಿನ ಕೊರತೆಯಂತೂ ಯಾವಾಗಲೂ ಸ್ಥಿರವಾದದ್ದೇ. ನಮ್ಮ ದೇವಗಣಗಳು ಊರ ದಾರಿ ಹಿಡಿದು ನಡೆದಿರಲಿಕ್ಕೆ, ಅವರ ಎಡಬದಿಗೆ ಎಷ್ಟೋ ದೊಡ್ಡ ದೊಡ್ಡ ಇಮಾರತುಗಳು ಕಾಣಿಸತೊಡಗಿದವು; ಹಾಗು ಅತ್ತ ಕಡೆಗೆ ಬಹು ಜನರು ಪ್ರಯಾಣಬೆಳೆಸುತ್ತಿದ್ದುದು ಕಂಡಿತು. ಅದನ್ನು ನೋಡಿ ಬ್ರಹ್ಮನು ವರುಣನಿಗೆ:-ವರುಣಾ, ಅತ್ತ ಕಾಣುವದಲ್ಲ, ಅದೇನು? ಅರಮನೆಯಂತೆ ಕಾಣುವ ಆ ಪ್ರಕಾಂಡ ಇಮಾರತುಗಳು ಯಾರವು? ಹಾಗು ಇಷ್ಟು ಜನ ಪ್ರವಾಹಿಗಳು ಅತ್ತ ಇಷ್ಟು ಲಗುಬಗೆಯಿಂದ ಹೋಗುವ ಕಾರಣವೇನು?

ವರುಣ:—ಅಜ್ಜಾ, ಅದೇ ಇಮಾರತೇ, ಆ ಕ್ರೈಸ್ತಧರ್ಮದವರು ಸ್ಥಾಪಿಸಿದ ಆ ಪ್ರಸಿದ್ಧದವಾಖಾನೆಯು. ಅಲ್ಲಿ ಮೊದಲು ವಾನ್ಲೆಸ ಎಂಬ ಹೆಸರಿನ ಒಬ್ಬ ನಿಷ್ಣಾತ ಶಸ್ತ್ರಕ್ರಿಯಾವಿಶಾರದನಾದ ಡಾಕ್ಟರನಿದ್ದನು. ಅವನ ದವಾಖಾನೆಯಲ್ಲಿ ಇತರ ಚಿಕಿತ್ಸೆಗಿಂತ ಕಣ್ಣಿನ ಸಂಬಂಧದ ಶಸ್ತ್ರಕ್ರಿಯೆಯೇ ಬಹು ಚೆನ್ನಾಗಿ ನಡೆಯುತ್ತಿದ್ದಿತು. ಅವನೇ ಈ ಸಂಸ್ಥೆಯ ಪ್ರವರ್ತಕನೆಂದರೂ ಸಲ್ಲಬಹುದು. ಈ ಪ್ರಾಂತದ ಹವೆಯೂ, ನೀರೂ ಬಹು ಉತ್ತಮವಾದುದರಿಂದ ಯಾವ ಔಷಧೋಪಚಾರ ಮಾಡದೆ ಇದ್ದರೂ, ಇಲ್ಲಿಗೆ ಬಂದ ರೋಗಿಗೆ ಕೆಲ ದಿನಗಳಲ್ಲಿ ನೈಸರ್ಗಿಕವಾಗಿಯೇ ಗುಣವಾಗುವದು. ಅದರಿಂದಲೇ ಈ ದವಾಖಾನೆಗೆ ಇತರ ಪ್ರಾಂತದ ಪ್ರಸಿದ್ಧ ದವಾಖಾನೆಗಳಿಗಿಂತ ಹೆಚ್ಚು ಶ್ರೇಯಸ್ಸುಂಟಾಗಿದೆ. ಅಗೋ, ಅತ್ತ ಹೋಗುವ ಆ ಎಲ್ಲ ಜನರು ಒಂದಿಲ್ಲೊಂದು ಪ್ರಕಾರದ ರೋಗದಿಂದ ಆವರಿಸಿದವರಾಗಿರುತ್ತಾರೆ. ಮಧ್ಯಾಹ್ನ ೧೨ ಗಂಟೆಯ ಮೇಲೆ ಮುಖ್ಯ ಡಾಕ್ಟರನ ಭೆಟ್ಟಿಯಾಗುವದು ದುಸ್ತರವಾದುದರಿಂದಲೇ, ಆ ಜನರು ಅಷ್ಟು ಧಾವಿಸುತ್ತ ಅವನೆಡೆಗೆ ಸಾಗಿರುತ್ತಾರೆ.

ಹೋಗಹೋಗುತ್ತ ದೇವೇಂದ್ರನ ದೃಷ್ಟಿಯು ದಾರಿಯಲ್ಲಿಯ ಒಂದು ಗುಮುಟದ ಮೇಲೆ ಬೀಳಲು, ಅವನು ವರುಣನನ್ನು

ಕುರಿತು:—ವರುಣಾ, ಇದೇನು? ಹೇರೆದಂಥ ಆಕಾರದ ಶುಭ್ರ ವರ್ಣದ ಈ ಕಟ್ಟಡವು ಯಾರದು? ಇದಕ್ಕೇನೆನ್ನುವರು?

ವರುಣ:—ಇಂದ್ರಾ, ಇದು ಒಬ್ಬ ಪ್ರಸಿದ್ಧ ಮಹಮ್ಮದೀಯ ಪುರುಷನ ಕಬರಸ್ಥಾನವು. ಇದನ್ನು ಕಟ್ಟಿಸಿ, ಕೆಲವು ಶತಮಾನಗ ಳಾಗಿರುವವು ಈ ಪ್ರಾಂತದಲ್ಲಿ ಈ ಸಾಧುವರ್ಯನ ಪ್ರಸಿದ್ಧಿಯು ವಿಶೇಷವಾಗಿದೆ. ಅದರಿಂದ ಪ್ರತಿವರ್ಷ ಚಳಿಗಾಲದಲ್ಲಿ ಇಲ್ಲಿ ಉರುಸು ಆಗುತ್ತಿರುತ್ತದೆ. ಆ ಉರುಸಿಗೆ ಹತ್ತುಸಾವಿರಗಟ್ಲೆ ಪರಸ್ಥಳೀಕರು ನೆರೆಯುತ್ತಾರೆ.

ಅದೇ ದಾರಿಯಿಂದ ಸಾಗಿರಲು, ಎಡಬದಿಗೆ ಕೆಲವು ಗಿಡಗಳು ಕಾಣಿಸಿಕೊಂಡವು ಅವುಗಳಿಗೆ ಕಲ್ಲು ಕಟ್ಟಿದ ಅರಿವೆಗಳು ಎಲ್ಲೆ ಲ್ಲಿಯೂ ತೂಗಹಾಕಲ್ಪಟ್ಟಿದ್ದವು ಮತ್ತೆ ಕೆಲವರು ಅಳುಮೋರೆಯ ಜನರು ಧಾವಿಸುತ್ತ ಬಂದು, ಅವಕ್ಕೆ ಪುನಃ ಅಂಥ ಕಲ್ಲು ಕಟ್ಟಿದ ಅರಿವೆ ಗಳನ್ನು ಕಟ್ಟಿ ಕಟ್ಟಿ ಹೋಗುತ್ತಿದ್ದರು ಈ ವಿಚಿತ್ರ ಸ್ಥಿತಿಯನ್ನು ಕಂಡು ಬ್ರಹ್ಮನು ವರುಣನಿಗೆ:—ವರುಣಾ, ಇದೇನು ಸೋಜಿಗ! ಜನರು ಈ ಗಿಡಗಳಿಗೆ ಹೀಗೇಕೆ ಮಾಡುತ್ತಿರುವರು? ಇದರಿಂದ ಅವರಿಗಾಗುವ ಪ್ರಯೋಜನವೇನು?

ವರುಣ:—ಅಜ್ಜಾ, ಹಿಂದಕ್ಕೆ ಈ ಊರಲ್ಲಿ ಒಬ್ಬ ಪ್ರಸಿದ್ಧ ಮಾಂತ್ರಿಕನಿರುತ್ತಿದ್ದನು ಅವನು ತನ್ನ ಮಂತ್ರಬಲದಿಂದ ಹಾವು-ಚೇಳು ಮುಂತಾದ ವಿಷಯುಕ್ತ ಪ್ರಾಣಿಗಳ ಕಾಟದಿಂದ ಮಾನವ ರನ್ನು ರಕ್ಷಿಸುತ್ತಿದ್ದನು. ಜನರ ಉಪಟಳದಿಂದ ಬರಬರುತ್ತ ಅವ ನಿಗೆ ನಿದ್ರೆ-ನೀರಡಿಕೆಗಳಿಗೆ ಕೂಡ ಅವಕಾಶ ಉಳಿಯದಾಯಿತು ಆಗ ಆ ಮಹಾಪುರುಷನು ಯೋಚಿಸಿ, ಈ ಮರಗಳನ್ನೇ ಮಂತ್ರ ಪೂತಗಳನ್ನಾಗಿ ಮಾಡಿದನು; ಹಾಗು ವಿಷಬಾಧಿತರಾದವರಾಗಲಿ, ಅವರ ಆಪ್ತೇಷ್ಟರಾಗಲಿ ಕೂಡಲೆ ಬಂದು, ತಮ್ಮ ಹೆಸರಿನದೊಂದು ಕಲ್ಲನ್ನು ಅರಿವೆಯಲ್ಲಿ ಕಟ್ಟಿ ಈ ಗಿಡಗಳಿಗೆ ಕಟ್ಟಿದರೆ, ತಾನು ಮಂತ್ರ ಉಚ್ಚರಿಸಿ ಹಾಕುವ ನೀರಿನಷ್ಟೇ ಇದರಿಂದಲೂ ಗುಣವಾಗುವದೆಂದು, ಆ ಮಾಂತ್ರಿಕನು ಜನರ ನಿದರ್ಶನಕ್ಕೆ ತಂದುಕೊಟ್ಟನು. ಅಂದಿ ನಿಂದಲೂ ಇದೇ ಕ್ರಮವು ನಡೆದಿರುತ್ತದೆ. ಈಗಲಾದರೂ ಆ ಮಹಾತ್ಮನ ಆ ಮಂತ್ರದ ಪ್ರಭಾವವು ಬಹು ಜನರಿಗೆ ಫಲಿಸು ತ್ತಿರುತ್ತದೆ.

ನಂತರ ದೇವಗಣಗಳು ಲಗುಬಗೆಯಿಂದ ಸಾಗಿ ಊರೊಳಗಿನ ಪ್ರಶಸ್ತವಾದ ಶ್ರೀ ಗಣಪತಿಯ ದೇವಸ್ಥಾನದಲ್ಲಿಳಿದುಕೊಂಡರು. ಅಲ್ಲಿ ಸ್ನಾನ ಮಾಡಿ ಅಡಿಗೆ ಮಾಡಿಕೊಳ್ಳಬೇಕೆಂದರು; ಆದರೆ ನೀರಿನ ಅನುಕೂಲತೆಯು ಆಗದ್ದರಿಂದ, ಕಡೆಗೆ ಎಲ್ಲರೂ ಖಾನಾವಳಿಗೇ ನಡೆದರು. ಬ್ರಹ್ಮನಿಗೆ ಆ ಶ್ವಪಚ ಪದ್ಧತಿಯ ಊಟವು ಅಸಹ್ಯ ವೆನಿಸುತ್ತಿದ್ದುದೇನೋ ನಿಜ; ಆದರೆ ಮಾಡುತ್ತಾನೇನು? ಏನೇನೋ ಹಟಗಟ್ಟುತ್ತ ನಾರಾಯಣಾದಿಗಳನ್ನು ಹಿಂಬಾಲಿಸಿ ಹಬ್ಬ ಉಡುಪಿ ಯುವನ ಖಾನಾವಳಿಗೆ ನಡೆದನು

ಉತ್ತರಪ್ರಾಂತಗಳಲ್ಲಿ ಮಡಿ-ಮೈಲಿಗೆಗಳ ನಿರ್ಬಂಧವು ಬಹು ಮಟ್ಟಿಗೆ ಲಿಕಲಿಕಿಯಾಗಿದೆಯೆಂದು ಹಿಂದೆಯೇ ಹೇಳಿರುವೆವಷ್ಟೇ? ಅದರಿಂದ ಮೊದಲೇ ನೀರಿನ ಅಭಾವವುಳ್ಳ ಮಿರಜಪ್ರಾಂತದಲ್ಲಿ ಪ್ರತಿಯೊಂದು ಬ್ರಾಹ್ಮಣರ ಖಾನಾವಳಿಯಲ್ಲಿ, ಅದೇಕೆ ಪ್ರತಿಯೊಬ್ಬ ಹಿಡಿ ಹೊನ್ನುಳ್ಳ ಬ್ರಾಹ್ಮಣನ ಮನೆಯಲ್ಲಿ ಸಹ ನೀರು-ನಿಡಿಗಳ ಕೆಲಸಮಾಡುವವನು ಸ್ವಭಾವಿಕವಾಗಿ ಬ್ರಾಹ್ಮಣೇತರನೇ ಇರುತ್ತಾನೆ ನಮ್ಮ ಸವಣೂರಪ್ರಾಂತದ ಕರ್ನಾಟಕಸ್ಥರಲ್ಲಿ ಬಹು ಜನರ ನಿದರ್ಶನಕ್ಕೆ ಈ ಸಂಗತಿಯು ಬಂದುಹೋಗಿರುವುದರಿಂದಲೇ, ನಮ್ಮಲ್ಲಿಯ ಶಿಷ್ಟ-ವಿಶಿಷ್ಟ ........ಷ್ಟ ಜನರು ಪರಪ್ರಾಂತಗಳಿಗೆ ಹೋಗುವದೇ ಕಡಿಮೆ; ಹೋದರೂ ಸ್ವಯಂಪಾಕ ಮಾಡಿಕೊಳ್ಳುವದೇ ಹೆಚ್ಚು.

ಅರ್ಧ ಊಟವಾಗುವವರೆಗೆ ಬ್ರಹ್ಮನಿಗೆ ಆ ನಿಂದ್ಯಸ್ಥಿತಿಯ ಜ್ಞಾನವಾಗಲಿಲ್ಲ. ಬ್ರಹ್ಮನು ಹೇಳಿ ಕೇಳಿ ದಡ್ಡನು. ಸೂಕ್ಷ್ಮತನ, ಚಾಣಾಕ್ಷಬುದ್ಧಿಗಳೆಂಬವು ಅವನಲ್ಲಿ ಎಲ್ಲಿಂದ ಬರಬೇಕು? ಘೋಕ ಹಾಕಿ ಹಾಕಿ, ಪಾಠ ಮಾಡಿದ ವೇದವು ಮಾತ್ರ ಅವನಿಗೆ ಗೊತ್ತು! ತಿರುಗಿ ಕೇಳಿದರೆ ಅದರ ಅರ್ಥವೇನು? ಅದರಲ್ಲೇನು ಹೇಳಿದೆ? ಎಂಬುದನ್ನು ಜ್ಞಾಪಿಸಿಕೊಳ್ಳಬೇಕಾದರೆ ಅವನಿಗೆಷ್ಟೋ ವೇಳೆಯು ಬೇಕಾಗುತ್ತದೆ. ಇಂಥ ಬ್ರಹ್ಮನಿಗೆ ಖಾನಾವಳಿಯಲ್ಲಿಯ ಬ್ರಾಹ್ಮಣೇತರರು ತಿದ್ದಿಸಿ ಆಡುವ ಭಾಷೆಯ ಲಕ್ಷಣಗಳ ಮೇಲಿಂದಲೂ, ಹಾವಭಾವಗಳಿಂದಲೂ ಅವರ ನಿಜಸ್ವರೂಪವು ಗೊತ್ತಾಗುವ ಬಗೆ ಹೇಗೆ? ಊಟ ಮುಗಿಯುತ್ತ ಬಂದಹಾಗೆ ಹಬ್ಬ ಬ್ರಾಹ್ಮಣೇತರ ದಾಸಿಯು ಹನಿಪಿನಿಂದ ಬಂದು, ಭೋಜನಮಗ್ನರಾದ ಎಲ್ಲ ಬ್ರಾಹ್ಮಣರ ಬಟ್ಟಲುಗಳಲ್ಲಿ ನೀರು ತುಂಬಿದಳು. ಅವಳನ್ನು ಕಂಡು

ಬ್ರಹ್ಮನು ಅತ್ಯಂತ ಚಕಿತನಾಗಿ ಮುಂದುಗಾಣದಾದನು. ಬ್ರಹ್ಮನ ಆ ಸ್ಥಿತಿಯನ್ನು ಕಂಡ ನಾರಾಯಣನು ಪಕ್ಕದಲ್ಲಿ ಕುಳಿತ ವರುಣಾದಿಗಳಿಗೆ ಸಂಜ್ಞೆ ಮಾಡಿದನು; ಹಾಗು ಬ್ರಹ್ಮನ ತೊಡೆಯನ್ನು ಚಿವುಟಿ, ಪಿಟ್ಟನ್ನ ಬೇಡವೆಂದು ಸೂಚಿಸಿದನು. ನಾರಾಯಣಾದಿಗಳು ಬೇಗ ಬೇಗನೆ ಉಣ್ಣತೊಡಗಿದರು. ಬ್ರಹ್ಮನು ಎಲೆಯನ್ನು ಸಹ ಮುಟ್ಟದೆ ಪಿಟ್ಟನ್ನು ನುಂಗಿಕೊಂಡು, ಬಾಯಿಂದ ಗುಣುಗುಣು ಎಂದು ಏನೇನೋ ಸ್ತೋತ್ರಪಠನ ಮಾಡಲಾರಂಭಿಸಿದನು!

ಊಟವಾದ ಬಳಿಕ ಎಲ್ಲ ಪ್ರಯಾಣಿಕರೂ ತಮ್ಮ ಊಟದ ಹಣವನ್ನು ಕೊಡತೊಡಗಿದರು. ಕೆಲವರು ರೂಪಾಯಿಗಳೆಂಬ ಬೆಳ್ಳಿಯ ನಾಣ್ಯಗಳನ್ನು ಕೊಟ್ಟು, ಬಾಕಿ ಚಿಲ್ಲರೆ ರೊಕ್ಕಗಳನ್ನು ಇಸಕೊಂಡು ಹೋದರು. ಕೆಲವರು ಪವನಗಳೆಂಬ ಬಂಗಾರದ ನಾಣ್ಯ ಕೊಟ್ಟು, ಬೆಳ್ಳಿಯ ಹಾಗು ನೋಟುಗಳೆಂಬ ಕಾಗದದ ನಾಣ್ಯಗಳನ್ನು ಮರಳಿ ಇಸಕೊಂಡು ನಡೆದರು. ನಮ್ಮ ದೇವತೆಗಳಲ್ಲಿ ಈ ತರದ ಯಾವ ನಾಣ್ಯಗಳೂ ಇದ್ದಿಲ್ಲ. ಇವರಲ್ಲಿ ಇಷ್ಟಗಲ-ಪಿಂಡವಾದ ಸೊಟ್ಟಬಟ್ಟಾದ ಹಳೆಯ ಶಿಕ್ಕೆ-ಮೋರ್ತಬಗಳುಳ್ಳ ಬಂಗಾರದ ನಾಣ್ಯಗಳಿದ್ದವು. ತಿರೋಳದಲ್ಲಿ ಗಾಡಿ ಹತ್ತುವಾಗ್ಗೆ ಇವರು ಟಿಕೇಟು ಖರೀದಿಗೆ ಇವನ್ನೇ ಅಲ್ಲಿಯ ಸ್ಟೇಶನ್‌ಮಾಸ್ತರನಿಗೆ ಕೊಟ್ಟಿದ್ದರು; ಆದರೆ ಅವನು ಇವುಗಳನ್ನು ಕಣ್ಣೆತ್ತಿ ಕೂಡ ನೋಡದೆ 'ಬೇರೆ ರೊಕ್ಕ ಕೊಡು' ಎಂದು ಗದ್ದರಿಸಲು, ನೃಸಿಂಹವಾಡಿಯಲ್ಲಿ ಪ್ರತಿದಿನ ಮಧ್ಯಾಹ್ನ-ಸಾಯಂಕಾಲಗಳಲ್ಲಿ ಪ್ರತಿಯೊಬ್ಬರಿಗೆ ಬಂದ ದಕ್ಷಿಣೆಯ ದುಡ್ಡುಗಳನ್ನು ಕೊಟ್ಟು ತಿಕೇಟು ಕೊಂಡುಕೊಂಡಿದ್ದರು. ಈಗಲೂ ಇವರು ಖಾನಾವಳಿಯವನಿಗೆ ಆ ನಾಣ್ಯವನ್ನೇ ಕೊಟ್ಟರು. ಅವನು ಇದು ನಾಣ್ಯವಲ್ಲ; ಹಳೇರಾಮಟಂಕಿಯ ವರಹವೆಂಬುದನ್ನು ಕಂಡು ಹಿಡಿದನು; ಆದರೆ ಇವರಿಗೆ ಮರಳಿ ಎಷ್ಟು ದುಡ್ಡು ಕೊಡಬೇಕೆಂಬುದನ್ನು ತಿಳಿಯದಾದನು. ಆಗ ಅವನು ಇವರಲ್ಲಿಯ ಒಬ್ಬನನ್ನು ತನ್ನ ಆಳಿನೊಡನೆ ಚಿನಿವಾಲರಟ್ಟಿಗೆ ಕಳುಹಿಸಿ, ಆ ವರಹದ ಬೆಲೆಯನ್ನು ನಿರ್ಣಯಿಸಿಕೊಂಡು ಬರಲಿಕ್ಕೆ ತಿಳಿಸಿದನು. ದೇವೇಂದ್ರನು ಆ ಆಳಿನೊಡನೆ ಚಿನಿವಾಲರಟ್ಟಿಗೆ ಹೋಗಲು, ಒಬ್ಬ ಚಿನಿವಾಲನು ಆ ವರಹವನ್ನು ೩೦ ರೂಪಾಯಿಗೆ ಕೇಳಿದನು; ಇನ್ನೊಬ್ಬನು ೩೫ಕ್ಕೆ ಕೇಳಿದನು; ಮತ್ತೊಬ್ಬನು ೪೦ಕ್ಕೆ ಕೇಳಿದನು. ಹೀಗೆ ಆದರ

ಬೆಲೆಯು ಹೆಚ್ಚು ಕಡಿಮೆಯೆಂದು ತೋರಲು, ಕಡೆಗೆ ದೇವೇಂದ್ರನು ಅದನ್ನು ೫೦ ರೂಪಾಯಿಗಳಿಗೆ ಮಾರಿ, ಬೆಳ್ಳಿಯ ರೋಖ ರೂಪಾಯಿಗಳನ್ನು ತಂದು, ಮಾನಾವಳಿಗೆ ಕೊಡತಕ್ಕಷ್ಟು ಕೊಟ್ಟು, ಉಳಿದ ರೂಪಾಯಿಗಳನ್ನು ನಾರಾಯಣನ ಸ್ವಾಧೀನ ಮಾಡಿದನು. ನಂತರ ಅವರೆಲ್ಲರೂ ಪುನಃ ಗಣಪತಿಯ ಮಂದಿರಕ್ಕೆ ನಡೆದರು. ಅಲ್ಲಿ ವಿಶ್ರಮಿಸುವಾಗ ಬ್ರಹ್ಮನು ಅತ್ಯಂತ ಕ್ರೋಧದಿಂದ ನಾರಾಯಣನನ್ನು:—ಭ್ರಷ್ಟಾ, ಕುಲಗೋತ್ರಗಳಿಲ್ಲದ ಪಿಶಾಚಿಯೇ! ಕಂಡೂ ಕಂಡು ಶೂದ್ರಸಂಪರ್ಕವಾದ ಅನ್ನವನ್ನು ನೀನು ಸ್ವತಃ ಉಣ್ಣುತ್ತಿರುವಿಯಲ್ಲದೆ, ಪರರಿಗೂ ಉಣಿಸುತ್ತಿರುವೆ! ಈ ಭೂಲೋಕದೊಳಗಿನ ನರರಿಗೆ ಹೆಸರಿಡುವದರಲ್ಲಿ ಅರ್ಥವೇನಿದೆ? ನಿಮ್ಮಂಥ ಮಹಾಜ್ಞಾನಿ, ಕುಲಕಂಟಕ ದೇವತೆಗಳೇ ಈ ಪ್ರಕಾರದ ಅನಾಚಾರಕ್ಕೆ ಹೇಸದಿರಲು, ಪಾಪ! ಈ ಅಜ್ಞಾನಿಗಳಾದ ನರರ ತಪ್ಪೇನು? ಎಂದು ಸಿಟ್ಟು ಮಾಡಿದನು ಆಗ ನಾರಾಯಣನು ಪಿಟ್ಟೆನ್ನಲಿಲ್ಲ

ವಾಮಕುಕ್ಷಿಯಾದ ಬಳಿಕ ದೇವಗಣಗಳು ಚಿಲಿಮೆಯನ್ನು ಹೊತ್ತಿಸಿ, ಸರತಿಯಂತೆ ಹಿಂದೊಂದು ಜುರುಕಿ ತಂಬಾಕ ಸೇದಿ, ಭವ್‌ಭೋಲಾನಾಥನ ನಾಮಸ್ಮರಣ ಮಾಡಿ, ಊರೊಳಗೆ ತಿರುಗಾಡಲಿಕ್ಕೆ ನಡೆದರು. ದಾರಿಯಲ್ಲಿ ಸಂಸ್ಥಾನಿಕರ ಭವ್ಯವಾದ ವಾಡೆಯು ಹತ್ತಿತು. ಆಗ ಬ್ರಹ್ಮನು ವರುಣನನ್ನು ಕುರಿತು:—ಇದಾರದೆಂದು ಕೇಳಲು, ವರುಣನು ಇದು ಇಲ್ಲಿಯ ಸಂಸ್ಥಾನಿಕರ ವಾಡೆಯು. ಈ ಮಿರಜಿಯ ಸಂಸ್ಥಾನಿಕನು ಮಹಾ ವಿದ್ವಾಂಸನೂ, ದೇವ-ಬ್ರಾಹ್ಮಣರಲ್ಲಿ ವಿಶ್ವಾಸವುಳ್ಳವನೂ ಆಗಿರುವನಲ್ಲದೆ, ತನ್ನ ಪ್ರಜೆಗಳನ್ನು ಪುತ್ರವತ್ ಪಾಲಿಸುವ ಧರ್ಮದವನಿರುತ್ತಾನೆ. ಕರ್ನಾಟಕದೊಳಗಿನ ಬೇರೆ ಚಿಕ್ಕ ದೊಡ್ಡ ಸಂಸ್ಥಾನಿಕರಿಗಿಂತಲೂ ಈತನು ಅತ್ಯಂತ ಪ್ರಜಾವತ್ಸಲನು. ಈ ಧರ್ಮಾತ್ಮನು ಪಟ್ಟವೇರಿದಂದಿನಿಂದ ಇಂದಿನ ತನಕ ತನ್ನ ಪ್ರಜೆಗಳ ಮೇಲೆ ಯಾವತರದ ಹೊಸ ಕರಗಳನ್ನೂ ಕೂರಿಸಿರುವದಿಲ್ಲ. ಇಷ್ಟೇ ಅಲ್ಲ; ಈ ಸಂಸ್ಥಾನಿಕನ ಆದಾಯವು ಈತನ ಇತರ ಬಂಧು ಸಂಸ್ಥಾನಿಕರಿಗಿಂತಲೂ ಅತ್ಯಲ್ಪವಿದ್ದರೂ ಇವನು ಅದನ್ನು ಹೆಚ್ಚಿಸಿಕೊಂಡಿರುವದಿಲ್ಲ! ಈತನ ಬಂಧುಗಳು-ಸಾಂಗಲಿ, ಜಮಖಂಡಿ, ಕುರಂದವಾಡ ಸಂಸ್ಥಾನಿಕರು-ಮೊದಲಿನ ೩-೪ ಪಟ್ಟು ಕರ ಹೆಚ್ಚಿಸಿ, ತಮ್ಮ ಆದಾಯವನ್ನು ಹೆಚ್ಚಿಸಿಕೊಂ

ಡಿರುತ್ತಾರೆ. ಈತನು ತನ್ನ ಆದಾಯದ ಹಣದಲ್ಲಿಯ ಬಹು ಭಾಗವನ್ನು ಪ್ರಜೋಪಯುಕ್ತ ಕಾಮಗಿರಿ, ಕೆರೆ-ಕಟ್ಟೆ, ಕೈಗಾರಿಕೆಯ ಕಾರಖಾನೆ ಮುಂತಾದವುಗಳಿಗೆ ವಿನಿಯೋಗಿಸುತ್ತಿರುವನು; ಎಂದು ಹೇಳಿದನು.

ಊರೆಲ್ಲ ಅಡ್ಡಾಡಿ ಬಂದು ಶ್ರೀ ಗಣಪತಿಯ ದೇವಸ್ಥಾನದಲ್ಲಿ ದೇವತೆಗಳು ಸಾಯಾಹ್ನಿಕ ಉಪಾಹಾರಗಳನ್ನು ತೀರಿಸಿಕೊಂಡು ರಾತ್ರಿಯ ರೈಲಿನಿಂದ ಹೊರಡಬೇಕೆಂದು ಸ್ಟೇಶನ್ನಿಗೆ ಬಂದರು.

ಪುಷ್ಯಮಾಸವು ತೀರಿ ಲಗ್ನಮಾಸ ಪ್ರಾರಂಭದ ಸಮಯ; ಆಗ ಮುಸಲ್ಮಾನರ ಉರುಸುಗಳು ಮುಗಿಯುವ ಹಾಗು ಹಿಂದುಗಳ ವಿವಾಹ-ಜಾತ್ರೆಗಳು ಪ್ರಾರಂಭವಾಗುವ ಕಾಲವಾದ್ದರಿಂದ ಪ್ರತಿಯೊಂದು ಕಡೆಯಲ್ಲೂ ಜನರ ರಹದಾರಿಯು ಹೆಚ್ಚು. ರೈಲ ಬಂಡಿಗಳಲ್ಲಂತೂ ಆ ಕಾಲದಲ್ಲಾಗುವ ನುಗ್ಗಾಟವನ್ನು ಬಣ್ಣಿಸಲಳವಲ್ಲ. ಮಿರಜದಂಥ ಜಂಕ್ಶನ್ನಿನ ಸ್ಟೇಶನ್ನಿನಲ್ಲಿ ಎಷ್ಟು ಗೊಂದಲವಾಗುತ್ತಿರಬಹುದೆಂಬುದು ಅನುಭವದಿಂದಲ್ಲದೆ ಆ ವಿಷಯದ ವರ್ಣನದ ವಾಚನದಿಂದ ಮನನವಾಗಲಾರದು. ನಮ್ಮ ದೇವತೆಗಳು ಗೋಕಾಕರೋಡ ಸ್ಟೇಶನ್ನಿನ ಟಿಕೇಟು ಕೊಂಡುಕೊಂಡು ಪ್ಲಾಟಫಾರ್ಮದ ಮೇಲೆ ಬಂದು ನಿಂತರು. ಅಷ್ಟರಲ್ಲಿ ಪುಣೆಯಿಂದ ಬೆಂಗಳೂರ ಕಡೆಗೆ ಹೋಗುವ ಫಾಸ್ಟ ಪ್ಯಾಸೆಂಜರು ಬಂತು. ಟ್ರೇನು ನಿಲ್ಲಲಿಕ್ಕೆ ಕೂಡ ಅವಕಾಶ ಕೊಡದೆ ಪ್ಯಾಸೆಂಜರರು ಅದನ್ನು ಏರತೊಡಗಿದರು. ಆ ಗೊಂದಲದಲ್ಲಿ ಒಬ್ಬಿಬ್ಬರು ಗಾಡಿಯ ಕೆಳಗೆ ಬಿದ್ದು ಘಾಯ ಕೂಡ ಹೊಂದಿದರು!

ನಮ್ಮ ದೇವಗಣಗಳು ಒಂದು ಡಬ್ಬಿಯನ್ನು ಏರಿ ಕುಳಿತರು. ಅಷ್ಟರಲ್ಲಿ ಹೆಗಲ ಮೇಲೆ ದೊಡ್ಡ ದೊಡ್ಡ ಮೊಟ್ಟೆಗಳನ್ನು ಹೊತ್ತು, ಕೈಯಲ್ಲಿ ಉದ್ದುದ್ದನ್ನ ಡೊಣ್ಣೆಯನ್ನು ಹಿಡಿದಂಥ ಕುಡಚಿಯ ಪ್ರಚಂಡ ಮುಸಲ್ಮಾನರು ಆ ಡಬ್ಬಿಯನ್ನೇ ಏರತೊಡಗಿದರು. ಆ ಡಬ್ಬಿಯಲ್ಲಿ ಮೂವತ್ತಾರು ಜನರು ಕೂಡ್ರುವ ಸ್ಥಳವಿದ್ದು, ಈಗಾಗಲೆ ಅರವತ್ತು ಜನರ ವರೆಗೆ ಕುಳಿತಿದ್ದರು. ಹೊರಗಿನಿಂದ ಏರತಕ್ಕವರ ಸಂಖ್ಯೆಯು ಸರಾಸರಿ ಇಪ್ಪತ್ತೈದು ಇರಬಹುದು! ಅವರೆಲ್ಲರೂ ಅದೊಂದೇ ಡಬ್ಬಿಯನ್ನು ಹತ್ತಬೇಕೆಂದು ಸಾಹಸಪಡುತ್ತಿದ್ದರು. ಅವರಲ್ಲಿ ಕೆಲವು ಕ್ರೂರ ಜನರು ಒಳಗೆ ಹತ್ತಿ, ಕುಳಿತ ಜನರನ್ನು

ಅತ್ತಿತ್ತ ನೂಕಾಟ ತಾವು ನುಸುಳಿಕೊಳ್ಳುವದಲ್ಲದೆ, ತಮ್ಮ ಪರಿವಾರದವರಿಗೂ ಕೂಡ ಸ್ಥಳವನ್ನಾಡಿಕೊಡಲು ಪ್ರಯತ್ನಿಸುತ್ತಿದ್ದರು. ನಮ್ಮ ದೇವಗಣಗಳೂ ಆ ಪ್ರಚಂಡ ಜನರ ಉಪಟಳಕ್ಕೆ ತುತ್ತಾಗದೆ ಇರಲಿಲ್ಲ. ಒಬ್ಬ ಟೊಣಪ ಮುಸಲ್ಮಾನನು ಮುಪ್ಪಿನಿಂದ ತಲೆ ನಡುಗಿಸುತ್ತ ಕುಳಿತಿದ್ದ ಪಿತಾಮಹನ ತೊಡೆಯ ಮೇಲೆ ತನ್ನ ಗಂಟನ್ನು ಹೇರಿ, ಅದರ ಮೇಲೆ ತನ್ನ ಸ್ಥೂಲ ಕಾಯವನ್ನು ಹೇರಿದನು. ಆಗ ಬ್ರಹ್ಮನ ಉಸಿರು ನಿಂತುವದು ಕೂಡ ಬಂದಾಗ ಹತ್ತಿತು. ದೇವಗಣಗಳ ಪೂರ್ವಸಂಚಿತದಿಂದ ಅಷ್ಟರಲ್ಲಿ ಟ್ರೇನು ಸ್ಟೇಶನ್ನದಿಂದ ಹೊರಡಲು, ಹೊರಗಣ ತಂಗಾಳಿಯ ಸ್ಪರ್ಶದಿಂದ ಬ್ರಹ್ಮನು ಪ್ರಕೃತಿಸ್ಥನಾಗಲಾರಂಭಿಸಿದನು. ಇತ್ತ ನಾರಾಯಣನು ತನ್ನ ಮಾಯೆಯಿಂದ ಆ ಯವನನನ್ನು ಬೇರೆ ಕಡೆಗೆ ಕೂಡ್ರಿಸಲು, ಬ್ರಹ್ಮನಿಗೆ ವಿರಾಮವೆನಿಸಿತು. ಅಷ್ಟರಲ್ಲಿ ಮತ್ತೊಬ್ಬ ಗೋವೇ ಪ್ರಾಂತದ ಪ್ರಯಾಣಿಕನು ಅಂಥ ಆ ಗದ್ದಲದಲ್ಲಿಯೇ ಊಟವನ್ನು ಪ್ರಾರಂಭಿಸಿದನು. ಅವನು ತನ್ನ ಊಟಕ್ಕಾಗಿ ಉಪಯೋಗಿಸುತ್ತಿದ್ದ ಕೊಳೆತ ಉಪ್ಪುಮೀನಿನ ದುರ್ಗಂಧದಿಂದ ದೇವಗಣಗಳ ತಲೆಯು ಭ್ರಮಿಸತೊಡಗಿತು!

ಅಷ್ಟರಲ್ಲಿ ಗಾಡಿಯು ಬಳಿಯ ಶ್ರೀ ಕೃಷ್ಣಾ ಹೊಳೆಯ ಪ್ರಚಂಡ ಪೂಲು ಬಂದಿತು. ಎಲ್ಲ ಪ್ರಯಾಣಿಕರ ಲಕ್ಷ್ಯವೂ ಆ ಪೂಲಿನ ಕಡೆಗೆ ಹೊರಳಿತು. ಕೃಷ್ಣಾ ಪೂಲಿನ ಕೆಂಬಣ್ಣದ ಬಹು ಎತ್ತರವಾದ ಕಟಾಂಜನಗಳೂ, ಕಲ್ಲು ನಿರ್ಮಿತ ಕಂಬಗಳೂ ದಾಟದ ಮೇಲೆ ನಡುವೆ ಕಾಣುವ ಕಿರಿದಾದ ಬೈಲು ಪ್ರದೇಶವೂ, ಆ ಬೈಲು ಪ್ರದೇಶದೊಳಗಿಂದ ಕಾಣುವ ಹೊಳೆಯ ಮನೋಹರ ಶೋಭೆಯೂ ನೋಡುವವರ ಮನಸ್ಸನ್ನು ಸೆಲ್ಲಣಿಸಿ ಬಿಟ್ಟಿರಲು, ಗಾಡಿಯು ಕುಡಚಿಯ ಸ್ಟೇಶನ್ನಿಗೆ ಬಂದು ನಿಂತಿತು. ಕೂಡಲೆ ಮಿರಜದಲ್ಲಿ ಏರಿದ ಎಲ್ಲ ಯವನರೂ ಇಳಿಯಲು, ಒಳಗೆ ಉಳಿದ ಪ್ರಯಾಣಿಕರಿಗೆ ಒಂದು ವಿಧವಾಗಿ 'ಹಾಯ' ಎನಿಸಿತು. ಮುಂದೆ ಕೆಲ ಹೊತ್ತಿನಲ್ಲಿ ಗಾಡಿಯು ವೇಗದಿಂದ ಸಾಗಿ, ಗೋಕಾಕರೋಡ ಸ್ಟೇಶನ್ನಿಗೆ ಬಂದು ನಿಂತಿತು.

# ಗೋಕಾಕ ಫಾಲ್ಸ.

ಗೋಕಾಕರೋಡ ಸ್ಟೇಶನ್ನಿನ ಬಳಿಯಲ್ಲಿಯೇ ಘಟಪ್ರಭಾ ನದಿಯನ್ನು ಅಡ್ಡಗಟ್ಟಿದ ಅರ್ಧಚಂದ್ರಾಕೃತಿಯ ಒಡ್ಡು ಇರುವದು; ಅದನ್ನು ಕಂಡು ಬ್ರಹ್ಮನು ವರುಣನಿಗೆ:—ವರುಣಾ, ಪ್ರಚಂಡ ಘಟ್ಟ (ಗುಡ್ಡ)ಗಳನ್ನು ಒಡೆದು ನುಗ್ಗಿ ನುಗ್ಗಿ ಮಾಡಿ ಬಂದಿರುವ ಈ ಘಟಪ್ರಾನದಿಯನ್ನು ಇಲ್ಲಿ ಈ ಕಿರಿಒಡ್ಡಿನಿಂದೇಕೆ ತರುಬಲು ಪ್ರಯತ್ನಿಸಿರುವರು?

ವರುಣ:—ಅಜ್ಜಾ, ಇದೊಂದು ವಿಲಾಯತಿ ಯಂತ್ರಕಲೆಯ ದ್ಯೋತಕವಾಗಿದೆ. ಅವರು ಈ ಹೊಳೆಯನ್ನು ಇಲ್ಲಿ ಈ ಒಡ್ಡಿನಿಂದ ಅಡ್ಡಗಟ್ಟಿ ಪಶ್ಚಿಮಕ್ಕೆ ಜಲಸಂಚಯಿಸಿರುವರು ಇಲ್ಲಿಂದ ಸುಮಾರು ಮೂರು ಮೈಲುಗಳ ಮೇಲೆ ಒಂದು ಕೃತ್ರಿಮ ಫಾಲ್ಸ-ಎತ್ತರದಿಂದ ಕೆಳಗೆ ನೀರು ಧುಮುಕುವಂತೆ-ಮಾಡಿರುವರು; ಹಾಗು ಆ ನೀರಿನ ಆಘಾತದಿಂದ ಎಷ್ಟೋ ಹಾರ್ಸಪಾವರಿನ (ಕುದುರೆಯ ಶಕ್ತಿಯ) ಎಂಜಿನಗಳನ್ನು ಏನೂ ಖರ್ಚಿಲ್ಲದೆ ನಡಿಸುವರು. ಆ ಯಂತ್ರಗಳ ಸಹಾಯದಿಂದ ಅಲ್ಲಿ ಇವರ ಹತ್ತಿಯಿಂದ ಅರಿವೆ ಮಾಡುವ ಬಹು ದೊಡ್ಡ ಪ್ರಮಾಣದ ಕಾರಖಾನೆಯು ನಡೆದಿರುತ್ತದೆ, ಎನ್ನಲು, ಮರುದಿನ ಬೆಳಿಗ್ಗೆ ದೇವಗಣಗಳು ಒಂದು ಬಾಡಿಗೆಯ ಮೋಟಾರನ್ನು ಗೊತ್ತುಮಾಡಿಕೊಂಡು, ಆ ಕಾರಖಾನೆಯನ್ನು ನೋಡಹೋದರು. ನಾಲ್ಕೈದು ತಾಸುಗಳ ವರೆಗೆ ಅಡ್ಡಾಡಿ ಅಲ್ಲಿ ನೋಡತಕ್ಕದ್ದನ್ನೆಲ್ಲ ನೋಡಿಕೊಂಡು ಸ್ಟೇಶನ್ನಿಗೆ ಹಿಂದಿರುಗಿದರು; ಹಾಗು ಸಾಯಂಕಾಲದ ಗಾಡಿಯಿಂದ ಬೆಳಗಾವಿಗೆ ನಡೆದರು.

---

# ಬೆಳಗಾವ.

ಇದೊಂದು ಪ್ರಸಿದ್ಧ ಪ್ರಾಚೀನ ಪಟ್ಟಣವು. ಪುರಾತನ ಕಾಲದಲ್ಲಿ ಇದಕ್ಕೆ ಎಷ್ಟು ಮಹತ್ವವಿತ್ತೋ, ಅದಕ್ಕೂ ಹೆಚ್ಚು ಮಹತ್ವವು ಈ ಇಂಗ್ಲಿಷರ ರಾಜ್ಯದಲ್ಲಿ ಪ್ರಾಪ್ತವಾಗಿದೆ ಇಲ್ಲಿ ದಂಡಿನ ಠಾಣ್ಯವಿರುತ್ತದೆ; ಮುಂಬಯಿ ಇಲಾಖೆಯ ದಕ್ಷಿಣಭಾಗದ ಕಮಿಶನರ

ಕಚೇರಿಯೂ, ಜಜ್ಜಕೋರ್ಟ್, ಮುನಿಸೀಫಕೋರ್ಟ ಕಲೇಕ್ಟರರ ಕಚೇರಿ, ಶಾಲಾಖಾತೆಯ ಕಚೇರಿ, ರೇಲ್ವೆಯ ಈ ಭಾಗದ ಮುಖ್ಯ ಸ್ಥನೆ ಆಫೀಸು ಮೊದಲಾದ ಪ್ರಮುಖ ಕಚೇರಿಗಳಿರುವವು. ಅಲ್ಲದೆ ಊರಲ್ಲಿ ಬಹು ದೊಡ್ಡ ಪ್ರಮಾಣದಿಂದ ವ್ಯಾಪಾರವಾಗುವದರಿಂದ ನಾನಾ ಪ್ರಕಾರದ ದೊಡ್ಡ ದೊಡ್ಡ ಅಂಗಡಿಗಳೂ ಇರುತ್ತವೆ. ಇಲ್ಲಿಯ ನಿವಾಸಿಗಳಲ್ಲಿ ಬಹು ಜನರ ಮಾತೃಭಾಷೆಯು ಕನ್ನಡವಾಗಿದ್ದರೂ, ಬೆಳಗಾವಿಯನ್ನು ಸುತ್ತುಗಟ್ಟಿರುವ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ವರ್ಚಸ್ಸಿನಿಂದಲೋ, ಈ ಜಿಲ್ಲೆಯಿಂದ ಉತ್ತರಕ್ಕೆಲ್ಲ ಕೇವಲ ಮರಾಟಿಗರ ನಾಡಾದದ್ದರಿಂದಲೋ ಇಲ್ಲಿಯ ಕನ್ನಡಿಗರು ಪ್ರಯತ್ನಪೂರ್ವಕ ಮಹಾರಾಷ್ಟ್ರ ಭಾಷೆಯನ್ನೇ ಆಡುತ್ತಾರೆ. ಯಾವನೊಬ್ಬ ಕನ್ನಡ ಭಾಷೆಯ ಅಭಿಮಾನಿಯು ಇವರಿಗೆ ಗಂಟು ಬಿದ್ದು, ಹೀಗೇಕೆ ನಡೆಯುವಿರೆಂದು ಕೇಳಿದರೆ, ಇವರು ಆ ಕಟ್ಟಾ ಕನ್ನಡದಭಿಮಾನಿಗೆ:—"ಆರೆ ಅರಸು, ಮುಸಲ್ಮಾನಿ ಸರಸ, ಕನ್ನಡ ಬಿರುಸು" ಎಂದು ನಾಣ್ಣುಡಿಯೇ ಇರುವದರಿಂದ, ನಾವು ಆ ಮುತ್ಯಾಳ ಕನ್ನಡ ಭಾಷೆಗೆ ಅರ್ಧಚಂದ್ರ ತೋರಿರುವೆವೆಂದು ಸ್ಪಷ್ಟವಾಗಿ ಹೇಳುತ್ತಾರೆ!

ಸ್ಟೇಶನ್ನಿನಿಂದ ಊರೊಳಗೆ ಹೋಗುವಾಗ ಬ್ರಹ್ಮನು:—ವರುಣಾ, ಬೆಳಗಾವಿಯಲ್ಲಿ ಸದ್ಯದ ರಾಜಕೀಯ-ಸಾಮಾಜಿಕ ಚಳವಳಿಗಳು ಎಷ್ಟರಮಟ್ಟಿಗೆ ಯಶಸ್ವಿಗಳಾಗಿರುವವು?

ವರುಣ:—ಬೆಳಗಾವಿಯ ಭಾಗದೊಳಗೆ ಪ್ರತಿಯೊಂದು ಕಾರ್ಯದಲ್ಲಿ ಕೃತಿ ಮಾಡಿ ತೋರಿಸುವವರಿಗಿಂತ ಮಾತಾಡಿ ಮೆರೆಯುವವರೇ ವಿಶೇಷವೆಂದು ಜನರಾಡಿಕೊಳ್ಳುತ್ತಿರುವರು. ಈಚೆಗೆ ಇಲ್ಲಿ ಹಲಕೆಲವು ರಾಜಕೀಯ ಪುಢಾರಿಗಳು ಹೆಸರುವಾಸಿಗಳಾಗಿರುವರು. ಇಲ್ಲಿಯ ಸಾಮಾಜಿಕ ಸುಧಾರಣೆಯು ಕೇವಲ ಪುಣೆ ಪ್ರಾಂತದ ಮರಾಟಿಗರನ್ನು ಹೆಚ್ಚಾಗಿ ಅನುಸರಿಸುವದು. ಇಲ್ಲಿಯ ಭಾಷೆಯ ಸೊಬಗಂತೂ ವಿಚಿತ್ರವಿದೆ. ಇಲ್ಲಿಯ ರಹಿವಾಸಿಗಳು ಕನ್ನಡ ಮಾತೃಭಾಷೆಯವರೇನೋ ನಿಜ; ಆದರೆ ಅವರಿಗೆ ಕನ್ನಡ ಮಾತಾಡುವದು ಕೀಳುತರವಾಗಿ ಅನಿಸುವದು; ಮರಾಠೀಭಾಷೆಯು ಸರಿಯಾಗಿ ಬರದು. ಹೀಗೆ ಗೊಂದಲವಾಗಿ ಅವರು ಒಂದು ಬಗೆಯ ಮಿಶ್ರ ಭಾಷೆಯನ್ನು ರೂಢಿಸಿರುವದು

ಪ್ರಸ್ತುತದ ರಾಜಕೀಯ ಚಳವಳಿಯಲ್ಲಿ ಈ ನಾಡಿನ ಕೆಲ ಜನರು ಇಂಗ್ಲಿಷ ಸರಕಾರದ ರೋಷಕ್ಕೆ ಪಾತ್ರರಾಗಿರುವರು; ಆದರೆ ಇತ್ತೀಚಿಗೆ ಅವರಲ್ಲಿಯು ಬಹು ಜನರು ಯೋಗನಿದ್ರಾಸಕ್ತರಾದಂತೆ ತೋರುವದರಿಂದ, ಈ ಪ್ರಾಂತದಲ್ಲಿ ಈಗ ವಿಶೇಷ ಚಳವಳಿಯೇನೂ ಇಲ್ಲೆಂದರೂ ಸಲ್ಲಬಹುದು.

ನಮ್ಮ ದೇವಗಣಗಳು ಬೆಳಗಾವಿಯಲ್ಲಿಯ ಗೋಂಧಳೀಗಲ್ಲಿಯೊಳಗಿನ ಒಂದು ದೇವಾಲಯಕ್ಕೆ ಹೋಗಿ, ಅಂದು ರಾತ್ರಿ ಅಲ್ಲಿಯೇ ವಿಶ್ರಮಿಸಿದರು. ಮರುದಿನ ಬೆಳಿಗ್ಗೆ ಅಲ್ಲಿಯ ಒಬ್ಬ ಸದ್ಗೃಹಸ್ಥನು ಈ ಪಾಂಥಸ್ಥರಿಗೆ ತನ್ನ ಮನೆಗೆ ಸ್ನಾನ-ಊಟಗಳಿಗಾಗಿ ಆಮಂತ್ರಣವಿತ್ತನು. ಕೂಡಲೆ ನಾರಾಯಣಾದಿ ದೇವತೆಗಳು ಬ್ರಹ್ಮನನ್ನು ಮುಂದೆ ಮಾಡಿಕೊಂಡು ನಡೆದರು. ಪ್ರಪಂಚದಲ್ಲಿ ಒಬ್ಬನು ನಿಷ್ಠಾವಂತನೂ, ಇನ್ನೊಬ್ಬನು ನಿಂದಕನೂ; ಒಬ್ಬನು ದಾನಶೂರನೂ, ಮತ್ತೊಬ್ಬನು ಕೃಪಣನೂ; ಒಬ್ಬಳು ಪತಿವ್ರತೆಯೂ, ಇನ್ನೊಬ್ಬಳು ಕುಟಿಲೆಯೂ ಇರುವದು ವಾಡಿಕೆಯಾಗಿರುವದರಿಂದ, ನಮ್ಮ ದೇವಗಣಗಳನ್ನು ಆತಿಥ್ಯ ಸೇವೆಗೆ ಕರೆದೊಯ್ದ ಗೃಹಸ್ಥನ ಮನೆಯವರಾದರೂ ಎಲ್ಲರೂ ಸಾತ್ವಿಕ ಸ್ವಭಾವದವರಿರುವ ಸಂಭವವುಂಟೇ?

ಅಂದು ಬ್ರಹ್ಮನು ವಾಡಿಕೆಯಂತೆ ಆ ಗೃಹಸ್ಥನ ಮನೆಯಲ್ಲಿ ಪ್ರಾತಃಸ್ನಾನಕ್ಕೆ ಇಳಿದನು. ಬೆಳಗಾವಿಯ ಆ ಓಣಿಯೊಳಗೆ ನೀರಿನ ತುಟಾಗ್ರವೆಂಬುದು ಬ್ರಹ್ಮನಿಗೆ ತಿಳಿದಿರಲಿಲ್ಲ. ಅದರಿಂದ ಅವನು ತನ್ನ ಹುಟ್ಟುಗುಣದಂತೆ ಮುಖಮಾರ್ಜನ ಮಾಡಲಿಕ್ಕೆ ಹತ್ತೆಂಟು ತಂಬಿಗೆ, ಸ್ನಾನಕ್ಕೆ ನಾಲ್ಕಾರು ಕೊಡ ನೀರು ಚೆಲ್ಲುವದರಲ್ಲಿದ್ದನು. ಈ ಪರಿ ನೀರಿನ ವ್ಯಯವನ್ನು ನೋಡಿ, ಸಹಿಸಲಾರದ ಆ ಮನೆಯ ಒಬ್ಬ ಮುದಿ ಹೆಣ್ಣುಮಗಳು, ಈ ಅತಿಥಿಗಳಿಗೆ ಕನ್ನಡದ ವಿನಃ ಬೇರೆ ಭಾಷೆಯು ಬರುವದಿಲ್ಲೆಂದು ತಿಳಿದು, ಮರಾಠೀ ಭಾಷೆಯಲ್ಲಿ ಆ ಮುದಿ ಬ್ರಹ್ಮನಿಗೆ ಚೆನ್ನಾಗಿ ಬಯ್ಯಲಾರಂಭಿಸಿದಳು! ಬ್ರಹ್ಮನು ಸರಸ್ವತಿಯ ಪತಿಯಾದುದರಿಂದ, ಅವನಿಗೆ ಬಾರದ ಭಾಷೆಗಳಾವುವಿರಬೇಕು? ಆ ಮುದುಕಿಯು ತನ್ನನ್ನುದ್ದೇಶಿಸಿ ಬಯ್ಯುತ್ತಿರುವದು ಅವನಿಗೆ ಕೇಳುತ್ತಿತ್ತು; ಆದರೆ ಮಾಡುತ್ತಾನೇನು? ಅಂಥ ಆ ಅರಬಿನ ನೀರಿನ ಸ್ಥಳದಲ್ಲಿ ತಾನು ತನ್ನ ಹುಟ್ಟುಗುಣವನ್ನು

ಇಂದಿನವರೆಗಾದರೂ ಬಿಡಬೇಕಾಗಿತ್ತೆಂದು ಮನದಲ್ಲಿಯೇ ಅಂದು ಕೊಂಡು ಬಚ್ಚಲವನ್ನು ಬಿಟ್ಟು ಲಗುಬಗೆಯಿಂದ ಎದ್ದು ಬಂದನು.

ಎಲ್ಲರೂ ಪ್ರಾತರಾಹ್ನಿಕಗಳನ್ನು ತೀರಿಸಿಕೊಂಡು ಊರಲ್ಲೆಲ್ಲ ಅಡ್ಡಾಡಿ ಬಂದರು. ಮಧ್ಯಾಹ್ನದಲ್ಲಿ ಆ ಗೃಹಸ್ಥನಲ್ಲಿ ಸಮೀಚೀನ ವಾದ ಊಟ ತೀರಿಸಿಕೊಂಡು ತುಸ ವಿಶ್ರಮಿಸಿ, ಸಾಯಂಕಾಲದ ಮೂರು ಗಂಟೆಗೆ ಹಿಂದು ಬಾಡಿಗೆಯ ಮೋಟಾರನ್ನು ಗೊತ್ತು ಮಾಡಿಕೊಂಡು, ಶ್ರೀ ಚಿದಂಬರನ ಜನ್ಮಸ್ಥಾನವಾಗಿದ್ದ ಮುರುಗೋಡಿಗೆ ತೆರಳಿದರು.

---

# ಮುರಗೋಡ.

ಬೆಳಗಾವಿಯಿಂದ ಹೊರಟ ಮೋಟಾರು ನಡುವೆ ಬೈಲಹೊಂಗಲ ದಲ್ಲಿ ತುಸ ಹೊತ್ತು ವಿಶ್ರಮಿಸಿ, ಮುರಗೋಡಿಗೆ ಸಾಯಂಕಾಲದ ೫ ಗಂಟೆಗೆ ಬಂದು ತಲುಪಿತು. ದೇವಗಣಗಳು ಊರ ಹತ್ತರ ಮೋಟಾರಿನಿಂದಿಳಿದು, ಊರೊಳಗೆ ನಡೆದರು ಸರಾಸರಿ ಹಿಂದೂ ವರೆ ನೂರು ವರುಷಗಳ ಹಿಂದೆ ಇಲ್ಲಿ ಮಹಾದೇವನ ಅಂಶದಿಂದ ಶ್ರೀ ಚಿದಂಬರ ಮಹಾಸ್ವಾಮಿಯು ಅವತರಿಸಿದ್ದನು ಈ ಮಹಾ ತ್ಮನು ತನ್ನ ಸತ್ವಗುಣಪ್ರಭಾವದಿಂದ ಲೋಕವಿಖ್ಯಾತನಾಗಿ ಭಕ್ತ ಕೋಟಿಯನ್ನುದ್ಧರಿಸಿದನು.

ದೇವಗಣಗಳು ಮುರಗೋಡದೊಳಗಿನ ಮಹಾ ಸ್ವಾಮಿಯ ಹಾಳು ಮನೆಯನ್ನು ನೋಡಿಕೊಂಡು, ಸಂಜೆಯ ವಸತಿಗಾಗಿ ಸಮೀಪದಲ್ಲಿಯ ಕೆಂಗೇರಿಗೆ ಹೋದರು. ಅಲ್ಲಿ ಶ್ರೀ ಚಿದಂಬರೇಶ್ವರ ದೇವಸ್ಥಾನದಲ್ಲಿಳಕೊಂಡು ಸಾಯಾಹ್ನಿಕಗಳನ್ನು ತೀರಿಸಿದರು. ರಾತ್ರಿ ಅಲ್ಲಿಯ ಶ್ರೀ ಚಿದಂಬರ ವಂಶಜರಲ್ಲಿ ಊಟ-ಪಾಟಗಳನ್ನು ಮಾಡಿ ಕೊಂಡರು. ದೇವತೆಗಳು ಆ ಮಹಾಸ್ಥಾನದಲ್ಲಿ ಮೂರು ದಿವಸ ವಾಸ ಮಾಡಿದರು. ಕೆಂಗೇರಿಯಲ್ಲಿಯ ಶ್ರೀ ಮಹಾಸ್ವಾಮಿಯ ಸಮಾಧಿಯನ್ನೂ, ಶ್ರೀ ಮಹಾಸ್ವಾಮಿಯ ತಂದೆ-ತಾಯಿಗಳ ಸಮಾಧಿ-ದೇವಾಲಯಗಳನ್ನೂ, ಶ್ರೀ ಮಾರ್ತಾಂಡೇಶ್ವರ, ಶ್ರೀ ಸೀತಾ-ರಾಮರ ದೇವಸ್ಥಾನಗಳನ್ನೂ ಕಣ್ಣಾರೆ ಕಂಡರು. ಕೆಂಗೇರಿ

ಮಹಾಸ್ಥಾನವು ಬಹು ರಮಣೀಯವಾಗಿದೆ ಅಲ್ಲಿ ವರ್ಷಕ್ಕೊಂದೆರಡು ಸಾರೆ ಮಹೋತ್ಸವಗಳು ನಡೆಯುತ್ತವೆ.

ದೇವಗಣಗಳು ನಾಲ್ಕನೆಯ ದಿನ ನಸುಕಿನಲ್ಲಿ ಕೆಂಗೇರಿಯ ಕೆಂಪು ನೀರಿನ ಹೊಂಡದಲ್ಲಿ ಜಳಕ ಮಾಡಿಕೊಂಡು ಮುರಗೋಡಿಗೆ ಬಂದು, ಮೋಟಾರಿನ ನಿರೀಕ್ಷಣೆ ಮಾಡಲಾರಂಭಿಸಿದರು. ಅಂದು ಬೆಳಗ್ಗೆ ಲಕ್ಕ ಅಲ್ಲಿಗೆ ಬರಬೇಕಾಗಿದ್ದ ಮೋಟಾರು ಬಂಡಿಯು ನಡುವೆ ನಾದುರಸ್ತಾದ್ದರಿಂದ, ಮಧ್ಯಾಹ್ನ ೧೨ಕ್ಕೆ ಬಂದಿತು. ಆ ಸಮಯದಲ್ಲಿ ಅವರೆಲ್ಲರೂ ಅವಸರದಿಂದ ಮೋಟಾರಿನಲ್ಲಿ ಕುಳಿತುಕೊಂಡರು. ಇನ್ನುಳಿದ ಪ್ರಯಾಣಿಕರೂ ಗಡಿಬಿಡಿಯಿಂದ ಹತ್ತಿಕೊಳ್ಳಲು, ಆ ರಬ್ಬರಿನ ಗಾಲಿಯ ಬಂಡಿಯು ಭರದಿಂದ ಓಡಲಾರಂಭಿಸಿತು.

---

## ಬಡಲಿ.

ಹೀಗೆ ಓಡತೊಡಗಿದ್ದ ಮೋಟಾರ ಬಂಡಿಯು ಬೈಲಹೊಂಗಲಕ್ಕೆ ಬಂದು ಗಕ್ಕನೆ ನಿಂತುಕೊಂಡಿತು. ಮುರುಗೋಡಕ್ಕೆ ಹೋಗುವಾಗ ದಾರಿಯಲ್ಲಿ ಈ ಊರು ಹತ್ತಿದ್ದರಿಂದ ಬ್ರಹ್ಮನು ನಾರಾಯಣನನ್ನು ಕುರಿತು:—“ನಾರಾಯಣಾ, ಇದೇನು? ಬಂದ ದಾರಿಗೆ ಸುಂಕವಿಲ್ಲವೆಂಬಂತೆ ತಿರುಗಿ ಮೊದಲಿನ ದಾರಿಗೇ ಬಂದೆವಲ್ಲ! ಎಂದು ನುಡಿಯಲು, ನಾರಾಯಣನೂ ತುಸ ಗೊಂದಲದಲ್ಲಿ ಬಿದ್ದನು. ಅಷ್ಟರಲ್ಲಿ ವರುಣನು ಏನೋ ಜ್ಞಾಪಿಸಿಕೊಂಡು ನುಡಿದನೇನಂದರೆ:-“ನಾವು ಇಲ್ಲಿಗೆ ಬಂದದ್ದು ಯೋಗ್ಯವಾಯಿತು; ಯಾಕಂದರೆ ಇನ್ನೊಂದು ಕ್ಷಣ ಇಲ್ಲಿ ಕುಳಿತುಕೊಂಡರೆ, ಬೆಳಗಾವಿಯಿಂದ ಸವದತ್ತಿಗೆ ಹೋಗುವ ಮೋಟಾರ ಬಂಡಿಯು ಬರುವದು. ಅದರಲ್ಲಿ ಕುಳಿತುಕೊಂಡು ಹೋದರೆ, ನಮಗೆ ದಾರಿಯಲ್ಲಿ ಉತ್ತಮೋತ್ತಮ ಸ್ಥಳಗಳು ನೋಡಲಿಕ್ಕೆ ಸಿಗುವವು.”

ವರುಣನ ಈ ಮಾತು ಕೇಳಿ ಬ್ರಹ್ಮನು ಸುಮ್ಮನಾದನು. ಅಷ್ಟರಲ್ಲಿ ಮೋಟಾರಿನ ಕಿರ್ರೆಂಬ ಕರ್ಕಶಧ್ವನಿಯು ಕೇಳಬರತೊಡಗಿತು. ಆಗ ವರುಣನು ಎಲ್ಲರಿಗೂ ತಮ್ಮ ತಮ್ಮ ಸಾಮಾನುಗಳನ್ನು

ಕ್ಕೆಯಲ್ಲಿ ತಕ್ಕೊಳ್ಳ ಹೇಳಲು, ಎಲ್ಲರೂ ಅದರಂತೆ ಮಾಡಿದರು. ಮೋಟಾರವೂ ಬಂತು. ಬಳಿಕ ಅವರೆಲ್ಲರೂ ಅದರಲ್ಲಿ ಹತ್ತಿ ಕುಳಿತುಕೊಳ್ಳಲು, ಆ ತೈಲಾಹಾರದ ಬಂಡಿಯು ವೇಗದಿಂದ ಸಾಗಿತು. ಕೆಲವು ವೇಳೆಯ ವರೆಗೆ ಅದು ಸಾಗಲು, ಮುಳ್ಳುಗಳ್ಳಿಯಿಂದ ಪರಿವೇಷ್ಟಿತವಾದದ್ದೊಂದು ಹಳ್ಳಿಯು ಹತ್ತಿತು. ಕೂಡಲೆ ವರುಣನು ಮೋಟರ ಡ್ರಾಯವ್ಹರನಿಗೆ ನಿಲ್ಲಿಸೆಂದು ಸನ್ನೆಯನ್ನು ಮಾಡಿದನು ಮೋಟಾರಬಂಡಿಯ ವೇಗವು ಮಂದಮಂದವಾಗುತ್ತ ಅದು ಆ ಹಳ್ಳಿಯ ಬಳಿಯಲ್ಲಿ ನಿಂತುಕೊಂಡಿತು ಕೂಡಲೆ ವರುಣನು ಕೆಳಗಿಳಿದು ಬ್ರಹ್ಮಾದಿಗಳಿಗೆ ಇಳಿಯಲಿಕ್ಕೆ ತಿಳಿಸಿದನು. ಆಗ ಮಧ್ಯಾಹ್ನವಾದದ್ದರಿಂದ ಹೊಟ್ಟೆ ಹಸಿದು ಸಂಕಟಪಡುತ್ತಿದ್ದ ಬ್ರಹ್ಮನು ಸ್ವಲ್ಪ ತ್ರಾಸಗೊಂಡು:—“ಈ ಅಡವಿಯಲ್ಲಿ ಇಳಿದು ಏನು ಮಾಡುತ್ತೀಯಪ್ಪಾ? ಈಗ ಹೊಟ್ಟೆಯಲ್ಲಿ ಕಾಗೆಗಳಾಡುತ್ತವೆ” ಎಂದು ನುಡಿದನು. ಮಾತಿನಲ್ಲಿ ಹೆಚ್ಚು ವೇಳೆ ಕಳೆಯಗೊಡಲಿಕ್ಕೆ ಅವಕಾಶವಿಲ್ಲದ್ದರಿಂದ ಡ್ರಾಯವ್ಹರನು ಅವಸರಪಡಿಸಿ ಅವರನ್ನು ಇಳಿಸಿಬಿಟ್ಟನು. ಬ್ರಹ್ಮನು ಹಿಟಗುಟ್ಟುತ್ತ ಇಳಿದು, ಹಿಂದು ಮರದ ನೆರಳಿಗೆ ‘ಉಶ್’ ಎಂದು ಕುಳಿತುಬಿಟ್ಟನು.

ಬಳಿಕ ವರುಣನು ಎದುರಿಗಿರುವ ಹಳ್ಳಿಯ ಕಡೆಗೆ ಬೆರಳು ಮಾಡಿ:—ಅಜ್ಜಾ, ಇದೊಂದು ಪವಿತ್ರವಾದ ಕ್ಷೇತ್ರವು ಇದಕ್ಕೆ ಬಡ್ಲಿಯೆಂದು ಕರೆಯುವರು ಇಲ್ಲಿ ಶ್ರೀಚಿದಂಬರ ಮಹಾಸ್ವಾಮಿಯವರ ಮಕ್ಕಳಾದ ಶಂಕರದೀಕ್ಷಿತರು ವಾಸಿಸುತ್ತಿದ್ದರು. ಅವರ ವಂಶಜರು ಇಲ್ಲಿರುತ್ತಾರೆ; ಇಲ್ಲಿ ಶ್ರೀಮಾರ್ತಾಂಡೇಶ್ವರನ ಗುಡಿಯೂ, ಶ್ರೀಚಿದಂಬರದೀಕ್ಷಿತರ ಜ್ಯೇಷ್ಠಪತ್ನಿಯಾದ ಶ್ರೀ ಸರಸ್ವತೆಮ್ಮನವರ ಗುಡಿಯೂ ಇರುವವು. ಈ ಪವಿತ್ರ ಸ್ಥಳಗಳನ್ನು ನೋಡಿಕೊಂಡು ಹೋಗುವಾ ನಡೆಯಿರಿ, ಎಂದು ನುಡಿದನು. ವರುಣನ ಈ ಮಾತುಗಳನ್ನು, ಕೇಳಿ ಬ್ರಹ್ಮಾದಿಗಳಿಗೆ ಆನಂದವಾಯಿತು. ಅವರು ಮೆಲ್ಲಮೆಲ್ಲನೆ ತಮ್ಮ ತಮ್ಮ ಗಂಟುಗಳನ್ನು ಹೊತ್ತುಕೊಂಡು, ಶ್ರೀಮಾರ್ತಾಂಡೇಶ್ವರನ ದೇವಾಲಯಕ್ಕೆ ನಡೆದರು ಬಳಿಕ ಅಲ್ಲಿ ತಮ್ಮ ಅರಿವೆ-ಅಂಚಡಿಗಳನ್ನಿಟ್ಟು, ಮಲಾಪಹಾರಿಯಲ್ಲಿ ಸ್ನಾನ ಮಾಡಿ, ಶ್ರೀಸರಸ್ವತೆಮ್ಮನವರ ಹಾಗು ಶ್ರೀ ಮಾರ್ತಾಂಡೇಶ್ವರನ ಗುಡಿಗಳಿಗೆ ಹೋಗಿ ವಿಧ್ಯುಕ್ತವಾಗಿ ಪೂಜೆಯನ್ನು ಮಾಡಿದರು. ಅನಂತರ ಶ್ರೀ

ಚಿದಂಬರದೀಕ್ಷಿತರ ವಂಶಜರಿಂದ ಆಮಂತ್ರಿತರಾಗಿ, ಚಿದಂಬರಪ್ರಸಾದವನ್ನು ಆಕಂಠವಾಗಿ ಸೇವಿಸಿ ತೃಪ್ತರಾದರು. ಕದಳಿ, ಪೇರಲ, ಇಕ್ಷು ಮೊದಲಾದ ವನಗಳಿಂದ ಒಪ್ಪುವ ಆ ಗ್ರಾಮವನ್ನು ನೋಡಿ, ಸಂತೋಷ ಹೊಂದಿದವರಾದ ಬ್ರಹ್ಮಾದಿಗಳು ಬಿಸಿಲನ್ನಿಳಿಸಿಕೊಂಡು ಸಮೀಪದಲ್ಲಿರುವ ಗುರ್ಲಹೊಸೂರಿಗೆ ನಡೆದರು.

---

## ಗುರ್ಲಹೊಸೂರ.

ಬೆಟ್ಟಲಿಯ ಮುಳ್ಳುಗಳ್ಳಿಯ ದಾರಿಯನ್ನು ಕ್ರಮಿಸಿ, ಶೈನದಾರಿಗೆ ಬರಲು, ಗುರ್ಲಹೊಸೂರಲ್ಲಿಯ ಶ್ರೀ ಚಿದಂಬರೇಶ್ವರನ ದೇವಾಲಯದ ಶಿಖರವು ಕಂಗೊಳಿಸಿತು. ಬ್ರಹ್ಮನು ಮೊದಲು ಭಕ್ತಿಯಿಂದ ವಂದಿಸಲು ಎಲ್ಲರೂ ನಮಸ್ಕರಿಸಿದರು. ಬಳಿಕ ಅವರು ಚಿದಂಬರೇಶ್ವರನ ಅವತಾರವಾಗಿ ಎಷ್ಟು ವರ್ಷಗಳಾದವು? ಎಂಬ ವಿಷಯದಲ್ಲಿ ಮಾತಾಡುತ್ತ ಮಲಪ್ರಭೆಯ ಪೂಲನ್ನು ದಾಟಿ ಗುರ್ಲಹೊಸೂರಿಗೆ ಬಂದರು ಮೊದಲು ಅವರು ಧೂಲಿದರುಶನಕ್ಕೆಂದು ದೇವಸ್ಥಾನಕ್ಕೆ ಬಂದು ಶ್ರೀಚಿದಂಬರನಿಗೆ ಭಕ್ತಿಯಿಂದ ಪೊಡಮೊಟ್ಟರು. ಚಿದಂಬರನ ಭವ್ಯವಾದ ಗುಡಿಯನ್ನೂ, ಗುಡಿಯ ಬಲಪಕ್ಕದಲ್ಲಿರುವ ಶ್ರೀಬಾಪೂದೀಕ್ಷಿತರ ಸಮಾಧಿ ಹಾಗು ಮೂರ್ತಿಗಳನ್ನೂ ನೋಡಿ ಸಂತೋಷಪಟ್ಟರು. ಶ್ರೀಬಾಪೂದೀಕ್ಷಿತರವರ ಸಮಾಧಿಯ ಬಳಿಯಲ್ಲಿ ಇನ್ನೊಂದು ಸಮಾಧಿಯು ನಿರ್ಮಿಸಲ್ಪಟ್ಟದ್ದು, ಅದು ಬೆಳ್ಳಿಯ ಮುಖ, ಬೆಳ್ಳಿಯ ಪಾದುಕೆ, ತರತರದ ಪುಷ್ಪಹಾರ, ಜರತಾರಿಯ ವಸ್ತ್ರ ಮೊದಲಾದವುಗಳಿಂದ ಝುಗಝುಗಿಸುತ್ತಿತ್ತು. ಆಗ ಬ್ರಹ್ಮನು ಇದೇನೆಂದು ಕೇಳಲು, ವರುಣನು ಮುಂದೆ ಬಂದು:—ಅಜ್ಜಾ, ಇದು ಶ್ರೀಕೃಷ್ಣಲ್ಯಾತ್ರಮ ಸ್ವಾಮಿಗಳವರ ಸಮಾಧಿಯು ಈ ಸ್ವಾಮಿಗಳವರು ಚಿದಂಬರನನ್ನು ಆರಾಧಿಸುತ್ತ ಈ ಗುಡಿಯಲ್ಲಿಯೇ ಇದ್ದು ಸಮಾಧಿಸ್ಥರಾದ ಬಳಿಕಾದರೂ ಚಿದಂಬರನ ಭಕ್ತಿಯ ಮಹಿಮೆಯನ್ನು ಪ್ರಕಟಿಸುವದಕ್ಕಾಗಿ ಸಮಾಧಿರೂಪದಿಂದ ಇಲ್ಲಿಯೇ ಇರುತ್ತಾರೆ. ಎಂದು ಹೇಳಿದನು. ಬ್ರಹ್ಮಾದಿಗಳು ಸಂತೋಷಪಟ್ಟು ಸಾಯಂಕಾಲದ ಆಹ್ನಿಕಕ್ಕೆ ಮಲಪ್ರಭೆಗೆ ಹೋಗಬೇಕೆಂದು ಗುಡಿಯ

ಹೊರಗೆ ಬಂದರು. ಗುಡಿಯ ಪಶ್ಚಿಮಭಾಗದಲ್ಲಿರುವ ಮನೆಗಳೆಲ್ಲ ಬಿದ್ದು, ಅಲ್ಲಿ ಮುಳ್ಳುಗಳ್ಳಿಯು ಬೆಳೆದುಹೋಗಿತ್ತು. ಅದನ್ನು ಕಂಡು ಬ್ರಹ್ಮನು:—ಹಾಯ್! ಹಾಯ್!! ಕಾಲಗತಿಯು ವಿಚಿತ್ರವು! ಈ ಮುಳ್ಳುಗಳ್ಳಿಯು ಬೆಳೆದಲ್ಲಿ ಶ್ರೀ ಚಿದಂಬರನ ಮನೆಯಿತ್ತು. ಚಿದಂಬರನು ಮನುಷ್ಯಾವತಾರದಿಂದ ಇಲ್ಲಿ ಅನಂತಲೀಲೆಗಳನ್ನು ಪ್ರಕಟಿಸುವಾಗ ನಾನು ಇಲ್ಲಿಗೆ ಆಗಾಗ್ಗೆ ಬರುತ್ತಿದ್ದೆನು. ಆ ಪವಿತ್ರಸ್ಥಳದ ಗತಿಯು ಏನಾಗಿರುವದಲ್ಲ! ಎಂದು ನುಡಿದು, ಆ ಸ್ಥಳಕ್ಕೆ ನಮಸ್ಕರಿಸಿದನು. ಬ್ರಹ್ಮನ ಈ ಉದ್ಗಾರದಿಂದ ದೇವೇಂದ್ರಾದಿಗಳಿಗೂ ಪೂರ್ವಸ್ಮರಣೆಯಾಗಿ ಕಿಂಚಿತ್ ಅಸಮಾಧಾನವಾಯಿತು. ಅವರು ಆ ಸ್ಥಳಕ್ಕೆ ವಂದಿಸಿ ಹಾದಿಯಲ್ಲಿ ಹತ್ತುವ ಹಾಳು ಮನೆಗಳನ್ನು ದಾಟುತ್ತ ನದಿಯ ಸಮೀಪಕ್ಕೆ ಬಂದರು. ಅಲ್ಲಿ ಚಿದಂಬರನ ಹಸ್ತದಿಂದ ಪವಿತ್ರ ಭಸ್ಮಸ್ವರೂಪವನ್ನು ಧರಿಸಿ ಹಿಪ್ಪುತ್ತಿದ್ದ ಹಿಂದು ಗೋಡೆಯಲ್ಲಿಯ ಭಸ್ಮವನ್ನು ತಕ್ಕೊಂಡು ನದಿಗೆ ಹೋಗಿ ಸಾಯಾಹ್ನಿಕಗಳನ್ನು ತೀರಿಸಿಕೊಂಡು ಮರಳಿ ಗುಡಿಗೆ ಬಂದರು. ಬಳಿಕ ಅವರು ಆ ಮಹಾಸ್ಥಾನದಲ್ಲಿ ೩ ದಿನಗಳ ವರೆಗಿದ್ದು ಕೈಮುಟ್ಟಿ ಶ್ರೀ ಚಿದಂಬರೇಶ್ವರನನ್ನು ಅರ್ಚಿಸಿ, ಪುನಃ ಮೋಟಾರಿನಲ್ಲಿ ಕುಳಿತು ಯಲ್ಲಮ್ಮನ ಗುಡ್ಡಕ್ಕೆ ನಡೆದರು. ಹಾದಿಯಲ್ಲಿ ಅವರಿಗೆ ಸವದತ್ತಿಯೆಂಬ ತಾಲೂಕಿನ ಸ್ಥಳವು ಹತ್ತಿತು. ಅಲ್ಲಿ ದರ್ಶನೀಯ ಸ್ಥಳಗಳಿಲ್ಲದ್ದರಿಂದ ಅವರು ಅಲ್ಲಿ ನಿಲ್ಲದೆ, ನೆಟ್ಟಗೆ ಗುಡ್ಡದ ದಾರಿಯನ್ನು ಹಿಡಿದರು.

---

## ಯಲ್ಲಮ್ಮನ ಗುಡ್ಡ.

ಸವದತ್ತಿಯನ್ನು ದಾಟಿದ ಬಳಿಕ ಗುಡ್ಡದ ಏರನ್ನು ಹತ್ತಬೇಕಾದರೆ ಮೋಟಾರ ಬಂಡಿಯ ವೇಗವು ಮಂದವಾಯಿತು. ಆದರೂ ರೊಕ್ಕದ ಆಶೆಗಾಗಿ ಮೋಟಾರಕಾರನು ಕಷ್ಟಬಟ್ಟು ಹಿಮ್ಮೆ ಗುಡ್ಡದ ಇಳುಕಲಿಗೆ ಜನರನ್ನು ಹಿಯ್ದನು ನಮ್ಮ ಬ್ರಹ್ಮಾದಿಗಳು ಗುಡ್ಡಕ್ಕೆ ಹೋದ ಸಮಯದಲ್ಲಿ ಯಾವದೋ ಹಿಂದು ಪೌರ್ಣಿಮೆಯಿತ್ತಾದ್ದರಿಂದ ಜಾತ್ರೆಯು ಕೂಡಿತ್ತು. ದಾರಿಯಲ್ಲಿ ಚಕ್ಕಡಿಗಳು ಸಾ-

ಕೊಂಡು ನಿಂತಿದ್ದವು. ಮೋಟಾರಬಂಡಿಗೆ ಮುಂದೆ ಹೋಗಲಿಕ್ಕೆ ಮಾರ್ಗವಿಲ್ಲದಾಯಿತು. ಆಗ ಬ್ರಹ್ಮಾದಿಗಳು ಮೋಟಾರಕಾರನಿಗೆ ಕೊಡುವದನ್ನು, ಕೊಟ್ಟು ದೇವಿಯ ದರುಶನಕ್ಕೆ ಪಾದಚಾರಿಗಳಾಗಿ ನಡೆದರು. ಒಂದು ಕೈಗಲ್ಲಿಳತೆಯಷ್ಟು ದಾರಿಯನ್ನು ಕ್ರಮಿಸುತ್ತಿರಲು, ಕಪ್ಪುಬಣ್ಣದ ಅಂಗಿಯನ್ನು ಹಾಕಿದ ಒಬ್ಬ ಶಿಪಾಯಿಯು:—"ಏ, ಯಾರವರು? ತಲೆಪಟ್ಟಿಯನ್ನು ಕೊಟ್ಟು ಮುಂದಕ್ಕೆ ಹೆಜ್ಜೆಯನ್ನಿಡಿರಿ." ಎಂದು ಗದ್ದರಿಸಿದನು ಬ್ರಹ್ಮನು ಗಾಬರಿಯಾಗಿ ನಿಂತನು. ನಾರಾಯಣ ದೇವೇಂದ್ರಾದಿಗಳೂ ಕಕ್ಕಾವಿಕ್ಕಿಯಾಗಿ ನಿಂತುಕೊಂಡರು ವರುಣನು ಮಾತ್ರ ನಕ್ಕು, ಗುಡ್ಡದ ಒಂದು ಓಣಿಯಲ್ಲಿರುವ ಒಂದು ಆಫೀಸಿಗೆ ಹೋಗಿ, ತಲೆಗೊಂದಾಣೆಯಂತೆ ಕೊಟ್ಟು ಪಾವತಿ ತೆಗೆದುಕೊಂಡು ಬಂದು, ಬ್ರಹ್ಮನಿಗೆ ತೋರಿಸಿದನು. ಆತನು ಇದೇನು ವಿಚಿತ್ರವೆಂದು ಕೇಳಲು, ವರುಣನು ತಲೆಪಟ್ಟಿಯ ಎಲ್ಲ ಇತಿಹಾಸವನ್ನೂ ಹೇಳಿದನು. ಅದನ್ನು ಕೇಳಿ ದೇವೇಂದ್ರ-ನಾರಾಯಣಾದಿಗಳು ಆಶ್ಚರ್ಯದಿಂದ:—"ಮನುಷ್ಯರಿಗೆ ಸುಂಕ ತೆಗೆದುಕೊಳ್ಳುವ ಎಂಥ ಅಘಳತೆಯಿದು? ಇದು ಲೋಕ ವಿಲಕ್ಷಣವೇ ಸರಿ! ಕಲಿಯುಗದಲ್ಲಿ ರಾಜರು ದ್ರವ್ಯದಾಶೆಗೆ ಬೀಳುವರೆಂದು ಶ್ರೀ ವೇದವ್ಯಾಸರು ಹೇಳುತ್ತಿದ್ದುದು ನಿಜವಾಯಿತು, ಉಪಾಯವಿಲ್ಲ; ಮುಂದೆ ಹೋಗುವಾ ನಡೆಯಿರಿ" ಎಂದು ಅಂದರು

ಅನಂತರ ಅವರೆಲ್ಲರೂ ಗುಡ್ಡದ ವಿಸ್ತಾರವನ್ನು ನೋಡಿ ಕೌತುಕಪಡುತ್ತ, ಗುಡಿಯ ಕಡೆಗೆ ಸಾಗಲು. ಹಾದಿಯಲ್ಲಿ ಬಗೆ ಬಗೆಯ ಚಮತ್ಕಾರಗಳು ನಡೆದಿದ್ದವು. ಪುರುಷರು ಸೀರೆ ಕುಪ್ಪುಸಗಳಿಂದ ಅಲಂಕೃತರಾಗಿ, ಕೊರಳಲ್ಲಿ ಜವಡಿಯ ಸರಗಳನ್ನು ಹಾಕಿಕೊಂಡು ತಲೆಯ ಮೇಲೆ ತುಂಬಿದ ಬಿಂದಿಗೆಯನ್ನಿರಿಸಿ, ಕೈ ಬಿಟ್ಟು ಕುಣಿಯುತ್ತಿದ್ದರು ಅವರ ಸುತ್ತು ವರೆದು ಸ್ತ್ರೀವೇಷದ ಎಷ್ಟೋ ಪುರುಷರು ಚವಟಿಕೆಗಳನ್ನು ಬಾರಿಸುತ್ತಿದ್ದರು. ಹಲವರು 'ಉಘೋ ಉಘೋ' ಎಂದು ಗರ್ಜಿಸುತ್ತಿದ್ದರು. ಬ್ರಹ್ಮನು ಒಂದು ಕ್ಷಣ ಅಲ್ಲಿ ನಿಂತು ನೋಡಿ, ಇವರು ಹೀಗೇಕೆ ಮಾಡುವರೆಂದು ಕೇಳಿದನು. ಅದಕ್ಕೆ ವರುಣನು ನಕ್ಕು:—"ಅಜ್ಜಾ ಬ್ರಹ್ಮದೇವನೇ, ನಿನಗೆ ಸತ್ಯಲೋಕದ ಹೊರತು ಎರಡನೆಯ ಲೋಕದ ವಾರ್ತೆಯೇ ಗೊತ್ತಿಲ್ಲ ನೀನು ಇದುವರೆಗೂ ಭೂಲೋಕದಲ್ಲಿ ಬಂಡೆಗಲ್ಲಾಗಿ ಅವತರಿ

ಸಿಡೆಯೋ ಏನಃ ಭಕ್ತರನ್ನು ಮಾಡಿಕೊಳ್ಳಲಿಲ್ಲ. ದೇವಭಕ್ತರ ಆಟಗಳು ಹ್ಯಾಗಿರುತ್ತವೆಂಬದು ನಿನಗೇನು ಗೊತ್ತು? ಶ್ರೀ ಯಲ್ಲಮ್ಮನು ಈ ಪ್ರಾಂತದಲ್ಲಿ ಮುಖ್ಯ ದೇವತೆಯಾಗಿರುವಳು ಈಕೆಯ ಭಕ್ತರು ಈ ನಿಟ್ಟಿನಲ್ಲಿ ಬಹಳ; ಈಕೆಯ ಭಕ್ತರು ಸಾರೂಪ್ಯತೆಯನ್ನು ಹೊಂದಿದ ಭಾವವನ್ನು ವ್ಯಕ್ತಗೊಳಿಸುವದಕ್ಕೋಸ್ಕರ ಯಲ್ಲಮ್ಮನ ರೂಪವಾದ ಸ್ತ್ರೀವೇಷವನ್ನು ಧರಿಸುವರು. ಇದಲ್ಲದೆ ದೇಹಾಭಿಮಾನವನ್ನು ಬಿಡುವದಕ್ಕೋಸ್ಕರ ಅವರು ಈ ರೀತಿ ವೇಷಧರಿಸುವದು ಯೋಗ್ಯವೇ ಆಗಿದೆ ವದು, ಎಂದು ಹೇಳುತ್ತಿರಲು, ಬಿಸಿಲು ನೆತ್ತಿಯ ಮೇಲೆ ಬಂದಿತು ಆಗ ಅವರು ಗಡಿಬಿಡಿಯಿಂದ ಗುಡಿಗೆ ಹೋದರು. ಗುಡಿಯೊಳಕ್ಕೆ ಇರುವೆ ಸಹ ಸುಳಿಯದಷ್ಟು ದಟ್ಟಣೆಯಿತ್ತು. ಬ್ರಹ್ಮನು ನನ್ನ ಕಡೆಯಿಂದಾಗದೆಂದು ಮಹಾದ್ವಾರದ ಮುಂದೆಯೇ ಕುಳಿತುಬಿಟ್ಟನು ಹರಿಯ ದವರಾದ ವರುಣ-ಇಂದ್ರ-ನಾರಾಯಣರು ಕಸುವಿನಿಂದ ಹೊಕ್ಕಿಸುಗ್ಗಿದನು. ದೇವಿಯ ದರುಶನ ಹೊಂದಿ ಪಾರಾಗಬೇಕಾದರೆ, ಅವರಿಗೂ ಸಾಕು ಸಾಕಾಗಿ ಹೋಯಿತು. ಮೂವರೂ ಬೆವತು ಹೋಗಿದ್ದರು. ಅವರು ಹೊರಗೆ ಬಂದು ಮೈಯೊರಿಸಿಕೊಂಡು ಬ್ರಹ್ಮನೊಡನೆ ಸ್ನಾನಕ್ಕಾಗಿ ನಡೆದರು.

'ಎಣ್ಣೆಗೊಂಡ' ಎಂಬ ಹೆಸರಿನದೊಂದು ಸಣ್ಣ ಕುಂಡವು ಎಲ್ಲ ತೀರ್ಥಗಳಲ್ಲಿ ಶ್ರೇಷ್ಠವಾದದ್ದು ತ್ರಿಕಾಲದಲ್ಲಾಗುವ ದೇವಿಯ ಪೂಜೆಗೆ ಈ ತೀರ್ಥದ ನೀರನ್ನೇ ಉಪಯೋಗಿಸಬೇಕಾಗುವದು. ಜಾತ್ರೆಯ ಜನರೆಲ್ಲರೂ ಈ ತೀರ್ಥದ ನೀರನ್ನೇ ಉಪಯೋಗಿಸುವರು ಸಮಸ್ತರಿಗೂ ಈ ತೀರ್ಥದ ನೀರು ಸಿಗಬೇಕೆಂದು ಆ ಕುಂಡದಿಂದ ನಾಲ್ಕಾರು ಮೊಳ ಅಂತರದ ಮೇಲೆ ಮತ್ತೊಂದು ಕುಂಡವನ್ನು ಕಟ್ಟಿ ಅದರಲ್ಲಿ ಎಣ್ಣೆಗೊಂಡದ ನೀರು ಬೀಳುವಂತೆ ಮಾಡಿರುತ್ತಾರೆ. ಎರಡನೆಯ ಕುಂಡವಾದರೂ ಸಾಧಾರಣವಿದ್ದು, ಜನರ ಗದ್ದಲಕ್ಕೆ ಅದರ ನೀರೂ ಕಲಕಾಗಿ ಹೋಗಿರುತ್ತವೆ ಬ್ರಹ್ಮನು ಆ ನೀರಲ್ಲಿ ಸ್ನಾನ ಮಾಡ ವದಕ್ಕೆ ತಿರಸ್ಕರಿಸಿದನು ಆಗ ವರುಣನು ಅವನಿಗೆ ಲೋಕವಾಡಿಕೆಯನ್ನು ತಿಳಿಸಿ ಹೇಳಿದನು. ಆಗ ಆ ಮುದಿಭರಮಪ್ಪನು ಸಂಗಡಿಗರೊಡನೆ ಗದ್ದಲದಲ್ಲಿ ಹ್ಯಾಗಾದರೂ ಸ್ನಾನ ಮಾಡಿ ಪಾರಾದನು. ಅಲ್ಲಿಯೇ ಸಮೀಪದಲ್ಲಿ ಪರಶುರಾಮದೇವರ ಗುಡಿಯಿದ್ದದರಿಂದ, ಅಲ್ಲಿ ಕ್ಷಣ ಹೊತ್ತು ವಿಶ್ರಾಂತಿಗೊಂಡರು. ಪರಶು

ರಾಮನ ಬಾಲರೂಪವು ಅವರಿಗೆ ಸಮಾಧಾನವನ್ನುಂಟು ಮಾಡಿತು. ಬಳಿಕ ಅವರು ಊಟಕ್ಕೆ ಹ್ಯಾಗೆ ಮಾಡಬೇಕೆಂದು ಯೋಚಿಸುತ್ತ ಪರಸೆಯೊಳಗೆ ನುಗ್ಗಿದರು. ಜಾತ್ರೆಯು ಸಾಲು ಮುಗಿದು ಜನರ ಚಕ್ಕಡಿಗಳು ಹತ್ತಿದವು. ಅಲ್ಲಿ ಹಲವು ಜಾತಿಯ ಜನರು ತಮ್ಮ ತಮ್ಮ ಚಕ್ಕಡಿಗಳ ಮರೆಯಲ್ಲಿ ಅಡಿಗೆಯನ್ನು ನಡೆಸಿದ್ದರು. ರಣಗುಟ್ಟುವ ಬಿಸಿಲು ಸುರಿಯುತ್ತಿದ್ದುದರಿಂದ, ವೃದ್ಧನಾದ ಬ್ರಹ್ಮನಿಗೆ ಕೆಟ್ಟ ಸಂಕಟವಾಗುತ್ತಿತ್ತು. ಅವನ ಕಾಲುಗಳು ದರದರ ಎಳೆಯತೊಡಗಿದ್ದವು; ಅಷ್ಟರಲ್ಲಿ ಒಬ್ಬ ಗೃಹಸ್ಥನು ಬಂದು:—ಸ್ವಾಮಿ, ಈ ದಿನ ನಮ್ಮಲ್ಲಿ ಅಮ್ಮನವರಿಗೆ ನೈವೇದ್ಯ ಮಾಡಿಸಿರುತ್ತದಾದ್ದರಿಂದ ತಾವು ನಾಲ್ವರೂ ನಮ್ಮಲ್ಲಿಯೇ ಭೋಜನಕ್ಕೆ ಬರಬೇಕು, ಎಂದು ಆಮಂತ್ರಣವ ಕೊಟ್ಟನು. ಆತನು ಇಷ್ಟು ನುಡಿಯುವದೊಂದೇ ತಡ; ಬ್ರಹ್ಮನು ಅವನ ಬಿಡಾರದ ಹತ್ತರ ಹೋಗಿ ಕುಳಿತೇಬಿಟ್ಟನು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಎಲೆಗಳು ಬಡಿಸಿಸಿದ್ಧವಾದವು. ಬ್ರಹ್ಮಾದಿಗಳು ಮಡಿಯ ಒಟ್ಟೆಗಳನ್ನುಟ್ಟುಕೊಂಡು ಊಟಕ್ಕೆ ಕುಳಿತರು. ಹಚ್ಚಾಗಿ ಸೀಯಾಗಿರುವ ಒಂದೊಂದು ಗೇಣುದ್ದನ್ನ ಕರಿಗಡುಬುಗಳನ್ನು ತಿನ್ನಬೇಕಾದರೆ, ಬ್ರಹ್ಮಾದಿಗಳಿಗೆ ನಟ್ಟ ಕಡಿದಷ್ಟು ಆಯಾಸವಾಯಿತು. ಆಗ ಬ್ರಹ್ಮನು ನಾಲಿಗೆಗೆ ಹೊಸ ರುಚಿ ಬರುವದಕ್ಕಾಗಿ ಎಲೆಯಲ್ಲಿ ಬಡಿಸಿದ ಕೋಸಂಬರಿಯನ್ನು ಬಾಯಿಸಿಕೊಂಡನು. ಅದರಲ್ಲಿಯ ಬಿಳಿಯ ಹೋಳುಗಳ ರುಚಿಯು ವಿಶೇಷವಾಗಿ ಹತ್ತಲು, ಆ ಪದಾರ್ಥದ ಹೆಸರು ತಿಳಿಯದೆ ಬ್ರಹ್ಮನು ಇವೇನೆಂದು ಕೇಳಿದನು. ಆಗ ವರುಣನು ನಕ್ಕು:—ನೀವೇ ಸೃಷ್ಟಿಸಿದ ಪದಾರ್ಥಗಳು ನಿಮಗೆ ಗೊತ್ತಿಲ್ಲವೆ? ಎನಲು, ಬ್ರಹ್ಮನು ಗೊಂದಲದಲ್ಲಿ ಬಿದ್ದು:—ಛೇ, ಇದನ್ನು ನಾನು ಸೃಷ್ಟಿಸಿಲ್ಲ; ನಾನು ಸೃಷ್ಟಿಸಬೇಕಾದರೆ, ಮೊದಲು ರುಚಿ ನೋಡಿಯೇ ಮಾಡುವೆನು, ಎನಲು, ವರುಣನು ನಸುನಗುತ್ತ:—"ಇವಕ್ಕೆ ನೀರುಳ್ಳಿ ಎನ್ನುವರು; ಇವನ್ನು ವಿಶ್ವಾಮಿತ್ರನು ಸೃಷ್ಟಿಸಿರುವನು" ಎಂದು ಹೇಳಲು, ಬ್ರಹ್ಮನು ತನಗಿಂತ ವಿಶ್ವಾಮಿತ್ರನೇ ಮೇಲಾದನೆಂದು ನುಡಿಯುತ್ತ ಮತ್ತಷ್ಟು ಕೋಸಂಬರಿಯನ್ನು ಹಾಕಿಸಿಕೊಂಡು ಆಕಂಠವಾಗಿ ಊಟ ಮಾಡಿದನು. ಬಳಿಕ ನಾಲ್ವರೂ ಎದ್ದು, ಮುಖಪ್ರಕ್ಷಾಲನಾದಿ ವಿಧಿಯನ್ನು ತೀರಿಸಿಕೊಂಡು ಹೊಟ್ಟೆ ಭಾರವಾದ್ದರಿಂದ, ಎಲ್ಲಿಯಾ

ದರೂ ನೆರಳು ನೋಡಿ ಅಡ್ಡಾಗಬೇಕೆಂದು ಹವಣಿಸಿದರು; ಆದರೆ ಆ ಪಾಷಾಣಮಯ ಪ್ರದೇಶದಲ್ಲಿ ವೃಕ್ಷಾದಿಗಳ ಕೊರತೆಯಿದ್ದದರಿಂದ, ಉಪಾಯಗಾಣದೆ ಹಾಗೆಯೇ ಗುಡ್ಡದಲ್ಲೆಲ್ಲ ಅಡ್ಡಾಡಿ ಜಮದಗ್ನಿಯ ಸ್ಥಾನ, ಪರಸಗಡದ ಹಾಳುಕಿಲ್ಲೆ ಮೊದಲಾದವುಗಳನ್ನು ನೋಡಿದರು ಅಷ್ಟರಲ್ಲಿ ಮೋಟಾರು ಬರುವ ಹೊತ್ತಾದ್ದರಿಂದ ತಿರುಗಿ ಮೋಟಾರ ನಿಲ್ಲುವ ಸ್ಥಳಕ್ಕೆ ಬಂದರು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಮೋಟಾರು ಬರಲು ಅದನ್ನೇರಿ ರಾಮದುರ್ಗದ ಕಡೆಗ ನಡೆದರು.

---

# ರಾಮದುರ್ಗ.

ದಕ್ಷಿಣ ಮಹಾರಾಷ್ಟ್ರದ ಸಂಸ್ಥಾನಗಳಲ್ಲಿ ಇದೊಂದು ಸಣ್ಣ ಸಂಸ್ಥಾನವಾದ್ದರಿಂದ ನಮ್ಮ ಬ್ರಹ್ಮಾದಿಗಳಿಗೆ ಇಲ್ಲಿ ವಿಶೇಷ ದರ್ಶನೀಯಸ್ಥಳಗಳು ಕಂಡು ಬರಲಿಲ್ಲ ಶಿವಾಜಿ ಮಹಾರಾಜರಿಂದ ಕಟ್ಟಿಸಲ್ಪಟ್ಟ ಒಂದು ಕೋಟೆಯು ಮಾತ್ರ ಅವರಿಗೆ ಮನೋಹರವಾಗಿ ತೋರಿತು. ಊರ ಮುಂದೆಯೇ ಮಲಪ್ರಭೆಯು ಹರಿದದ್ದರಿಂದ ಅಲ್ಲಿ ಸಾಯಂಕಾಲದ ಆಹ್ನಿಕವನ್ನು ತೀರಿಸಿಕೊಂಡು, ಆ ಊರಲ್ಲಿ ಪ್ರಶಸ್ತವಾಗಿರುವ ಲಕ್ಷ್ಮೀನಾರಾಯಣನ ಗುಡಿಯಲ್ಲಿ ಮಲಗಿಕೊಂಡರು ಬಳಿಕ ಮರುದಿನ ಪ್ರಾತಃಕಾಲಕ್ಕೆದ್ದು, ನದಿಯಲ್ಲಿ ಸ್ನಾನ ಮಾಡಿ ಸ್ವಲ್ಪ ಉಪಾಹಾರ ಮಾಡಿದರು ಸಾಯಂಕಾಲಕ್ಕೆ ಮೋಟಾರಬಂಡಿಯು ಬರತಕ್ಕದ್ದಿರುವದರಿಂದ, ಅಲ್ಲಿಯವರೆಗೆ ಏನು ಮಾಡಬೇಕೆಂದು ಯೋಚಿಸಿದರು. ವರುಣನು ಅವರನ್ನು ಸಮೀಪದಲ್ಲಿರುವ ಶಬರೀವನ-ಗೊಣ್ಣಾಗರಗಳ ಕಡೆಗೆ ಕರಕೊಂಡು ನಡೆದನು.

ಶ್ರೀರಾಮನು ವನವಾಸಕ್ಕೆ ಬಂದಾಗ ಯಾವ ಶಬರಿಯು ನಿಸ್ಸೀಮಭಕ್ತಿಯಿಂದ ಬೋರೇಹಣ್ಣುಗಳನ್ನು ತಾನು ತಿಂದು ರಾಮನಿಗ ಕೊಡುತ್ತಿದ್ದಳೋ, ಆ ಶಬರಿಯ ಗುಡಿಯು ಇರುವ ವನಕ್ಕೆ ಶಬರೀಬನವೆನ್ನುವರು. ಈ ಬನದಲ್ಲಿಯೇ ರಾಮದೇವರು ಇರುತ್ತಿದ್ದರಂತೆ. ಈ ಬನಕ್ಕೆ ಸಮೀಪವಾಗಿ ಗೊಣ್ಣಾಗರವೆಂಬ ಪ್ರದೇಶವಿರುವದು. ಇಲ್ಲಿ ವಿಶಾಲವಾದ ಬೈಲೂ, ಮಲಪ್ರಭೆಯ ಪ್ರಶಸ್ತವಾದ ಪಾತ್ರವೂ ಇರುವದರಿಂದ ನೂರಾರು ವರುಷಗಳಾಚೆಯಲ್ಲಿ

ಅವತರಿಸಿದ ಶ್ರೀಚಿದಂಬರ ಮಹಾಸ್ವಾಮಿಯವರು ಈ ಸ್ಥಳವನ್ನು ಯಜ್ಞಭೂಮಿಯನ್ನಾಗ ಮಾಡಿಕೊಂಡಿದ್ದರು. ಅವರು ಮಾಡಿದ ಯಜ್ಞದಲ್ಲಿ ಸೋಮಪಾನವನ್ನು ಮಾಡಲಿಕ್ಕೆ ದೇವತೆಗಳು ಬಂದಿದ್ದರು ಆ ಸ್ಥಳವನ್ನು ನೋಡಿ ಬ್ರಹ್ಮಾದಿ ದೇವತೆಗಳಿಗೆ ದೀಕ್ಷಿತರ ಯಜ್ಞದ ಸಂಗತಿಯು ನೆನಪಾಯಿತು. ಅವರು ಆ ಪುಣ್ಯಪ್ರದೇಶಕ್ಕೆ ನಮಸ್ಕರಿಸಿ ಅಂದು ಏಕಾದಶಿ ತಿಥಿಯಾದ್ದರಿಂದ ಶಬರೀವನದಲ್ಲಿ ದೊರೆತ ಕಾಡು ಹಣ್ಣುಗಳನ್ನು ತಿಂದು, ಸಂಜೆಗೆ ರಾಮದುರ್ಗಕ್ಕೆ ಬಂದರು. ಬಳಿಕ ಅವರು ತಡ ಮಾಡಿ ಬಂದ ಮೋಟಾರಿನಲ್ಲಿ ಕುಳಿತು ಬನಶಂಕರಿಯ ಕಡೆಗೆ ತೆರಳಿದರು.

## ಬನಶಂಕರೀ ಕ್ಷೇತ್ರ.

ಬನಶಂಕರೀಕ್ಷೇತ್ರವು ಬ್ರಹ್ಮಾದಿಗಳಿಗೆ ಪೂರ್ಣಪರಿಚಯದ ಸ್ಥಳವಾಗಿತ್ತು. ಯಾಕಂದರೆ ಆ ದೇವಿಯನ್ನು ಅಲ್ಲಿ ಅವರೇ ಕೈಮುಟ್ಟಿ ಸ್ಥಾಪಿಸಿದ್ದರು ಈಗ ಅವರು ಅಲ್ಲಿಗೆ ಬರಲು ಮೊದಲಿದ್ದ ಬನವೆಲ್ಲ ನಾಮಶೇಷವಾಗಿ ಏನೋ ಒಂದು ತರವಾಗಿ ಕಾಣಿಸಿತು. ಅವರು ದೇವಿಗೆ ನಮಸ್ಕರಿಸಿ, ತೈಲತೀರ್ಥದಲ್ಲಿ ಸ್ನಾನ ಮಾಡಿ, ದೇವಿಯನ್ನು ವಿಧ್ಯುಕ್ತವಾಗಿ ಪೂಜಿಸಿದರು. ಆ ದಿನ ದ್ವಾದಶಿಯಾದ್ದರಿಂದ ನಾರಾಯಣನು ಪಾರಣೆಯನ್ನು ತೀರಿಸುವದಕ್ಕೆ ಅವಸರ ಮಾಡತೊಡಗಿದನು; ಆದರೆ ಅವರನ್ನು ಊಟಕ್ಕೆ ಯಾರು ಕರೆಯಬೇಕು? ಗುಡಿಯಲ್ಲಿದ್ದ ಪೂಜಾರಿಯು ತೊದಲಿಸುತ್ತ ಪಾತ್ರೆಗಳನ್ನು ಕೊಡುವೆನು, ಅಡಿಗೆ ಮಾಡಿಕೊಳ್ಳಿರಿ, ಎಂದನು. ಬ್ರಹ್ಮಾದಿಗಳಲ್ಲಿ ಅಡಿಗೆ ಮಾಡುವ ರೂಢಿಯು ವರುಣನ ಹೊರತು ಯಾರಿಗೂ ಇದ್ದಿಲ್ಲ; ಆದ್ದರಿಂದ ವರುಣನೇ ಆ ಕೆಲಸವನ್ನು ಕೈಕೊಂಡನು; ಆದರೆ ಬೇಳೆ, ಅಕ್ಕಿ ಮೊದಲಾದ ಪದಾರ್ಥಗಳಿಲ್ಲದ್ದರಿಂದ ಪೂಜಾರಿಗೇ ಹೇಳಿಕೊಂಡು ಇಸಕೊಂಡರು ಹೊಟ್ಟೆಯು ಮಹಾ ಪಾಪಿಯು; ಅದು ಎಂಥವರನ್ನಾದರೂ ಬಿಡದು. ತೈಲತೀರ್ಥದ ವಿಶಾಲವಾದ ಪೌಳಿಗಳಲ್ಲಿ ವರುಣನು ಅಡಿಗೆಯನ್ನು ಮಾಡಿದನು. ಸಮೀಪದಲ್ಲಿರುವ ಕದಳೀವನದಲ್ಲಿಂದ ಇಂದ್ರನು ಕೆಲವು ಎಲೆಗಳನ್ನು ಕೊಯ್ದು

ತಂದನು. ತೋಟಿಗನು ಎಲೆಗಳನ್ನು ಕೊಯ್ದುದ್ದಕ್ಕೆ ಇಂದ್ರನೊಡನೆ ಜಗಳಕ್ಕೆ ಬಂದನು. ಅವನನ್ನು ಸಮಾಧಾನಪಡಿಸಬೇಕಾದರೆ ನಾರಾಯಣನಿಗೆ ಸಾಕುಸಾಕಾಗಿ ಹೋಯಿತು. ಈ ಗೊಂದಲದಲ್ಲಿ ಪಾರಣೆಯು ಹೊತ್ತು ಎಲ್ಲಿ ತಪ್ಪುವದೋ ಎಂದು ನಾರಾಯಣನು ಯೋಚಿಸುತ್ತಿದ್ದನು. ಅಂತೂ ಅವರು ಹ್ಯಾಗಾದರೂ ಮಾಡಿ ಹಿಮ್ಮೆ ಹೊಟ್ಟೆಗೆ ಆಹಾರವನ್ನು ಹಾಕಿದರು ಬಳಿಕ ಅವರು ಬನಶಂಕರೀಕ್ಷೇತ್ರದ ಪ್ರಭಾವಳಿಯಲ್ಲಿರುವ ಮಹಾಕೂಟಕ್ಕೆ ಹೋಗಬೇಕೆಂದು ಹೊರಟರು ಹಾದಿಯಲ್ಲಿ ಅವರಿಗೆ ಶಿವಯೋಗಮಂದಿರವೆಂಬ ಒಂದು ಮಠವು ಹತ್ತಿತು. ಅದರ ವೃತ್ತಾಂತವನ್ನು ವರುಣನು ಹೇಳಿದನು ಬಳಿಕ ಅವರು ಹಾಗೆಯೇ ಮುಂದಕ್ಕೆ ಸಾಗಲು, ಮಹಾಕೂಟಕ್ಷೇತ್ರವು ಕಂಡಿತು. ಆ ಕ್ಷೇತ್ರದಲ್ಲಿಯ ಎಷ್ಟೋ ಗುಡಿಗಳು ಶಿಥಿಲವಾಗಿದ್ದವು ಲಿಂಗಗಳು ಭಿನ್ನವಾಗಿದ್ದವು ಅವನ್ನು ನೋಡುತ್ತ ಮರುದಿನ ಕಾಶೀ ಹೊಂಡದಲ್ಲಿ ಸ್ನಾನಮಾಡಿ, ಕೋಣೇಶಂಕರನನ್ನು ಪೂಜಿಸಿ, ಮಹಾಕೂಟೇಶ್ವರನ ದರುಶನ ತಕ್ಕೊಂಡು ಬಾದಾಮಿಗೆ ಬಂದರು.

---

## ಬದಾಮಿ.

ಐತಿಹಾಸಿಕ ದೃಷ್ಟಿಯಿಂದ ಇದು ಬಹು ಪ್ರಸಿದ್ಧ ಸ್ಥಳವು ಇದು ಪೂರ್ವದಲ್ಲಿ ಚಾಲುಕ್ಯ ಮೊದಲಾದ ರಾಜರುಗಳಿಗೆ ಮುಖ್ಯ ಸ್ಥಳವಾಗಿತ್ತು ಇಲ್ಲಿ ಗುಡ್ಡದಲ್ಲಿ ಕೊರೆದು ಮಾಡಿದ ಬಸ್ತಿಗಳಿರುವವು ಪ್ರವಾಸಿಕರು ಆ ಬಸ್ತಿಗಳಲ್ಲಿ ಮಾಡಲ್ಪಟ್ಟ ಕತ್ತಿಗೆಯ ಕೆಲಸಕ್ಕೆ ತಲೆದೂಗುವರು. ಗುಡ್ಡದಲ್ಲಿ ಒಂದು ಕಿಲ್ಲೆಯಿರುವದು ಪೌರಾಣಿಕ ಕಾಲದಲ್ಲಿ ಈ ಪುರಕ್ಕೆ ವಾತಾಪಿಪುರವೆನ್ನುತ್ತಿದ್ದರು. ವಾತಾಪಿ ಎಂಬ ರಾಕ್ಷಸನು ಇಲ್ಲಿದ್ದು, ಪ್ರಜೆಗಳಿಗೆ ಪೀಡೆಯನ್ನು ಕೊಡುತ್ತಿದ್ದನು. ಆತನನ್ನು ಶಂಕರೀದೇವಿಯು ನಾಶಮಾಡಿದಳು. ಆ ಬಸ್ತಿಗಳನ್ನು ನೋಡಿ ಬ್ರಹ್ಮಾದಿಗಳಿಗೆ ಕೌತುಕವಾಯಿತು. ಚಾರ್ವಾಕಮತವು ಪ್ರಬಲವಾದಾಗ ಇವು ಹೀಗೆ ಕೊರೆಯಲ್ಪಟ್ಟವೆಯೆಂದು ವರುಣನು ಹೇಳಿದನು ಬುದ್ಧರ ಸಾಹಸಕ್ಕೆ ಬ್ರಹ್ಮನು ತಲೆದೂಗಿದನು. ಬಳಿಕ ಅವರೆಲ್ಲರೂ ಕೋಟೆಯ ಹೊಂಡದಲ್ಲಿ ಮುಖಪ್ರಕ್ಷಾ

ಲನಗಳನ್ನು ಮಾಡಿಕೊಂಡು ಊರಲ್ಲಿ ಮಧುಕರಿಗೆ ಹೋದರು. ಜೋಳದ ನುಚ್ಚು, ಭಕ್ಕರಿ, ಸಾಂಬಾರಿ ಮೊದಲಾದ ಪದಾರ್ಥಗಳು ವಿಶೇಷವಾಗಿ ಸಿಕ್ಕವು. ನಾಲ್ವರೂ ಹೊಂಡದ ದಂಡೆಯ ಮೇಲೆ ಕುಳಿತು ಉಂಡರು. ಆ ಬಳಿಕ ಕೆಲಹೊತ್ತು ಒಂದು ಬೇವಿನ ಮರದ ಕೆಳಗೆ ವಿಶ್ರಮಿಸಿ, ವಿಜಾಪುರದ ಕಡೆಗೆ ಹೋಗುವ ಉಗಿಬಂಡಿಯು ತಪ್ಪಬಾರದೆಂದು ಅವಸರದಿಂದ ನಡೆದರು. ನಮ್ಮ ದೇವಗಣಗಳು ಲಗುಬಗೆಯಿಂದ ಸ್ಟೇಶನಿಗೆ ಬಂದರೂ, ಆ ಬೆಳವಲ ನಾಡಿನ ರೈಲುಗಾಡಿಯು ಮಾಮೂಲಿನಂತೆ ಆ ದಿನವೂ ೨ ತಾಸು ಲೇಟು ಇತ್ತು. ಅದರಿಂದ ಅವರು ಮತ್ತೆ ಹರಟೆ ಕೊಚ್ಚಹತ್ತಿದರು. ಆಗ ಬ್ರಹ್ಮನು ಆ ಸಮೀಚೀನ ಹರಟೆಗೆ ಅಪಶಕುನ ಮಾಡಿ ದುಃಖಿಸುತ್ತ:— ತಮ್ಮಂದಿರಾ, ನಾವು ಈ ಕರ್ನಾಟಕ್ಕೆ ಬಂದು ಒಂದೆರಡು ವಾರಗಳಾದವು; ಆದರೂ ಇನ್ನೂ ನನಗೆ ನನ್ನ ಕಂದಮ್ಮ ಕಾವೇರಿಯ ದರ್ಶನವಾಗಲಿಲ್ಲ. ಸುಮ್ಮನೆ ಅತ್ತಿತ್ತ ಅಲೆಯುವದರಲ್ಲಿ ಅರ್ಥವೇನು? ಇತ್ತ ಬಂದು ಕಾವೇರಿಯ ಯೋಗಕ್ಷೇಮವನ್ನು ವಿಚಾರಿಸಿದಂತಾಗಲಿಲ್ಲ; ಅತ್ತ ಮನೆಯಲ್ಲಿ ನವ ತರುಣ ಭಾರ್ಯೆಯಾದ ಸರಸ್ವತಿಯ ಸಹವಾಸವೂ ತಪ್ಪಿದಂತಾಯಿತು! ನಾರಾಯಣಾ, ಇನ್ನು ಈ ಭೂಲೋಕದ ಸಂಚಾರವು ಸಾಕು, ನಡೆಯಿರಿ. ಇಂದೇ ಕಾವೇರಿಗೆ ಭೇಟಿಯಾಗಿ ನಾಳೆಯೇ ಮನೆಗೆ ಹಿಂದಿರುಗುವಾ. ಮನೆಯಲ್ಲಿ ಬೇರೆ ಯಾರೂ ಇರದ್ದರಿಂದ, ಅವಳು ಚಡಪಡಿಸುತ್ತಿರಬಹುದು, ಎಂದನು.

ಆಗ ನಾರಾಯಣನು ಬ್ರಹ್ಮನ ಮಾತಿನ ಒಲವಿನ ವಿಷಯವಾಗಿ ಸಂಗಡಿಗರಿಗೆ ಕಣ್ಣುಸನ್ನೆಯಿಂದ ಸೂಚಿಸಿ, ಮುಗುಳು ನಗೆ ನಗುತ್ತ—ಅಣ್ಣಾ, ದೇವಲೋಕಕ್ಕೆ ಬೇಗನೆ ಹೋಗಲೇ ಬೇಕು. ನಿಮ್ಮಂತೆ ನನಗೂ ಮನೆಯವರ ಕಾಟ ಬಹಳ; ಆದರೆ ಇಷ್ಟು ದೂರ ಬಂದು, ಈ ಕರ್ನಾಟಕದೊಳಗಿನ ಮುಖ್ಯ ಮುಖ್ಯ ಸ್ಥಳಗಳನ್ನು ಕೂಡಾ ನೋಡದೆ ಹಿಂದಿರುಗುವದು ವ್ಯರ್ಥವಲ್ಲವೆ? ಆದುದರಿಂದ ಇನ್ನು ಸ್ವಲ್ಪ ದಿನಗಳ ವರೆಗೆ ಸಂಚರಿಸಿ, ಹಲಕೆಲವು ಸ್ಥಳಗಳನ್ನು ಕಂಡು ಕಾವೇರಿಯನ್ನು ಭೆಟ್ಟಿಯಾಗಿ, ಕೂಡಲೆ ನಮ್ಮ ಸ್ಥಾನಕ್ಕೆ ತಿರುಗೋಣ, ಎಂದು ನುಡಿದನು.

# ವಿಜಾಪೂರ.

ಎಷ್ಟರಲ್ಲಿ ಆ ಎರೆನಾಡಿನೊಳಗಿನ ರೈಲು ಫಕ್ ಫಕ್ ಎಂದು ಶಬ್ದ ಮಾಡುತ್ತ ಕೋರಿಹುಳದ ಗತಿಯಿಂದ ಬರುತ್ತಿರುವದು ಕಾಣಿಸಿತು. ನಮ್ಮ ದೇವತೆಗಳು ನೆಟ್ಟಗೆ ವಿಜಾಪೂರದ ತಿಕೀಟನ್ನು ಕೊಂಡು ಕೊಂಡು ಟ್ರೈನನ್ನಾರೋಹಿಸಿದರು. ಕೆಲ ಹೊತ್ತಿನ ಮೇಲೆ ಆ ಬಂಡಿಯು ತನ್ನ ಸ್ವಾಭಾವಿಕವಾದ ಮಂದಗತಿಯಿಂದ ಸಾಗಲುಪಕ್ರಮಿಸಿತು ಬೆಳಗಾಗುವಷ್ಟರಲ್ಲಿ ನಮ್ಮ ದೇವತೆಗಳು ಕುಳಿತ ಬಂಡಿಯು ಬಾಗಲಕೋಟೆಯ ಸ್ಟೇಶನನ್ನು ದಾಟಿ, ಸೀತಿಮನಿ ಎಂಬಾ ಕೃಷ್ಣಾತಟಾಕದ ಸ್ಟೇಶನ್ನಿಗೆ ಬಂದಿತು ಆಗ ಬ್ರಹ್ಮನು ವರುಣನಿಂದ ಆ ಕ್ಷೇತ್ರ ಮಾಹಾತ್ಮೆಯನ್ನು ಕೇಳಿಕೊಂಡನು. ಅಲ್ಲದೆ, ಬಾಗಲಕೋಟೆ, ಕಲಾದ್ಗಿ, ಗಲಗಲಿ, ಜಮಖಂಡಿ ಮೊದಲಾದ ಕೃಷ್ಣಾತಟಾಕದೆಡಬಲದ ಮುಖ್ಯ ಮುಖ್ಯ ಊರುಗಳ ವಿಷಯವಾಗಿಯೂ ತಿಳಕೊಂಡನು ಅವರ ಟ್ರೇನು ಸರಿಯಾಗಿ ೧೧|| ಗಂಟೆಗೆ ವಿಜಾಪೂರ ಸ್ಟೇಶನ್ನಿಗೆ ಬಂದಿತು. ಆಗ ಚಳಿ-ಬೇಸಿಗ ಕಾಲಗಳ ಸಂಧಿಕಾಲವಾಗಿದ್ದರೂ ಆ ನಡುಮಧ್ಯಾಹ್ನದಲ್ಲಿ ಅಲ್ಲಿ ವಿಶೇಷವಾಗಿ ತಾಪವಿತ್ತು ನಮ್ಮ ಬ್ರಹ್ಮಾದಿ ದೇವತೆಗಳು ಗಾಡಿಯಿಂದಿಳಿದವರೇ ಊರೊಳಗೆ ಹೋಗಬೇಕೆಂದು ಹೊರಟರು ಸ್ಟೇಶನ್ನಿಗೆ ತೀರ ಸಮೀಪದ ದಾರಿಯಲ್ಲಿ ಒಂದು ಪ್ರಕಾಂಡವಾದ ಕಟ್ಟಡವು ಕಂಗೊಳಿಸಿತು. ಅದು ಬಹು ಎತ್ತರವಾಗಿದ್ದು, ಮೇಲ್ಭಾಗದಲ್ಲಿ ಒಂದು ಗುಮ್ಮಟವು ಕಾಣಿಸುತ್ತಿತ್ತು. ಆಗ ಬ್ರಹ್ಮನು ವರುಣನನ್ನು ಕುರಿತು:—ತಮ್ಮಾ, ಎದುರಿಗೆ ಕಾಣಿಸುವ ಈ ಕಟ್ಟಡವು ಯಾವದು? ಇದನ್ನು ಯಾರು ಕಟ್ಟಿಸಿದರು? ಎಂದು ಪ್ರಶ್ನೆ ಮಾಡಲು,

ವರುಣನು:--ಅಜ್ಜಾ, ಇದು ಲೋಕಪ್ರಸಿದ್ಧವಾದ ಗೋಲಗುಮ್ಮಟವು ಇದನ್ನು ಅದಿಲ್‌ಶಹನೆಂಬ ಮುಸಲ್ಮಾನ ಬಾದಶಹನು ೩೦೦-೩೫೦ ವರ್ಷಗಳ ಪೂರ್ವದಲ್ಲಿ ಕಟ್ಟಿಸಿದನು. ಆ ಬಾದಶಹನಿಗೆ ಹೊಸ ಇಮಾರತು ಕಟ್ಟಿಸುವ ಹುಚ್ಚು ಬಹಳವಿತ್ತು. ಅದರಿಂದಲೇ ಅವನು ಈ ತನ್ನ ವಿಸ್ತೀರ್ಣವಾದ-ಹನ್ನೆರಡು ಹರದಾರಿ ಕ್ಷೇತ್ರವುಳ್ಳ-ರಾಜಧಾನಿಯಲ್ಲಿ ಎಷ್ಟೋ ಮನೋಹರ ಕಟ್ಟಡಗಳನ್ನು ಕಟ್ಟಿಸಿರುತ್ತಾನೆ ಅವುಗಳಲ್ಲಿ ಸದ್ಯಕ್ಕೆ ಅಲ್ಪ ಸ್ವಲ್ಪ ನಯನಮನೋ

ಹರ ಕಟ್ಟಡಗಳು ಮಾತ್ರ ಉಳಿದಿರುತ್ತವೆ. ಉಳಿದವುಗಳೆಲ್ಲ ನಿರ್ನಾಮಗಳಾಗಿರುತ್ತವೆ. ಈ ಗೋಲಗುಮ್ಮಟ, ಆಸಾರ ಮಹಾಲ, ಜುಮ್ಮಾಮಸೀದೆ ಮುಂತಾದ ಪ್ರಖ್ಯಾತ ಇಮಾರತುಗಳೂ, ತಾಜಬಾವಡಿ, ಚಾಂದಬಾವಡಿ ಮುಂತಾದ ವಿಸ್ತೀರ್ಣವಾದ ಬಾವಿಗಳೂ ಉಪ್ಪಲಿ ಬುರುಜು, ಮುಲಖ ಮೈದಾನ ತೋಫು ಮುಂತಾದವುಗಳೂ ಈಗ ಉಳಿದಿರುತ್ತವೆ. ಈ ಗೋಲಗುಮ್ಮಟ ಕಟ್ಟಡವು ನಮ್ಮ ಪ್ರಾಚೀನ ಹಿಂದೀಜನರ ಕೌಶಲ್ಯದ ಪ್ರದರ್ಶನವಾಗಿದೆ. ಅಂತೇ ಎಷ್ಟೋ ದ್ವೀಪಾಂತರದ ಜನರು ಕೂಡ ಬಂದು, ಇದನ್ನು ನೋಡಿ ಬೆರಗಾಗಿ ಹೋಗುತ್ತಿರುವರು, ಎಂದು ಹೇಳುತ್ತಿರುವಷ್ಟರಲ್ಲಿ ಅವರೆಲ್ಲರೂ ಆ ಗುಮ್ಮಟದ ಹತ್ತರವೇ ಹೋದರು ಆಗ ಅವರು ಎದುರಿಗಿರುವ ಉದ್ಧ್ವಸ್ತ ಪಂಚಧಾತುಗಳ ಪೊಳ್ಳು ನಳಿಗಳನ್ನು ಕಂಡರು. ಆಗ ಇಂದ್ರನು ವರುಣನನ್ನು ಕುರಿತು:— ಗೆಳೆಯಾ, ಈ ಕೊಳವೆಗಳು ಯಾತರವು? ಇಲ್ಲಿ ಹೀಗೆ ಕ್ರಮಗೊಳಿಸಿ ಇಟ್ಟಿರುವುದೇಕೆ? ಎಂದು ವಿಚಾರಿಸಲು, "ಇವು ಬಾದಶಾಹೀ ಕಾಲದ ತೋಫುಗಳು; ಇಂಗ್ಲಿಷರಾಯಭಾರಿಗಳು ಇವನ್ನೆಲ್ಲ ಒಟ್ಟುಗೂಡಿಸಿ ಇಲ್ಲಿ ಜನರ ಕಣ್ಣಿಗೆ ಬೀಳುವದಕ್ಕಾಗಿ ಇಟ್ಟಿರುವರು" ಎಂದು ವರುಣನು ಉತ್ತರವಿತ್ತನು.

ನಂತರ ಅಲ್ಲಿಯೇ ಬಳಿಯಲ್ಲಿದ್ದ ಪ್ರಾಚೀನ ಶಿಲಾಲೇಖ, ಮೂರ್ತಿ ಮುಂತಾದವುಗಳನ್ನು ಕಂಡುಕೊಂಡು, ದೇವತೆಗಳು ಆ ಪ್ರಚಂಡವಾದ ಗೋಲುಗುಮ್ಮಟದ ಪಶ್ಚಿಮದಿಕ್ಕಿಗೆ ಹೋಗಿ, ಅಲ್ಲಿರುವ ನೆಲಮನೆಯನ್ನು ಪ್ರವೇಶಿಸಿದರು; ಹಾಗು ಅಲ್ಲಿಯ ಆ ಭಯಾನಕ ಗಂಹ್ವರವನ್ನು ದಿಟ್ಟಿಸಿ ನೋಡಲಾರದೆ, ಕೂಡಲೆ ಹಿಂದಿರುಗಿದರು ಬಳಿಕ ಮುಖ್ಯದ್ವಾರವನ್ನು ಪ್ರವೇಶಿಸಿ ಎದುರಿಗೆ ಕಾಣುವ ವಿಶಾಲವಾದ ಗೋರಿಯನ್ನೂ, ಮೇಲೆ ಎತ್ತರದಲ್ಲಿ ಕಾಣುವ ಗುಮ್ಮಟದ ಒಳಭಾಗವನ್ನೂ ನಿರೀಕ್ಷಿಸಿ ಬೆರಗಾದರು ಆ ಮೇಲೆ ಅವರೆಲ್ಲರೂ ಅಲ್ಲಿಯೇ ಕುಳಿತಿದ್ದ ಕಾವಲುಗಾರನ ಕೈಯಲ್ಲಿ ಕೆಲವು ದುಡ್ಡು ದಕ್ಷಿಣೆಯನ್ನು ಕೊಟ್ಟು, ಅವನಿಂದ ಮೇಲೆ ಏರಿ ಹೋಗುವ ಬಾಗಿಲವನ್ನು ತೆರೆಯಿಸಿಕೊಂಡು ಮೇಲೆ ಹತ್ತಿದರು. ಅವರು ಆ ಗುಮ್ಮಟದ ಒಳಭಾಗದ ವರ್ತುಲಾಕಾರ ಭವ್ಯವಾದ ಪ್ರದೇಶವನ್ನು ನೋಡಿ, ಅಲ್ಲಿಂದ ಕೆಳಗೆ ಬೊಗ್ಗಿ ನೋಡಿದರು. ಆಗ ಮುದಿ

ಬ್ರಹ್ಮನಿಗೆ ಬವಳಿಯೇ ಬಂದಿತು! ಮಿಕ್ಕಾದವರು ಅವನನ್ನು ಸಾವರಿಸಿ ಹಿಡಿದರು. ಕೆಲವು ಕ್ಷಣಗಳ ನಂತರ ಎಲ್ಲರೂ ಆ ಗುಮ್ಮಟದ ಮೇಲಿನ ಪ್ರದೇಶವನ್ನೂ, ಅಲ್ಲಿಂದ ಕಾಣುವ ವಿಜಾಪುರದ ಹಾಳು ಪಟ್ಟಣವನ್ನೂ, ಸುತ್ತುವರೆದ ಕೋಟೆ-ಕೊತ್ತಳಗಳನ್ನೂ ನಿರೀಕ್ಷಿಸಿ, ಕೆಳಗಿಳಿದು ಬಂದರು

ಬಳಿಕ ಊರೊಳಗೆ ಹೋಗಿ ಯಾವನೋ ಒಬ್ಬ ಭಾವಿಕನಲ್ಲಿ ಸ್ನಾನ-ಭೋಜನಗಳನ್ನು ತೀರಿಸಿದರು. ಸಾಯಂಕಾಲದಲ್ಲಿ ಜುಮ್ಮಾ ಮಸೀದೆ, ಉಪ್ಪಲೀಬುರುಜು, ಮುಲುಖಮೈದಾನತೋಫು, ಆಸಾರ ಮಹಾಲು, ಚಾಂದಬಾವಡಿ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದರು ಅವುಗಳಲ್ಲಿ ಆ ಪ್ರಚಂಡವಾದ ಉಪ್ಪಲೀಬುರುಜಿನ ಮೇಲೆ ಆ ಭಯಂಕರ ತೋಫನ್ನು ಹ್ಯಾಗೆ ಏರಿಸಿರಬಹುದೆಂಬದನ್ನು ತರ್ಕಿಸಲಾರದೆ, ದೇವತೆಗಳೆಲ್ಲರೂ ಮನೆಗೆ ಬಂದು ಸಾಯಾಹ್ನಿಕಗಳನ್ನು ತೀರಿಸಿಕೊಂಡು, ರಾತ್ರಿಯ ಗಾಡಿಯಿಂದ ಹಂಪಿಗೆ ಹೋಗುವದಕ್ಕಾಗಿ ಸ್ಟೇಶನ್ನಿಗೆ ಹೊರಟರು.

ಆಗ ಬ್ರಹ್ಮನು ವರುಣನನ್ನು ಕುರಿತು:—ತಮ್ಮಾ, ಇಂತಿಂಥ ಪ್ರಚಂಡವಾದ ಇಮಾರತುಗಳನ್ನು ಕಟ್ಟಿಸಿದಂಥ ಆ ಬಾದಶಹನು ಒಳ್ಳೇ ವೈಭವಶಾಲಿಯಾಗಿರಬಹುದಲ್ಲವೆ? ವರುಣಾ, ಈ ಊರಲ್ಲಿ ನಮ್ಮ ಹಿಂದೂ ದೇವ-ದೇವತೆಗಳ ಮಂದಿರಗಳಿಗಿಂತ, ದೇವರಿಲ್ಲದ ಒಂದು ಬಗೆಯ ಹಾಳು ಇಮಾರತುಗಳೇ ವಿಶೇಷವಾಗಿ ಕಾಣುವವಲ್ಲ? ಅವಕ್ಕೇನೆನ್ನುವರು?

ವರುಣ:—ಅಜ್ಜಾ, ಇಲ್ಲಿಯ ಆದಿಲ್‌ಶಹ ಬಾದಶನು ಒಳ್ಳೇ ವೈಭವಶಾಲಿಯಾಗಿದ್ದನು. ಇವನಾದರೂ ಉತ್ತರಹಿಂದುಸ್ತಾನದೊಳಗಿನ ಮೊಗಲ ಬಾದಶಹರಂತೆ ಮುಸಲ್ಮಾನ ಜಾತಿಯವನೇ ಆಗಿದ್ದರೂ, ರಾಜಕೀಯ ಬಾಬಿನಲ್ಲಿ ಅವರ ಇವರ ನಡುವೆ ವೈಷಮ್ಯವಿದ್ದಿತು. ಅದರಿಂದ ಆದಿಲ್‌ಶಹನು ಮೊಗಲರಿಂದ ದಿಲ್ಲಿ-ಆಗ್ರಾಗಳಲ್ಲಿ ಕಟ್ಟಿಸಲ್ಪಟ್ಟ ಇಮಾರತುಗಳಿಗಿಂತ ಶ್ರೇಷ್ಠವಾದ ಕಟ್ಟಡಗಳನ್ನು ಕಟ್ಟಿಸಬೇಕೆಂಬ ಹೇತುವಿನಿಂದ ಇವುಗಳನ್ನು ಕಟ್ಟಿಸಿರುತ್ತಾನೆ; ಆದರೆ ಅವನು ಕಟ್ಟಿಸಲು ಸಂಕಲ್ಪಿಸಿದ್ದ ಎಲ್ಲ ಇಮಾರತುಗಳು ಅವನ ಆಳಿಕೆಯಲ್ಲಿ ಸಂಪೂರ್ಣವಾಗಲಿಲ್ಲ. ಇಷ್ಟೇ ಅಲ್ಲ, ಅವನಿಂದ ಕಟ್ಟಿಸಲ್ಪಟ್ಟ ಕಟ್ಟಡಗಳಲ್ಲಿ ಎಷ್ಟೋ ಕಟ್ಟಡಗಳು ಬಿದ್ದು

ಹೋಗಿವೆ ಅವನ ತರುವಾಯದ ಬಾದಶಹರಲ್ಲಿ ಹೊಸ ಇಮಾರತುಗಳನ್ನು ಕಟ್ಟಿಸುವ ಹುರುಪೂ, ರಾಜ್ಯದಲ್ಲಿ ಶಾಂತತೆಯೂ ಇರದ್ದರಿಂದ ಆ ಕೆಲಸಗಳು ಅಲ್ಲಿಗೇ ನಿಂತು ಹೋದವು ಆದಿಲ್‌ಶಾಹೀ ರಾಜ್ಯವು ದಕ್ಷಿಣಹಿಂದುಸ್ಥಾನದೊಳಗಿನ ಮುಹಮ್ಮದೀರಾಜ್ಯಗಳಲ್ಲಿ ಮೇಲ್ತರದ್ದಾಗಿದ್ದರಿಂದ, ಅವನ ರಾಜಧಾನಿಯಲ್ಲಿ ಹಿಂದುಗಳಿಗಿಂತ ಸ್ವಧರ್ಮದವರಿಗೇ ಹೆಚ್ಚಾಗಿ ಮನ್ನಣೆಯಿತ್ತೆಂದು ಬೇರೆ ಹೇಳಬೇಕಾಗಿರುವದಿಲ್ಲ; ಹಾಗು ಅದರಿಂದಲೇ ಅವನು ತನ್ನೀ ಪಟ್ಟಣದಲ್ಲಿ ಎಷ್ಟೋ ಹೊಸ ಮಸೀದೆ-ಮುಕಾನುಗಳನ್ನು ಕಟ್ಟಿಸಿರುವನಲ್ಲದೆ, ನಮ್ಮ ಹಳೆಯ ಹಿಂದೂ ದೇವ-ದೇವತೆಗಳ ಪುರಾತನ ಮಂದಿರಗಳಲ್ಲಿಯ ವಿಗ್ರಹಗಳನ್ನು ಕಿತ್ತೊಗೆದು, ಅವುಗಳಿಗೂ ಅವೇ ಸ್ವರೂಪವನ್ನೇ ಕೊಟ್ಟಿರುತ್ತಾನೆ ಆದರಿಂದ ಈ ಊರಲ್ಲಿ ಎಲ್ಲ ಕಡೆಗೂ ಈ ಮಸೀದೆ-ಮುಕಾನುಗಳ ಸಾಮ್ರಾಜ್ಯವೇ ನೆಲೆಗೊಂಡಿರುತ್ತದೆ!

ನಮ್ಮ ದೇವತೆಗಳು ರಾತ್ರಿ ಹಿಂಬತ್ತು ಗಂಟೆಗೆ ವಿಜಾಪೂರ ಸ್ಟೇಶನ್ನಿಗೆ ಬರಲಿಕ್ಕೂ, ಹುಟಗಿ ಕಡೆಯಿಂದ ಗದಗಿಗೆ ಹೋಗುವ ಗಾಡಿಯು ಬಂದು ನಿಲ್ಲಲಿಕ್ಕೂ ಗಂಟೇ ಬಿದ್ದಿತು. ಕೂಡಲೆ ನಾರಾಯಣನು ತ್ವರೆಮಾಡಿ ಹೊಸಪೇಟೆಯ ತಿಕೀಟುಗಳನ್ನು ಖರೀದಿ ಮಾಡಿದನು; ಹಾಗು ಅವರೆಲ್ಲರೂ ಹಿಂದು ವಿರಾಮವಾದ ಡಬ್ಬಿಯಲ್ಲಿ ಹತ್ತಿ ಕುಳಿತರು. ಬಳಿಕ ಎಷ್ಟೋ ಹೊತ್ತಿನ ಮೇಲೆ ಆ ಬಂಡಿಯು ತನ್ನ ಸ್ವಾಭಾವಿಕವಾದ ಮುಂದುಗತಿಯಿಂದ ಸಾಗಿತು. ನಿನ್ನೆ ರಾತ್ರಿ ಸರಿಯಾಗಿ ನಿದ್ರೆಯಾಗದ್ದರಿಂದಲೂ ಇಂದು ಹಗಲೆಲ್ಲ ರಣಗುಟ್ಟುವ ಬಿಸಿಲಲ್ಲಿ ಹಿಂದೇಸವನೆ ತಿರುಗಾಡಿದ್ದರಿಂದಲೂ ದೇವಗಣಗಳಿಗೆ ಇಂದು ಬಹಳ ಶ್ರಮವಾಗಿತ್ತು. ಮೇಲಾಗಿ ರೈಲುಬಂಡಿಯಲ್ಲಿ ವಿರಾಮವಾದ ಸ್ಥಳವೂ ಸಿಕ್ಕಿತ್ತು. ಅದರಿಂದ ಅವರಿಗೆ ಗಾಢವಾದ ನಿದ್ರೆ ಹತ್ತಿತು.

ಬೆಳಗಿನ ೫ ಗಂಟೆಗೆ ನಸುಗಾಳಿಯ ಹೊಡತದಿಂದ ಬ್ರಹ್ಮನಿಗೆ ಮೊದಲು ಎಚ್ಚರವಾಯಿತು. ಆಗ ಅವನು ಬಾಕಿನ ಕೆಳಗೆ ತುಂಬಿಟ್ಟಿದ್ದ ತನ್ನ ತಂಬಿಗೆಯನ್ನು ತಕ್ಕೊಂಡು ಬಾಯಿ ಮುಕ್ಕಳಿಸ ಹೋದನು; ಆದರೆ ಅಲ್ಲಿ ಅವನ ಆ ತಂಬಿಗೆ ಇರದೆ, ಬೇರೆಯವರ ತಂಬಿಗೆಗಳೂ ಇರಲಿಲ್ಲ ಇಷ್ಟೇ ಅಲ್ಲ, ಎಲ್ಲರ ಉಳಿದ ಸಾಮಾನುಗಳೂಇರಲಿಲ್ಲ. ಆಗ ಅವನು ಎಲ್ಲರನ್ನೂ ಎಬ್ಬಿಸಿ ಅವರಿಗೆ ಆ

ಸಂಗತಿಯನ್ನು ತಿಳಿಸಿದನು.

ಆಗ ವರುಣನು:—ಅಜ್ಜಾ, ಇದು ಹೇಳಿ ಕೇಳಿ ರೈಲು ಬಂಡಿಯು; ಇದರಲ್ಲಿ ಹೀಗೆ ಮೈಮರೆತು ಮಲಗುವದು ಸರಿಯಲ್ಲ; ಇಗೋ, ನಾನು ನನ್ನ ಎಲ್ಲ ಸಾಮಾನುಗಳನ್ನು ಹೇಗೆ ಗಂಟು ಕಟ್ಟಿ ತಲೆಗಿಂಬಿಗೆ ಇಟ್ಟುಕೊಂಡಿರುವೆನು ನೋಡಿರಿ. ನೀವೂ ಮೊದಲೇ ಎಚ್ಚರ ಪಟ್ಟಿದ್ದರೆ, ಹೀಗೆ ಹಳಹಳಿಸುವ ಕಾರಣ ಬೀಳುತ್ತಿರಲಿಲ್ಲ.

ಬಳಿಕ ದೇವಗಣಗಳು ಬೆಳಿಗ್ಗೆ ಬಾಗಲಕೋಟೆಯಲ್ಲಿಳಿದು, ಅಲ್ಲಿ ಘಟಪ್ರಭಾ ನದೀತೀರದಲ್ಲಿ ಸ್ನಾನ-ಆಹ್ನಿಕಗಳನ್ನು ತೀರಿಸಿ, ಯಾವನೊಬ್ಬ ವೈಷ್ಣವನಲ್ಲಿ ತಾವೂ ವೈಷ್ಣವರೇ ಎಂದು ಹೇಳಿ ಭೋಜನ ತೀರಿಸಿಕೊಂಡು, ಸ್ಟೇಶನ್ನಿಗೆ ಬಂದು ಗದಗಿಗೆ ಬರುವ ಮಧ್ಯಾಹ್ನದ ಗಾಡಿಯನ್ನು ಹಿಡಿದರು; ಹಾಗು ಅಂದೇ ರಾತ್ರಿ ೯ಕ್ಕೆ ಗದಗಿಗೆ ಬಂದು, ಸ್ಟೇಶನ್ನದ ಬಳಿಯ ಧರ್ಮಶಾಲೆಯಲ್ಲಿ ಸಾಯಾಹ್ನಿಕಗಳನ್ನು ತೀರಿಸಿ, ಅಲ್ಲಿಯೇ ಕಪಾಳಕ್ಕೆ ಕೈಕೊಟ್ಟು ಮಲಗಿದರು. ಅವರು ಬೆಳಗಿನ ಝಾವದ ೨ ಗಂಟೆಗೆ ಸ್ಟೇಶನ್ನಿಗೆ ಬಂದು ಹೊಸಪೇಟೆಗೆ ಹೋಗುವ ರೈಲನ್ನು ಹತ್ತಿದರು; ಆ ರೈಲು ನಸುಕಿನಲ್ಲಿ ಆ ಸ್ಟೇಶನ್ನಿಗೆ ಬರಲು, ದೇವಗಣಗಳು ರೈಲಿನಿಂದ ಇಳಿದರು.

---

## ಶ್ರೀ ಹಂಪೀಕ್ಷೇತ್ರ.

ಬೆಳಗಾದ ಬಳಿಕ ಬ್ರಹ್ಮ-ದೇವೇಂದ್ರರು ಪ್ರಾತರ್ವಿಧಿಗೆ ಹ್ಯಾಗೆ ಮಾಡಬೇಕೆಂದು ವರುಣನನ್ನು ಕುರಿತು ಕೇಳಿದರು ಆಗ ವರುಣನು ಮೌನದಿಂದ ಅವರನ್ನು ಸ್ಟೇಶನ್ನದಲ್ಲೆಲ್ಲ ಅಡ್ಡಾಡಿಸಿದನು. ಮನುಷ್ಯನ ಮೈಯಲ್ಲಿ ನರಗಳು ಇರುವಂತೆ ಆ ಸ್ಟೇಶನ್ನದಲ್ಲಿ ಎಲ್ಲಿ ನೋಡಿದಲ್ಲಿ ಸೊಗಸಾದ ನೀರಿನ ಕಾಲುವೆಗಳು ಹರಿಯುತ್ತಿದ್ದವು. ಆ ಕಾಲುವೆಗಳ ತಿಳಿನೀರನ್ನು ನೋಡಿ, ಬ್ರಹ್ಮನು ಸಂತಸಬಟ್ಟು:— 'ವರುಣಾ, ಇಲ್ಲಿ ಭಾಗೀರಥಿಯೇ ಪ್ರತ್ಯಕ್ಷಳಿರುವಳೇನು? ನೀರಿನ ವಿಷಯವಾಗಿ ಇಲ್ಲಿ ಎಷ್ಟು ಅನುಕೂಲವಿದೆಯಲ್ಲ?' ಎಂದನು. ವರುಣನು:— ಇಲ್ಲಿಯೇ ಸಮೀಪದಲ್ಲಿ ತುಂಗಭದ್ರಾ ನದಿಗೆ ಹಿಡ್ತ ಹಾಕಿ, ಹೀಗೆಯೇ ಬೇಕಾದಲ್ಲಿಗೆ ನೀರಿನ ಕಾಲುವೆಗಳನ್ನು ತಂದಿರುತ್ತಾರೆ. ಈ ಕಾಲುವೆಗಳಿಂದ ಇಲ್ಲಿ ಭತ್ತ, ಕಬ್ಬು ಮೊದಲಾದ

ಪೈರುಗಳು ಬಹಳ ಸರಸವಾಗಿ ಬರುತ್ತವೆ, ಎಂದು ಹೇಳಿದನು. ಅದನ್ನು ಕೇಳುತ್ತ ನಾರಾಯಣ-ಬ್ರಹ್ಮೇಂದ್ರರು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಹಂಪಿಗೆ ಹೋಗುವದಕ್ಕಾಗಿ ಸ್ಟೇಶನ್ನಿನ ಬಳಿಗೆ ಬಂದರು. ಆಗ ಅವರಿಗೆ ಒಂದೂ ವಾಹನಗಳು ಸಿಗಲಿಲ್ಲಾದ್ದರಿಂದ, ವರುಣನು ಅವರನ್ನು ಅಲ್ಲಿಯೇ ಕೂಡ್ರಿಸಿ, ಹೊಸಪೇಟೆಯ ಊರಲ್ಲಿ ಹೋಗಿ ಎರಡು ಝುಟಕಾಬಂಡಿಗಳನ್ನು ಮಾಡಿಕೊಂಡು ಬಂದನು. ಆ ವಾಹನಗಳಲ್ಲಿ ಕುಳಿತು ಏಳುಮೈಲು ದೂರವಿರುವ ಹಂಪಿಯನ್ನು ಸೇರಬೇಕಾದರೆ ಅವರಿಗೆ ಸಾಕುಸಾಕಾಗಿ ಹೋಯಿತು. ಯಾಕಂದರೆ, ಝುಟಕಾಬಂಡಿಯ ಧಡಿಕಿಯಿಂದ ಅವರ ಮೈ ನುಗ್ಗುನುಗ್ಗಾಗಿತ್ತು. ಅದರಿಂದ ಅವರು ಝುಟಕಾವಾಹನವನ್ನು ಬಹಳವಾಗಿ ತಿರಸ್ಕರಿಸಿದರು.

ಹಂಪಿಯ ಅಗಸೇ ಬಾಗಿಲಕ್ಕೆ ಹೋದ ಕೂಡಲೆ ಅವರಿಗೆ 'ಸಾಸುವೆಯ ಗಣಪತಿ' ಎಂಬ ಶಿಲಾಮೂರ್ತಿಯ ದರುಶನವಾಯಿತು. ತುಸ ಮುಂದಕ್ಕೆ ಹೋಗಲು ಅದಕ್ಕೂ ಅದ್ಭುತವಾಗಿರುವ ಕಡಲೆಯ ಗಣಪತಿಯ ಗುಡಿಯು ಹತ್ತಿತು. ಬಹು ದೊಡ್ಡ ಪ್ರಮಾಣದಿಂದಿರುವ ಇವೆರಡು ಮೂರ್ತಿಗಳನ್ನು ನೋಡಿ ಅವರು ವಿಸ್ಮಯ ಪಟ್ಟರು. ಬಳಿಕ ಅವರು ತೇರಬೀದಿಯ ಹಾಳು ಪೌಳಿಗಳನ್ನು ನೋಡುತ್ತ ಶ್ರೀ ವಿರೂಪಾಕ್ಷೇಶ್ವರನ ಗುಡಿಗೆ ನಡೆದರು. ಗುಡಿಯ ಹೆಬ್ಬಾಗಿಲ ಮೇಲಿರುವ ಗೋಪುರವು ಕ್ಷಣಹೊತ್ತು ಅವರನ್ನು ಕೌತುಕದಲ್ಲಿ ಕೆಡವಿತು. ಫರಸುಗಲ್ಲಿನ ಒಳ ಅಂಗಳದಲ್ಲಿ ತುಂಗಭದ್ರೆಯ ಕಾಲುವೆಯು ಹರಿಯುತ್ತಿರುವದನ್ನು ಕಂಡು, ಬ್ರಹ್ಮಾದಿಗಳು ಅದರಲ್ಲಿ ಪಾದಪ್ರಕ್ಷಾಲನ ಮಾಡಿಕೊಂಡು ದೇವದರುಶನಕ್ಕೆ ಹೋದರು ಬೆಳಗಿನ ಪೂಜೆ ಮುಗಿಸಿ ಪೂಜಾರಿಯು ಬಾಗಿಲ ಹಾಕಿಕೊಂಡು ಹೋದದ್ದರಿಂದ, ಆಗ ಬ್ರಹ್ಮಾದಿಗಳಿಗೆ ಶ್ರೀ ವಿರೂಪಾಕ್ಷನ ದರುಶನವಾಗಲಿಲ್ಲ ಬಳಿಕ ಅವರು ಹಾಗೆಯೇ ನದಿಗೆ ಸ್ನಾನಕ್ಕೆ ದಯಮಾಡಿಸಿದರು. ತುಂಗಭದ್ರೆಯ ಪ್ರಶಸ್ಥವಾದ ಉಸುಬಿನ ಪಾತ್ರೆಯಲ್ಲಿ ಅವರು ಹೊಲಸಾದ ತಮ್ಮ ಬಟ್ಟೆ ಬರೆಗಳನ್ನು ಒಗದು ಒಣಗಹಾಕಿದರು. ಸ್ನಾನಾಹ್ನಿಕಗಳನ್ನು ತೀರಿಸಿಕೊಳ್ಳುತ್ತಿರಲು, ಬಿಸಿಲಿನ ಪ್ರಖರತೆಯು ಹೆಚ್ಚಾಗಿ ಮೈಗೆ ಚುರುಕು ಹತ್ತಲಾರಂಭಿಸಿತು. ಆಗ ಅವರು ಆ ಸ್ಥಳವನ್ನು ಬಿಟ್ಟು, ಶ್ರೀ

ವಿರೂಪಾಕ್ಷನ ಗುಡಿಗೆ ಬಂದರು. ಅಲ್ಲಿ ಮಧ್ಯಾಹ್ನಪೂಜೆಯು ನಡೆದಿತ್ತು. ಅವರ ತೇಜಸ್ಸನ್ನು ನೋಡಿ ಪೂಜಾರಿಯು ಅವರನ್ನು ಸುಮ್ಮನೆ ಒಳಗೆ ಬರಗೊಟ್ಟನು. ಬ್ರಹ್ಮ-ನಾರಾಯಣ-ವರುಣ ದೇವೇಂದ್ರರು ಶ್ರೀ ವಿರೂಪಾಕ್ಷನ ಜ್ಯೋತಿರ್ಲಿಂಗವನ್ನು ಪೂಜಿಸಿ ಸ್ತವಿಸಿದರು. ಆ ದಿನ ಅವರು ಊಟದ ಗೊಡವೆಗೆ ಹೋಗದೆ ರಂಭಾಫಲಗಳನ್ನೇ ವಿಶೇಷವಾಗಿ ಸೇವಿಸಿ, ಹಂಪಿಯ ಗತವೈಭವವನ್ನು ನೋಡ ಹೋದರು. ಶ್ರೀ ಭುವನೇಶ್ವರಿ ದೇವಸ್ಥಾನ, ಋಷ್ಯಮೂಕ ಪರ್ವತ ಮೊದಲಾದವುಗಳನ್ನು ನೋಡಿ, ಹಂಪಿಯ ಬಳಿಯಲ್ಲಿರುವ ಹಾಳು ವಿಜಯನಗರದ ಪ್ರದೇಶಕ್ಕೆ ಬಂದರು. ಪ್ರಾರಂಭದಲ್ಲಿಯೇ ಅವರಿಗೆ ಉದ್ದನ್ನವೀರಭದ್ರ, ಉಗ್ರನೃಸಿಂಹ, ಬಡವಿಯಲಿಂಗ ಎಂಬ ಅದ್ಭುತಮೂರ್ತಿಗಳು ಕಂಡು ಬಂದು ಅವರ ಕುತೂಹಲವನ್ನು ಹೆಚ್ಚಿಸಿದವು ಆದರೆ ಅವೆಲ್ಲ ಗತವೈಭವದಿಂದ ತೇಜೋವಿಹೀನವಾಗಿ ತೋರುತ್ತಿರುವದರಿಂದ ಅವರಿಗೆ ಅಸಮಾಧಾನವಾಯಿತು ವರುಣನು ವಿಜಯನಗರದ ವಿಷಯವಾಗಿ ಹೇಳತಕ್ಕ ಮುಖ್ಯ ಮುಖ್ಯ ಸಂಗತಿಗಳನ್ನೂ, ಸಂಕ್ಷಿಪ್ತ ಇತಿಹಾಸವನ್ನೂ ಹೇಳಿದನು. ಈಶ್ವರಾಂಶರಾದ ಶ್ರೀ ವಿದ್ಯಾರಣ್ಯರು ವಿಜಯನಗರದ ಸಾಮ್ರಾಜ್ಯವನ್ನು ನೆಲೆಗೊಳಿಸಿದ್ದರೆಂಬದನ್ನು ತಿಳಿದು, ನಾರಾಯಣಾದಿಗಳು ಆನಂದಪಟ್ಟರು. ಅವರು ಹಾಗೇ ಕ್ರಮಿಸುತ್ತಿರಲು, ಆ ಹಾಳು ನಗರದ ವೈಭವವು ಮೊದಲು ಎಷ್ಟಿತ್ತೆಂಬದು ಅವರ ಲಕ್ಷದಲ್ಲಿ ಬರತೊಡಗಿತು. ಅಶ್ವಶಾಲೆ-ಗಜಶಾಲೆಗಳ ಅವಶಿಷ್ಟ ಮಂದಿರಗಳೂ ಹರಕ-ಮುರಕ ಅಂಗಡಿಗಳೂ ಅಲ್ಲಿ ಅವರ ಕಣ್ಣಿಗೆ ಬಿದ್ದವಲ್ಲದೆ ಬೇರೆ ಮತ್ತೇನೂ ಕಾಣಲಿಲ್ಲ. ಆನಂತರ ವರುಣನು ಅವರನ್ನು ತುಂಗಭದ್ರೆಯಿಂದಾಚೆಗಿರುವ ಆನೆಗುಂದಿ ಎಂಬಲ್ಲಿಗೆ ಕರೆದೊಯ್ದನು. ವಿಜಯನಗರವು ಹಾಳಾದ ಬಳಿಕ ಅದರ ಅವಶಿಷ್ಟ ರೂಪದಿಂದ ಪ್ರಸ್ಥಾಪಿತವಾಗಿದ್ದ ಆ ಗತವೈಭವೀ ನಗರಿಯ ನಿರೀಕ್ಷಣೆಯಿಂದ ನಮ್ಮ ದೇವತೆಗಳಿಗೆ ಸಮಾಧಾನವಾಗಲಿಲ್ಲ ಅವರು ಮೂಕಭಾವದಿಂದ ಆ ನಗರಿಯನ್ನು ಸುತ್ತಿಕೊಂಡು ಪುನಃ ಹಂಪಿಯ ಸೀಮಾಂತರಕ್ಕೆ ಬಂದರು. ಒಂದು ಪ್ರಶಸ್ತವಾದ ಚಿಕ್ಕ ಗುಡ್ಡದಲ್ಲಿ ಶ್ರೀ ವಿದ್ಯಾರಣ್ಯರು ತಪಸ್ಸನ್ನೆಸಗಿದ್ದರಿಂದ, ಆ ಗುಡ್ಡಕ್ಕೆ ಸನ್ಯಾಸೀ ದಿಬ್ಬವೆನ್ನುವರು; ಆ ದಿಬ್ಬವನ್ನು ವರುಣನು ಬ್ರಹ್ಮನಿಗೆ ತೋರಿಸಿ:-

ಬ್ರಹ್ಮನೇ, ಈ ಗುಡ್ಡದ ಪುಣ್ಯವನ್ನು ಏನು ಹೇಳಲಿ? ಸಾಕ್ಷಾತ್ ಕೈಲಾಸದಷ್ಟು ಯೋಗ್ಯತೆಯು ಇದಕ್ಕೆ ಬಂದದೆ. ಯಾಕಂದರೆ ಕೈಲಾಸದಲ್ಲಿ ತಪಸ್ಸು ಮಾಡುವ ಶಂಕರನೇ ಇಲ್ಲಿ ಮನುಷ್ಯನಾಗಿ ತಪಸ್ಸು ಮಾಡಿರುವನು, ಎಂದು ಹೇಳಲು, ಬ್ರಹ್ಮನು:—ಕರ್ನಾಟಕದ ಪುಣ್ಯವು ದೊಡ್ಡದಿರುವದು ಈಶ್ವರನೇ ಇಲ್ಲಿ ಆಟವಾಡದಿದ್ದರೆ, ನಾವೇಕೆ ಇಲ್ಲಿಗೆ ಬರುತ್ತಿದ್ದೆವು? ಎಂದು ಹೇಳಿದನು.

ಅನಂತರ ಅವರು ಸಾಯಂಕಾಲದ ಆಹ್ನಿಕಗಳನ್ನು ತುಂಗಭದ್ರೆಯಲ್ಲಿ ಮುಗಿಸಿಕೊಂಡು ವಿರೂಪಾಕ್ಷನಿಗಾಗುವ ಸಂಧ್ಯಾಕಾಲದ ಪೂಜೆ, ಮಂಗಲಾರತಿಗಳನ್ನು ನೋಡಿ ಅಲ್ಲಿಯೇ ಹಿತ್ತಿಲ್ಗೆ ಮಲಗಿಕೊಂಡರು ಮರುದಿನ ಅವರು ಝಟಕಾ ಬಂಡಿಯಲ್ಲಿ ಕುಳಿತು ಹೊಸಪೇಟೆಗೆ ಬಂದು, ಅಲ್ಲಿ ತಮಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಂಡು, ಅಲ್ಲಿಯ ಹೋಟೆಲಿನಲ್ಲಿ ಉಂಡು ಮಧ್ಯಾಹ್ನದ ಒಂದು ಗಂಟೆಯ ರೈಲುಬಂಡಿಯಲ್ಲಿ ಗದಗಿನ ಕಡೆಗೆ ನಡೆದರು.

## ಗದಗ.

ರೈಗೆಬಂಡಿಯು ಗದಗಿನ ಜಂಕ್ಶನ್ನಿಗೆ ಬಂದಾಗ ರಾತ್ರಿ ಎಂಟು ಹೊಡೆದಿತ್ತು. ರೈಲಿನಿಂದ ಇಳಿದವರೇ ದೇವತೆಗಳು ಪೂರ್ವಪರಿಚಿತವಾದ ಧರ್ಮಶಾಲೆಗೆ ಹೋಗಿ ಆಹ್ನಿಕಗಳನ್ನು ತೀರಿಸಿಕೊಂಡು, ಹೊಸಪೇಟೆಯಿಂದ ತಂದಿದ್ದ ಕಬ್ಬುಗಳನ್ನು ತಿಂದು ಮಲಗಿಕೊಂಡರು. ಮರುದಿನ ಬೆಳಿಗ್ಗೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಊರೊಳಗೆ ನಡೆದರು

ಆಗ ವರುಣನು ಬ್ರಹ್ಮನನ್ನು ಕುರಿತು:—ಅಜ್ಜಾ, ಗದಗು ಅರ್ವಾಚೀನ ಕಾಲದಲ್ಲಿ ರಾಜಕೀಯ-ಸಾಮಾಜಿಕ, ವ್ಯಾಪಾರೋದ್ಯೋಗ ಮುಂತಾದವುಗಳಲ್ಲಿ ಪ್ರಸಿದ್ಧಿಪಡೆದಿರುವಂತೆ, ಐತಿಹಾಸಿಕ ಕಾಲದಲ್ಲಿಯೂ ಈ ಊರ ಮಹತ್ವವು ಹೆಚ್ಚಾಗಿದ್ದಿತು. ಇಲ್ಲಿ ಶ್ರೀ ತ್ರಿಕುಟೇಶ್ವರ, ಶ್ರೀ ವೀರನಾರಾಯಣ ಮುಂತಾದ ಪ್ರಾಚೀನ-ಜಕಣಾಚಾರ್ಯರಿಂದ ಕಟ್ಟಲ್ಪಟ್ಟ-ದೇವಾಲಯಗಳು ಪ್ರಖ್ಯಾತವಾಗಿರುತ್ತವೆ.

ನಡುವೇ ಬಾಯಿ ಹಾಕಿ ನಾರಾಯಣನು:-ತಮ್ಮಾ ವರುಣಾ, ಈ ಕರ್ಣಾಟಕದಲ್ಲಿ ಅಲ್ಲಲ್ಲಿ ಕಾಣುವ ಸುಂದರವಾದ ದೇವಾಲಯಗಳು ಆ ಜಕಣಾಚಾರ್ಯನಿಂದಲೇ ನಿರ್ಮಿಸಲ್ಪಟ್ಟಿರುವವೆಂದೆನ್ನುವರು! ಅಂಥ ಪ್ರವೀಣಶಿಲ್ಪಜ್ಞನಾದ ಆ ಜಕಣಾಚಾರ್ಯನಾರು? ಅವನು ಈ ಎಲ್ಲ ದೇವಾಲಯಗಳನ್ನು ಯಾಕೆ ನಿರ್ಮಿಸಿದನು?

ವರುಣ:—ನಾರಾಯಣಾ, ನಿನಗರಿಯದ ಸಂಗತಿಯು ಅವದಿರುವದು? ಆದರೂ ಕೇಳುತ್ತಿರುವಿಯಾದ್ದರಿಂದ, ಆ ಬಗ್ಗೆ ನನಗೆ ಗೊತ್ತಿದ್ದುದನ್ನು ತಿಳಿಸುತ್ತೇನೆ. ಜಕಣಾಚಾರ್ಯನೆಂಬ ಶಿಲ್ಪಿಯು ಶಾಪಪೀಡಿತನಾದ ಒಬ್ಬ ದೇವತೆಯು. ಶಾಪವಚನದಿಂದ ಅವನು ಜೈನಪಂಥದಲ್ಲಿ ಜನ್ಮ ತಾಳಿದ್ದನೆಂದೂ, ತನ್ನ ಶಾಪ ಪರಿಹಾರಾರ್ಥವಾಗಿ ಅವನು ಈ ಕರ್ನಾಟಕದಲ್ಲಿ ಎಷ್ಟೋ ದೇವಾಲಯಗಳನ್ನು ಒಂದೇ ರಾತ್ರಿಯಲ್ಲಿ ಕಟ್ಟಿರುವನೆಂದೂ ಆಖ್ಯಾಯಿಕೆಯಿದೆ ಒಂದೇ ರಾತ್ರಿಯಲ್ಲಿ ಈ ನಾಡ ತುಂಬ ಗುಡಿಕಟ್ಟುವ ಪ್ರಸಂಗ ಬಂದದರಿಂದ ಅವನು ಕಟ್ಟಿದ ಗುಡಿಗಳಲ್ಲಿ ಕೆಲವು ಗೋಪುರವಿಹೀನವಾಗಿವೆ; ಕೆಲವುಗಳ ಪೌಳಿಗಳು ಅರ್ಧಮರ್ಧವಾಗಿವೆ; ಕೆಲವುಗಳಲ್ಲಿ ಬರೇ ಕಂಬಗಳು ನಿಂತಿವೆ. ಅದರಿಂದಲೇ ಈ ನಾಡಿನಲ್ಲಿ ಈ ವಿಷಯವಾಗಿ ಒಂದು ನಾಣ್ಣುಡಿಯು (ಜಕಣಾಚಾರ್ಯರ ಕಟ್ಟಡ, ಎಲ್ಲಿಗೆ ಆಯಿತೋ ಅಲ್ಲಿಗೇ ಸರಿ) ಪ್ರಚಾರದಲ್ಲಿರುತ್ತದೆ ಹೀಗೆಂದು ಮಾತನಾಡುತ್ತ ನಡೆದಿರಲು, ನಮ್ಮ ದೇವಗಣಗಳು ಶ್ರೀ ತ್ರಿಕುಟೇಶ್ವರ ದೇವಾಲಯಕ್ಕೆ ಬಂದರು. ನಂತರ ಎಲ್ಲರೂ ಶ್ರೀ ತ್ರಿಕುಟೇಶ್ವರನ ಧೂಲಿದರ್ಶನ ತಕ್ಕೊಂಡು ಹೊರಗೆ ಬರುತ್ತಿರಲು, ಆ ದೇವಾಲಯದ ಅರ್ಚಕನು ಈ ಮಹಾತ್ಮರನ್ನು ತನ್ನ ಬಿಡಾರಕ್ಕೆ ಕರೆದೊಯ್ದು ಇವರ ಸ್ನಾನ-ಆಹ್ನಿಕಗಳ ವ್ಯವಸ್ಥೆ ಮಾಡಿದನು; ಹಾಗು ಭೋಜನಕ್ಕೆ ತನ್ನಲ್ಲಿಗೇ ಆಮಂತ್ರಣವಿತ್ತನು. ಬ್ರಹ್ಮಾದಿಗಳು ಭೋಜನಾನಂತರ ಶ್ರೀ ವೀರನಾರಾಯಣನ ದರ್ಶನ ತಕ್ಕೊಂಡು, ಕೋನೇರಿ ತೀರ್ಥವನ್ನು ಸಂದರ್ಶಿಸಿ, ಶ್ರೀ ತೋಟದ ಸ್ವಾಮಿಗಳ ಮಠವನ್ನು ನೋಡಲು ನಡೆದರು. ಆಗ ವರುಣನು:—ಅಜ್ಜಾ, ಈ ಊರಲ್ಲಿ ವೀರಶೈವರ ಶ್ರೀತೋಟದ ಸ್ವಾಮಿಗಳವರ ಮಠವಿರುವಂತೆ, ಇಲ್ಲಿಂದ ನಾಲ್ಕು ಹರದಾರಿಗಳ ಮೇಲಿರುವ ಶಿರಹಟ್ಟಿ ಎಂಬ ಗ್ರಾಮದಲ್ಲಿ ಈ ನಾಡಿನಲ್ಲೆಲ್ಲ ಪ್ರಸಿದ್ಧರಾದ ಶ್ರೀ ಫಕೀರಸ್ವಾಮಿ

ಗಳವರ ಮಠವೂ ಇರುತ್ತದೆ. ಫಕೀರಸ್ವಾಮಿಗಳ ಮೂಲ ಕರ್ತೃವು ೩೦೦-೪೦೦ ವರ್ಷಗಳ ಮೊದಲು ಅಂದರೆ ವಿಜಾಪೂರದ ಆದಿಲ್‌ಶಾಹಿಯ ಕಾಲಕ್ಕೆ ಅವತಾರ ತಾಳಿದನು. ಆ ಮಹಾತ್ಮನ ಕೃಪೆಯಿಂದ ಆ ಫಕೀರಮಠದ ಗದ್ದುಗೆಯು ಎಲ್ಲ ಹಿಡೆಯೂ ಹಳ್ಳೀ ತೇಜಸ್ವಿಗಳಾಗಿ ಮೆರೆಯುತ್ತಿರುವರು ಇಲ್ಲಿಂದ ಶಿರಹಟ್ಟಿಗೆ ಹೋಗುವಾಗ ದಾರಿಯಲ್ಲಿ ಬೆಳಧಡಿ ಎಂಬಲ್ಲಿ ಶ್ರೀ ಬ್ರಹ್ಮಾನಂದ ಸಾಧುಗಳಿಂದ ಸ್ಥಾಪಿಸಲ್ಪಟ್ಟ ಶ್ರೀ ರಾಮ ದೇವಾಲಯವೂ, ಅಲ್ಲಿಂದ ಮುಂದೆ ತುಸ ದೂರದಲ್ಲಿ ಕಬ್ಬಲಗಿತ್ತಿಯು ಚಿನ್ನದ ಹಾಳುಖಣಿಯೂ ಹತ್ತುತ್ತಿದ್ದು, ಶಿರಹಟ್ಟಿಯ ಸಮೀಪಕ್ಕೆ ಶ್ರೀ ಬ್ರಹ್ಮಾನಂದರಿಂದಲೇ ಸ್ಥಾಪಿಸಲ್ಪಟ್ಟಂಥ ವೆಂಕಟಾಪುರವೆಂಬ ಗ್ರಾಮದಲ್ಲಿ ಶ್ರೀ ವೇಂಕಟೇಶನ ಪ್ರಸಿದ್ಧ ದೇವಾಲಯವು ಇರುತ್ತದೆ.

ಇಷ್ಟರಲ್ಲಿ ದೇವಗಣಗಳು ಆ ವಿಶಾಲವಾದ ಶ್ರೀ ತೋಟದ ದೇವರ ಮಠದಲ್ಲಿ ಪ್ರವೇಶಿಸಿದರು ಪ ಚಲಿತ ಜಾತಿಮತ್ಸರದ ನೆಳಲಿಗೆ ಕೂಡ ನಿಲ್ಲದ ಅಲ್ಲಿಯ ಆಗಿನ ಸತ್ವಸ್ಥಪೀಠಸ್ಥರು ನಮ್ಮ ದೇವಗಣಗಳನ್ನು ಭೇದಭಾವವಿಲ್ಲದೆ ಬರಮಾಡಿಕೊಂಡರು. ಇವರಾದರೂ ಆಪ-ಪರ ಭೇದವೆಣಿಸದೆ, ಅವರಲ್ಲಿ ಕೆಲವು ವೇಳೆ ವಿಶ್ರಮಿಸಿ, ಮನಾನಂದವನ್ನುಂಟು ಮಾಡಿಕೊಂಡು ಪುನಃ ತಮ್ಮ ಗಂತವ್ಯಸ್ಥಳಕ್ಕೆ ನಡೆದರು.

ನಂತರ ವರುಣನು ದೇವಗಣಗಳನ್ನು ಅಲ್ಲಿಯ ಮಹಾಲಕ್ಷ್ಮೀ ಗಿರಣಿಗೆ ಕರೆದೊಯ್ದನು. ಬ್ರಹ್ಮಾದಿಗಳು ಹತ್ತಿಯಿಂದ ನೂಲು, ನೂಲಿನಿಂದ ಅರಿವೆಯಾಗುವ ಆ ಪ್ರಚಂಡ ಕಾರಖಾನೆಯನ್ನೂ, ಅಲ್ಲಿ ದುಡಿಯುವ ಅಸಂಖ್ಯ ಹುಡುಗರು, ಹೆಂಗಸರು, ಗಂಡಸರು ಇವರನ್ನೂ ನೋಡಿ ಚಕಿತರಾದರು ನಂತರ ಅವರು ಸಮೀಪದಲ್ಲಿಯೇ ಇರುವ ನೂತನ ಥೇಅಟರ(ನಾಟಕಶಾಲೆ)ವನ್ನು ನೋಡಹೋದರು. ಆ ಸುಸಜ್ಜಿತ ನಾಟ್ಯಶಾಲೆಯನ್ನು ಕಂಡು, ದೇವರಾಜನಾದ ಇಂದ್ರನಿಗೆ ಹೇಗ ಹೇಗೋ ಅನಿಸಿತು. ತನ್ನ ಸಭೆಯಲ್ಲಿಯೂ ಅಪ್ಸರಾದಿಗಳ ನಾಟ್ಯವನ್ನು ಮಾಡಿಸಲಿಕ್ಕೆ ಇಂಥದೊಂದು ನೂತನ ಪದ್ಧತಿಯ ನಾಟ್ಯಶಾಲೆಯನ್ನು ಕಟ್ಟಿಸುವದಕ್ಕೆ ನಿಶ್ಚಯಿಸಿ. ಅವನು ಆ ಶಾಲೆಯ ಉದ್ದ-ಅಗಲ-ಎತ್ತರ ಹಾಗು ಇತರ ಸೂಕ್ಷ್ಮ ವ್ಯವಸ್ಥೆಯನ್ನು ನಿರೀಕ್ಷಿಸಿದನು.

ಬಳಿಕ ದೇವತೆಗಳು ಶಹಪೂರ ಪೇಟೆಯೊಳಗಿಂದ ಹಾದು ಸ್ಟೇಶನ್ನಿನ ಕಡೆಗೆ ನಡೆದಿರಲು, ಅಲ್ಲಿ ಎಷ್ಟೋಜನ ಹಿಂದೂ ಬಾಲ-ಬಾಲಕಿಯುರು ವಿಚಿತ್ರ ವೇಷದಿಂದ ನಡೆಯುರುವದನ್ನು ಕಂಡರು. ಆಗ ಬ್ರಹ್ಮನು ವರುಣನಿಗೆ:—ವರುಣಾ, ಈ ಹುಡುಗರು ನಮ್ಮ ಹಿಂದುಗಳಂತೆ ತೋರಿದರೂ, ಇವರು ಹಾಕಿರುವ ಚಣ್ಣ, ಉಟ್ಟಿರುವ ಲುಂಗಿ ಇವುಗಳಿಂದಲೂ ತಲೆಗೆ ಹಾಕಿರುವ ಹೊಸ ಮಾದರಿಯ ಟೊಪ್ಪಿಗೆಗಳಿಂದಲೂ, ಇವರು ಮತಾಂತರ ತಾಳಿರುವಂತೆ ಕಾಣುವ ದಿಲ್ಲವೇ?

ವರುಣ:—ಅಜ್ಜಾ, ನಿಮ್ಮ ಅನುಮಾನದಂತೆ ಇವರು ನಿಜವಾಗಿ ಕುಲಗೆಟ್ಟ ಪಾಡುಂಗಳೇ. ಸನಾತನ ಧರ್ಮಹ್ರಾಸದ ಈ ಕಲಿಯುಗದಲ್ಲಿ ಬೌದ್ಧ, ಜೈನ ಹಾಗು ಮಹಮ್ಮದೀಯ ಧರ್ಮಗಳು ನಮ್ಮ ಹಿಂದೂ ಧರ್ಮವನ್ನು ಕೇವಲ ವಿರೋಧಭಕ್ತಿಯಿಂದ ಬೊಗ್ಗುಬಡಿಯಲು ಪ್ರಯತ್ನಿಸಿ ಸಾವಿರಾರು ವರ್ಷಗಳಾದವು; ಆದರೆ ಆ ಧರ್ಮದವರಿಂದ ನಮ್ಮ ಧರ್ಮಕ್ಕೆ ಹಿಂದಾನೊಂದು ಕಾಲದಲ್ಲಿ ಕೆಲಕಾಲದ ವರೆಗೆ ಕುಂದು ಉಂಟಾಗಿತ್ತು ಮಾತ್ರ. ಈ ನೂತನ ಕ್ರಿಸ್ತೀಧರ್ಮದವರು ನಮ್ಮ ಧರ್ಮದವರ ಹೊಟ್ಟೆಯಲ್ಲಿ ಹೊಕ್ಕು ಬೆನ್ನಿನಲ್ಲಿ ಬರಿದು, ನಮ್ಮ ಜನಗಳನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳುತ್ತಿರುವರು. ಈ ಸ್ಟೇಶನ್ನಿನ ಬಳಿಯ ಬೆಟಗೇರಿಯಲ್ಲಿ ಕ್ರಿಸ್ತೀಧರ್ಮದ ಪ್ರಚಾರವು ಹೆಚ್ಚಾಗಿ ಆಗಿರುತ್ತದೆ

ಈ ಗದಗೆ ಪಟ್ಟಣವು ಈಗ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಮುಖ್ಯಸ್ಥಳವಾಗಿದ್ದು, ಇಲ್ಲಿ ಹಿಂದು ರಾಷ್ಟ್ರೀಯ ಶಾಲೆಯು ಸ್ಥಾಪಿಸಲ್ಪಟ್ಟಿರುವದು.

ಬಳಿಕ ದೇವಗಣಗಳು ಪುನಃ ತ್ರಿಕುಟೇಶ್ವರ ದೇವಾಲಯಕ್ಕೆ ಹೋಗಿ, ಪೂಜಾರಿಗಳಲ್ಲಿ ಆಹ್ನಿಕ-ಊಟಗಳನ್ನು ತೀರಿಸಿಕೊಂಡು, ಅಲ್ಲಿಯೇ ಮಲಗಿ ರಾತ್ರಿಯನ್ನು ಕಳೆದರು; ಹಾಗು ಬೆಳಗಿನ ೪ ಗಂಟೆಯ ರೈಲಿನಲ್ಲಿ ಹತ್ತಿ ಹುಬ್ಬಳ್ಳಿಗೆ ನಡೆದರು. ಗಾಡಿಯು ಅಣ್ಣಿಗೇರಿಯ ಸ್ಟೇಶನ್ನಿನಲ್ಲಿ ಬಂದು ನಿಲ್ಲಲು, ಹಿಬ್ಬ ಗೃಹಸ್ಥನು ಲಗುಬಗೆಯಿಂದ ದೇವತೆಗಳು ಕುಳಿತ ಡಬ್ಬಿಗೆ ಬಂದನು. ಆಗ ವರುಣನು ಅವನನ್ನು ಕುರಿತು:—ನೀವು ಯಾವ ಊರವರು? ಎಲ್ಲಿಗೆ ನಡೆದಿರುವಿರಿ? ಎಂದು ಪ್ರಶ್ನೆ ಮಾಡಿದನು. ಆತನು:--ನಮ್ಮ ಊರು

ಯಮನೂರು. ಅದು ಇಲ್ಲಿಂದ ನಾಲ್ಕು ಹರದಾರಿಯ ಮೇಲೆ ಇದೆ. ಅಲ್ಲಿಯ ವಾರ್ಷಿಕ ಜಾತ್ರೆಯು ಇನ್ನೊಂದು ತಿಂಗಳಿಗೆ ಇದೆ ನಾನು ಈ ಸಾರೆ ಅಲ್ಲಿಯ ತಲೆಪಟ್ಟೆಯ ಕರದ ಗುತ್ತಿಗೇ ಹಿಡಿಯಬೇಕೆಂದು ಇಂದು ಧಾರವಾಡದ ಕಲೆಕ್ಟರರೆದುರಿಗೆ ಆ ಬಗ್ಗೆ ಆಗುವ ಲಿಲಾವಿಗೆ ನಡೆದಿರುವೆನು, ಎಂದನು.

ಬ್ರಹ್ಮನು ಆಶ್ಚರ್ಯಾನ್ವಿತನಾಗಿ:—ಮನುಷ್ಯರಿಗೆ ತಲೆಪಟ್ಟೆಯೇ? ಇದೆಂಥ ವಿಚಿತ್ರವು! ಆ ಯಮನೂರಲ್ಲಾಗುವ ಜಾತ್ರೆಯು ಯಾರದು? ಅಲ್ಲಿ ಪ್ರತಿವರುಷ ಎಷ್ಟು ಜನರು ಕಲೆಯುವರು?ಎಂದು ಪ್ರಶ್ನ ಮಾಡಲು,

ವರುಣನು:—ಅಜ್ಜಾ, ಅಲ್ಲಿ ಮಹಮ್ಮದೀಯ ಧರ್ಮದ ಒಬ್ಬ ಪೀರಸಾಹೇಬರ ಗೋರಿಯಿರುತ್ತದೆ. ಆ ಪೀರಸಾಹೇಬರ ಉರುಸ ಪ್ರತಿವರ್ಷ ಫಾಲ್ಗುಣಮಾಸದಲ್ಲಿ ಆಗುತ್ತದೆ. ಅಲ್ಲಿಗೆ ಆಗ ಒಟ್ಟಿಗೆ ಸುಮಾರು ಒಂದು ಲಕ್ಷದವರೆಗೆ ಜನರು ಬಂದು ಹೋಗುತ್ತಾರೆ. ಅಲ್ಲಿಯ ಆ ಪೀರರ ಸ್ಥಾನವು ಬಹು ಜಾಗೃತ ಸ್ಥಾನವು ಕಾಮುಕರ ಇಷ್ಟಾರ್ಥಗಳು ಬಹು ಬೇಗ ಈಡೇರುತ್ತವಂತೆ; ಆದರೆ ಅಜ್ಜಾ, ನಿಮ್ಮೆದುರಿಗೆ ಹೇಳಲಿಕ್ಕೆ ನಾಚಿಕೆ ಬರುತ್ತದೆ ಅಲ್ಲಿಗೆ ಹೋಗುವ ಯಾತ್ರಿಕರಲ್ಲಿ ೧೦೦ಕ್ಕೆ ೯೦ರಂತೆ ಅಷಕ-ಮಾಷಕ ಪಾತ್ರಗಳೇ ಆಗಿರುತ್ತವೆ; ಹಾಗು ಅಲ್ಲಿ ಅಸಂಖ್ಯ ಅಗ್ನಿವಾಹನ(ಕುರಿ)ಗಳ ಹನನವು ಎಗ್ಗಿಲ್ಲದೆ ಜರಗುತ್ತದೆ. ಆದರಿಂದ ಆ ಉರುಸಿನ ಕಾಲಕ್ಕೆ ಆ ಸ್ಥಾನವನ್ನು ನೋಡಹೋಗುವದು ಶಿಷ್ಟಸಮ್ಮತವಾಗಲಾರದು

ಅಷ್ಟರಲ್ಲಿ ಪೂರ್ವದಿಕ್ಕಿಗೆ ಒಂದೆರಡು ಎತ್ತರವಾದ ಗುಡ್ಡಗಳು ಕಾಣಿಸಲು, ಬ್ರಹ್ಮನು ವರುಣನನ್ನು ಕುರಿತು:—ವರುಣಾ, ಆಚ್ಛಾದನವಿಹೀನ ಕಲಶಗಳಂತೆ ತೋರುವ ಆ ಗುಡ್ಡಗಳು ಯಾ-ವವು? ಎಂದು ಪ್ರಶ್ನ ಮಾಡಿದನು.

ಅದಕ್ಕೆ ವರುಣನು:— ಇತ್ತ ಕಾಣುವ ಈ ಗುಡ್ಡವು ನವಲಗುಂದದ ಗುಡ್ಡವು; ಅತ್ತ ಕಾಣುವದು ನರಗುಂದದ ಗುಡ್ಡವು. ನರಗುಂದವು ಮೊದಲು ಸಂಸ್ಥಾನಿಕರ ವಶದಲ್ಲಿತ್ತು; ಆದರೆ ಕೈಕೆಳಗಿನವರ ದುರಾಲೋಚನೆಗೊಳಗಾಗಿ ಅಲ್ಲಿಯ ಸಂಸ್ಥಾನಿಕನು ಕ್ರಿ. ಶ. ೧೮೫೮ನೇ ಇಸ್ವಿಯಲ್ಲಿ ಇಂಗ್ಲಿಷಸರಕಾರದ ವಿರುದ್ಧ ಬಂಡಾಯ

ಮಾಡಲು, ಆತನು ಗಲ್ಲಿಗೇರಿಸಲ್ಪಟ್ಟನಲ್ಲದೆ, ಅವನ ಸಂಸ್ಥಾನವೂ ಖಾಲಸಾತ ಮಾಡಲ್ಪಟ್ಟಿತು. ನರಗುಂದದಲ್ಲಿ ಶ್ರೀ ವೇಂಕಟೇಶನ ಪ್ರಸಿದ್ಧ ದೇವಾಲಯುವಿರುತ್ತದೆ.

ದೇವತೆಗಳು ಈ ಪ್ರಕಾರದ ಹರಟೆಯಲ್ಲಿ ಮಗ್ನರಾಗಿರಲು ಉಗೆಬಂಡಿಯು ದುಂದೂರ, ಕುಸುಗಲ್ಲ ಸ್ಟೇಶನ್ನುಗಳನ್ನು ದಾಟಿತ್ತು. ಆಗ ಸರಾಸರಿ ಬೆಳಗಿನ ೬|| ಗಂಟೆಯಾಗಿರಬಹುದು. ಹುಬ್ಬಳ್ಳಿ ಸ್ಟೇಶನ್ನು ಬರಲಿಕ್ಕೆ ಇನ್ನು ಹಿಂದೆರಡು ಮೈಲುಗಳ ಅಂತರ ಮಾತ್ರ ಇರಬಹುದು. ಅಷ್ಟರಲ್ಲಿ ದೂರದಿಂದ "ಭೋಂ" ಎಂಬ ಕರ್ಕಶ ಶಬ್ದವು ರೈಲಿನ ನೈಸರ್ಗಿಕ ಕರ್ಕಶ ಶಬ್ದಕ್ಕಿಂತ ಹೆಚ್ಚಾಗಿ ಕೇಳತೊಡಗಿತು. ನಿದ್ದೆಗಣ್ಣಿನಿಂದ ತೂಕಡಿಸುತ್ತ ಕುಳಿತಿದ್ದ ನಾರಾಯಣನು ಆ ಕರ್ಕಶ ದನಿಕೇಳಿ ಎಚ್ಚತ್ತು, ಸಂತಪ್ತನಾಗಿ ಬಾಯಿಂದ ಏನೇನೋ ಹಿಟಗುಟ್ಟಲಾರಂಭಿಸಿದನು ಮಾತ್ರ. ಕೆಲ ಕ್ಷಣದಲ್ಲಿ ಅವನಿಗೆ ಪುನಃ ನಿದ್ರೆಹತ್ತಿತು.

---

## ಹುಬ್ಬಳ್ಳಿ.

ಆಗ ಬ್ರಹ್ಮನು ವರುಣನನ್ನು ಕುರಿತು:—ವರುಣಾ, ಇದೆಂಥ ರಾಕ್ಷಸೀ ಕೂಗು? ಇದು ಎಲ್ಲಿಂದ ಹಾಗು ಯಾವ ಉದ್ದೇಶಕ್ಕಾಗಿ ಮಾಡಲ್ಪಡುತ್ತದೆ? ಎಂದು ಪ್ರಶ್ನಮಾಡುವಷ್ಟರಲ್ಲಿ, ಆ 'ಭೋಂ' ಎಂಬ ಶಬ್ದವು ಪುನಃ ಆಗಹತ್ತಿ ಮೊದಲಿಗಿಂತಲೂ ಸ್ಪಷ್ಟವಾಗಿ ಕೇಳಲಾರಂಭಿಸಿತು. ಯಾಕೆಂದರೆ ಗಾಡಿಯು ಇಷ್ಟರಲ್ಲಿ ಸ್ಟೇಶನ್ನಿನ ಬಳಿಯಲ್ಲಿ ಬಂದಿತ್ತು. ಈಗ ಮಾತ್ರ ನಾರಾಯಣನು ಸಂಪೂರ್ಣವಾಗಿ ಎಚ್ಚತ್ತು ಎದ್ದು ಕುಳಿತು:—ವರುಣಾ, ಈ ಹಾಳು ಹುಬ್ಬಳ್ಳಿಗೇತಕ್ಕೆ ನಮ್ಮನ್ನು ಕರೆತಂದೆ? ಇಂಥ ಈ ಕರ್ಕಶದನಿಯು ಪಟ್ಟಣದಲ್ಲಿ ಆದಾವ ಸಭ್ಯಗೃಹಸ್ಥನು ವಾಸಮಾಡಿಕೊಂಡಿದ್ದಾನು? ಆ ಕೂಗು ಯಾರದು? ಇಲ್ಲಿ ಅಂಥ ಯಾವ ಪ್ರಚಂಡ ರಾಕ್ಷಸನು ನೆಲೆಗೊಂಡಿರುತ್ತಾನೆ?

ವರುಣ:—ನಿದ್ದೆಬಡಕ ನಾರಾಯಣಾ, ಹಗಲೆಲ್ಲ ಮಲಗಲಿಕ್ಕೆ ಈ ಕರ್ನಾಟಕವೇನು ಮಾವನ ಮನೆಯಾದ ಕ್ಷೀರಸಾಗರದ ನಿವಾಂತ ಸ್ಥಾನವೇ? ಇಲ್ಲಿಯ ಜನರು ಹೊಟ್ಟೆ ಹೊರಕೊಳ್ಳುವ ಉದ್ಯೋಗ

ದಲ್ಲಿ ನಿಮಗ್ನರಾದ್ದರಿಂದ ಇವರಿಗೆ ಕರ್ಕಶ-ಮಧುರ ಸ್ವರಗಳ ಪರಿವೆ ಇಲ್ಲ; ಈಗಾದ ಈ 'ಭೊಂ' ಸಪ್ಪಳವು ಇಲ್ಲಿಯ ಪ್ರಸಿದ್ಧ ರೇಲ್ವೆ ವರ್ಕಶಾಪಿನ 'ಭೊಂಗಾ'. ಈ ವರ್ಕಶಾಪಿನಲ್ಲಿ ಬೆಳಗಿನ ೭ ಗಂಟೆಯಿಂದ ಸಾಯಂಕಾಲದ ೫ ಗಂಟೆಯ ವರೆಗೆ ಕೆಲಸ ಮಾಡಬೇಕಾಗುತ್ತದೆ ಇಲ್ಲಿ ನಾಲ್ಕಾರು ಸಾವಿರ ಜನ ಕೆಲಸಗಾರರು ಪ್ರತಿನಿತ್ಯ ೪-೫ ಮೈಲು ದೂರದಿಂದ ಬಂದು ಕೆಲಸ ಮಾಡುತ್ತಿರುತ್ತಾರೆ. ಆ ಎಲ್ಲ ಜನರಿಗೆ ತಿವ್ಮ ಕೆಲಸದ ವೇಳೆಯು ಸಮೀಪಿಸಿತೆಂದು ಸೂಚಿಸಲಿಕ್ಕೆ ಈ 'ಭೊಂ' ಎಂಬ ಶಬ್ದವನ್ನು ಮಾಡುವ ಪರಿಪಾಠವನ್ನಿಟ್ಟುಕೊಂಡಿರುತ್ತಾರೆ. ಈ ವರ್ಕಶಾಪು ರೇಲ್ವೇ ಸ್ಟೇಶನ್ನಿನ ಪಕ್ಕದಲ್ಲಿಯೇ ಇರುವದರಿಂದ ಸಾಮಾನ್ಯ ಶಬ್ದ ಮಾಡಿದರೆ, ಈ ಅನೇಕ ಉಗಿಬಂಡಿಗಳ ಸಪ್ಪಳಗಳಲ್ಲಿ ಜನರು ಆ ಭೊಂಗಾದ ಸಪ್ಪಳವನ್ನು ಗುರ್ತಿಸಲಾರರೆಂದು ತಿಳಿದೇ 'ಭೊಂ' ಎಂಬ ಅತ್ಯಂತ ಕರ್ಕಶ ಶಬ್ದ ಮಾಡುತ್ತಿರುತ್ತಾರೆ

ಬ್ರಹ್ಮ: ವರ್ಕಶಾಪ ಅಂದರೇನು? ಅಲ್ಲಿ ೪-೫ ಸಾವಿರ ಜನರು ಒತ್ತಟ್ಟಿಗೆ ಸೇರಿ ಯಾವ ಕೆಲಸ ಮಾಡುತ್ತಿರುತ್ತಾರೆ?

ವರುಣ: ಆಜ್ಞಾ, ಬರೇ ಬಾಯಿಲೆ ಹೇಳುವದಕ್ಕಿಂತ ಈಗೆ ಹ್ಯಾಗೂ ವರ್ಕಶಾಪ್ ತೆರೆಯುವ ವೇಳೆಯೇ ಆಗಿರುತ್ತದೆ ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿಯೇ ನೋಡಿಕೊಂಡು ಬರುವಾ ನಡೆಯಿರಿ, ಎಂದು ಹೇಳಿದನು. ಅಷ್ಟರಲ್ಲಿ ಗಾಡಿಯು ಆ ಹುಬ್ಬಳ್ಳಿ ಜಂಕಶನ್ನಿಗೆ ಬಂದು ತಲುಪಿತು ಬ್ರಹ್ಮಾದಿಗಳು ಇಳಿದು ವರುಣನನ್ನನುಸರಿಸಿ ತಿಕಿಟು ಕಲೆಕ್ಟರನ ಬಳಿಯ ಮಾರ್ಗಕ್ಕೆ ನಡೆದರು; ಹಾಗು ನೂಕಾಡುತ್ತ ಹಿವ್ಮ ಅಲ್ಲಿಂದ ಹೊರಬಿದ್ದು, ಲಗುಬಗೆಯಿಂದ ಪ್ಲೇಟ್ಫಾರ್ಮಿನ ಬಳಿಯ ಪೂಲಿನೊಳಗಿಂದ ಹಾಯ್ದು ವರ್ಕಶಾಪಿನ ಕಡೆಗೆ ಸಾಗಿದರು.

ಆಗ ಏಳು ಬಡಿಯಲು ಕೆಲ ಕ್ಷಣಗಳ ಅವಕಾಶವಿತ್ತು. ಆ ಮಾರ್ಗ ಹಿಡಿಸಲಾರದೆ ಜನರು ಓಡುತ್ತೋಡುತ್ತ ವರ್ಕಶಾಪಿನ ಕಡೆಗೆ ಸಾಗಿದ್ದರು ಅಷ್ಟರಲ್ಲಿ ಮೂರನೇ ಸಾರೆಯ 'ಭೊಂ' ಶಬ್ದವಾಗಹತ್ತಿತು. ಆಗಂತೂ ಆ ಜನರ ವೇಗವು ೫೦೦ ರೂಪಾಯಿ ಬೆಲೆಯ ಕುದುರೆಯ ವೇಗವನ್ನು ನಾಚಿಸಿತು! ಅಷ್ಟು ಶೀಘ್ರವಾಗಿ ಓಡುವ ಪ್ರಸಂಗ ಬಂದುದರಿಂದ, ಎಷ್ಟೋ ಜನರ ಶ್ವಾಸಸಿರೋಧ

ವಾಗಲಾರಂಭಿಸಿತು. ಕೆಲವರ ಕೈಯೊಳಗಿನ ರೊಟ್ಟಿ-ಬುತ್ತಿಗಳ ಗಂಟುಗಳು ಬೇರೆಯವರ ಕೈ-ಕಾಲುಗಳಿಗೆ ತಾಕಿ ಮಣ್ಣುಪಾಲಾ ದವು! ಕೆಲವರ ಮೊಚ್ಚೆ-ಕೆರಗಳು ಹರಿದುದರಿಂದ ಅವರು ಅವನ್ನು ಆ ನಡುದಾರಿಯಲ್ಲಿಯೇ ಬಿಸುಟ ನಡೆದರು! ಕೆಲವರವಂತೂ ಚೊಣ್ಣ ಗಳ ತಿಬ್ಬಿಗಳು ಕೂಡ ಕಿತ್ತಿ ಹೋದವು! ಆದರೆ ಮಾಡುತ್ತಾ ರೇನು? ಕೇವಲ ಉದರಂಭರಣಕ್ಕಾಗಿ ತಮ್ಮನ್ನಿಷ್ಟು ಪರಾವಲಂ ಬಿಯಾಗಿ ನಿರ್ಮಿಸಿರುವ ಸೃಷ್ಟಿಕರ್ತನಾದ ಬ್ರಹ್ಮನನ್ನು ಬಾಯಿಗೆ ಬಂದ ಹಾಗೆ ಬೈಯುತ್ತ ನಡೆದಿದ್ದರು ಆ ಕೀಳು ನುಡಿಗಳನ್ನು ಕೇಳಿ, ಗುಪ್ತವೇಷದಿಂದ ನಡೆದಿದ್ದ ಬ್ರಹ್ಮದೇವನು ಕಿವಿ ಮುಚ್ಚಿ ಕೊಂಡು, ಟಕಮಕದೃಷ್ಟಿಯಿಂದ ತಮ್ಮ ಅನುಯಾಯಿಗಳ ಕಡೆಗೆ ನೋಡುತ್ತಿದ್ದನು.

ಹಾಗೂ ಹೀಗೂ ಮಾಡಿ ಮೂರನೇ ಸಾರೆಯ 'ಭೊಂ' ಸಪ್ಪ ಳವು ನಿಲ್ಲುವಷ್ಟರಲ್ಲಿ ಆ ಜನರು ವರ್ಕಶಾಪಿನ ಮುಖ್ಯ ಗೇಟಿಗೆ ಹೋದರು ಹಾಗು ತಂತಮ್ಮ ನಂಬರಿನ ಬಿಲ್ಲೆಗಳನ್ನು ಪಡಕೊಂಡು ಒಳಗೆ ಕೆಲಸಕ್ಕೆ ನಡೆದರು ತೀರ ತಡವಾಗಿ ಬಂದ ಕೆಲ ಜನರಿಗೆ ಪ್ರವೇಶವು ಸಿಗಲಿಲ್ಲ ಆದರಿಂದ ಅವರು ದುರ್ಮುಖಗಳಿಂದ ಹಿಂತಿರುಗಿ ಅಲ್ಲಿಯೇ ಸಮೀಪದಲ್ಲಿಯ ಗಿಡಗಳನ್ನಾಶ್ರಯಿಸಿ ಕುಳಿತುಕೊಂಡರು. ಬ್ರಹ್ಮಾದಿಗಳು ಮಾಯದಿಂದ ಒಳಗೆ ಪ್ರವೇಶಿಸಿ, ಅಲ್ಲಿಯ ಬಾಯಿ ಲರಶಾಪ್, ಮಶಿನ್‌ಶಾಪ್, ಪೇಂಟಿಂಗಶಾಪ್, ಕಾರ್ಪೆಂಟರಶಾಪ್, ಸ್ಮಿತ್ಥಶಾಪ್ ಮುಂತಾದ ಕಾರಖಾನೆಗಳನ್ನು ಕಂಡರು; ಹಾಗು ಆ ಬದಿಯ ಗುಡ್ಡದಂಥ ಕಲ್ಲಿದ್ದಲಿಯ ಗುಂಪಿಯನ್ನು ಕಂಡು ಅದರ ದಾಹಕ ಗುಣವನ್ನು ತಿಳಿದು, ತನ್ನ ಅಮರಾವತಿಯಲ್ಲಿ ಇನ್ನು ಮುಂದೆ ಈ ಕಲ್ಲಿದ್ದಲಿಯನ್ನೇ ಉಪಯೋಗಿಸುವದನ್ನು ಇಂದ್ರನು ನಿಶ್ಚಯಿಸಿದನು.

ನಂತರ ದೇವಗಣಗಳು ಪುನಃ ರೇಲ್ವೆ ಸ್ಟೇಶನ್ನಿಗೆ ಬಂದು, ಆ ವಿಸ್ತಾರವಾದ ಸ್ಟೇಶನ್ನನ್ನು ಕಂಡು ಟಾಂಗಾ ಮಾಡಿಕೊಂಡು ಊರೊಳಗೆ ನಡೆದರು. ದುರ್ಗದ ಬೈಲಿನಲ್ಲಿಯ ಶ್ರೀ ದತ್ತಮಂದಿ ರದಲ್ಲಿಳಿದು, ಸಮೀಪದ ವಿಶ್ರಾಂತಿಗೃಹದಲ್ಲಿ ಸ್ನಾನ-ಊಟಗಳನ್ನು ತೀರಿಸಿಕೊಂಡು ತುಸ ವಿಶ್ರಮಿಸಿ, ಅಪರಾಹ್ಣಕಾಲದಲ್ಲಿ ನಗರ ದರ್ಶ ನಕ್ಕೆ ಹೊರಟರು. ಅವರು ದುರ್ಗದ ಬೈಲು, ಮಾರ್ಕೇಟು, ಕಪಡಾ

ಬಜಾರ, ದೊಡ್ಡ ಪೇಟೆಗಳನು ನೋಡಿಕೊಂಡು, ಹಳೇಹುಬ್ಬಳ್ಳಿಯೊಳಗಿಂದ ಹಾಯ್ದು ಶ್ರೀ ಸಿದ್ಧಾರೂಢರ ಮಠಕ್ಕೆ ನಡೆದರು. ದಾರಿಯಲ್ಲಿ ವರುಣನು ಹುಬ್ಬಳ್ಳಿಯ ಪ್ರಾಚೀನ ಇತಿಹಾಸವನ್ನೂ, ಅದನ್ನು ಶಿವಾಜಿಯು ಸುಲಿದದ್ದನ್ನೂ, ನಂತರ ಅದು ಪೇಶ್ವೆ ಸರಕಾರದವರ ವಶವಾದುದನ್ನೂ, ತದನಂತರ ಅದು ಮೋಸದಿಂದ ದಕ್ಷಿಣೀಸಂಸ್ಥಾನಗಳ ಸರಂಜಾಮುದಿಂದ ಹ್ಯಾಗೆ ವಿಭಕ್ತವಾಡಲ್ಪಟ್ಟಿತೆಂಬದನ್ನೂ ಹೇಳಿ, ಅಲ್ಲಿಯ ಪ್ರಸಿದ್ಧ ಶ್ರೀ ಕೃಷ್ಣೇಂದ್ರಸ್ವಾಮಿಗಳೆಂಬ ಯತಿವರ್ಯರ ಇತಿಹಾಸವನ್ನೂ, ಅವರು ಶ್ರೀ ಚಿದಂಬರ ದೀಕ್ಷಿತರ ತಂದೆಯವರ ಕಾಲಕ್ಕೆ ಶ್ರೀ ಕಾಶೀ ಕ್ಷೇತ್ರದಲ್ಲಿ ಮಾಡಿದ ಗುರುಸೇವೆಯನ್ನೂ ವಿವರಿಸಿ ಹೇಳಿದನು. ಬಳಿಕ ಅವರೆಲ್ಲರೂ ಶ್ರೀಸಿದ್ಧಾರೂಢರ ಭವ್ಯ ಹಾಗು ಪ್ರಕಾಂಡಮಠವನ್ನು ನಿರೀಕ್ಷಿಸಿ, ಅಲ್ಲಿಯೇ ಹಿತ್ತಿಟ್ಟಿಗೆ ಭಕ್ತಸ್ತೋಮದಲ್ಲಿ ಕುಳಿತು ನಿಜಾನಂದದಲ್ಲಿ ಮಗ್ನರಾದ ಯೋಗಿವರ್ಯ ಶ್ರೀಸಿದ್ಧಾರೂಢರನ್ನು ಸಂದರ್ಶಿಸಿದರು ಆಗ ಎಲ್ಲರಿಗೂ ಪರಮಾನಂದವಾಯಿತು; ಆದರೆ ದೊಡ್ಡವರೆಂಬುವವರು ಬಹು ಠಕ್ಕರಾದುದರಿಂದ, ದೇವತೆಗಳಂತೆ ಶ್ರೀ ಆರೂಢರೂ ದೇವತೆಗಳ ಆ ಅನಪೇಕ್ಷಿತ ಆಗಮನವನ್ನು ಕುರಿತು ತಮ್ಮ ಭಕ್ತಕೋಟಿಯ ಮುಂದೆ ಸ್ವಲ್ಪವೂ ಹಿಡನುಡಿಯದೆ, ಕಣ್ಣುಸನ್ನೆಯಿಂದಲೇ ಇವರಿಗೆ ಅಲ್ಲಿಂದ ಹೊರಡಲು ಅಜ್ಞೆಯನ್ನಿತ್ತರು.

ಮಠದಿಂದ ಹೊರಹೊರಟ ಬಳಿಕ ವರುಣನು ಬ್ರಹ್ಮಾದಿಗಳಿಗೆ ಶ್ರೀಸಿದ್ಧಾರೂಢರ ಸವಿಸ್ತರ ಸಂಗತಿಯನ್ನು ತಿಳಿಸಿ, ಈ ಸಿದ್ಧಪ್ಪನು ಮೊದಲು ಶ್ರೀಗದಗದ ಮುಡಿಮಾಳಪ್ಪ ಸಾಧುಗಳ ಬಳಿಯಲ್ಲಿ ಅನುಗ್ರಹ ಪಡಕೊಂಡವನು. ಇವನಿಗೆ ಈಗ ಎಷ್ಟು ವರ್ಷಗಳಾಗಿರುವವೋ ಜನರರಿಯರು. ಈತನು ಮಹಾಜ್ಞಾನಿಯು; ಮತ್ತು “ಅವರವರ ತೆರದೆ ನಡೆಯುವವನ ಜಾಣ” ಎಂಬ ನಾಣ್ಣುಡಿಯಂತೆ ಇವನ ಆಚರಣೆಯಿರುವದರಿಂದ, ಇವನನ್ನು ಜನರು ಬಹಳ ಮನ್ನಿಸುವರು, ಎಂದು ಹೇಳಿದನು. ನಂತರ ಹುಬ್ಬಳ್ಳಿಗೆ ಸಮೀಪದಲ್ಲಿರುವ ಉಣಕಲ್ಲ ಎಂಬಲ್ಲಿ ಕೆಲ ದಿನಗಳ ಮಟ್ಟಿಗೆ ಮಾತ್ರ ಪ್ರಸಿದ್ಧಿ ಪಡೆದಿದ್ದ ‘ಸಿದ್ಧಪ್ಪ’ ನೆಂಬ ವರಪುರುಷನ ಆಖ್ಯಾಯಿಕೆಯನ್ನು ತಿಳಿಸಿದನು

ಶ್ರೀ ಸಿದ್ಧಾರೂಢ ಸ್ವಾಮಿಗಳವರ ಮಠದಿಂದ ಬರುವಾಗ

ದಾರಿಯಲ್ಲಿರುವ ಶ್ರೀ ಲಕ್ಷ್ಮೀಗಿರಣಿಯೆಂಬ ಪ್ರಸಿದ್ಧ ಗಿರಣಿಯನ್ನು ನೋಡಿದರು. “ಹುಬ್ಬಳ್ಳಿಯು ಉತ್ತರ ಕರ್ನಾಟಕದಲ್ಲೆಲ್ಲ ವ್ಯಾಪಾರ ಹಾಗು ಜನ ಸಂಖ್ಯೆಯು ಕಾರಣದಿಂದ ದೊಡ್ಡ ಪಟ್ಟಣ ವಿರುತ್ತದೆ. ಇಲ್ಲಿಯ ತಾಮ್ರ-ಹಿತ್ತಾಳೆಗಳ ಪಾತ್ರೆಗಳು ಪ್ರಸಿದ್ಧ. ಇಲ್ಲಿ ಒಂದು ರಾಷ್ಟ್ರೀಯ ಸಾಲೆ ಇರುತ್ತದೆ ವಿಶರ್ಣಪ್ರಸಾರಕ ಸಂಘವೆಂಬ ರಾಷ್ಟ್ರೀಯ ಸಂಸ್ಥೆಯು ಉತ್ಸಾಹದಿಂದ ನಡೆದಿರುತ್ತದೆ” ಮುಂತಾದ ಸಂಗತಿಗಳನ್ನು ಕೇಳಿ ತಿಳಿದು, ದೇವತೆಗಳು ತಮ್ಮ ವಾಸಸ್ಥಳವಾದ ದತ್ತಮಂದಿರಕ್ಕೆ ಬರುವಷ್ಟರಲ್ಲಿ ರಾತ್ರಿಯು ೮ಗಂಟೆಗಳು ಒಡೆದವು ನಂತರ ಹೋಟಲಿನಲ್ಲಿ ಊಟಮಾಡಿ, ಮಲಗಬೇಕೆಂದು ದೇವಸ್ಥಾನಕ್ಕೆ ಬರುತ್ತಿರಲು, ಸಮೀಪದಲ್ಲಿಯೇ ರಣಭೇರಿಯಂಥ ವಾದ್ಯವು ಕೇಳಲಾರಂಭಿಸಿತು. ಆಗ ಬ್ರಹ್ಮನು ವರುಣನಿಗೆ:—ತಮ್ಮಾ, ಇದೇನು? ದೇವ-ದಾನವರ ಕಾಳಗ ಸೂಚಕವಾದ ಈ ರಣಭೇರಿ ವಾದ್ಯದ ಶಬ್ದವೆಲ್ಲಿಂದ ಕೇಳಬರುತ್ತದೆ?

ವರುಣ:—ಅಜ್ಜಾ, ಈ ಸಪ್ಪಳವು ರಣಭೇರಿ ವಾದ್ಯದ್ದಲ್ಲ. ಇದು ‘ಬೇಂಡಬಾಜಾ’ ಎಂಬ ಇಂಗ್ಲಿಷ ಪದ್ಧತಿಯ ವಾದ್ಯವು ಈ ವಾದ್ಯವನ್ನು ಪ್ರತಿಯೊಂದು ಆಟ-ನೋಟಗಳಲ್ಲಿಯೂ, ಲಗ್ನ ಸಮಾರಂಭಗಳಲ್ಲಿಯೂ, ನಾಟ್ಯ-ನರ್ತನಗಳಲ್ಲಿಯೂ ಬಾರಿಸುವ ವಾಡಿಕೆಯನ್ನು ಈಚೀಚೆಗೆ ಈ ಕರ್ನಾಟಕಸ್ಥರು ಪ್ರಚಾರದಲ್ಲಿ ತರಹತ್ತಿರುತ್ತಾರೆ. ಆಗೋ ನೋಡಿರಿ; ನಕ್ಷತ್ರಗಳ ಸಾಲಿನಂಥ ದೀಪರಾಶಿಗಳುಳ್ಳ ಆ ಮನೆಯಲ್ಲಿ ‘ಸಿನೇಮಾ’ ಎಂಬ ಮೂಕ ಚಿತ್ರಪಟಗಳ ಆಟವು ನಡೆದಿರುತ್ತದೆ. ಆ ಆಟದಲ್ಲಿಯೇ ಈ ಬೇಂಡಬಾಜಾ ವಾದ್ಯವು ಬಾರಿಸಲ್ಪಡುತ್ತದೆ. ಅಜ್ಜಾ, ಈ ನೂತನ ಸಿನೇಮಾ ಚಿತ್ರಪಟವು ಅಪೂರ್ವವಾದದ್ದು. “ಲೋಕಮಾನ್ಯ ಟಿಳಕರ ಪುಣ್ಯ ದರ್ಶನ”ವೆಂದು ಅದಕ್ಕೆ ಹೆಸರು, ಎಂದು ಹೇಳಿ ಅವರನ್ನು ಆ ಸಿನೇಮಾ ನೋಡುವದಕ್ಕಾಗಿ ಹುರಿದುಂಬಿಸಿದನು

ಬ್ರಹ್ಮನು ಎಂಥ ಧರ್ಮಭೀರ ವಾದರೂ ನಿರ್ವಾಹವಿಲ್ಲದೆ ಜಾತಿ ಮತಭೇದಗಳನ್ನು ಲೆಕ್ಕಿಸದೆ ಆ ಕತ್ತಲುಮನೆಯಲ್ಲಿ ಹೋಗಿ ಕುಳಿತು ಲೋಕಮಾನ್ಯ ಟಿಳಕರ ಮೃತದೇಹದ ಚಿತ್ರವನ್ನೂ, ಅದನ್ನು ಮೆರೆಸುತ್ತ ನಡೆದಿರುವಾಗಿನ ಮುಂಬಾಪುರಿಯ ಓಣಿಗಳ ದೃಶ್ಯವನ್ನೂ, ಬೇರೆ ಎಷ್ಟೋ ಅಪೂರ್ವ ನೋಟಗಳನ್ನೂ ನೋಡಿ ಬಂದನು.

ನಂತರ ಆತನು ವರುಣನನ್ನು ಕುರಿತು:—ವರುಣಾ, ಲೋಕಮಾನ್ಯನೆಂದರೇನು? ಬಾಳ ಗಂಗಾಧರ ಟಿಳಕನಿಗೆ ಆ ಪದವಿಯು ಬರಲಿಕ್ಕೆ ಕಾರಣವೇನು?

ವರುಣ:—ಪುಣೆಯಲ್ಲಿರುತ್ತಿದ್ದ ಆ ಮಹಾತ್ಮನು ತನ್ನ ಅತುಲ ಸ್ವಾರ್ಥತ್ಯಾಗ, ಅಪೂರ್ವ ಬುದ್ಧಿಮತ್ತೆ, ಅಲೌಕಿಕ ಸಚ್ಛೀಲತ್ವ. ಕಷ್ಟಸಹಿಷ್ಣುತೆ ಮೊದಲಾದ ಎಷ್ಟೋ ಉಜ್ವಲ ಲೋಕಮಾನ್ಯ ಗುಣಗಳಿಂದ ನಮ್ಮ ಭಾರತವರ್ಷವನ್ನೇ ಏಕೆ, ಇಡಿ ಭೂಮಂಡಲವನ್ನೇ ದಂಗು ಬಡಿಸಿದನು. ಎಷ್ಟೋ ಪ್ರಸಂಗಗಳಲ್ಲಿ ಅವನ ಸಮಂಜಸ ಹಾಗು 'ಶಠಂ ಪ್ರತಿ ಶಾಠ್ಯಂ' ಎಂಬ ಆಚರಣೆಗಾಗಿ ಅವನ ಪ್ರತಿಸ್ಪರ್ಧಿಗಳಷ್ಟೇ ಅಲ್ಲ; ಹಿಂದುಸ್ತಾನವನ್ನಾಳುತ್ತಿರುವ ಬ್ರಿಟಿಶ ಸರಕಾರವು ಕೂಡ ಅವನ ವಿಷಯವಾಗಿ ಹಿಂದು ಬಗೆಯ ಅಭಿಮಾನಯುಕ್ತ ತ್ವೇಷವನ್ನು ತಾಳುತ್ತಿತ್ತು. ಆಜ್ಞಾ, ಹಿಂದೀಜನರ ದುರ್ದೈವದ ಮೂಲಕ ಆ ಲೋಕಮಾನ್ಯನು ಈ ಜನರನ್ನು ತೊರೆದು ಪರಲೋಕವನ್ನು ಕುರಿತು .ಗಮನಿಸಿದನು. ಇಂದು ನೋಡಿದ ಆ ಸಿನೇಮಾದೊಳಗಣ ಚಿತ್ರಪಟಗಳೇ ಆ ಲೋಕಮಾನ್ಯರ ಸ್ಮಶಾನ ಯಾತ್ರೆಯ ಚಿತ್ರಗಳಾಗಿರುತ್ತವೆ.

ಬಳಿಕ ದೇವತೆಗಳು ತಮ್ಮ ಬಿಡಾರಕ್ಕೆ ಬಂದು ಮಲಗಿದರು; ಹಾಗು ಮರುದಿನ ಬೆಳಗಿನ ರೈಲಿನಲ್ಲಿ ಕುಳಿತು ಧಾರವಾಡಕ್ಕೆ ನಡೆದರು,

---

## ಧಾರವಾಡ.

ರೈಲುಬಂಡಿಯು ಹುಬ್ಬಳ್ಳಿಯಿಂದ ಉತ್ತರಾಭಿಮುಖವಾಗಿ ನಡೆಯಿತು. ಎಡಕ್ಕೆ ಕಾಣುವ ಉಣಕಲ್ಲ ಕೆರೆಯ ವಿಷಯವಾಗಿ ದೇವಗಣಗಳಲ್ಲಿ ಸಂಭಾಷಣವು ನಡೆದಿರಲು, ಗಾಡಿಯು ವೇಗದಿಂದ ಸಾಗಿ ಧಾರವಾಡದ ಸಮೀಪಕ್ಕೆ ಬಂದಿತು ಆಗ ವರುಣನು ಎಡಬದಿಯ ಹಿಂದು ಕೊಳ್ಳದಂಥ ಪ್ರದೇಶವನ್ನು ತೋರಿಸಿ:—ಇದೇ ಶಾಲ್ಮಲೀನದಿಯ ಉಗಮಸ್ಥಾನವೆಂದೂ, ಇಲ್ಲಿಯೇ ಶ್ರೀ ಸೋಮೇಶ್ವರನು ಜೀರ್ಣವಾದ ದೇವಾಲಯದಲ್ಲಿ ನಡಗುತ್ತ ವಾಸಿಸುತ್ತಿರುವನೆಂದೂ ಹೇಳಿದನು. ಅಷ್ಟರಲ್ಲಿ ಚಿಕ್ಕ ದೊಡ್ಡವಾದ ಕೆಲವು

ದಿಬ್ಬಗಳು ಕಾಣಿಸಲು, ಬ್ರಹ್ಮನು:—ವರುಣಾ ಈ ದಿಬ್ಬಗಳಾವವು? ಇವುಗಳ ಬಗ್ಗೆ ವಿಶೇಷವೇನಾದರೂ ಗೊತ್ತಿದೆಯೇನು? ಎಂದು ಪ್ರಶ್ನೆ ಮಾಡಿದನು. ಆಗ ವರುಣನು:—ಇವು ಧಾರವಾಡ ಬದಿಯ ನವಲೂರ ತೆಂಬಗಳು ಒಂದು ಶತಮಾನದ ಹಿಂದೆ ಇಲ್ಲಿಯೇ ಪೇಶ್ವೆ ಹಾಗು ಟೀಪುವಿನ ಸೈನ್ಯಗಳಲ್ಲಿ ಘನಘೋರವಾದ ಯುದ್ಧವಾಯಿತು ಇಲ್ಲಿಂದ ಒಂದೆರಡು ಮೈಲುಗಳ ಮೇಲೆ ಧಾರವಾಡ ಶಹರದ ಉತ್ತರದಿಕ್ಕಿಗೆ ಒಂದು ಕಿಲ್ಲೆಯಿರುತ್ತದೆ ಅದು ವಿಶೇಷವಾಗಿ ಮಣ್ಣಿನಿಂದಲೇ ಕಟ್ಟಲ್ಪಟ್ಟಿರುವದರಿಂದ ಅದಕ್ಕೆ 'ಮಣಕಿಲ್ಲೆ' ಎಂದೆನ್ನುತ್ತಾರೆ. ಅದು ಈಗ ಹಾಳಾಗಿರುತ್ತದೆ. ಅಲ್ಲಿ ಈಗ ಸಿವ್ಹಿಲ್ ಆಸ್ಪತ್ರೆಯೂ, ಕೆಲವು ಕಚೇರಿಗಳೂ ಹಾಗು ಹಲಕೆಲವು ಜನರ ಬಂಗ್ಲೆಗಳೂ ಇರುತ್ತವೆ, ಎಂದು ನುಡಿಯುವಷ್ಟರಲ್ಲಿ ಗಾಡಿಯು ಧಾರವಾಡದ ಪ್ರಶಸ್ತವಾದ ಸ್ಟೇಶನ್ನಿನಲ್ಲಿ ಬಂದು ನಿಂತಿತು. ಕೂಡಲೆ ದೇವಗಣಗಳು ಇಳಿದು ಹೊರಗೆ ಬಂದು ಒಂದು ಟಾಂಗೆಯಲ್ಲಿ ಕುಳಿತು, ಹಾಲಗೇರಿಯ ಬಳಿಯ ಶ್ರೀ ಶಂಕರಾಚಾರ್ಯರ ಪಾಠಶಾಲೆಯಲ್ಲಿ ಇಳಕೊಂಡರು. ನಂತರ ಸಮೀಪದ ದತ್ತಮಂದಿರದಲ್ಲಿ ಸ್ನಾನ-ಭೋಜನಗಳನ್ನು ತೀರಿಸಿಕೊಂಡು, ಮಧ್ಯಾಹ್ನದಲ್ಲಿ ಊರೊಳಗೆ ತಿರುಗಲಿಕ್ಕೆ ನಡೆದರು.

ನೂತನ ಮಾರ್ಕೆಟು, ವೀರಶೈವ ಪಾಠಶಾಲೆ, ಜಜ್ಜಕೋರ್ಟ, ದರ್ಬಾರ ಹಾಲ್, ಹಾಯಸ್ಕೂಲ, ಜಿಲ್ಲಾ ಕಚೇರಿ ಮುಂತಾದವುಗಳನ್ನು ಸಂದರ್ಶಿಸಿ, ಅದರಾಚೆಯ ಭವ್ಯವಾದ ಮಂದಿರದ ಕಡೆಗೆ ನಡೆದರು. ಅಷ್ಟರಲ್ಲಿ ಬಲಬದಿಯ ಒಂದು ತಗಡಿನ ಚಪ್ಪರದಿಂದ 'ಟುಪ್' ಎಂಬ ಸಪ್ಪಳವಾಗಲು, ಬ್ರಹ್ಮನು ಮೆಟ್ಟಿ ಬಿದ್ದು, ಇದೇನೆಂದು ಪ್ರಶ್ನೆ ಮಾಡಿದನು. ಆಗ ವರುಣನು:—ಅಜ್ಜಾ, ಇದು ತೋಫಿನ ಸಪ್ಪಳವು. ಈ ಊರಲ್ಲಿ ಪ್ರತಿನಿತ್ಯ ಮಧ್ಯಾಹ್ನ ೧೨ ಗಂಟೆಗೆ ತೋಫು ಹಾರಿಸುವ ವಾಡಿಕೆಯಾಗಿರುತ್ತದೆ.

ತೋಫಿನ ಸಪ್ಪಳವು ಆದ ೧-೨ ಸೇಕಂದುಗಳಲ್ಲಿ ಠಣ್ ಠಣ್ ಎಂದು ೧೨ ಸಾರೆ ಸಪ್ಪಳವಾಯಿತು. ಆಗ ವರುಣನು:—ಅಜ್ಜಾ, ಈಗ ಗಂಟೆ ಬಾರಿಸಿದ ದೊಡ್ಡ ಗಡಿಯಾರವು ಈ ಊರಲ್ಲಿ ಈ ಮೊದಲಿಗಿದ್ದ ರೇಲ್ವೆಯ ಹೆಡ್ ಅಫೀಸಿನ ಕಟ್ಟಡದಲ್ಲಿರುತ್ತದೆ. ಅಗೋ ನೋಡಿರಿ, ಎದುರಿಗಿರುವ ಪ್ರಶಸ್ತ ಹಾಗು ಸುಂದರವಾದ

ಕಟ್ಟಡವೇ ಅದು, ಎಂದು ಹೇಳಿ, ವರುಣನು ದೇವತೆಗಳಿಗೆ ಆ ತ್ರಿಶೂಲದಂಥ ಮೂರು ಎಸಳಿನ ಕಟ್ಟಡವನ್ನು ತೋರಿಸಿದನು.

ಆ ಮೇಲೆ ದೇವಗಣಗಳು ಕಾಲೇಜ, ಹೆಡ್‌ಪೋಸ್ಟ್ ಆಫೀಸು, ಡಿಸ್ಟ್ರಿಕ್ಟ ಪೋಲಿಸ ಕ್ವಾರ್ಟರ್ಸ ಮುಂತಾದವುಗಳನ್ನು ನೋಡಿಕೊಂಡು ಬರುತ್ತಿರಲು, ಅವರಿಗೆ ದಾರಿಯಲ್ಲಿ ಗೋರಿಯಂಥ ಒಂದು ದೃಶ್ಯವು ಕಾಣಿಸಿತು. ಆಗ ವರುಣನು:—ಇದು ಥ್ಯಾಕರೆ ಎಂಬ ಬ್ರಿಟಿಶ ಅಮಲದಾರನ ಸಮಾಧಿಯು ಕಿತ್ತೂರ ಕಾಳಗದಲ್ಲಿ ಈತನ ದೇಹಾವಸಾನವಾಯಿತು, ಎಂದು ಹೇಳಿದನು.

ಬಳಿಕ ದೇವತೆಗಳು ಊರಲ್ಲಿ ತಮ್ಮ ಬಿಡಾರಕ್ಕೆ ಬಂದು ಸಾಯಂಕಾಲದ ಆಹ್ನಿಕಗಳನ್ನು ತೀರಿಸಿಕೊಂಡು ಧಾರವಾಡದ ಪ್ರಚಲಿತ ರಾಜಕೀಯ ಸಾಮಾಜಿಕ ವಿಷಯಗಳನ್ನು ಕುರಿತು ಮಾತಾಡತೊಡಗಿದರು:—

“ಇಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಚಳವಳಿಗಳು ಇತರ ಪ್ರಾಂತಗಳಂತೆ ಶೋಚನೀಯ ಸ್ಥಿತಿಯಲ್ಲಿರುವದಿಲ್ಲ. ಅದರಂತೆ ಸತ್ಯ ಸಮಾಜಿಷ್ಟರ ನಿಂದ್ಯ ಪ್ರಕಾರಗಳೂ ಇಲ್ಲಿ ನಡೆದಿರುವದಿಲ್ಲ; ಆದರೆ ಧಾರವಾಡದಲ್ಲಿ ಕ್ರಿ. ಶ. ೧೯೨೧ ರಲ್ಲಾದ ಗೋಳೀಬಾರ ಪ್ರಕರಣದಲ್ಲಿ ಯಾವ ತರಹದಿಂದಲೇ ಯಾಕಾಗಲೊಲ್ಲದು, ನಿರಪರಾಧಿಗಳಾದ ಬಹು ಜನರಿಗೆ ಶಿಕ್ಷೆ ವಿಧಿಸಲ್ಪಟ್ಟದ್ದರಿಂದ, ಧಾರವಾಡದ ಸುಶಿಕ್ಷಿತ ಸಮಾಜದವರಿಗೆ ಇದೊಂದು ಬಗೆಯ ಲಾಂಛನವೆಂದೇ ಹೇಳಬೇಕಾಗುತ್ತದೆ ಆದರೆ ಅಜ್ಞಾ, ಕಲಿಕಾಲದ ಮಹಾತ್ಮ್ಯವನ್ನೇನು ವರ್ಣಿಸುವದದೆ? ಆಗ ಉಭಯ ಬಣಗಳಲ್ಲಿ ಉಂಟಾಗಿದ್ದ ಆ ವಿಷಮತೆಯು ಈಗ ಲುಪ್ತವಾಗುತ್ತ ಬಂದಿದ್ದರೂ, ಹಲಕೆಲವು ಕುನಸು ಮನಸುಳ್ಳವರ ಅಂತರಂಗಗಳು ಇನ್ನೂ ಶಾಂತವಾದಂತೆ ಕಾಣುವದಿಲ್ಲ. ಇಲ್ಲಿ ರಾಷ್ಟ್ರೀಯ ಮಹಾವಿದ್ಯಾಲಯ, ಮಹಿಳಾ ವಿದ್ಯಾಲಯ, ಕರ್ನಾಟಕ ಹಾಯಸ್ಕೂಲ ಮುಂತಾದ ಸ್ವತಂತ್ರ ಶಿಕ್ಷಣ ಸಂಸ್ಥೆಗಳೂ, ಶೇತಕೀ ಫಾರ್ಮ, ಮಿಶನ್‌ಸ್ಕೂಲ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ ಗಂಡುಹುಡುಗರ ಟ್ರೇನಿಂಗ ಕಾಲೇಜ, ಆರ್ಟ್ಸ ಕಾಲೇಜ ಮೊದಲಾದ ಸರಕಾರೀ ಶಿಕ್ಷಣ ಸಂಸ್ಥೆಗಳೂ ಇರುವದರಿಂದ ಈ ಧಾರವಾಡ ಶಹರವು ಇಡೀ ಕರ್ನಾಟಕ ಪ್ರಾಂತದ ಶಿಕ್ಷಣದ ಕೇಂದ್ರವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.”

# ಗೋಕರ್ಣ.

ದೇವತೆಗಳು ಭೂಲೋಕಕ್ಕೆ ಬಂದು ಬಹಳ ದಿನಗಳಾಗಿರದಿದ್ದರೂ ಮಾಘಮಾಸದ ಅಸಿತಪಕ್ಷವು ಪ್ರಾರಂಭವಾಗಿ ೯-೧೦ ದಿನಗಳಾಗಿದ್ದವು ಅದರಿಂದ ವರುಣನು ಮನದಲ್ಲಿ ಏನೋ ಆಲೋಚಿಸಿ ಬ್ರಹ್ಮನನ್ನು ಕುರಿತು:—ನೀವು ಹ್ಯಾಗೂ ಕರ್ಣಾಟಕಕ್ಕೆ ಬಂದಿರುತ್ತೀರಿ. ಈ ಕರ್ಣಾಟಕದಲ್ಲಿಲ್ಲ, ಅದೇಕೆ ಇಡಿ ಭೂಮಂಡಲದಲ್ಲಿ ಪ್ರಖ್ಯಾತವಾದ ಗೋಕರ್ಣೇಶ್ವರನ ದರ್ಶನವನ್ನು ತಕ್ಕೊಂಡು ಹೋಗುವದು ವಿಹಿತವಾಗಿರುತ್ತದೆ. ಮೇಲಾಗಿ ಗೋಕರ್ಣಕ್ಷೇತ್ರದ ಉತ್ಸವವೂ ಸಮೀಪಿಸಿದೆ. ನಾಳಿನ(ಮಾಘ ಬ||) ೧೪ ಗೇ ಅಲ್ಲಿಯ ಉತ್ಸವವಿರುತ್ತದೆ. ಆ ಸ್ಥಾನವನ್ನು ನೋಡಿಕೊಂಡು ಮಹೇಶ್ವರನ ಭೆಟ್ಟಿ ತಕ್ಕೊಂಡು ಮುಂದೆ ಹೋಗುವಾ, ಎಂದನು. ಬ್ರಹ್ಮನ ಹೊರತು ಮಿಕ್ಕವರಿಗೆ ಅದು ಸಮ್ಮತವಾಯಿತು. ಮನೆಯಲ್ಲಿ ತನ್ನ ತರುಣ ಹೆಂಡತಿಯೊಬ್ಬಳೇ ಇರುವಳೆಂಬ ನೆವವನ್ನೇ ಅವನು ಪುನಃ ಮುಂದೆ ಮಾಡಿದನು; ಆದರೆ ಉಳಿದವರು ಮುಗುಳು ನಗೆ ನಕ್ಕು ಅವನ ಆ ನೆವವನ್ನು ಅಲ್ಲಗಳೆಯಲು, ಅವನು ಮೌನನಾಗಿ ಅರ್ಧಸಮ್ಮತಿಯನ್ನು ತೋರಿಸಿದನು ಮರುದಿನ ಬೆಳಿಗ್ಗೆ ದೇವಗಣಗಳು ಹುಬ್ಬಳ್ಳಿಗೆ ಬಂದು, ಅಲ್ಲಿಂದ ನೆಟ್ಟಗೆ ಗೋಕರ್ಣಕ್ಕೇ ಒಂದು ಬಾಡಿಗೆಯ ಮೋಟಾರ ಬಂಡಿಯನ್ನು ಗೊತ್ತು ಮಾಡಿಕೊಂಡು ನಡೆದರು.

ಕಲಘಟಗಿ, ಮೇಲ್ಗ್ಯ ಯಲ್ಲಾಪುರಗಳನ್ನು ದಾಟ ದೇವತೆಗಳ ಮೋಟಾರಕಾರು ಅರಬೈಲು ಘಟ್ಟದೊಳಗೆ ನಡೆಯಿತು ಅಲ್ಲಿಯ ಆ ಭಯಂಕರ ದಟ್ಟಡವಿ, ಗುಡ್ಡ-ಗಂಹ್ವರಗಳ ವಿಕರಾಳ ಸ್ವರೂಪಗಳನ್ನು ನೋಡಿ ಪ್ರಯಾಣಿಕರ ಹೌಹಾರುವದು; ದನ-ಕರುಗಳು ಎದೆಗುಂದುವವು; ಅಲ್ಲಿಯ ಹುಲಿ, ಚಿರ್ಚ ಮೊದಲಾದ ಹಿಂಸ್ರ ಶ್ವಾಪದಗಳ ಕಾಟವಂತೂ ಹೇಳಲಾಸಲ್ಲ ಅಂತೇ ಆ ಘಟ್ಟದೊಳಗೆ ಪ್ರವಾಸ ಮಾಡುವ ಚಕ್ಕಡಿ-ಬಂಡಿಕಾರರು ತಮ್ಮ ವಾಹನಗಳನ್ನು ರಾತ್ರಿಯ ಸಮಯದಲ್ಲಿ ದೀಪದ ಬೆಳಕಿನಲ್ಲಿ ಸಾಲುಗಟ್ಟಿಕೊಂಡು ಸಾಗಿಸುತ್ತಾರೆ. ನಮ್ಮ ದೇವತೆಗಳ ಯಾಂತ್ರಿಕ ವಾಹನವು ಕ್ಷಣಕ್ಷಣಕ್ಕೆ "ಭೊಂ ಭೊಂ" ಎಂದು ಧ್ವನಿಗೆಯ್ಯುತ್ತ ತನ್ನ

ಮುಂದೆ ಬರುವ-ಹೋಗುವ ಪ್ರಯಾಣಿಕರಿಗೆ ತನ್ನ ಆಗಮನದ ಸೂಚನೆಯನ್ನು ಕೊಡುತ್ತ ಮಂದಗತಿಯಿಂದ ಸಾಗಿತ್ತು. ಬೆಳಿಗ್ಗೆ ೧೦ ಗಂಟೆಗೆ ಹೊರಟ ಆ ತೈಲಶಕಟವು ಸಾಯಂಕಾಲದ ೫ ಗಂಟೆಗೆ ಗೋಕರ್ಣಕ್ಷೇತ್ರಕ್ಕೆ ತಲುಪಿತು. ದೇವತೆಗಳಿಗೆ ಅಂದು ಹ್ಯಾಗೂ ಏಕಾದಶಿಯ ಉಪವಾಸವಿದ್ದದರಿಂದ, ಭೋಜನ ಮುಂತಾದವುಗಳಿಗೆ ನಡುದಾರಿಯಲ್ಲಿ ಎಲ್ಲಿಯೂ ವಿಶೇಷವಾಗಿ ತಡೆಯುವ ಕಾರಣ ಬೀಳಲಿಲ್ಲ. ದೇವತೆಗಳು ಗೋಕರ್ಣಕ್ಷೇತ್ರದಲ್ಲಿ ಒಬ್ಬ ಸಾತ್ವಿಕ ಹವ್ಯಕ ಬ್ರಾಹ್ಮಣನಲ್ಲಿ ಉಳಿದರು ವರುಣನು ಕರ್ನಾಟಕದಲ್ಲೆಲ್ಲ ಸಂಚಾರ ಮಾಡಿ ಇಲ್ಲಿಯ ಭಾಷೆ ಹಾಗು ನಡಾವಳಿಗಳನ್ನು ಬಲ್ಲವನಾಗಿದ್ದರೂ, ಅವನಿಗೆ ಆ ಹವ್ಯಕಬ್ರಾಹ್ಮಣರ ಅರೆಗನ್ನಡಭಾಷೆಯೂ ವಿಚಿತ್ರ ನಡವಳಿಕೆಗಳೂ ಕ್ಷಣಹೊತ್ತು ಆಶ್ಚರ್ಯವನ್ನುಂಟುಮಾಡದೆ ಬಿಡಲಿಲ್ಲ.

ಸಾಯಂಕಾಲಕ್ಕೆ ಬ್ರಹ್ಮಾದಿಗಳನ್ನು ಕರಕೊಂಡು ಆ ಹವ್ಯಕ ಬ್ರಾಹ್ಮಣನು-ಪುರೋಹಿತನು-ಸದಾಶಿವನ ಧೂಲಿದರ್ಶನಕ್ಕಾಗಿ ಗೋಕರ್ಣೇಶ್ವರನ ಮಂದಿರಕ್ಕೆ ನಡೆದನು; ಆದರೆ ರಾಜಸಭೆ, ದೊಡ್ಡ ಮನುಷ್ಯರ ಭೇಟಿ ಮುಂತಾದ ಕಾರ್ಯಗಳಿಗೆ ಹೋಗುವಾಗ ಹ್ಯಾಗೆ ಕೆಲವು ಮಧ್ಯಸ್ತಜನರ ಶಿಫಾರಸು ಬೇಕಾಗುತ್ತದೆಯೋ, ಹಾಗೆ ಆ ಮಹೇಶ್ವರನ ದರ್ಶನಕಾಲಕ್ಕೂ ಮೊದಲು ಅಲ್ಲಿಯ ದ್ವಾರಸಮೀಪದಲ್ಲಿರುವ ಗಣಪತಿಯನ್ನು ಸಂದರ್ಶಿಸಿ ಖಾದ್ಯಕ್ಕಾಗಿ ಅವನಿಗೆ ಕೆಲವು ದುಡ್ಡು ಲಂಚಕೊಡಬೇಕಾಗುತ್ತದೆ. ಪುರೋಹಿತನು ಇವರನ್ನು ಗಣಪತಿಯ ದರ್ಶನಕ್ಕೆ ಪಶ್ಚಿಮದ್ವಾರದಿಂದ ಕರೆದೊಯ್ದು, ಉತ್ತರದ್ವಾರದಿಂದ ಹೊರಗೆ ಕರೆತಂದನು. ನಂತರ ಮಹೇಶನ ಧೂಲಿದರ್ಶನವಾಯಿತು

ಮರುದಿನ ದೇವತೆಗಳು ಕ್ಷೇತ್ರೋಪವಾಸವನ್ನು ಮಾಡಿ, ಮಧ್ಯಾಹ್ನದಲ್ಲಿ ಸ್ನಾನಾನಂತರ ಮಹಾದೇವನ ದರ್ಶನಕ್ಕೆ ಹೊರಟರು ಆಗ ಅಂಬಿಕಾಧವನು ಊಟ ಮಾಡಿ ತುಸ ವಿಶ್ರಮಿಸಿದ್ದನು. ಮೃಡಾನಿಯು ಆತನ ಪಾದಸೇವೆಯನ್ನು ಮಾಡುತ್ತ ಕುಳಿತಿದ್ದಳು. ನಾರಾಯಣ-ಬ್ರಹ್ಮಾದಿಗಳನ್ನು ಕಂಡು ಅವಳು ಚಟಕ್ಕನೆ ಎದ್ದು ನಿಂತು, ಅವರನ್ನು ಒಳಗೆ ಬರಮಾಡಿಕೊಂಡು ಸಮೀಪದಲ್ಲಿಯೇ ಹಾಸಿಟ್ಟಿದ್ದ ಆಸನಗಳಲ್ಲಿ ಕೂರಲಿಕ್ಕೆ ವಿನಂತಿ ಮಾಡಿಕೊಂಡಳು.

ಅವರೆಲ್ಲರೂ ಆಸನಾಧಿಷ್ಠಿತರಾದ ಬಳಿಕ ಅವಳು ಮುಂದೆ ಬಂದು ಬ್ರಹ್ಮನಿಗೆ ನಮಸ್ಕರಿಸಿದಳು. ನಂತರ ನಾರಾಯಣನು ಅವಳಿಗೆ ನಮಸ್ಕಾರ ಮಾಡಿ, ಅಣ್ಣನಾದ ಮಹಾದೇವನ ಹಾಗು ಗಣಪತಿ-ಷಡಾನನರ ಕುಶಲವನ್ನು ವಿಚಾರಿಸಿದನು. ಅವಳು ಅವರೆಲ್ಲರ ಆರೋಗ್ಯವನ್ನು ತಿಳಿಸಿ, ತನ್ನ ಅಕ್ಕ-ತಂಗಿಯರಾದ ಸರಸ್ವತಿ-ಲಕ್ಷ್ಮಿಯರ ಕುಶಲವನ್ನು ಕೇಳಿಕೊಂಡಳು ಅಷ್ಟರಲ್ಲಿ ಮಹಾದೇವನು ಎಚ್ಚತ್ತು ಎದ್ದು ಕುಳಿತನು. ಕೂಡಲೆ ನಾರಾಯಣ, ಇಂದ್ರ ಹಾಗು ವರುಣರು ಅವನಿಗೆ ಸಾಷ್ಟಾಂಗ ಪ್ರಣಿಪಾತ ಮಾಡಿದರು. ಆಗ ಶಿವನು ಅವರೆಲ್ಲರಿಗೆ ಆದರದಿಂದ ಆಶೀರ್ವದಿಸುತ್ತ, ವೃದ್ಧ ಪಿತಾಮಹನ ಅಡಿದಾವರೆಗಳಿಗೆ ಪೊಡಮಟ್ಟನು.

ಈ ಉಪಚಾರಗಳಲ್ಲಿಯೇ ಕೆಲ ಕಾಲವು ಕಳೆದ ನಂತರ ಶಿವನು:—ಅಣ್ಣಾ, ತಮ್ಮ ವೃದ್ಧಾಪ್ಯಕಾಲದಲ್ಲಿ ನಾನೇ ಬಂದು ತಮ್ಮ ಯೋಗಕ್ಷೇಮವನ್ನು ತಿಳಿದು ಬರಬೇಕಾಗಿದ್ದಿತು; ಆದರೆ ಈ ಬಡತನದ ಸಂಸಾರತಾಪದಿಂದಲೂ, ಈ ಗೋಕರ್ಣಕ್ಕೆ ತಂಡ ತಂಡವಾಗಿ ಬರುವ ನನ್ನ ಭಕ್ತರ ಕಾಟದಿಂದಲೂ, ನನ್ನ ಅವಿವೇಕ ಮಕ್ಕಳೀರ್ವರ ಹಟಮಾರಿತನದಿಂದಲೂ, ಅವರನ್ನು ಮೇಲುಗೆಟ್ಟಿಕೊಂಡು ಬರುವ ಈಕೆಯ ತ್ರಾಸದಿಂದಲೂ ಪೇಚಾಡುತ್ತಿರುವ ನನಗೆ ಬರಲಿಕ್ಕೆ ಅನುಕೂಲವಾಗಲಿಲ್ಲ. ಅದು ಹೇಗೆಯೇ ಇರಲಿ, ನೀವೆಲ್ಲರೂ ಇಲ್ಲಿಗೆ ಬಂದದ್ದು ಬಹು ಯೋಗ್ಯವಾಯಿತು. ಇಲ್ಲಿ ಕೆಲ ದಿನ ಇದ್ದು ಹೋಗಬೇಕು, ಎಂದನು. ಪರಶಿವನ ಇಚ್ಛೆಯ ಮೇರೆಗೆ ಬ್ರಹ್ಮಾದಿ ದೇವತೆಗಳು ನಾಲ್ಕು ದಿವಸಗಳ ವರೆಗೆ ಶ್ರೀ ಗೋಕರ್ಣ ಕ್ಷೇತ್ರದಲ್ಲಿದ್ದರು. ಮಾಘ ಬಹುಳ ಚತುರ್ದಶಿಯ ದಿವಸ ಉಪವಾಸ ಮಾಡಿ, ರಾತ್ರಿಯ ದ್ವಿತೀಯ ಯಾಮದಲ್ಲಿ ಶ್ರೀ ಮಹೇಶ್ವರನ ಗೋಕರ್ಣಾಕಾರದ ಲಿಂಗದರ್ಶನವನ್ನು ಮಾಡಿ ಸಾರ್ಥಕತೆಯನ್ನು ಪಡೆದರು. ಮರುದಿನ ಪಶ್ಚಿಮ ಸಮುದ್ರದ ಪುಣ್ಯತೀರ್ಥದಲ್ಲಿ ಸ್ನಾನ, ತರ್ಪಣ, ಪಿಂಡಪ್ರದಾನಗಳನ್ನು ಮುಗಿಸಿಕೊಂಡರು; ಹಾಗು ಅಲ್ಲಿಯೇ ಕುಳಿತು ವರುಣನಿಂದ ರಾವಣನ ಮಾತೆಗಾಗಿ ಶ್ರೀ ಗೋಕರ್ಣೇಶ್ವರನ ಉತ್ಪತ್ತಿಯನ್ನೂ, ಲಂಕೇಶ್ವರನ ಘೋರವಾದ ತಪಸ್ಸನ್ನೂ, ನಾರದರ ಸೂಚನೆಯಂತೆ ದೇವತೆಗಳಿಂದ ಪ್ರೇರಿತನಾದ ಲಂಬೋದರನು ರಾವಣನ ಆಹ್ನಿಕ ಸಮಯದಲ್ಲಿ ಅವನಿಂದ

ಪಡೆದ ಶ್ರೀ ಮಹಾಶಿವನೆ ಆ ಪ್ರಾಣಲಿಂಗವನ್ನು ದೇವತೆಗಳ ಸಾಕ್ಷಿಯಾಗಿ ಅಲ್ಲಿ ಸ್ಥಾಪಿಸಿದ್ದನ್ನೂ, ತದನಂತರ ಕೋಪಾವಿಷ್ಟನಾದ ರಾವಣನು ಗಣಪತಿಯ ಕೆನ್ನೆಯ ಮೇಲೆ ಹೊಡೆದು ಆ ಪ್ರಾಣಲಿಂಗವನ್ನು ಕಿತ್ತ ಹೋಗಿ, ಅದಕ್ಕೆ ಗೋಕರ್ಣದಂಥ ರೂಪವನ್ನು ತಂದುದನ್ನೂ; ಸತ್ಯ, ತ್ರೇತ, ದ್ವಾಪರ, ಕಲಿಯುಗಗಳಲ್ಲಿಯ ಗೋಕರ್ಣೇಶ್ವರನ ವರ್ಣ-ರೂಪಗಳನ್ನೂ, ಗೌತಮ ಋಷಿಯಿಂದ ನಿವೇದಿಸಲ್ಪಟ್ಟ ಗೋಕರ್ಣ ಮಹಾತ್ಮ್ಯವನ್ನೂ, ಈಗಲೂ ಈ ಕಲಿಯುಗದಲ್ಲಿ ಕೂಡ ಗೋಕರ್ಣೇಶ್ವರನ ಜಾಗೃತಸ್ಥಾನ ಮಹಾತ್ಮ್ಯವನ್ನೂ ತಿಳಿದು ಆ ಆ ಮಹಾದೇವನಲ್ಲಿ ಲೀನಭಕ್ತಿಯುಳ್ಳವರಾದರು.

ಮರುದಿನ ಮಹಾದೇವನಲ್ಲಿ ಮಹಾಪ್ರಸಾದವನ್ನು ಸ್ವೀಕರಿಸಿ ಅಲ್ಲಿಂದ ಹೊರಟರು. ಬರುವಾಗ ದೇವೀಮನೆಘಟ್ಟ ದಾಟಿದ ಬಳಿಕ ದಾರಿಯಲ್ಲಿ ಅವರಿಗೆ ಶಿರ್ಶಿಯ ಪಟ್ಟಣವು ಹತ್ತಿತು. ಆ ಮಲೆನಾಡಿನ ಪ್ರಾಂತದಲ್ಲಿ ಶಿರ್ಶಿಯಷ್ಟು ವಿಸ್ತಾರವಾದ ಊರು ಬೇರೊಂದಿಲ್ಲ ಅಲ್ಲಿ ಅಡಕೆಯ ಬೆಳೆ ಬಹಳ; ಜನರು ವಿಶೇಷ ನಾಗರಿಕರಲ್ಲದಿದ್ದರೂ, ಸಧನರೂ, ದಾನಶೂರರೂ ಇರುತ್ತಾರೆ ಶಿರ್ಶಿಯ ಮಾರೆಮ್ಮನನ್ನು ಸಂದರ್ಶಿಸಿ, ಪರುಣನಿಂದ ಆ ದೇವಿಯ ಸ್ಥಳಮಹಾತ್ಮ್ಯವನ್ನೂ ಜಾತ್ರೆಯಕಾಲಕ್ಕೆ ಅಲ್ಲಿ ಆಗುವ ಅನಂತ ಪಶುಗಳ ವಧವನ್ನೂ ಕೇಳಿ, ತಾನು ಸೃಷ್ಟಿಸುವ ಪ್ರಾಣಿಗಳಲ್ಲಿಯ ಎಷ್ಟೋ ಜೀವಿಗಳನ್ನು ಸಂಹರಿಸಲಿಕ್ಕೆ ತಮ್ಮ ದೇವತೆಗಳೇ ಕಾರಣರಾಗುವದನ್ನು ಯೋಚಿಸಿ, ಬ್ರಹ್ಮನು ಮನದಲ್ಲಿ ಬಹಳವಾಗಿ ಮಿಡುಕಿದನು.

ತದನಂತರ ಅವರು ಅಲ್ಲಿ ಕಾಲು ಗಂಟೆ ವಿಶ್ರಮಿಸಿ, ಹಾವೇರಿಗೆ ಬರುವ ಮೋಟಾರನ್ನು ಆಶ್ರಯಿಸಿದರು. ಶಿರ್ಶಿಯಿಂದ ಮಧ್ಯಾಹ್ನ ೩ ಗಂಟೆಗೆ ಹೊರಟ ಮೋಟಾರು ಪಾಳ್ಯ, ಹಾಸಗಲ್ಲ ಆಲೂರಗಳ ಮೇಲಿಂದ ವರದಾನದಿಯ ಸಂಗೂರ ಬಳಿಯ ಪೂಲಿಗೆ ಬಂದಿತು. ಆ ಪೂಲು ಚನ್ನಾಗಿ ಕಟ್ಟದ್ದರಿಂದ, ಮಳೆಗಾಲದ ಪ್ರವಾಹಕ್ಕೆ ಅದು ಕೇವಲ ನಿರುಪಯೋಗವಾಗಿರುವದು. ಆಗ ದೇವತೆಗಳು ಮೋಟಾರಿನಿಂದಿಳಿದು, ನಾವಿನಲ್ಲಿ ಕುಳಿತು ಹೊಳೆಯನ್ನು ದಾಟಿದರು. ಮೋಟಾರೂ ದಾಟಿ ಬಂದಿತು. ಬಳಿಕ ದೇವತೆಗಳನ್ನು ಹತ್ತಿಸಿಕೊಂಡು ಆ ಮೋಟಾರು ಸಾಯಂಕಾಲದ ೭ ಗಂಟೆಗೆ ಹಾವೇರಿಗೆ

ಬಂತು. ಅಲ್ಲಿ ನಿಲ್ಲದೆ ಹಿಂದು ಬಾಡಿಗೆ ಝುಟಕಾ ಬಂಡಿಯನ್ನು ಗೊತ್ತು ಮಾಡಿಕೊಂಡು ಅಂದೇ ಅವರು ಆನಂದವನಕ್ಕೆ ಬಂದು ಬಿಟ್ಟರು.

## ಆನಂದವನ.

ಆನಂದವನವು ಹಾವೇರಿಯಿಂದ ಪೂರ್ವಕ್ಕೆ ೫ ಮೈಲಿನಮೇಲೆ ಇರುತ್ತದೆ ಶ್ರೀ ಚಿದಂಬರನ ದ್ವಿತೀಯಾವತಾರಿಕರೆಂದು ಕರ್ನಾಟಕ-ಮಹಾರಾಷ್ಟ್ರ ಪ್ರಾಂತಗಳಲ್ಲಿ ಪ್ರಖ್ಯಾತರಾಗಿದ್ದ "ಶ್ರೀ ಶೇಷಾಚಲ ಸಾಧುವರ್ಯರು" ತಮ್ಮ ಅವತಾರ ಸಮಾಪ್ತಿಯ ಮೊದಲು ೧೨ ವರ್ಷಗಳಿಂದ ಈ ನೂತನ ಸ್ಥಾನದಲ್ಲಿದ್ದು, ತಮ್ಮ ಧರ್ಮರಕ್ಷಣೆಯನ್ನು ಮಾಡುತ್ತಿದ್ದರು. ಇದು ಮೊದಲು ಸ್ಮಶಾನದಂಥ ಭಯಾನಕ ಸ್ಥಾನವಾಗಿದ್ದು, ಕಳ್ಳರ ಕಾಕರ ಭಯವು ಇಲ್ಲಿ ವಿಶೇಷವಾಗಿದ್ದಿತು; ಆದರೆ ಸಾಧುವರ್ಯರು ಇಲ್ಲಿ ವಾಸ ಮಾಡ ಹತ್ತಿದಂದಿನಿಂದ ಆ ಘೋರಾರಣ್ಯವು ಆನಂದವನವಾಗಿ ಜನರ ಚಿತ್ತಗಳನ್ನು ಪ್ರಸನ್ನಗೊಳಿಸಲಾರಂಭಿಸಿತು.

ದೇವತೆಗಳು ಬಂದೊಡನೆಯೇ ಆನಂದವನಸ್ಥ ಸೇವಕರು ಅವರನ್ನು ಆದರದಿಂದ ಬರಮಾಡಿಕೊಂಡರು; ಹಾಗು ಅವರ ಆಹ್ನಿಕ-ಭೋಜನಗಳ ಸಿದ್ಧತೆ ಮಾಡಿದರು ಭೋಜನೋತ್ತರ ದೇವತೆಗಳು ಆನಂದವನದ ಪ್ರಶಸ್ತವಾದ ಚಂದ್ರಶಾಲೆಯಲ್ಲಿ ಪವಡಿಸಿದರು. ಇಡಿ ದಿವಸ ಪ್ರವಾಸ ಮಾಡಿ ಬಂದುದರಿಂದ ಆಗ ಅವರಿಗೆ ನಿದ್ರಾದೇವಿಯು ಹೊರತು ಮತ್ತಾವ ವಸ್ತುಗಳೂ ಪ್ರಿಯಕರವಾಗಲಿಲ್ಲ

ಆನಂದವನದಲ್ಲಿ ಬೆಳಗಿನ ಜಾವದ ೪ ಗಂಟೆಗೆ ವಾಡಿಕೆಯಂತೆ ಏಳುವ ಗಂಟೆಯಾಯಿತು. ಕರ್ನಾಟಕಕ್ಕೆ ಬಂದಾಗಿನಿಂದ ವಿಶೇಷವಾಗಿ ರೈಲುಪ್ರವಾಸ ಮಾಡಿದ ಹಾಗು ರೈಲಿನಗಂಟೆ ಕೇಳಿದ್ದ ಬ್ರಹ್ಮನಿಗೆ ನಸುಕಿನಲ್ಲಿಯ ಆನಂದವನದ ಆ ಗಂಟೆಯ ಸಪ್ಪಳವನ್ನು ಕೇಳಿ, ತಾವು ಯಾವುದೋ ಹಿಂದು ರೇಲ್ವೆಯ ಸ್ಟೇಶನ್ನಿನಲ್ಲಿದ್ದು, ತಾವು ಹೊರಡುವ ಗಾಡಿ ಬಂತೆಂದು ತಿಳಿದು, ಸಂಗಡಿಗರನ್ನು ಲಗುಬಗೆಯಿಂದ ಎಬ್ಬಿಸತೊಡಗಿದನು. ನಾರಾಯಣನಿಗೆ ಬ್ರಹ್ಮನ ಆ ಚಟುವಟಿಕೆಯನ್ನು ನೋಡಿ ನಗುವು ಬಂದಿತು. ಎಷ್ಟು ಕೂಗಿದರೂ

ಸಂಗಡಿಗರಲ್ಲಿ ಯಾರೂ ಏಳದ್ದನ್ನು ಕಂಡು ಹಾಗು ಸಮೀಪದಲ್ಲಿಯೇ ಎಷ್ಟೋ ಜನ ವಿದ್ಯಾರ್ಥಿಗಳು ವೇದಪಾಠ ಮಾಡುವದನ್ನು ಕೇಳಿ ಬ್ರಹ್ಮನ ಭ್ರಾಂತಿಯು ನಿವಾರಣವಾಯಿತು.

ಬಳಿಕ ಬ್ರಹ್ಮಾದಿಗಳು ಎದ್ದು ಮುಖಮಾರ್ಜನಾದಿಗಳನ್ನು ತೀರಿಸಿ, ಸ್ನಾನ, ಆಹ್ನಿಕಗಳನ್ನು ಮಾಡಲಾರಂಭಿಸಿದರು. ಅಷ್ಟರಲ್ಲಿ ಬೆಳಗಿನ ಆರು ಗಂಟೆಯಾಗಲು, ಶ್ರೀ ಶೇಷಾಚಲೇಶ್ವರನ ಆರತಿಯ ಗಂಟೆಯಾಯಿತು. ಕೂಡಲೆ ಎಲ್ಲ ವಿದ್ಯಾರ್ಥಿಗಳೂ, ಆನಂದವನಸ್ಥರಾದ ಬಹುತರ ಎಲ್ಲ ಸ್ತ್ರೀ ಪುರುಷರೂ "ಸಿಂಹಾಸನ ಮನೆ" ಯೆಂಬ ದೇವಮಂದಿರದಲ್ಲಿ ಸೇರಿ, ಆರತಿ, ಪ್ರಾತಃಕಾಲದ ಸ್ತುತಿ-ಸ್ತೋತ್ರಗಳನ್ನು ಅಂದರು. ತದನಂತರ ವಿದ್ಯಾರ್ಥಿಗಳ ಪ್ರವಚನ-ವೇದಘೋಷಗಳಾದವು. ಸ್ವರ್ಗವನ್ನು ಬಿಟ್ಟಾಗಿನಿಂದ ಕರ್ನಾಟಕದ ಯಾವ ಭಾಗದಲ್ಲಿಯೂ ಬ್ರಹ್ಮನಿಗೆ ಈ ಪರಿ ಸುಶ್ರಾವ್ಯವಾದ ವೇದಘೋಷವು ಕೇಳಿಸಿದ್ದಿಲ್ಲ. ಆದರಿಂದ ಆಗ ಅವನಿಗೆ ಪರಮಾನಂದವಾಯಿತು. ದೇವತೆಗಳ ಆಹ್ನಿಕವಾದನಂತರ ಅವರು ಆನಂದವನದಲ್ಲಿ ಅಡ್ಡಾಡಿ ಪ್ರತಿಯೊಂದು ಭಾಗವನ್ನು ಚೆನ್ನಾಗಿ ನಿರೀಕ್ಷಿಸಿದರು. ನಂತರ ಮಹಾದ್ವಾರದ ಪ್ರಶಸ್ತವಾದ ಕಟ್ಟೆಯ ಮೇಲೆ ಕುಳಿತು, ವರುಣನಿಂದ ಆನಂದವನವನ್ನು ಸ್ಥಾಪಿಸಿದ ಶ್ರೀಶೇಷಾಚಲಸಾಧುಗಳ ಪುಣ್ಯಕರ ಜನ್ಮವೃತ್ತಾಂತವನ್ನೂ, ಅವರ ತಪಶ್ಚರ್ಯವನ್ನೂ, ಅವರ ಶಿಷ್ಯರ ಪ್ರಭಾವವನ್ನೂ ಅವರು ಸ್ಥಾಪಿಸಿದ ಶ್ರೀ ಶೇಷಾಚಲ ವೇದಶಾಲೆ, ಶ್ರೀ ಶೇಷಾಚಲ ಮುದ್ರಾಶಾಲೆ, ಶ್ರೀಶೇಷಾಚಲ ಸದ್ಬೋಧ ಚಂದ್ರಿಕೆ ಎಂಬ ಮಾಸಪತ್ರಿಕೆ ಮುಂತಾದವುಗಳ ಸಂಗತಿಗಳನ್ನೂ ತಿಳಿದರಲ್ಲದೆ, ಶ್ರೀಶೇಷಾಚಲಸಾಧುಗಳ ಅವತಾರ ಸಮಾಪ್ತಿಯ ನಂತರ ಅವರ ಈ ಆನಂದವನದ ವ್ಯವಸ್ಥೆಯು ಹೇಗೆ ಉತ್ಕರ್ಷಹೊಂದುತ್ತಿರುವದೆಂಬದನ್ನೂ ಕಣ್ಣಾರೆ ಕಂಡರು

ನಮ್ಮ ದೇವತೆಗಳು ಆನಂದವನವು ಪುಣ್ಯಪ್ರದಸ್ಥಳವೆಂದು ತಿಳಿದು, ಅಲ್ಲಿ ಮೂರು ದಿನಗಳ ವರೆಗೆ ವಾಸ ಮಾಡಿದ್ದರು. ಆ ಅವಧಿಯಲ್ಲಿ ಅವರು ಶ್ರೀಶೇಷಾಚಲ ಸಾಧುಗಳ ಜನ್ಮಸ್ಥಾನವನ್ನೂ, ಆಗಡಿಯ ಬಳಿಯ ಗವಿಮಠದ ಸಿದ್ಧೇಶ್ವರ ಸ್ವಾಮಿಗಳ ಜಾಗೃತ ಸ್ಥಾನವನ್ನೂ ಸಂದರ್ಶಿಸಿ ಬಂದರಲ್ಲದೆ, ಒಂದು ದಿನ ಸಮೀಪದ ವರದಾತೀರಕ್ಕೆ ಹೋಗಿ ಸ್ನಾನ-ತರ್ಪಣಗಳನ್ನು ಮಾಡಿ, ನದಿಯ

ತಟಾಕದ ಮೇಲಿರುವ ಕರಜಗಿ ಎಂಬ ಗ್ರಾಮದ ಸೃಷ್ಟಿಭವನವನ್ನು ಕೇಳಿಕೊಂಡು ಬಂದರು. ಶ್ರೀಕೆ ಸಾವಳಗಿ ಬುಧಂಗಳ ಜಯಂತಿಯ ಮಹೋತ್ಸವದಲ್ಲಿ ಅವಿಚ್ಛಿನ್ನವಾಗಿ ಆಗುವ ಐವತ್ತೈದುಸಾವಿರ ಜನ ಬ್ರಾಹ್ಮಣ-ಸುವಾಸಿನಿಯರ ಸಂತರ್ಪಣೆಯನ್ನು ಕೇಳಿ ಮನದಲ್ಲಿ ಹಿರಿಹಿರಿ ಹಿಗ್ಗಿದರು. ನಾಲ್ವರೂ ಏಮಸಿ ಸ್ನಾನ-ಶುದ್ಧಿಗಳನ್ನು ತೀರಿಸಿಕೊಂಡು ಬೆಳಗಿನ ೭||ಕ್ಕೆ ಗುತ್ತಲದ ಕಡೆಗೆ ಹೋಗುವ ಮೇಲ್ ಮೋಟಾರ ಬಂಡಿಯನ್ನು ಆರೋಹಿಸಿ, ಕರ್ನಾಟಕದಲ್ಲೆಲ್ಲ ಪ್ರಸಿದ್ಧವಾದ ಶ್ರೀ ಮಾಲತೀಶನ ನಿವಾಸಸ್ಥಾನವಾದ ಮೈಲಾರವೆಂಬ ತುಂಗಭದ್ರಾ ತೀರದ ಕ್ಷೇತ್ರಕ್ಕೆ ನಡೆದರು.

---

## ಮೈಲಾರ.

ಮೈಲಾರವು ತುಂಗಭದ್ರಾ ನದಿಯ ಪೂರ್ವಕ್ಕೆ ಮದ್ರಾಸ ಇಲಾಖೆಯೊಳಗಿನ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನಲ್ಲಿರುತ್ತದೆ. ಶ್ರೀಮಲ್ಲಾರಿದೇವನು ಮತ್ತರಾದ ಅನಂತ ದೈತ್ಯರನ್ನು ತನ್ನ ಏಳುಕೋಟಿ ಗಣಗಳ ಸಹಾಯದಿಂದ ಸಂಹರಿಸಿದ ಸ್ಥಾನವೇ ಈ ಮೈಲಾರ ಕ್ಷೇತ್ರವು. ಈ ಮಲ್ಲಾರಿಯ ಸ್ಥಾನವು ಈಚೆಗೆ ಮದ್ರಾಸ ಇಲಾಖೆಯೊಳಗೆ ಗಣಿಸಲ್ಪಟ್ಟಿದ್ದರೂ ಶ್ರೀಮಲ್ಲಾರಿಯ ಭಕ್ತವೃಂದವು ಮುಂಬಯಿ ಇಲಾಖೆಯಲ್ಲಿಯೇ ಹೆಚ್ಚು. ಮೈಲಾರ ಕ್ಷೇತ್ರವು ಹೊಳೆಯಾಚೆಯ ವಿಸ್ತಾರವಾದ ಬೈಲಿನಲ್ಲಿ ಕಾಣಿಸಹತ್ತಲು, ಬ್ರಹ್ಮನು ವರುಣನನ್ನು ಕುರಿತು:— ತಮ್ಮಾ, ಅತ್ತ ಕಾಣುವ ಆ ಗುಡ್ಡಗಳ ಸಾಲುಗಳೇನನ್ನುವವು? ಶ್ರೀ ಮಲ್ಲಾರಿಯ ಸ್ಥಾನಗಳು ವಿಜಾಪುರಜಿಲ್ಲೆಯಲ್ಲಿಯೂ, ಮಹಾರಾಷ್ಟ್ರದೊಳಗೆ ಪುಣೆಯ ನೆರೆಯಲ್ಲಿಯೂ ಇದ್ದರೂ, ಈ ಮೈಲಾರ ಕ್ಷೇತ್ರಕ್ಕೇ ಇಷ್ಟೊಂದು ಮಹತ್ವವು ಏಕೆ ಬಂದಿರುತ್ತದೆ? ಎಂದು ಪ್ರಶ್ನೆ ಮಾಡಿದನು.

ವರುಣ:— ಅಣ್ಣಾ, ಆ ಸಾಲುಗುಡ್ಡಗಳು ಮಲ್ಲಾಸುರದೈತ್ಯನ ಮಕ್ಕಳು. ಮಲ್ಲಾಸುರನನ್ನು ವಧಿಸಿದ ನಂತರ ಅವರೆಲ್ಲರೂ ಶ್ರೀ ಮಲ್ಲಾರಿದೇವನ ಮೇಲೆ ಏರಿ ಬರಲು, ನೀವು ಇಂತಲ್ಲಿಯೇ ಗುಡ್ಡಗಳಾಗಿ ಬೀಳಿರೆಂದು ಅವರಿಗೆ ದೇವನು ಶಪಿಸಿದನಂತೆ! ಅದರಿಂದ ಅವರು

ಭೀಷಣಾಕಾರದ ಗುಡ್ಡಗಳಾಗಿರುತ್ತಾರೆ. ಇತರ ಪ್ರಾಂತದೊಳಗಣ ಮೈಲಾರಿಯ ಕ್ಷೇತ್ರಗಳು ಬರೇ ಸ್ಥಳಮಾಹಾತ್ಮ್ಯದಿಂದ ಪ್ರಸಿದ್ಧಿಗೆ ಬಂದಿರುತ್ತವೆ; ಆದರೆ ಅಜ್ಜಾ, ಈ ಮೈಲಾರ ಕ್ಷೇತ್ರದ ಬಳಿಯಲ್ಲಿ ದೇವಾಸುರರ ಸಹುಪೆ ಘನಘೋರವಾದ ಸಂಗ್ರಾಮವಾಗಿ ಇಲ್ಲಿಯೇ ದೈತ್ಯರ ಸಂಹಾರವಾಗಿರುವದರಿಂದ, ಇದು ಶ್ರೇಷ್ಠಸ್ಥಾನವಾಗಿರುತ್ತದೆ. ಇಲ್ಲಿ ಪ್ರತಿ ಫಾಲ್ಗುಣ ಹುಣ್ಣಿವೆಗೆ ಬಹು ದೊಡ್ಡ ಜಾತ್ರೆಯಾಗುತ್ತದೆ.

ಬಳಿಕ ದೇವತೆಗಳು ಚೂಡಾಮಾನಪುರ (ದಕ್ಷಿಣ ಕಾಶಿ)ದ ಬಳಿಯಲ್ಲಿ ತುಂಗಭದ್ರಾನದಿಯನ್ನು ದಾಟಿ, ಮೈಲಾರಕ್ಷೇತ್ರಕ್ಕೆ ಹೋದರು. ಅಲ್ಲಿ ಶ್ರೀ ಮಲ್ಲಾರಿದೇವನನ್ನು ಸಂದರ್ಶಿಸಿ ಮರು ದಿನ ದೇವರಗುಡ್ಡಕ್ಕೆ ಬಂದರು.

## ದೇವರಗುಡ್ಡ.

ಮೈಲಾರದಿಂದ ದೇವರಗುಡ್ಡವು ೩-೪ ಹರದಾರಿಗಳ ಮೇಲಿರುತ್ತದೆ. ಕಾಲು ನಡಿಗೆಯಿಂದ ನಡೆದು ಬಂದು, ದೇವಗಣಗಳು ಗುಡ್ಡದೊಳಗಿನ ಒಬ್ಬ ಭಾವಿಕ ಪೂಜಾರಿಯ ಮನೆಯಲ್ಲಿ ಇಳಿದುಕೊಂಡರು. ಬೇಸಿಗೆಯ ಕಾಲವಾದುದರಿಂದಲೂ, ಆ ವರ್ಷ ಕರ್ನಾಟಕದಲ್ಲಿ ಅವರ್ಷಣ ಬಿದ್ದಿದ್ದುದರಿಂದಲೂ, ಗುಡ್ಡದ ಮೇಲೆ ನೀರು ಇರಲಿಲ್ಲ. ಗುಡ್ಡದ ಪಶ್ಚಿಮದಿಕ್ಕಿನ ಬಯಲಾದ ಬಾವಿಯಲ್ಲಿ ನೀರು ಸಮೃದ್ಧವಾಗಿತ್ತು. ನಮ್ಮ ದೇವತೆಗಳು ಅಲ್ಲಿಗೆ ಹೋಗಿ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಬಂದರು; ಆಮೇಲೆ ಮಧ್ಯಾಹ್ನದಲ್ಲಿ ಆ ಪೂಜಾರಿಯ ಮನೆಯಲ್ಲಿ ವೈಶ್ವದೇವ ಮಾಡಿದರು.

ಊಟಕ್ಕೆ ಕುಳಿತಾಗ ಮನೆಗೆ ದೊಡ್ಡವರು [illegible] ಬಂದರೆಂದು ಆ ಭಾವಿಕನು ಶ್ರೀಮಲ್ಲಾರಿಯ [illegible] ನೈವೇದ್ಯಕ್ಕೆ [illegible] ರೊಟ್ಟಿಯು ಪಲ್ಲೆಯನ್ನು [illegible] ಮಾಡಿಸಿ, [illegible] ಅವರಿಗೆ ಬಡಿಸಿದನು. ಅದನ್ನು ಬ್ರಹ್ಮನ ಹೊರತು ಮಿಕ್ಕವರೆಲ್ಲರೂ ಸಮಾಧಾನವಾಗಿ ತಿಂದರು. ತಾನು ನೀಡಿದ ಮಲ್ಲಾರಿಯ ಪ್ರಸಾದಕ್ಕೆ ಬ್ರಹ್ಮದೇವನು ಕಡೆಗೆ ಕಣ್ಣೆತ್ತಿ ನೋಡದಿರಲು [illegible] ಭಾವಿಕನು:--ನೀನು ಎಂಥ ನಿಸ್ಪೃಹವಂತನಿದ್ದರೂ ಇರು; ಆದರೆ ನನ್ನ

ಮನೆಯಲ್ಲಿ ನಾನು ಕೈಮುಟ್ಟಿ ನೀಡಿದ ಈ ಮಾಲತೀಶನ ಪ್ರಸಾದವನ್ನು ಚೆಲ್ಲಲಾಗದು, ಎಂದು ಗದ್ದರಿಸಿದನು. ಆಗ ಬ್ರಹ್ಮನು ಬೇರೆ ಉಪಾಯಗಾಣದೆ, ಆ ಪಲಾಂಡುವಿನ ಪಲ್ಲೆಯನ್ನು ತಿನ್ನುತ್ತ ಆ ಭಾವಿಕನಿಗೆ:—ಪೂಜಾರಿಯೇ, ಮಲ್ಲಾರಿದೇವನಿಗೆ ಈ ನಿಷಿದ್ಧವಾದ ಉರುಳೀಗಡ್ಡಿಯು ಏಕೆ ಪ್ರಿಯವಾಯಿತು? ಎಂದು ಪ್ರಶ್ನೆ ಮಾಡಿದನು.

ಪೂಜಾರಿಯು:—ಶ್ರೀಮಲ್ಲಾರಿಯು ತನ್ನ ಏಳುಕೋಟಿ ಗಣಗಳಿಂದ ಸಹಿತನಾಗಿ ಈ ಗುಡ್ಡಗಾಡಿನಲ್ಲಿ ಆ ಪ್ರಚಂಡ ದೈತ್ಯರೊಡನೆ ಕಾದುತ್ತಿರಲು, ಸೈನಿಕಗಣಗಳು ನೀರಿನ ತೃಷೆಯಿಂದ ಬಳಲಲಾರಂಭಿಸಿ ಯುದ್ಧವನ್ನು ಬಿಟ್ಟು, ನೀರನ್ನು ಹುಡುಕುವುದಕ್ಕಾಗಿ ಓಡಲಾರಂಭಿಸಿದರು. ತನ್ನ ಗಣಗಳಿಗೆ ಜಲಾಭಾವದಿಂದಾದ ತ್ರಾಸವನ್ನು ನೋಡಿ, ಮಲ್ಲಾರಿಯು ಮನದಲ್ಲಿ ಬಹಳವಾಗಿ ಮರುಗಿದನು. ಇವರ ನೀರಡಿಕೆಯು ಶಮನಕ್ಕೆ ಯಾವ ಉಪಾಯವನ್ನು ಮಾಡಬೇಕೆಂದು ಆ ಕೃಪಾಲವು ಆಲೋಚಿಸುತ್ತಿರುವಷ್ಟರಲ್ಲಿ, ಈ ನಾಡಿನಲ್ಲಿ ವಿಪುಲವಾಗಿ ಬೆಳೆಯುವ ಈ ಉರುಳೀಗಡ್ಡಿಯು ಕಾಣಿಸಿತು. ಕೂಡಲೆ ಅವನು ತನ್ನ ದಂಡಾಳುಗಳಿಗೆ ಇದನ್ನು ಉಪಯೋಗಿಸಲಿಕ್ಕೆ ಅಪ್ಪಣೆ ಮಾಡಿ, ಅವರನ್ನು ಆ ಕುತ್ತುದಿಂದ ಪಾರು ಮಾಡಿ, ಆ ದೈತ್ಯರನ್ನು ಸಂಹರಿಸಿ ವಿಜಯಿಯಾದನು. ಶ್ರೀನೃಸಿಂಹನ ನಖದಾಹಶಮನಕ್ಕೆ ಔದುಂಬರ ಫಲವು ಸಹಾಯಕವಾಗಿ, ವೃಕ್ಷಗಳಲ್ಲಿ ಅದೇ ಕಲ್ಪವೃಕ್ಷವೆಂದು ಹೇಗೆ ವರವು ಪಡೆಯಿತೋ; ಹಾಗೆ ಈ ಉರುಳೀಗಡ್ಡಿಯಾದರೂ ಮಾಲತೀಶನಿಂದ ಸನ್ಮಾನಿತವಾಗಿ ತನ್ನ ನೈವೇದ್ಯದ ಕಾಲಕ್ಕೆ ಇದನ್ನು ಅವಶ್ಯವಾಗಿ ಉಪಯೋಗಿಸಬೇಕೆಂದು ಆ ಪರಶಿವನಿಂದ ಆದರಿಸಲ್ಪಟ್ಟಿರುತ್ತದೆ. ಭೋಜನಾಂತರ ದೇವತೆಗಳು ದೇವರಗುಡ್ಡದಲ್ಲಿಯ ಶ್ರೀಮಲ್ಲಾರಿಯ ಮೂರ್ತಿಯನ್ನು ನೋಡಿ, ಮಣಿಕಾಸುರನ ಸಲುವಾಗಿ ಅಶ್ವವನ್ನು ಆರೋಹಣ ಮಾಡಿದ ಸಂಗತಿಯನ್ನು ತಿಳಿದು, ಅಲ್ಲಿಯ ಇತರ ಗುಡಿಗುಂಡಾರಗಳನ್ನು ನೋಡಿದರು. ಸಂಜೆಗೆ ದೇವರಗುಡ್ಡ ಸ್ಟೇಶನ್ನಿಗೆ ಬಂದು ಸಂಜೆಯ ಮೇಲ್‌ಗಾಡಿಯಲ್ಲಿ ಹರಿಹರ ಕ್ಷೇತ್ರಕ್ಕೆ ಸಾಗಿದರು.

# ಹರಿಹರ.

ಹರಿಹರರಲ್ಲಿ ಭೇದವೆಣಿಸಲಾಗದೆಂದು ಬೋಧಿಸುವದಕ್ಕಾಗಿಯೇ ವಿಷ್ಣು ಹಾಗು ಮಹಾದೇವರು ಒಂದೇ ಮೂರ್ತಿಯಲ್ಲಿ ಏಕೀಕರಣವಾಗಿ ಮೆರೆಯುವ ಈ ಕ್ಷೇತ್ರವು ತುಂಗಭದ್ರಾ ನದಿಯ ದಕ್ಷಿಣ ತಟಾಕದಲ್ಲಿ ಮೈಸೂರ ಸಂಸ್ಥಾನದಲ್ಲಿ ನೆಲೆಗೊಂಡಿರುತ್ತದೆ. ದೇವತೆಗಳು ಟ್ರೇನಿನಿಂದ ಇಳಿದು ಊರೊಳಗೆ ಹೋಗಬೇಕೆನ್ನುವಷ್ಟರಲ್ಲಿ ಕತ್ತಲು ಮುಸುಗಿತು ಆಗ ಅವರು ಸಮೀಪದಲ್ಲಿಯೇ ಇರುವ ಛತ್ರದಲ್ಲಿಳಿದುಕೊಂಡು ಆಹ್ನಿಕಗಳನ್ನು ತೀರಿಸಿಕೊಂಡು ಅಲ್ಲಿಯೇ ಪವಡಿಸಿದರು

ಮರುದಿನ ಬೆಳಗಿನ ಝಾವದ ಐದು ಗಂಟೆಗೆ ಎದ್ದು ಊರೊಳಗೆ ನಡೆದರು. ಹರಿಹರ ಊರು ಅಷ್ಟೊಂದು ದೊಡ್ಡದಲ್ಲ. ಎರಡು-ಮೂರೇ ಉದ್ದನ್ನ ಬೀದಿಗಳಿರುತ್ತವೆ. ದೇವತೆಗಳು ಊರೊಳಗಿಂದ ಹಾಯ್ದು ಶ್ರೀಹರಿಹರೇಶ್ವರನ ಧೂಲಿ ದರ್ಶನ ತಕ್ಕೊಂಡರು; ಹಾಗು ಗುಡಿಯ ಪಶ್ಚಿಮ ದಿಕ್ಕಿನ ಘಾಟಿನ ಬಳಿಯಲ್ಲಿ ಸ್ನಾನಕ್ಕೆ ಹೋದರು. ಬೇಸಿಗೆಯ ಕಾಲದ ತುಂಗಾತಟಾಕದ ಆಗಿನ ಸೊಬಗನ್ನೇನು ವರ್ಣಿಸುವದದೆ? ಆ ಸುಪ್ರಭಾತದಲ್ಲಿ ಗಿಳಿ-ಕೋಗಿಲೆಗಳು ಇಂಪಾದ ಗಾನವನ್ನು ಆರಂಭಮಾಡಿದ್ದವು. ಇತರ ಪಶು-ಪಕ್ಷಿಗಳು ಬೆಳಗಾಯಿತೆಂದು ತಮ್ಮ ಬಿಡಾರದಿಂದ ಹೊರ ಹೊರಟು ನಿತ್ಯಕ್ರಮಕ್ಕೆ ನಡೆದಿದ್ದವು. ಕ್ಷೇತ್ರಸ್ಥರಾದ ವೃದ್ಧ ಹಾಗು ನೈಷ್ಠಿಕ ಬ್ರಾಹ್ಮಣರು ಪೂರ್ರ-ಪೊಸ್ಸೆಂದು ಕೆಮ್ಮುತ್ತ ಸ್ನಾನಕ್ಕಾಗಿ ತುಂಗಾತಟಾಕಕ್ಕೆ ಬರತೊಡಗಿದ್ದರು. ಇಂಥೀ ಆನಂದದಾಯಕ ಸಮಯದಲ್ಲಿ ನಮ್ಮ ದೇವತೆಗಳು ತಮ್ಮ ತಮ್ಮ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸ್ನಾನಮಾಡಲು ಆರಂಭಿಸಿದರು. ಎಲ್ಲರ ಸ್ನಾನಾಹ್ನಿಕ ತರ್ಪಣಗಳಾದ ಬಳಿಕ ಪುನಃ ಶ್ರೀಹರಿಹರೇಶ್ವರನ ಹಾಗು ಶ್ರೀಮಹಾಕಾಲೇಶ್ವರನ ದರ್ಶನ ಮಾಡಿಕೊಂಡು, ಅಲ್ಲಿಯ ಇತರ ದೇವತೆಗಳನ್ನು ಸಂದರ್ಶಿಸಿದರು. ಬಳಿಕ ವರುಣನಿಂದ ಶ್ರೀ ಹರಿಹರೇಶ್ವರನ ಉತ್ಪತ್ತಿಗೆ ಕಾರಣರಾದ ದೈತ್ಯರ ಇತಿಹಾಸವನ್ನೂ ಶ್ರೀಹರಿಹರರು ಏಕೀಕರಣರಾಗಿ ಪ್ರಕಟವಾದ ಕಾರಣವನ್ನೂ ಅಲ್ಲಿಯ ಸ್ಥಳಪುರಾಣವನ್ನೂ ಕೇಳಿಕೊಂಡು, ಅಲ್ಲಿಯ ಒಬ್ಬ ಭಾವಿಕ ಗೃಹಸ್ಥ

ನಲ್ಲಿ ಮಧ್ಯಾಹ್ನವನ್ನು ತೀರಿಸಿಕೊಂಡರು. ಶ್ರೀ ಹರಿಹರ ಕ್ಷೇತ್ರವು ಬಹು ಪುರಾತನದ್ದೂ, ವಿಶೇಷ ಮಹತ್ವದ್ದೂ ಇರುವದರಿಂದ ನಮ್ಮ ದೇವತೆಗಳು ಅಲ್ಲಿ ತ್ರಿರಾತ್ರಿಗಳ ವರೆಗೆ ಇದ್ದೇ ಹೋಗಬೇಕೆಂದರು; ಆದರೆ ಬ್ರಹ್ಮನ ಅವಸರದ ಮೂಲಕ ಅಲ್ಲಿ ಒಂದೇ ರಾತ್ರಿ ಇದ್ದು, ಮರುದಿನ ಬೆಳಗಿನ ರೈಲಿನಿಂದ ಶಿವಮೊಗ್ಗೆಗೆ ಹೊರಟು ನಡೆದರು.

ಆಗ ಈಗಿನಂತೆ ಹರಿಹರ-ಶಿವಮೊಗ್ಗೆಗಳಿಗೆ ಮೋಟಾರ ಸರ್ವಿಸ್ಸು ಇರಲಿಲ್ಲ. ಆದರಿಂದ ಅವರು ದಾವಣಗೇರಿ, ಬಿರೂರ, ತರೀಕೇರೆಗಳ ಮೇಲೆ ಹಾಯ್ದು ಶಿವಮೊಗ್ಗೆಗೆ ಹೋಗಬೇಕಾಯಿತು ದೇವಗಣಗಳ ಗಾಡಿಯು ಹೊರಟು ೩-೪ ಮೈಲು ಹೋಗುವಷ್ಟ ರಲ್ಲಿ ಬಲಕ್ಕೆ ಒಂದು ಎತ್ತರವಾದ ಗುಮ್ಮಟವೂ, ಅದರ ಮೇಲೊಂದು ಮಂದಿರವೂ ಕಾಣಿಸಿತು. ಇದು ಬಾತಿಯ ಗುಮ್ಮಟವೆಂದೂ, ಇಲ್ಲಿ ಮುಸಲ್ಮಾನ ಧರ್ಮದ ಒಬ್ಬ ತ್ರಿಕಾಲಜ್ಞ ಫಕೀರನು ಕೆಲವು ವರ್ಷ ಗಳ ಹಿಂದೆ ಆಗಿ ಹೋದನೆಂದೂ, ಆ ಫಕೀರನ ಶಿಷ್ಯರು ಇನ್ನೂ ಈ ಸ್ಥಾನದಲ್ಲಿರುತ್ತಿದ್ದು ಮೂಲ ಬಾತಿಯ ಸ್ವಾಮಿಯ ಪ್ರಭಾವ ದಿಂದ ಆ ಸ್ಥಾನಕ್ಕೆ ಹಿಂದೂ, ಮುಸಲ್ಮಾನ ಮುಂತಾದ ಎಲ್ಲ ಜಾತಿಯ ಭಕ್ತರು ನಡಕೊಳ್ಳುವರೆಂದೂ ವರುಣನು ಆ ಸ್ಥಾನ ಮಹಾತ್ಮ್ಯವನ್ನು ಹೇಳುತ್ತಿರುವಷ್ಟರಲ್ಲಿ ದೇವತೆಗಳು ಕುಳಿತ ಟ್ರೇನು ದಾವಣಗೇರಿ ಸ್ಟೇಶನ್ನಿನ ಯಾರ್ಡಿನಲ್ಲಿ ಪ್ರವೇಶಿಸಿತು.

## ದಾವಣಗೇರಿ.

ದೇವತೆಗಳು ಸ್ಟೇಶನ್ನಿನಲ್ಲಿಳಿದು ಹೊರಗೆ ಬಂದು ನೋಡುತ್ತಾರೆ; ಒಳ್ಳೇ ಮಾಟವಾದ ಓಣಿಗಳುಳ್ಳ ಈ ದಾವಣಗೇರಿಯು ಊರು ಸ್ಟೇಶನ್ನಿಗೆ ಹೊಂದಿಯೇ ಇದ್ದುದು ಕಾಣಿಸಿತು. ದಾವಣಗೇರಿಯು ಮೈಸೂರ ಸಂಸ್ಥಾನದೊಳಗಿನ ಉತ್ತರಭಾಗದ ಪಟ್ಟಣವಲ್ಲಿ ಸುಧಾ ರಿಸಿದ ನಗರವಾಗಿರುತ್ತದೆ ಮೈಸೂರ ಸಂಸ್ಥಾನದಲ್ಲಿ ಮೈಸೂರ, ಬೆಂಗಳೂರ ಪಟ್ಟಣಗಳ ತರುವಾಯ ದಾವಣಗೇರಿಯೇ ಒಳ್ಳೇ ಮನೋಹರವಾಗಿ ಕಟ್ಟಿದ್ದ ಪಟ್ಟಣವು ಈ ಚಿಕ್ಕ ಊರಿಗೆ ಹರಿ ಹರದಿಂದ ತುಂಗಭದ್ರಾನದಿಯ ನೀರಿನ ನಳಗಳನ್ನು ತಂದಿರುವದ ರಿಂದ ಮತ್ತಿಷ್ಟು ಅನುಕೂಲವಾಗಿರುತ್ತದೆ.

ದೇವತೆಗಳು ಸ್ಟೇಶನ್ನಿನಿಂದ ಹೊರಟು ಪಬ್ಲಿಕ್ ಛತ್ರದಲ್ಲಿಳಿದುಕೊಂಡರು. ಮೈಸೂರಸೀಮೆಯಲ್ಲಿ ಪ್ರತಿಯೊಂದು ದೊಡ್ಡ ಊರಿಗೆ ಒಂದಾದರೂ ಛತ್ರವೋ ಧರ್ಮಶಾಲೆಯೋ ಇದ್ದೇ ಇರುತ್ತದೆ. ಅವುಗಳಲ್ಲಿ ಪಾಂಥಸ್ಥರ ೩ ದಿನಗಳ ವರೆಗಂತೂ ನಿರ್ವಿವಾದವಾಗಿದ್ದು, ತಮ್ಮ ಸ್ವಂತ ಖರ್ಚಿನಿಂದ ಊಟ-ಉಡಿಗೆ ಮಾಡಿಕೊಳ್ಳಬಹುದಾಗಿದೆ. ಉತ್ತರಹಿಂದುಸ್ಥಾನದ ಕಡೆಗಿನ ಛತ್ರಗಳಂತೆ ಮೈಸೂರಸೀಮೆಯೊಳಗಿನ ಪ್ರತಿಯೊಂದು ಊರ ಛತ್ರದಲ್ಲಿ ಪಾಂಥಸ್ಥರ ಭೋಜನದ ಸೌಕರ್ಯವಿದ್ದು ಪಾಂಥಸ್ಥರಿಗೆ ಬೇಕಾಗುವ ಪಾತ್ರೆ-ಪಡಗುಗಳೂ, ಕಟ್ಟಿಗೆ ಮೊದಲಾದ ಇತರ ಪದಾರ್ಥಗಳೂ ಛತ್ರದ ಕಾವಲುಗಾರರಿಂದ ಪೂರೈಸಲ್ಪಡುವ ವ್ಯವಸ್ಥೆ ಮಾಡಲ್ಪಡುತ್ತದೆ. ಕರ್ನಾಟಕಕ್ಕೆ ಬಂದಂದಿನಿಂದ ಪರಾನ್ನವನ್ನು ತಿಂದು ತಿಂದು ಬೇಸತ್ತಿದ್ದ ನಮ್ಮ ದೇವತೆಗಳು ದಾವಣಗೇರಿಯ ಛತ್ರದಲ್ಲಿ ತಾವೇ ಅಡುಗೆ ಮಾಡಿಕೊಳ್ಳುವದನ್ನು ನಿರ್ಧರಿಸಿ ಆ ಉದ್ಯೋಗಕ್ಕೆ ತೊಡಗಿದರು. ಬ್ರಹ್ಮನು ಎಲ್ಲರಕ್ಕಿಂತ ಮೊದಲು ಸ್ನಾನ ಮಾಡಿದನು. ಅಷ್ಟರಲ್ಲಿ ಇಂದ್ರನು ತಾವಿಳಿದುಕೊಂಡ ಕೋಣೆಯನ್ನು ಉಡುಗಿ ಸಾರಿಸಿ ಸ್ವಚ್ಛ ಮಾಡಿದನು. ನಾರಾಯಣನು ಛತ್ರದ ಪಾರುಪತ್ಯಗಾರನಿಂದ ತಮಗೆ ಬೇಕಾದ ಪಾತ್ರೆ, ಕಟ್ಟಿಗೆ ಮುಂತಾದವುಗಳನ್ನು ತಂದು ಕೊಟ್ಟು, ಅಕ್ಕಿ, ಬೇಳೆ ತರಲಿಕ್ಕೆ ಪೇಟೆಗೆ ಹೋದನು. ಪಾತ್ರೆ ಬಂದ ಕೂಡಲೆ ಬ್ರಹ್ಮನು ಅವನ್ನು ಒಲೆಯ ಮೇಲಿರಿಸಿ, ಕೆಳಗೆ ಉರಿ ಮಾಡಿ, ಅವುಗಳಲ್ಲಿ ನೀರನ್ನು ತುಂಬಿ ತನ್ನ ಆಹ್ನಿಕಕ್ಕೆ ಕುಳಿತನು. ಅಷ್ಟರಲ್ಲಿ ನಾರಾಯಣನು ಎಲ್ಲ ಸಾಮುಗ್ರಿಗಳನ್ನು ತಂದು ಅಣಿಮಾಡಿದನು. ಕೂಡಲೆ ವರುಣನು ಸ್ನಾನಮಾಡಿ ಅಡಿಗೆ ಮಾಡಲಾರಂಭಿಸಿದನು. ಎಲ್ಲರ ಸ್ನಾನ ಆಹ್ನಿಕಗಳಾಗುವಷ್ಟರಲ್ಲಿ ವರುಣನ ಪಾಕವು ಸಿದ್ಧವಾಯಿತು. ವರುಣನಿಗೆ ಇತರ ಕೆಲಸ (ಅಂದರೆ ನೀರು ಕೊಡುವ ಕೆಲಸ)ವು ಮಾತ್ರ ಮೈಯುಂಡಿತ್ತೇ ವಿನಃ ಪಾಕದ ಸಿದ್ಧತೆಯು ಅವನ ದಿನದ ಕೆಲಸವಾಗಿರಲಿಲ್ಲ. ಆದರಿಂದ ಅಂದು ಅಡಿಗೆಯು ಅಷ್ಟೊಂದು ರುಚಿಯಾಗಿರಲಿಲ್ಲ.

ಭೋಜನಾಂತರ ತುಸ ವಿಶ್ರಮಿಸಿ ಅವರು ಊರಲ್ಲಿ ಅಡ್ಡಾಡಲಿಕ್ಕೆ ಹೋದರು. ಅಲ್ಲಿಯ ಭವ್ಯವಾದ ಶ್ರೀ ರಾಮದೇವಾಲಯ, ೭-೮ ಅರಳೆಯ ಗಿರಣಿಗಳು, ಕೋರ್ಟ, ಕಚೇರಿ, ಹಾಯಸ್ಕೂಲ,

ಪಗಡಿವಾಟದ ವಿಸ್ತಾರವಾದ ಪೇಟೆ, ಅಲ್ಲಿ ಸಂಗ್ರಹಿಸಲ್ಪಟ್ಟ ವಿಪುಲವಾದ ಧಾನ್ಯಸಂಗ್ರಹ ಇವುಗಳನ್ನು ನೋಡಿಕೊಂಡು ದೇವತೆಗಳು ಸಂತುಷ್ಟಚಿತ್ತರಾಗಿ ತಮ್ಮ ಬಿಡಾರಕ್ಕೆ ಬಂದರು.

ದಾವಣಗೇರಿಯಲ್ಲಿ ಬ್ರಾಹ್ಮಣರ ವಸತಿಯು ವಿಶೇಷವಾಗಿರದಿದ್ದರೂ, ಧನಾಢ್ಯರೂ ಧರ್ಮಾತ್ಮರೂ ಆದ ಬಹುಜನ ವೀರಶೈವರೂ ವೈಶ್ಯವರರೂ ಇರುವರೆಂದು ವರುಣನಿಂದ ತಿಳಿದರು. ಅಲ್ಲಿಂದ ಸಂಜೆಯ ರೈಲಿನಲ್ಲಿ ಹೊರಟು ಶಿವಮೊಗ್ಗೆಯ ಕಡೆಗೆ ಸಾಗಿದರು ಲೋಹಶಕಟವು ಚಿಕ್ಕಜಾಜೂರ ಸ್ಟೇಶನ್ನಿನಲ್ಲಿ ಬಂದು ನಿಲ್ಲಲು, ಒಬ್ಬ ಪೋರ್ಟರನು ಚಿತ್ರದುರ್ಗದ ಕಡೆಗೆ ಹೋಗುವ ಪ್ರಯಾಣಿಕರು ಇಲ್ಲಿ ಇಳಿಯಬೇಕೆಂದು ಗಟ್ಟಿಯಾಗಿ ಕೂಗಿಕೊಳ್ಳ ಹತ್ತಿದನು. ಹರಿಹರ-ದಾವಣಗೇರಿಗಳಲ್ಲಿ ಭರ್ತಿಯಾದ ಎಷ್ಟೋ ಪ್ರಯಾಣಿಕರು ಲಗುಬಗೆಯಾಗಿ ಇಳಿದು, ರೈಲುಕಾಮಗಾರರ ಕೈಬೆಚ್ಚಗೆ ಮಾಡಿ, ಸಮೀಪದಲ್ಲಿಯೇ ಬೇರೆ ಲೋಹಕಂಬಿಗಳ ಮೇಲೆ ನಿಂತಿದ್ದ ಗಾಡಿಯ ಡಬ್ಬಿಗಳ ಬಾಗಿಲು ತೆರೆತೆರೆದು ಒಳನುಗ್ಗಿ ಪವಡಿಸಲಾರಂಭಿಸಿದರು ಅಷ್ಟರಲ್ಲಿ ನಮ್ಮ ದೇವತೆಗಳ ರೈಲು ಕೂಗು ಹಾಕಿ ಫಕ್ ಫಕ್ ಶಬ್ದ ಮಾಡುತ್ತ ಸಾಗಿತು ಆಗ ಬ್ರಹ್ಮನು:-- ಚಿತ್ರದುರ್ಗವೆಂದರೇನು? ಅದರ ಪ್ರಾಚೀನ ಹಾಗು ಅರ್ವಾಚೀನ ಇತಿಹಾಸವೇನು? ಎಂದು ಪ್ರಶ್ನೆಮಾಡಲು,

ವರುಣನು:—ಚಿತ್ರದುರ್ಗವೆಂದರೆ ಚಿತ್ರದ ಗುಡ್ಡವಲ್ಲ. ರುಕ್ಷ ಹಾಗು ಭೀಕರವಾದ ಪರ್ವತ ಶ್ರೇಣಿಯಲ್ಲಿ ಕಟ್ಟಿದ ಕೋಟೆಯಾಗಿರುತ್ತದೆ. ಕೌರವ-ಪಾಂಡವರ ಕಾಲಕ್ಕೆ ಇಲ್ಲಿ ಬಕಾಸುರನೆಂಬ ರಾಕ್ಷಸನು ವಾಸಿಸುತ್ತಿದ್ದನೆಂದೂ, ಪಾಂಡವರು ಅರಣ್ಯವಾಸಿಗಳಾದಾಗ್ಗೆ ಒಮ್ಮೆ ಭೀಮಸೇನನಿಗೆ ಆ ಬಕಾಸುರನ ಬಲಿಯ ಸರತಿಯು ಬಂದಿತೆಂದೂ, ಅವನು ಬಕಾಸುರನಿಗಾಗಿ ಕಳುಹಲ್ಪಟ್ಟ ಬಂಡಿ ಅನ್ನವನ್ನುಣ್ಣುತ್ತ ಕುಳಿತಿದ್ದ ಕಾಲದಲ್ಲಿ ಆ ರಾಕ್ಷಸನು ಬಂದು ಇವನಿಗೆ ಗುದ್ದಲು, ಭೀಮಸೇನನು ಇವನನ್ನು ಜಿಗಿದು ಸಂಹರಿಸಿ, ಅವನ ದೇಹವನ್ನು ಆ ಕೋಟೆಯ ಬಾಗಿಲಿಗೆ ಕಟ್ಟಿದ್ದನೆಂದೂ ಆಖ್ಯಾಯಿಕೆಯು ಈ ಪ್ರಾಂತದಲ್ಲಿ ಪ್ರಚಾರದಲ್ಲಿರುತ್ತದೆ

ಚಿತ್ರದುರ್ಗದಲ್ಲಿ ವೀರಶೈವರ ಮುಖ್ಯ ಗುರುಗಳಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಮಠವಿರುತ್ತದೆ. ಇಲ್ಲಿ ಡಿಸ್ಟ್ರಿಕ್ಟ

ಕೋರ್ಟು, ಹಾಯಸ್ಕೂಲುಗಳಿರುತ್ತವೆ. ಚಿತ್ರದುರ್ಗಕ್ಕೆ ಈ ಪೂರ್ವದಲ್ಲಿ ಲೋಹಮಾರ್ಗವಿರಲಿಲ್ಲ. ಈಗ ನಾಲ್ಕಾರು ವರ್ಷಗಳ ಮೊದಲು ಅದು ಹಾಕಲ್ಪಟ್ಟಿರುತ್ತದೆ, ಎಂದನು.

ಅಷ್ಟರಲ್ಲಿ ಲೋಹಯಾನವು ಹೊಸದುರ್ಗದ ಸ್ಟೇಶನ್ನಿನಲ್ಲಿ ನಿಂತಿತು. ಮಾರೀಕಣಿವೆ ಅಥವಾ ಕೃಷ್ಣರಾಜಸಮುದ್ರಕ್ಕೆ ಹೋಗುವ ಪ್ರಯಾಣಿಕರು ಇಲ್ಲಿ ಇಳಿಯಬಹುದೆಂದು ಕೂಗುವ ದನಿಯು ಕೇಳಿಸಿತು.

ಕೃಷ್ಣರಾಜ ಸಮುದ್ರವೆಂದರೆ, ಏನೆಂಬ ಬ್ರಹ್ಮನ ಪ್ರಶ್ನೆಗೆ "ಇಲ್ಲಿಂದ ೧೮ ಮೈಲುಗಳ ಮೇಲೆ ಕೆಲವು ಸಣ್ಣ ಪುಟ್ಟ ಹೊಳೆಗಳಿಗೆ ಒಡ್ಡು ಹಾಕಿಸಿ. ಮೈಸೂರ ಸಂಸ್ಥಾನದ ಪ್ರಜಾನುರಾಗಿಯಾಗಿದ್ದ ದಿವಾಣ ಸರ ಶೇಷಾದ್ರಿಅಯ್ಯರರು ಒಂದು ಕೆರೆಯನ್ನು ಕಟ್ಟಿಸಿರುತ್ತಾರೆ. ಅದು ಈಗ ಸಮುದ್ರದಂತೆ ಸರಾಸರಿ ೫೦ ಮೈಲು ಪರಿಘವುಳ್ಳ ಕೆರೆಯಾಗಿರುತ್ತದೆ. ಆದರಲ್ಲಿ ಈಗ ಬಹಳ ಆಳು ನೀರು ಸಂಗ್ರಹಿಸಲ್ಪಟ್ಟಿದ್ದು, ಆ ನೀರನ್ನು ಕಾಲುವೆಯೊಳಗಿಂದ ದೂರ ದೂರದ ಜಮೀನುಗಳಿಗೆ ಹಾಯಿಸುವದರಿಂದ ಸಂಸ್ಥಾನದ ಉತ್ಪನ್ನವು ಹೆಚ್ಚಾಗುತ್ತಿರುವದು." ದೇವತೆಗಳ ಟ್ರೇನು ರಾತ್ರಿ ೧೧||ಗಂಟೆಗೆ ಬಿರೂರ ಜಂಕ್ಶನ್ನಿಗೆ ಬರಲು, ಅವರು ಅಲ್ಲಿ ಇಳಿದರು.

ಆ ಗಲಿಚ್ಛಸ್ಟೇಶನ್ನಿನಲ್ಲಿ ಬೆಳಗಿನ ೪ ಗಂಟೆಯು ವರೆಗೆ ಅವರು ಕುಳಿತುಕೊಳ್ಳಬೇಕಾಯಿತು. ಯಾಕೆಂದರೆ ಆಗ ಶಿವಮೊಗ್ಗೆಗೆ ಸಂಜೆಯ ೪ ಗಂಟೆಗೆ ಒಂದು, ಬೆಳಗಿನ ೪ ಗಂಟೆಗೆ ಒಂದು ಹೀಗೆ ಎರಡೇ ಗಾಡಿಗಳು ಹೋಗುತ್ತಿದ್ದವು ಇಷ್ಟು ದೊಡ್ಡ ಜಂಕ್ಶನ್ನಿನ ಸ್ಥಳವಾದರೂ ಸ್ಟೇಶನ್ನಿನೊಳಗಿನ ವೇಟಿಂಗರೂಮು ಬಹು ಹೊಲಸಾಗಿದ್ದು, ತೀರ ಸಣ್ಣದೂ ಇರುವದಲ್ಲದೆ, ಬಿರೂರಲ್ಲಿ ಕಳ್ಳರ ಉಪದ್ರವವು ಬಹಳ. ಅದರಿಂದ ಇಡಿ ರಾತ್ರಿಯಲ್ಲಿ ದೇವಗಣಗಳು ಎಚ್ಚತ್ತಿರಬೇಕಾಯಿತು. ಆಗ ವರುಣನು:—ಬಿರೂರಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಬೂಟಾಟಿಕೆಯ ಸಾಧುವು ಶ್ರೀ ರಾಮೋತ್ಸವವನ್ನು ಮಾಡುತ್ತೇನೆಂದು ಹೇಳಿ ಇಡೀ ನಾಡಿನಲ್ಲಿ ಸಂಚರಿಸಿ, ಎಷ್ಟೋ ಹಣ ಸಂಪಾಸಿದನು. ಅವನು ೧-೨ ವರ್ಷ ಆ ಉತ್ಸವ ಮಾಡಿ ಮುಂದೆ ಆ ಗಂಟನ್ನೆಲ್ಲ ಎತ್ತಿ ಹಾಕಿ ಧನಿಕನಾದನೆಂದು ಜನವಾಡಿಕೆಯಿದೆ, ಎಂದು ಹೇಳಿದನು.

ಹೀಗೆ ದೇವಗಣಗಳು ಅತ್ತಿತ್ತಣದ ಹರಟೆಯಲ್ಲಿ ಬೆಳಗಿನ ೩||| ಗಂಟೆಯ ವರೆಗೆ ಕಾಲಕಳೆಯಲು, ಪುಣೆಯ ಕಡೆಗೆ ಹೋಗುವ ಮೇಲ್‌ಟ್ರೇನು ಬಂದಿತು. ಅದು ಬಂದು ಹೋದ ಕೂಡಲೆ ದೇವ ಗಣಗಳು ಶಿವಮೊಗ್ಗೆಯ ಕಡೆಗೆ ಹೋಗುವ ರೈಲನ್ನು ಆರೋಹಿಸಿದರು ಮುಂದೆ ಹತ್ತು ನಿಮಿಷಗಳ ತರುವಾಯ ಆ ಟ್ರೇನು ಮಂದ ಗತಿಯಿಂದ ಸಾಗಿತು. ಆ ಗಾಡಿಯು ೫ ಗಂಟೆಯ ಸಮಯಕ್ಕೆ ತರೀಕೇರಿಯ ಸ್ಟೇಶನ್ನಿಗೆ ಬಂದು ಸೇರಿತು ಅಲ್ಲಿ ಸಮೀಪದಲ್ಲಿ ಕಾಣುತ್ತಿದ್ದ ಚಿಕ್ಕ ಚಿಕ್ಕ ರೈಲ್‌ಡಬ್ಬಿಗಳನ್ನು ಕಂಡು ಬ್ರಹ್ಮನು:— ವರುಣಾ, ಇವೇನು? ಹುಡುಗರ ಆಟದೊಳಗಿನ ರೈಲ್‌ಡಬ್ಬಿಗಳಾಗಿ ತೋರುವವಲ್ಲ? ಈ ಚಿಕ್ಕ ರೈಲು ಎಲ್ಲಿಯ ವರೆಗೆ ಹೋಗುವದು? ಎಂದು ಪ್ರಶ್ನ ಮಾಡಿದನು

ಆಗ ವರುಣನು:—ಈ ಚಿಕ್ಕ ರೈಲಿಗೆ ಟ್ರಾಮ್‌ವೇ ಅನ್ನುವರು. ಈ ಟ್ರಾಮುವೇ ಬಂಡಿಯು ತರೀಕೆರೆಯಿಂದ ನರಸಿಂಹರಾಜ ಪುರದ ವರೆಗೆ ಹೋಗುವದು ಆ ಇಪ್ಪತ್ತಾರು-ಇಪ್ಪತ್ತೇಳು ಮೈಲು ದಾರಿ ಹೋಗಲಿಕ್ಕೆ ಇದಕ್ಕೆ ಸಮಗ್ರ ನಾಲ್ಕು ತಾಸುಗಳು ಹಿಡಿಯುತ್ತವೆ. ಈ ಟ್ರಾಮುವೇ ಕಂಪನಿಗೆ ಪ್ರಯಾಣಿಕರ ಉತ್ಪನ್ನಕ್ಕಿಂತ ಸಾಗೆವಾನಿ ಮುಂಡಿಗೆಗಳ ಬಾಡಿಗೆಯೇ ಹೆಚ್ಚು ಬರುತ್ತಿರುತ್ತದೆ.

ದೇವಗಣಗಳು ಕುಳಿತ ರೈಲು ತರೀಕೆರೆಯಿಂದ ಹೊರಟು, ಬೆಂಕಿಪುರ(ಭದ್ರಾವತಿಯ)ದ ಬಳಿಗೆ ಬಂದಿತು. ಅಷ್ಟರಲ್ಲಿ ನಿಚ್ಚಳವಾಗಿ ಬೆಳಗಾಯಿತು. ಸ್ಟೇಶನ್ನದ ಆಚೆಮಗ್ಗಲಿರುವ ಕಾರಖಾನೆಯನ್ನೂ, ಅದರ ಪಕ್ಕದಲ್ಲಿರುವ ಹೊಸ ಊರನ್ನೂ, ಖಣಿಗಳನ್ನೂ ನೋಡಿ ಬ್ರಹ್ಮನು ಇದೇನೆಂದು ಕೇಳಿದನು. "ಇಲ್ಲಿ ಉತ್ಕೃಷ್ಟವಾದ ಕಬ್ಬಿಣ ಕಣಿಗಳಿರುತ್ತವೆ ಮೈಸೂರಲ್ಲಿ ಮಾಜಿ ದಿವಾಣರಾಗಿದ್ದ ಸರ ವಿಶ್ವೇಶ್ವರಯ್ಯರೆಂಬ ಕುಶಾಗ್ರಬುದ್ಧಿಯವರು ಈ ಪ್ರದೇಶವನ್ನು ಕಂಡು, ಇಲ್ಲಿಯೊಂದು ಕಬ್ಬಿಣ ತೆಗೆಯುವ ಕಾರಖಾನೆಯನ್ನಿಟ್ಟರೆ ಸಂಸ್ಥಾನದ ಉತ್ಪನ್ನವು ಬೆಳೆಯುವದಲ್ಲದೆ, ಸಂಸ್ಥಾನದ ಪ್ರಜೆಗಳಲ್ಲಿಯ ೧೦-೮ ಸಹಸ್ರ ಜನರಿಗೆ ಉದ್ಯೋಗವೂ ಹತ್ತುವದು. ಆದರಿಂದ ಇಲ್ಲಿಯೊಂದು ಕಾರಖಾನೆಯನ್ನು ತೆಗೆಯಬೇಕೆಂದು ಯೋಚಿಸಿ, ಸಂಸ್ಥಾನದ ಖರ್ಚಿನಿಂದ ಈ ಬೆಂಕಿಪುರ ರೇಲ್ವೆ ಸ್ಟೇಶನ್ನಿನ ಬಳಿಯಲ್ಲಿ ಕಬ್ಬಿಣ ತೆಗೆಯುವ ಕಾರಖಾನೆಯನ್ನು

ಪ್ರಾರಂಭಿಸಿದರು. ಬೆಂಕಿಪುರವು ಸಾಮಾನ್ಯಹಳ್ಳಿಯು. ಹೊಸದಾಗಿ ಬಂದ ಸಾವಿರಾರು ಹೊಸ ಕುಟುಂಬಗಳಿಗೆ ಊರಲ್ಲಿರಲು ಸ್ಥಳವೆಲ್ಲಿ ದೊರೆಯಬೇಕು? ಆಗ ಸಂಸ್ಥಾನದವರೇ ಈ ಹೊಸನಗರವನ್ನು ಕಟ್ಟಿಸಿದರು; ಹಾಗು ಸಮೀಪದಲ್ಲಿಯೇ ಹರಿಯುವ ಭದ್ರಾವತಿ ಹೊಳೆಯ ಹೆಸರನ್ನು ಈ ಊರಿಗೆ ಇಟ್ಟಿರುವರು" ಎಂದು ವರುಣನು ಹೇಳುತ್ತಿರಲು, ಆ ರೈಲು ಶಿವಮೊಗ್ಗೆಯ ಸ್ಟೇಶನ್ನಿಗೆ ಬಂದು ತಲುಪಿತು.

## ಶಿವಮೊಗ್ಗೆ.

ಆಗ ಸರಾಸರಿ ೭ ಗಂಟೆಯ ಸಮಯವಾದ್ದರಿಂದ ದೇವಗಣಗಳು ಊರೊಳಗೆ ಹೋಗುವ ಎತ್ತುಗಡೆ ಮಾಡದೆ ರೇಲ್ವೆ ಸ್ಟೇಶನ್ನಿನ ಬಳಿಯಲ್ಲಿಯ ಶ್ರೀ ಅರ್ಕೇಶ್ವರನ ಮಂದಿರದಲ್ಲಿಳಿದು, ಪ್ರಾತಃಕೃತ್ಯಗಳನ್ನೂ, ಸ್ನಾನ-ಆಹ್ನಿಕಗಳನ್ನೂ ತೀರಿಸಿಕೊಂಡರು; ಹಾಗು ಅಲ್ಲಿಯ ಭಾವಿಕ ಅರ್ಚಕನಲ್ಲಿಯೇ ಅಂದಿನ ಮಧ್ಯಾಹ್ನವನ್ನು ತೀರಿಸಿಕೊಂಡರು. ಭೋಜನಾನಂತರ ದೇವಗಣಗಳು ತುಂಗಾನದಿಯ ಆಚೆಯ ಪಕ್ಕದಲ್ಲಿ ವಿಸ್ತಾರವಾಗಿ ಹಬ್ಬಿರುವ ಶಿವಮೊಗ್ಗೆಯ ಪಟ್ಟಣವನ್ನು ನಿರೀಕ್ಷಿಸಹೋದರು ಉತ್ತರ ಮೈಸೂರ ಪ್ರಾಂತದಲ್ಲಿ ಸರಾಸರಿ ದಾವಣಗೇರಿಯಷ್ಟೇ ಜನಸಂಖ್ಯೆಯುಳ್ಳ ಶಿವಮೊಗ್ಗೆಯ ಊರು ಅಷ್ಟೊಂದು ಪ್ರೇಕ್ಷಣೀಯವಲ್ಲ ಇಲ್ಲಿಯ ದೊಡ್ಡ ಬ್ರಾಹ್ಮಣರ ಕೇರಿ, ಚಿಕ್ಕ ಬ್ರಾಹ್ಮಣರ ಕೇರಿ, ಮಂಡಿ, ಕೋಪಾರ್ಲಿಯಂ ಛತ್ರ, ಹಾಯ್‌ಸ್ಕೂಲ, ಡಿಸ್ಟ್ರಿಕ್ಟ ಕೋರ್ಟ, ಸಿವ್ಹಿಲ್‌ಆಸ್ಪತ್ರೆ, ಪೋಷ್ಟ ಮತ್ತು ತಾರ ಆಫೀಸ ಮುಂತಾದವುಗಳನ್ನು ನೋಡಿ, ಸಂಜೆಗೆ ದೇವತೆಗಳು ಪುನಃ ಶ್ರೀ ಅರ್ಕೇಶ್ವರನ ದೇವಾಲಯಕ್ಕೆ ಬಂದರು. ಅವರು ಮರುದಿನ ತೀರ್ಥಹಳ್ಳಿಯ ಮಾರ್ಗವಾಗಿ ಶ್ರೀ ಶೃಂಗೇರಿಗೆ ಹೋಗುವದನ್ನು ಗೊತ್ತು ಮಾಡಿಕೊಂಡರು.

## ಶೃಂಗೇರಿ.

ಶಿವಮೊಗ್ಗೆಯಿಂದ ಹೊರಟ ದೇವತೆಗಳು ಮಾರ್ಗದಲ್ಲಿ ಹತ್ತುವ ತೀರ್ಥಹಳ್ಳಿಯೆಂಬ ಪ್ರಾಚೀನ ಕ್ಷೇತ್ರವನ್ನು ಕಂಡು, ಆ ದಿನ

ಮಾಧ್ಯಾಹ್ನಿಕಗಳನ್ನು ಅಲ್ಲಿಯೇ ತೀರಿಸಿದರು ಅಲ್ಲಿಯ ತುಂಗಾ ನದಿಯಲ್ಲಿ ಅಸಂಖ್ಯತೀರ್ಥಗಳಿರುವದರಿಂದ ಆ ಹಳ್ಳಿಗೆ ಬಂದ ಹೆಸರು ಯೋಗ್ಯವಿರುವದೆಂದು ಅಂದುಕೊಂಡರು. ಬಳಿಕ ದೇವತೆಗಳು ಅಲ್ಲಿಯ ದೇವಸ್ಥಾನದ ಅರ್ಚಕರಲ್ಲಿ ಆ ದಿನದ ವೈಶ್ವದೇವವನ್ನು ತೀರಿಸಿಕೊಂಡು ಮುಂದೆ ಹೊಸಕೊಪ್ಪದ ಮೇಲೆ ಹಾಯ್ದು ಶೃಂಗೇರಿಗೆ ಹೋದರು. ಕಲಿಯುಗದಲ್ಲಿ ಕುಮತಗಳನ್ನು ಖಂಡಿಸುವದಕ್ಕೆ ಸಾಕ್ಷಾತ್ ಶಂಕರನೇ ಅವತಾರ ಮಾಡಿ ಮಠವನ್ನು ಸ್ಥಾಪಿಸಿ, ಲೋಕಪುನೀತವನ್ನಾಗಮಾಡಿದ ಆ ಕ್ಷೇತ್ರದ ದರುಶನದಿಂದ ಅವರಿಗೆ ಅತಿಶಯ ಆನಂದವಾಯಿತು. ಶ್ರೀಮಚ್ಛಂಕರ ಭಗವತ್ಪಾದರವರು ತಮ್ಮ ಪೀಠಕ್ಕೆ ಬಹು ಯೋಗ್ಯವಾದ ಸ್ಥಳವನ್ನು ಆರಿಸಿರುವರೆಂದು ದೇವತೆಗಳು ತಿಳಿದರು. ಸುತ್ತಲೂ ಪರ್ವತಶ್ರೇಣಿಗಳು; ಬಳಿಯಲ್ಲಿ ಮಧುರನೀರಿನ ತುಂಗಾನದಿಯು; ನೆರೆಯಲ್ಲಿಯೇ ಶೃಂಗಋಷಿಗಳ ಪವಿತ್ರ ಆಶ್ರಮ. ಇವುಗಳಿಂದ ಆ ಪ್ರದೇಶಕ್ಕೆ ಬಹು ರಮಣೀಯತೆಯು ಬಂದಿತ್ತು; ಇರಲಿ.

ದೇವತೆಗಳು ಮೊದಲು ಶ್ರೀ ಶಂಕರಭಗವತ್ಪಾದರವರಿಂದ ಸ್ಥಾಪಿತವಾದ ಶ್ರೀ ಶಾರದಾಂಬಾ ದೇವಿಯ ಗುಡಿಗೆ ಹೋದರು. ಬ್ರಹ್ಮನ ಹೊರತು ಎಲ್ಲರೂ ಆ ಮಹಾತಾಯಿಗೆ ನಮಸ್ಕರಿಸಿದರು. ಸತ್ಯಲೋಕವನ್ನು ಬಿಟ್ಟುಬಂದ ಶಾರದಾಂಬೆಯು ಭೂಲೋಕದಲ್ಲಿ ಈ ಮೇರೆಗೆ ವೈಭವದಿಂದ ಪೂಜೆಗೊಳ್ಳುವದನ್ನು ನೋಡಿ ಬ್ರಹ್ಮನಿಗೆ ಸಂತೋಷವಾಯಿತು. ಇಂದ್ರಾದಿಗಳು ಗುಡಿಯ ಭವ್ಯ ಕಟ್ಟಡವನ್ನು ನೋಡಿ ಬೆರಗಾದರು. ಆಗ ಬ್ರಹ್ಮನಿಗೆ ತಾನು ಶ್ರೀ ಸುರೇಶ್ವರಾಚಾರ್ಯರೆಂಬ ಹೆಸರಿನಿಂದ ಅವತಾರ ಮಾಡಿ ಶೃಂಗಪುರಿಯ ಜಗದ್ಗುರು ಪೀಠದಲ್ಲಿ ಕುಳಿತ ಸಂಗತಿಯು ನೆನಪಾಯಿತು. ಅವನು ಆ ಹಿಂದಿನ ಕಥೆಯನ್ನು ಇಂದ್ರಾದಿಗಳಿಗೆ ಹೇಳಿದನು; ಮತ್ತು ನುಡಿದದ್ದೇನಂದರೆ:—ನಾರಾಯಣಾ, ನಾನು ಜಗದ್ಗುರು ಪೀಠವೇರಿದ ಶೃಂಗೇರಿಯು ಇದೇ ಆಗಿರಬಹುದೇನು? ಎಲ! ಎಲ! ಎಷ್ಟು ಹೆಚ್ಚು ಕಡಿಮೆಯಾಗಿದೆಯಲ್ಲ! ಆಗ ಇಷ್ಟು ಭವ್ಯಗಳಾದ ಗುಡಿಗಳಿರಲಿಲ್ಲ; ವೈಭವವಿರಲಿಲ್ಲ. ಈಗೇನು, ಮಠದ ತುಂಬ ಗುಡಿಗಳೇ ಗುಡಿಗಳಾಗಿವೆ ಶಾಬಾಸ್! ಮಠದ ಗೌರವವು ಚೆನ್ನಾಗಿ ಇದ್ದಂತೆ ತೋರುತ್ತದೆ.

ಬ್ರಹ್ಮನ ಮಾತಿಗೆ ನಾರಾಯಣನು ಏನೇನೋ ಹೇಳಿದನು.

ಅಷ್ಟರಲ್ಲಿ ವರುಣನು ಮುಂದೆ ಬಂದು:—ಹಿಂದಿನಿಂದ ನಿಮಗೆ ಈ ಮಠದ ವಿಸ್ತಾರವನ್ನೆಲ್ಲ ಹೇಳುತ್ತೇನೆ ಈಗ ಬಿಸಿಲಾಯಿತು, ಸ್ನಾನಕ್ಕೆ ನಡೆಯಿರಿ, ಎಂದನು. ಬಳಿಕ ಎಲ್ಲರೂ ಸ್ನಾನಕ್ಕೆ ಹೋದರು. ತುಂಗಾನದಿಯ ವಿಶಾಲವಾದ ಘರಸುಗಲ್ಲಿನ ಮೇಲೆ ಬ್ರಹ್ಮನನ್ನು ಕೂರಿಸಿದರು. ವರುಣ ಇಂದ್ರಾದಿಗಳು ನದಿಯ ನೈರ್ಮಲ್ಯವನ್ನು ನೋಡಿ ಸಂತೋಷಪಟ್ಟು, ಪ್ರವಾಸದಲ್ಲಿ ಹೊಲಸಾದ ತಮ್ಮ ಬಟ್ಟೆಗಳನ್ನೆಲ್ಲ ಸ್ವಚ್ಛವಾಗಿ ಒಗೆದರು; ಹಾಗೆ ನಾರಾಯಣ-ಬ್ರಹ್ಮದೇವರ ಬಟ್ಟೆಗಳನ್ನೂ ಒಗೆದು ಒಣಗಹಾಕಿದರು. ಬಟ್ಟೆಗಳು ಒಣಗಲು, ವರುಣನು ಸ್ನಾನ ಮಾಡಿದನು ನಂತರ ನಾರಾಯಣಾದಿಗಳು ಸ್ನಾನಕ್ಕೆ ಇಳಿದರು. ಬ್ರಹ್ಮನಿಗೆ ಮೊದಲೇ ವೃದ್ಧಾಪ್ಯ; ಅದರಲ್ಲೂ ದೀರ್ಘಪ್ರವಾಸದ ಮೂಲಕ ಉಂಟಾದ ಅಶಕ್ತತೆ; ಹೀಗಿರುವಾಗ ಆ ಶೀತಲ ನೀರಿನಲ್ಲಿ ಕಾಲಿಟ್ಟ ಕೂಡಲೆ ಅವನಿಗೆ ಚಳಿ ಬಂದವು. ಅಂದು ಬ್ರಹ್ಮನಿಂದ ಆಹ್ನಿಕವನ್ನು ಮಾಡಲಿಕ್ಕಾಗಲಿಲ್ಲ. ನಾರಾಯಣಾದಿಗಳು ಅವನನ್ನು ಒಂದು ಬೆಚ್ಚನ್ನೆ ಸ್ಥಳದಲ್ಲಿ ಮಲಗಿಸಿದರು. ಮುಂದೆ ತಾಸೆರಡು ತಾಸುಗಳಲ್ಲಿ ಬ್ರಹ್ಮನ ಶೀತ ನಿವಾರಣವಾಯಿತು. ಅವನು ಎದ್ದು ಕುಳಿತನು. ಅಷ್ಟರಲ್ಲಿ ಮಠದಲ್ಲಿ ಊಟದ ಗಂಟೆಯು ಸಪ್ಪಳವಾಯಿತು. ವರುಣಾದಿಗಳು ಮಡಿಗಳನ್ನುಟ್ಟುಕೊಂಡರು. ಬ್ರಹ್ಮನು ಊಟಕ್ಕೆ ಒಲ್ಲೆಂದನು. ಆಗ ನಾರಾಯಣನು ಅವನಿಗೆ ತಿಳಿ ಹೇಳಿ ಕರಕೊಂಡು ನಡೆದನು

ಭೋಜನೋತ್ತರದಲ್ಲಿ ದೇವತೆಗಳು ಮಠದಲ್ಲಿಯೂ, ಊರಲ್ಲಿಯೂ ಅಡ್ಡಾಡಿದರು. ವಿದ್ಯಾಶಂಕರ, ಮಲ್ಲಿಕಾರ್ಜುನ ಮೊದಲಾದ ದೇವಸ್ಥಾನಗಳು ಅವರಿಗೆ ಆನಂದವನ್ನುಂಟುಮಾಡಿದವು. ಮರುದಿನ ಅವರು ಗಂಗಾಮೂಲಕ್ಕೆ ಹೋಗಿ ಅಲ್ಲಿಯ ಪವಿತ್ರ ಸ್ಥಳಗಳನ್ನು ನೋಡಿ ಬಂದರು. ಬಳಿಕ ಅವರು ಮೂರು ದಿನ ಅಲ್ಲಿದ್ದು ಜಗದ್ಗುರುಗಳ ದರುಶನ ಹೊಂದಿ ಮುಂದೆ ಉಡುಪಿಗೆ ಪ್ರಯಾಣ ಮಾಡಿದರು.

## ಉಡುಪಿ.

ಉಡುಪಿಯು ದಕ್ಷಿಣಕಾನಡಾ ಜಿಲ್ಲೆಯಲ್ಲಿ ಪ್ರಸಿದ್ಧವಾದ ಕ್ಷೇತ್ರವು. ಇಲ್ಲಿ ದ್ವೈತಮತ ಪ್ರವರ್ತಕರಾದ ಶ್ರೀಮತ್ ಮಧ್ವಾ

ಚಾರ್ಯರೆಂಬ ಮಹನೀಯರು ಶ್ರೀಕೃಷ್ಣನ ಬಾಲಮೂರ್ತಿಯನ್ನು ಸ್ಥಾಪಿಸಿರುವರು; ಮತ್ತು ಆ ಮೂರ್ತಿಯ ಅರ್ಚನಕ್ಕೆ ಎಂಟುಜನ ಯತಿಗಳನ್ನು ನಿಯಮಿಸಿರುವರು. ಆ ಎಂಟೂಜನ ಯತಿಗಳಿಗೆ ಹಿಂದೊಂದು ಮಠವಿದ್ದು, ಅವರ ಶಿಷ್ಯಪರಂಪರೆಯು ಸಾಗುತ್ತಿರುವದು. ಹಿಂದೊಂದು ಮಠದ ಯತಿಗಳು ನಿಯಮಿತ ಅವಧಿಯವರೆಗೆ ಶ್ರೀಕೃಷ್ಣ ಪರಮಾತ್ಮನನ್ನು ಅರ್ಚಿಸುವರು. ಒಬ್ಬರ ಪೂಜೆಯ ಅವಧಿಯು ಮುಗಿದು ಮತ್ತೊಬ್ಬರು ಪೂಜೆಯನ್ನು ಪ್ರಾರಂಭಿಸುವದಕ್ಕೆ ಪರ್ಯಾಯವೆಂಬ ಹೆಸರು ಈ ಪರ್ಯಾಯ ಮಹೋತ್ಸವವು ಬಹು ವಿಜೃಂಭಣೆಯಿಂದ ಸಾಗುವದು

ನಮ್ಮ ದೇವತೆಗಳು ಉಡುಪಿಗೆ ಹೋದಾಗ ಪರ್ಯಾಯ ಮಹೋತ್ಸವವಿತ್ತು. ಬ್ರಾಹ್ಮಣರೂ ಸುವಾಸಿನಿಯರೂ ವಿಧವೆಯರೂ ಸೇರಿ ಸರಾಸರಿ ಹದಿನಾರು ಸಹಸ್ರದವರೆಗೆ ಜನಸಮುದಾಯವು ಕೂಡಿತ್ತು. ಬ್ರಾಹ್ಮಣ-ಸುವಾಸಿನಿಯರ ಸಂಖ್ಯೆಗಿಂತಲೂ ವಿಧವೆಯರ ಸಂಖ್ಯೆಯೇ ವಿಶೇಷವಾಗಿತ್ತು! ಇದರಿಂದ ಈ ಕರ್ನಾಟಕ ಪ್ರಾಂತದಲ್ಲಿ ಎಷ್ಟು ಜನ ಪುರುಷರು ಅಕಾಲ ಮರಣಕ್ಕೆ ಹಿಳಗಾಗಿರುವರೆಂಬದು ಬ್ರಹ್ಮನ ಲಕ್ಷ್ಯಕ್ಕೆ ಬಂತು. ಅದರಲ್ಲಿ ಚಿಕ್ಕ ಚಿಕ್ಕ ವಿಧವೆಯರಂತೂ ಸಮುದ್ರದಲ್ಲಿ ಸ್ನಾನಮಾಡಿ ತಮ್ಮ ತಮ್ಮ ಪತಿಗಳಿಗೆ ತಿಲೋದಕಗಳನ್ನು ಕೊಡುವಾಗ ಬ್ರಹ್ಮನಿಗೆ ಅನೇಕ ಬಗೆಯಾಗಿ ಶಾಪವ ಕೊಡುತ್ತಿದ್ದರು. ಅವರ ಗೋಳನ್ನು ನೋಡಲಾರದೆ, ಬ್ರಹ್ಮನು ಸಮುದ್ರ ತೀರವನ್ನೇ ತ್ಯಜಿಸಿದನು!

ದೇವತೆಗಳು ದಿನಾಲು ಪವಿತ್ರವಾದ ಮಧ್ವಸರೋವರದಲ್ಲಿ ಸ್ನಾನ ಮಾಡಿ ಅಲ್ಲಿಯೇ ಅನುಷ್ಠಾನಗಳನ್ನು ತೀರಿಸಿಕೊಳ್ಳುತ್ತಿದ್ದರು. ಬಳಿಕ ಶ್ರೀಕೃಷ್ಣನ ದೇವಾಲಯಕ್ಕೆ ಹೋಗಿ ಕನಕನ ಕಿಂಡಿಯಲ್ಲಿ ಪರಮಾತ್ಮನ ದರುಶನವನ್ನು ತಕ್ಕೊಳ್ಳುತ್ತಿದ್ದರು. ಆಗ ನಾರಾಯಣನಿಗೆ ಕೃಷ್ಣಾವತಾರದ ಲೀಲೆಗಳು ಸ್ಮರಣೆಯಲ್ಲಿ ಬಂದವು. ವರುಣನು ಕನಕನ ಕಿಂಡಿಯ ಇತಿಹಾಸವನ್ನು ಎಲ್ಲರಿಗೂ ಹೇಳಿದನು. ಮಠದಲ್ಲಿ ಭೋಜನಕ್ಕೆ ಮುಕ್ತದ್ವಾರವಿರುವದರಿಂದ ದೇವತೆಗಳಿಗೆ ಉಡುಪಿಯಲ್ಲಿರುವ ವರೆಗೆ ಅನ್ನಕ್ಕೆ ಕೊರತೆಯಾಗಲಿಲ್ಲ. ಅವರು ಅಡಿಗೆಯ ಸ್ಥಳದಲ್ಲಿ ಪರ್ವತಪ್ರಾಯವಾಗಿ ಬಿದ್ದ ಅನ್ನದ ರಾಶಿಯನ್ನು ನೋಡಿ ಬೆರಗಾಗುತ್ತಿದ್ದರು. ಯಾಕಂದರೆ ಸತ್ಯಲೋಕದಲ್ಲಾಗಲಿ,

ಸ್ವರ್ಗದಲ್ಲಾಗಲಿ, ವೈಕುಂಠದಲ್ಲಾಗಲಿ ಇಂಥ ಅನ್ನದ ರಾಶಿಯನ್ನು ಅವರು ಕಂಡೇ ಇರಲಿಲ್ಲ ಇರಲಿ. ಊಟಕ್ಕೆ ಕೂಡ್ರುವಾಗ ಸ್ತ್ರೀಪುರುಷರು ಬೇರೆ ಬೇರೆ ಪಂಗ್ತಿಗಳಲ್ಲಿ ಕುಳಿತುಕೊಳ್ಳದೆ ಒಂದೇ ಸಾಲಿನಲ್ಲಿ ಕೂಡ್ರುವದನ್ನು ನೋಡಿ ನಾರಾಯಣನಿಗೆ ಅಸಮಾಧಾನವಾಯಿತು ದೇವತೆಗಳ ನಡನಡುವೆ ಸ್ಥಳವುಳಿದಲ್ಲಿ ಹೆಂಗಸರು ಬಂದು ಕೂಡ್ರಲು ಮಡಿವಂತನಾದ ಬ್ರಹ್ಮನು ಚಡಪಡಿಸಹತ್ತಿದನು; ಆದರೆ ಮಾಡುತ್ತಾನೇನು? ಬೇರೆ ಕಡೆಗೆ ಸ್ಥಳವಿದ್ದಿಲ್ಲ; ಅಲ್ಲಿಯೇ ಹ್ಯಾಗಾದರೂ ಮಾಡಿ ಉಂಡೆದ್ದನು ಕೃಷ್ಣಪರಮಾತ್ಮನ ಸ್ಥಳದಲ್ಲಿ ಹೆಚ್ಚು ಕಡಿಮೆ ನೋಡಬಾರದೆಂದು ವರುಣನು ಹೇಳುತ್ತಿದ್ದನು. ಸಂಜೆಯ ಮುಂದೆ ದಿನಾಲು ರಥೋತ್ಸವವಾಗುವದು. ಆಗ ಮದ್ದನ್ನು ಸುಡುವರು. ಆ ಮದ್ದಿನ ಚಮತ್ಕಾರವನ್ನು ನೋಡಿ ಇಂದ್ರನು ಸ್ವರ್ಗದಲ್ಲಿ ಹೀಗೆಯೇ ಮದ್ದು ಸುಡಬೇಕೆಂದು ಅಂದನು.

ಅನಂತೇಶ್ವರ, ಚಂದ್ರಮೌಳೀಶ್ವರ, ಒಡಬಂಡೇಶ್ವರ ಮೊದಲಾದ ದೇವಸ್ಥಾನಗಳನ್ನು ದೇವತೆಗಳು ನೋಡಿದರು ಈ ಸುಪ್ರಸಿದ್ಧ ಶೈವ ದೇವಾಲಯಗಳಲ್ಲಿಯೇ ಶ್ರೀಮನ್ ಮಧ್ವಾಚಾರ್ಯರವರು ಅನುಷ್ಠಾನ ಮಾಡಿದರೆಂದು ವರುಣನು ಹೇಳಿದನು. ಈಗಲೂ ಆ ಎಂಟು ಮಠದ ಶ್ರೀಗಳವರು ದಿನಾಲು ಈ ದೇವಾಲಯಗಳಿಗೆ ಹೋಗಿ ಶಿವದರ್ಶನವನ್ನು ಹೊಂದುತ್ತಿರುವರು. ಉಡುಪಿಯು ಎಷ್ಟು ಪವಿತ್ರ ಸ್ಥಳವೆಂಬದನ್ನು ಪ್ರಾಚೀನ ಪುರಾಣಗಳ ಆಧಾರದಿಂದ ವರುಣನು ನಾರಾಯಣಾದಿಗಳಿಗೆ ಸಿದ್ಧಮಾಡಿ ತೋರಿಸಿದನು. ಈ ಪವಿತ್ರ ಸ್ಥಳದಲ್ಲಿ ದೇವತೆಗಳು ೧೫ ದಿವಸಗಳವರೆಗೆ ಇದ್ದು, ಪರ್ಯಾಯವನ್ನು ತೀರಿಸಿಕೊಂಡು ಮುಂದೆ ಪ್ರಯಾಣ ಬೆಳಿಸಿದರು.

## ತಲೆಕಾವೇರಿ.

ಉಡುಪಿಯ ಕ್ಷೇತ್ರದಿಂದ ಕಾವೇರಿ ಹೊಳೆಯ ಉಗಮವು ೪೦-೫೦ ಮೈಲುಗಳಾಗಬಹುದು. ದೇವಗಣಗಳು ಉಡುಪಿಯಿಂದ ಮಡಿಕೇರಿಯ ಕಡೆಗೆ ಹೋಗುವ ಮೋಟಾರನ್ನು ಆರೋಹಿಸಿ ಕಾವೇರೀ ಉಗಮಕ್ಕೆ (ತಲೆಕಾವೇರಿಗೆ) ನಡೆದರು. ಅಲ್ಲಿಯ ಘಟ್ಟಗಳ ಪರಿಳಿತದ ಹಾಗು ಒಡ್ಡುಮುರಿಯ ಮಾರ್ಗದಲ್ಲಿ ಮೋಟಾರ

ಬಂಡಿಯು ಬಹು ನಿದಾನವಾಗಿ ಸಾಗಿತ್ತು. ಬೆಳಗಿನ ಏಳು ಗಂಟೆಗೆ ಉಡಪಿಯಿಂದ ಹೊರಟಿದ್ದ ಆ ತ್ರೈಲಶಕಟವು ಮಧ್ಯಾಹ್ನ ಒಂದು ಗಂಟೆಗೆ ನಮ್ಮ ದೇವಗಣಗಳನ್ನು ತಲೆಕಾವೇರಿಯ ಬಳಿಯ ಬಾಗು ಮಂಡಲವೆಂಬ ಗ್ರಾಮಕ್ಕೆ ತಲುಪಿಸಿ ಹೊರಟುಹೋಯಿತು. ಬಾಗು ಮಂಡಲದ ಬಳಿಯಲ್ಲಿ ಡೊಂಕು ಡೊಂಕಾಗಿಯೂ ಕ್ಷೀಣವಾಗಿಯೂ ಹರಿಯುವ ಕಾವೇರಿಯನ್ನು ಕಂಡು ಬ್ರಹ್ಮನಲ್ಲಿ ಮಗಳ ವಿಷಯದ ಪ್ರೇಮದ ಆವೇಗವು ಉತ್ತರಿಸಿತು. ಆಗ ಅವನು ಏನನ್ನೂ ಮಾತಾಡದೆ ಬಿರಿಬಿರಿ ಹೊಳೆಯ ಬಳಿಗೆ ಹೋಗಿ, ದಡದಲ್ಲಿ ಉಕ್ಕೊಂದು ಕುಳಿತು ಕಣ್ಣೀರು ಹಾಕಹತ್ತಿದನು. ಅತ್ಯಂತ ವೃದ್ಧನೂ ಜೀರ್ಣ ಶೀರ್ಣಶರೀರವುಳ್ಳವನೂ ಮಾರ್ಗಾಯಾಸದಿಂದ ಬಳಲಿದವನೂ ಆದ ತನ್ನ ತಂದೆಯನ್ನು ಕಂಡು, ಕಾವೇರಿಗೂ ಹಿಡಿಸಲಾರದಷ್ಟು ದುಃಖ ವಾಯಿತು. ಆಗ ಅವಳು ಗಟ್ಟಿಯಾಗಿ ರೋದನ ಮಾಡತೊಡ ಗಿದಳು. ಆದರಿಂದ ಆಗ ಆ ಬಾಗುಮಂಡಲದ ಬಳಿಯ ಕಾವೇ ರಿಯ ಹೊಳೆಯಲ್ಲಿ ಉಂಟಾದ ಒಂದು ಬಗೆಯ ಆರ್ತ್ರನಾದವು ಈಗಲೂ ಅಲ್ಲಿ ಕೇಳುತ್ತಿರುವದೆಂದು ನೋಡಿದವರು ಹೇಳುತ್ತಾರೆ!

ಹೀಗೆ ಆ ಪಿತಾ-ಪುತ್ರಿಯರು ದೀರ್ಘಕಾಲದ ನಂತರ ಭೇಟಿ ಯಾದರು. ವಾತ್ಸಲ್ಯದ ಪ್ರಥಮತರಂಗವು ಶಾಂತವಾದ ಬಳಿಕ ಬ್ರಹ್ಮದೇವನು:— ಅಮ್ಮಾ ಕಾವೇರಿ, ವರುಣನ ಮುಖಾಂತರ ನೀನು ಹೇಳಿ ಕಳಿಸಿದ ಸಂಗತಿಯನ್ನು ಕೇಳಿ, ನನಗೆ ಬಹಳ ದುಃಖ ವಾಯಿತು; ಆದರೆ ಮಾಡಲೇನು? ಈ ಮುಪ್ಪಿನಕಾಲದಲ್ಲಿ ನಾನು ಪುನಃ ಸಂಸಾರವ್ಯಾಮೋಹದಲ್ಲಿ ಸಿಕ್ಕದ್ದರಿಂದ "ದ್ವಿತೀಯ ಭಾರ್ಯಾ ಪ್ರಾಣಾತ್ ಗರೀಯಸೀ" ಎಂಬಂತೆ ನಾನು ನನ್ನ ಆ ಪ್ರಿಯಮಡದಿ ಯನ್ನು ಬಿಟ್ಟು ಬರಲಿಕ್ಕೆ ವಿಲಂಬವಾಯಿತು ನಾವು ನಿನ್ನೆಡೆಗೆ ಬರುವದಕ್ಕಾಗಿ ಸ್ವರ್ಗಲೋಕದಿಂದ ಹೊರಟು ಮೂರು ತಿಂಗಳಾ ದವು; ಆದರೆ ನಾರಾಯಣಾದಿ ಸಂಗಡಿಗರ ಕರ್ಣಾಟಕ ಪ್ರಾಂತ ವನ್ನು ನೋಡುವ ಹುರುಪು ಈಗಲೆ ಅಡ್ಡಬಂದುದರಿಂದ ಈ ಕೆಲ ಸಕ್ಕೆ ಇಷ್ಟು ವಿಲಂಬವಾಯಿತು, ಎಂದು ನುಡಿದನು.

ನಂತರ ಕಾವೇರಿಯು ಅವರೆಲ್ಲರಿಗೆ ಸ್ನಾನಾಹ್ನಿಕಗಳನ್ನು ತೀರಿಸಲು ಹೇಳಿ, ಆ ಬಾಗುಮಂಡಲದಲ್ಲಿಯ ಒಬ್ಬ ಹವ್ಯಕ ಕ್ಷೇತ್ರ ಸ್ಥನಲ್ಲಿ ಇವರ ಭೋಜನದ ವ್ಯವಸ್ಥೆಯನ್ನು ಮಾಡಿಸಿದಳು. ಹಸಿದು

ಬಂದ ಈ ಹಾರುವರು (ವೇಷಾಂತರ ತಾಳಿದ ದೇವತೆಗಳು) ಬೇಕ್ಕಾದಷ್ಟು ಅನ್ನವನ್ನುಣ್ಣಬಹುದೆಂದು ಆ ಮನೆಯುವಳು ಎಷ್ಟೊಂದು ಅನ್ನವನ್ನೂ ಎಷ್ಟೋ ತಂಹದ ಸಾಸುಮೆ, ಗೊಜ್ಜು, ಪಲ್ಲೆಗಳನ್ನೂ ಮಾಡಿದ್ದಳು; ಆದರೆ ಇವರಲ್ಲಿಯು ಯಾರಿಗೂ ಆ ನಾಡಿನ ಊಟವು ಸೇರದ್ದರಿಂದ ಇವರು ಯಥಾ ಯಥಾ ಉಂಡು ಹೊರಬಿದ್ದರು.

ಮರುದಿನ ಬೆಳಿಗ್ಗೆ ಬೆಟ್ಟವನ್ನು ಹತ್ತಿ ತಲೆಕಾವೇರಿಯು ಕ್ಷೇತ್ರಕ್ಕೆ ಹೋಗಿ, ಅಲ್ಲಿಯು ಕಾವೇರಿಯು ಉಗಮದ ಹಿಂದು ಮೋಳ ಚಚ್ಚೌಕಾದ ಪುಟ್ಟ ಕುಂಡವನ್ನೂ ಬಳಿಯುಲ್ಲಿಯೇ ಇರುವ ಆಗಸ್ತ್ಯ ಋಷಿಗಳ ಆಶ್ರಮವನ್ನೂ ಸಪ್ತಗಿರಿಗಳನ್ನೂ ಕಂಡು ಅಲ್ಲಿ ಸ್ನಾನಾಹ್ನಿಕಗಳನ್ನೂ ಕ್ಷೇತ್ರವಿಧಿಯುನ್ನೂ ಮಾಡಿದರು. ನಂತರ ಕಾವೇರಿಯು ಅಗಸ್ತ್ಯರ ಆಜ್ಞಾಭಂಗಮಾಡಿ ಅಲ್ಲಿಂದ ಹೊರಟದ್ದನ್ನೂ, ಅವರ ಹೆದರಿಕೆಗಾಗಿ ಬಾಗುಮಂಡಲದವರೆಗೆ ಗುಪ್ತವಾಗಿ ಬಂದುದನ್ನೂ, ಬಾಗುಮಂಡಲದ ಬಳಿಯುಲ್ಲಿ ಋಷಿಗಳು ತನ್ನನ್ನು ಬೆನ್ನಟ್ಟಿ ಬರುವರೇನೆಂದು ಇವಳು ಬಾಗಿ ನೋಡುವದರ ರಹಸ್ಯವನ್ನೂ ವರುಣನು ದೇವತೆಗಳಿಗೆ ಸಾದ್ಯಂತವಾಗಿ ತಿಳಿಸಿದನಲ್ಲದೆ, ಆ ಋಷಿಗಳ ಶಾಪದಿಂದಲೇ ಇವಳನ್ನು ಮುಂದೆ ಅಲ್ಲಲ್ಲಿ ಕಟ್ಟಿ ಬಂಧಿಸಿ ವಿಡಂಬನೆ ಮಾಡುತ್ತಿರುವರೆಂದು ಹೇಳಿದನು

ದೇವತೆಗಳು ಆ ತಲೆಕಾವೇರಿ ಕ್ಷೇತ್ರದಲ್ಲಿ ತ್ರಿರಾತ್ರಗಳವರೆಗೆ ಇದ್ದು ನಾಲ್ಕನೇ ದಿನ ಮಡಿಕೇರಿ ಎಂಬ ಕೂರ್ಗದೇಶದ ಮುಖ್ಯ ಪಟ್ಟಣಕ್ಕೆ ಸಾಗಿದರು. ಹೋಗುವಾಗೆ ಬ್ರಹ್ಮನು ಕಾವೇರಿಗೆ:— ಅಮ್ಮಾ, ನಾನು ಈ ಕರ್ಣಾಟಕಕ್ಕೆ ಬಂದು ನಿನ್ನ ದುಃಖ ನಿವಾರಣ ಮಾಡುವ ಪ್ರಯತ್ನ ಮಾಡದೆ ಹಾಗೆಯೇ ಹೋಗುವದಿಲ್ಲ ನಿನ್ನನ್ನು ದಾರಿಯುಲ್ಲಿ ಎಲ್ಲೆಲ್ಲಿ ಬಂಧಿಸಿರುವರೋ ಅದನ್ನೆಲ್ಲ ಕಣ್ಣುಕಟ್ಟಿ ನೋಡಿ, ಆ ಬಂಧನದಿಂದ ನಿನ್ನನ್ನು ಮುಕ್ತಮಾಡುವ ಆಲೋಚನೆ ಮಾಡುತ್ತೇನೆ, ಎಂದು ಹೇಳಿದನು

## ಮಡಿಕೇರಿ.

ತಲೆಕಾವೇರಿಯಿಂದ ಮಡಿಕೇರಿಯು ೨೪ ಮೈಲುಗಳಾಗಬಹುದು. ಆ ದೀರ್ಘದಾರಿಯುನ್ನು ದೇವಗಣಗಳು ನಡೆದೇ ಬರಬೇಕಾಯಿತು.

ಯಾಕಂದರೆ ಆ ಪ್ರಾಂತದಲ್ಲಿ ಪ್ರಯಾಣಕ್ಕೆ ಅಷ್ಟೊಂದು ಸೌಕರ್ಯ ವಿನ್ನೂ ಆಗಿರಲಿಲ್ಲ. ಅವರು ಮಡಿಕೇರಿಯಲ್ಲಿ ಶ್ರೀಓಂಕಾರೇಶ್ವರನ ದೇವಾಲಯದಲ್ಲಿಳಿದುಕೊಂಡು ಅಲ್ಲಿಯೇ ಊಟ ಉಪಚಾರಗಳನ್ನು ಮಾಡಿಕೊಂಡರು. ಇಳಿಹೊತ್ತಿನಲ್ಲಿ ಅಲ್ಲಿಂದ ಹೊರಟು ಹರಕು ಹರಕಾದ ಆ ಪಟ್ಟಣವನ್ನೂ, ಪ್ರಾಚೀನವೂ ಭವ್ಯವೂ ಆದ ರಾಜ ಮಂದಿರವನ್ನೂ, ಊರ ಹೊರಗಿನ ವಿಶಾಲವಾದ ವಿಶ್ರಾಂತಿಯ ಕಟ್ಟೆಯನ್ನೂ, ಅದರ ಬಳಿಯ ಆಳವೂ ಭಯಂಕರವೂ ಆದ ಬೆಟ್ಟದ ಕಟವಾಡೆಯನ್ನೂ, ಅದರ ಕೆಳಗೆ ಅಂಕುಡೊಂಕಾಗಿ ಕಾಣುವ ಚಕ್ಕಡಿ-ಮೋಟಾರುಗಳ ದಾರಿಯನ್ನೂ ನೋಡಿದರು. ಸಂಜೆಗೆ ಪುನಃ ಆ ದೇವಸ್ಥಾನಕ್ಕೆ ಬಂದು, ಅಲ್ಲಿಯ ರಾಜಮನೆತನದ ಇತಿ ಹಾಸವನ್ನೂ, ಕಡೆಯ ರಾಜನ ಅವಿವೇಕತನದ ವರ್ತನವನ್ನೂ, ಅದೇ ಸಮಯವನ್ನು ಸಾಧಿಸಿ ಬ್ರಿಟಿಶರು ಆ ರಾಜ್ಯವನ್ನು ಹಸ್ತಗತ ಮಾಡಿಕೊಂಡ ಗೌಪ್ಯಸಂಗತಿಯನ್ನೂ, ಕೊಡಗು ಜನರಲ್ಲಿಯ ವಿಚಿ ತ್ರವಾದ ಒಳಭೇದಗಳನ್ನೂ ವರುಣನಿಂದ ತಿಳಿದರಲ್ಲದೆ, ಮರುದಿನ ಬೆಳಿಗ್ಗೆ ಪಾಡಿನಾಲ್ಕುನಾಡು ಪ್ರಾಂತದೊಳಗಿನ ಒಂದು ಪ್ರಾಚೀನ ಅರಮನೆಯನ್ನು ನೋಡಿಕೊಂಡು ಬಂದರು.

ಕೊಡಗುದೇಶದಲ್ಲಿ ಪಾಂಡವರು ಕೆಲದಿನ ವಾಸಿಸಿದ್ದರೆಂಬದು ಅಲ್ಲಿಯ ಜನರಲ್ಲಿ ಪಾಂಡವರ ಸಂಬಂಧದ ಎಷ್ಟೋ ವಿಶ್ವಸನೀಯ ಸಂಗತಿಗಳು ಕೇಳಬರುತ್ತಿರುವದರಿಂದ, ಅವು ನಿಜವಾಗಿರಬಹುದೆಂದು ತಿಳಿದರು.

---

## ಅರಸಿಕೆರೆ.

ಅಂದು ಮಧ್ಯಾಹ್ನ ಹೊಳೆನರಸೀಪುರಕ್ಕೆ ಹೊರಡುವ ಸಂತೆಯ ಚಕ್ಕಡಿಗಳಲ್ಲಿ ಕುಳಿತು, ದೇವಗಣಗಳು ಅರಸಿಕೆರೆಗೆ ಹೋಗುವ ದಕ್ಕಾಗಿ ನಡೆದರು. ಮಡಿಕೇರಿಯಿಂದ ನರಸೀಪುರವು ಸರಾಸರಿ ೪೦ ಮೈಲು ಆಗಬಹುದು. ಮರುದಿನ ಸಂಜೆಗೆ ದೇವಗಣಗಳು ಆ ಊರಿಗೆ ಬಂದರು. ನರಸೀಪುರವು ದೊಡ್ಡ ಊರು. ಕೋಟೆ, ಪೇಟೆ ಎಂಬ ಉಪನಗರಗಳಿಂದ ಕೂಡಿದ ಆ ಊರಲ್ಲಿ ಬ್ರಾಹ್ಮಣರ ವಸ ತಿಯೇ ಹೆಚ್ಚು. ಕನಾಟಕರು, ಕಮ್ಮಿಗಳು, ಅಯ್ಯಂಗಾರರು

ಮುಂತಾದ ಬ್ರಾಹ್ಮಣರ ಸಂಖ್ಯೆಯು ಹಿಂದು-ಹಿಂದೂವರೆ ಸಾವಿರದ ವರೆಗೆ ಇರಬಹುದು. ಸಂಕೇತಿಗಳೆಂಬ ಜಾತಿಯವರೂ ಕೆಲವರಿರುವರು; ಆದರೆ ಆ ಎಲ್ಲ ಭಿನ್ನ-ಭಿನ್ನ ಮತಸ್ಥರಲ್ಲಿ ಐಕ್ಯವಿರದ್ದರಿಂದ, ಅವರು ಒಬ್ಬರನ್ನೊಬ್ಬರು ಆಡಿಕೊಳ್ಳುವ ಸಾಂಪ್ರದಾಯವು ಅಲ್ಲಿ ಬಿದ್ದಿರುತ್ತದೆ. ನಮ್ಮ ದೇವಗಣಗಳು ಒಬ್ಬ ಕರ್ನಾಟಕಸ್ಥನಲ್ಲಿ ಅಂದಿನ ರಾತ್ರಿಯ ಊಟವನ್ನು ತೀರಿಸಿಕೊಂಡು ರೇಲ್ವೆ ಸ್ಟೇಶನ್ನಿಗೆ ಬಂದು ಬಿಟ್ಟರು. ಮೈಸೂರ-ಅರಸೀಕೆರೆಯ ಲೋಹಮಾರ್ಗವು ಪ್ರಾರಂಭವಾಗಿ ೪-೮ ವರ್ಷಗಳಾಗಿದ್ದವು; ಆದರೆ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗದ್ದರಿಂದಲೂ, ರೇಲ್ವೆಕಂಪನಿಯ ಅವ್ಯವಸ್ಥೆಯಿಂದಲೂ ಅಲ್ಲಿ ಹಿಂದೇ ಹಿಂದು ಗಾಡಿಯು ಹೋಗಿ ಬರುತ್ತಿತ್ತು. ರಾತ್ರಿ ಹತ್ತುಗಂಟೆಗೆ ದೇವಗಣಗಳು ಮೈಸೂರಿಂದ ಬಂದ ಲೋಹಯಾನವನ್ನು ಆರೋಹಿಸಿ ಅರ್ಸಿಕೆರೆಗೆ ನಡೆದರು. ವರುಣನು ಗಾಡಿಯಲ್ಲಿ ಅಡ್ಡಾಗಿಯೇ ಹಾಸನ, ಹಳೇಬೀಡು, ಶ್ರಾವಣಬೆಳಗುಳ ಮುಂತಾದ ಊರುಗಳ ಪ್ರಾಚೀನ ಅರ್ವಾಚೀನ ಇತಿಹಾಸಗಳನ್ನೂ, ಅಲ್ಲಲ್ಲಿಯ ಹಿಂದೂ-ಜೈನರ ದೇವಸ್ಥಾನ ಬಸ್ತಿಗಳನ್ನೂ ವರ್ಣಿಸಿ ಹೇಳಿದನು.

ಸರಾಸರಿ ರಾತ್ರಿ ೨ ಗಂಟೆಗೆ ಆ ರೈಲು ಅರ್ಸಿಕೆರೆಯ ಸ್ಟೇಶನ್ನಿಗೆ ಬಂದು ಸೇರಿತು. ಕೂಡಲೆ ದೇವಗಣಗಳು ಇಳಿದು ಸ್ಟೇಶನ್ನಿಗೆ ಸಮೀಪದಲ್ಲಿರುವ ಛತ್ರದಲ್ಲಿಳಿದುಕೊಂಡು ಅಂದಿನ ರಾತ್ರಿಯನ್ನು ಕಳೆದರು. ಆ ರಾತ್ರಿ ಅಲ್ಲಿ ಯಾರಿಗೂ ನಿದ್ರೆ ಹತ್ತಲಿಲ್ಲ. ಯಾಕೆಂದರೆ, ಅಲ್ಲಿ ಕಳ್ಳರ ಉಪದ್ರವವು ಹೆಚ್ಚೆಂದೂ, ಅಂತೇ ಆ ಊರಿಗೆ ಕಳ್ಳಅರ್ಸಿಕೆರೆ ಎಂದೆನ್ನುವರೆಂದೂ ವರುಣನು ಮೊದಲೇ ಅವರಿಗೆ ಹೇಳಿದ್ದನು

ಬೆಳಗಾದ ಮೇಲೆ ದೇವತೆಗಳು ಸಮೀಪದ ಬಾವಿಯಲ್ಲಿ ಸ್ನಾನ ಮಾಡಿ ಆಹ್ನಿಕ ಮುಗಿಸಿಕೊಂಡು ಊರಲ್ಲಿ ಅಡ್ಡಾಡ ಹೋದರು ಅರ್ಸಿಕೆರೆಯು ಅಷ್ಟೊಂದು ದೊಡ್ಡ ಪಟ್ಟಣವಾಗಿರದಿದ್ದರೂ ಅಲ್ಲಿಯ ವ್ಯಾಪಾರವು ಮಿಗಿಲಾಗಿದದ್ದು. ತೆಂಗು, ಅಕ್ಕಿ, ಸೀಮೆಯ ದನ ಇವುಗಳ ವ್ಯಾಪಾರವೇ ಮುಖ್ಯವು. ಪ್ರತಿಸಂತೆಯ ದಿವಸ ಏನಿಲ್ಲೆಂದರೂ ಎರಡು ಸಾವಿರಗಳ ವರೆಗೆ ಎತ್ತಿನ ಗಾಡಿಗಳು ಅಲ್ಲಿಗೆ ಬರುತ್ತಿರುತ್ತವೆ. ಅದರ ಹೊರತು ರೈಲುಮಾರ್ಗದಿಂದ

ಸಾಗುವ ವ್ಯವಹಾರವು ಬೇರೆ. ದೇವತೆಗಳು ಊರಲ್ಲೆಲ್ಲ ತಿರುಗಾಡಿದರು. ಅಲ್ಲಿಯ ಯಾವ ಬಾವಿಯಲ್ಲಿ ಮೊಹರಮ್ಮ ಹಬ್ಬದ ದಿವಸ ಪಂಜಾ (ಇಲ್ಲಾದೇವರ ಕೈ) ಏಳುವದೋ, ಅದನ್ನು ವರುಣನು ಬ್ರಹ್ಮಾದಿಗಳಿಗೆ ತೋರಿಸಿ ಆ ಸಂಗತಿಯನ್ನು ತಿಳಿಸಿದನು.

ನಂತರ ದೇವಗಣಗಳು ಸಮೀಪದಲ್ಲಿಯೇ ಇರುವ ಚಿಕ್ಕತಿರುಪತಿಯ ದೇವಸ್ಥಾನಕ್ಕೆ ಹೋದರು. ಅಲ್ಲಿಯ ದೇವಸ್ಥಾನವನ್ನು ನೋಡಿಕೊಂಡು ಅಲ್ಲಿಯೇ ಮಧ್ಯಾಹ್ನವನ್ನು ತೀರಿಸಿಕೊಂಡರು. ಸಾಯಂಕಾಲದಲ್ಲಿ ಅಲ್ಲಿಂದ ಬರುವಾಗ ಯಾವ ಒಬ್ಬ ಸಾಧ್ವಿಯು ದೇವರ ಪ್ರೀತ್ಯರ್ಥವಾಗಿ ತನ್ನ ಮನೆಯ ಕಂಬದಲ್ಲಿ ಗುಪ್ತಳಾಗಿರುವಳೋ, ಆ ಮನೆಗೆ ಹೋಗಿ, ಆ ಕಂಬಕ್ಕೆ ನಮಸ್ಕರಿಸಿ, ಅರ್ಸಿಕೆರೆಗೆ ಬಂದರು; ಹಾಗೂ ಮೂರೂಸಂಜೆಯ ರೈಲಿನಲ್ಲಿ ಕುಳಿತು, ತುಮಕೂರ ಕಡೆಗೆ ಸಾಗಿದರು.

---

# ತುಮಕೂರ.

ಅರ್ಸಿಕೆರೆಯಿಂದ ಎರಡನೇ ಸ್ಟೇಶನ್ನೇ ಕೊನೆಹಳ್ಳಿಯು. ಅದು ಹಿಂದಕ್ಕೆ ವೀರಪುಂಗವನೆಂದು ಆಗಿ ಹೋದ ಹೈದರನ ಜನ್ಮಸ್ಥಾನವೆಂದೂ, ಹೈದರನ ಕಾಲಕ್ಕೆ ಮೈಸೂರ ದೇಶವು ಈ ಹಳ್ಳಿಯವರೆಗೇ ಹಬ್ಬಿತ್ತಾದ್ದರಿಂದ ಇದಕ್ಕೆ ಕೊನೇಹಳ್ಳಿಯೆಂಬ ನಾಮಧೇಯವು ಉಂಟಾಗಿರುವದೆಂದೂ ವರುಣನು ತಿಳಿಸಿದನು. ಕೊನೇಹಳ್ಳಿಯು ದಾಟಿದ ಮೇಲೆ ಹತ್ತುವ ಸ್ಟೇಶನ್ನು ತಿಪ್ಟೂರು. ತಿಪ್ಟೂರಲ್ಲಿ ತೆಂಗಿನ ವ್ಯಾಪಾರವೇ ಪ್ರಾಮುಖ್ಯವು ಮೈಸೂರ ಸೀಮೆಯಲ್ಲಿ, ಅದೇಕೆ? ಇಡಿ ಕರ್ನಾಟಕದಲ್ಲಿ ತಿಪ್ಟೂರಂಥ ಕಾಯಿವ್ಯಾಪಾರದ ಸ್ಥಳವು ಬೇರೊಂದಿಲ್ಲ. ಈ ಪ್ರಾಂತದ ಕಾಯಿಗಳು ತಾಳಿಕೆಯುಳ್ಳವುಗಳಾಗಿರುವಂತೆ ಒಳ್ಳೇ ರುಚಿಯುಳ್ಳವೂ ಆಗಿರುತ್ತವೆ. ತಿಪ್ಟೂರು ಸ್ಟೇಶನ್ನು ದಾಟುವಷ್ಟರಲ್ಲಿ ಬ್ರಹ್ಮಾದಿಗಳಿಗೆ ನಿದ್ರೆ ಹತ್ತಿತು. ಮುಂದೆ ಎರಡು ತಾಸುಗಳ ತರುವಾಯ ಜನಸ್ತೋಮದ ಕಲಕಲಾಟದಿಂದ ಅವರು ಎಚ್ಚತ್ತು ನೋಡುತ್ತಾರೆ, ಯಾವದೋ ಒಂದು ದೊಡ್ಡ ಸ್ಟೇಶನ್ನಿನಲ್ಲಿ ತಮ್ಮ ಬಂಡಿಯು ನಿಂತಿದ್ದು, ಅಲ್ಲಿಂದ ಏರುವ ಪ್ರಯಾಣಿಕರ ಸಂಖ್ಯೆಯು ಇಳಿಯುವವರಿಗಿಂತ ಹೆಚ್ಚಾದ್ದರಿಂದ ಆ

ತರದ ಗದ್ದಲ ಉಂಟಾಗಿತ್ತು. ‘‘ಇದು ತುಮಕೂರ ಸ್ಟೇಶನ್ನು. ಇಲ್ಲಿಯೇ ಇಳಿಯಬೇಕೆ’’ಂದು ವರುಣನು ಬ್ರಹ್ಮಾದಿಗಳಿಗೆ ಹೇಳಿದನು; ಆದರೆ ತಾವು ತೀವ್ರ ತಮ್ಮ ದೇವಲೋಕಕ್ಕೆ ಹೋಗಬೇಕಾದುದರಿಂದ ಇಲ್ಲಿ ಇಳಿಯಬೇಡಿರೆಂದು ಬ್ರಹ್ಮನು ಕಟ್ಟಪ್ಪಣೆ ಮಾಡಲು, ನಾರಾಯಣಾದಿಗಳು ಕುಳಿತ ಸ್ಥಳದಿಂದ ಕದಲಲಿಲ್ಲ.

ಹದಿನೈದು ನಿಮಿಷಗಳ ತರುವಾಯ ಆ ಬಂಡಿಯು ವೇಗದಿಂದ ಸಾಗಲು, ವರುಣನು:— ಈ ತುಮಕೂರ ಪಟ್ಟಣವು ಯಾವ ಬಗೆಯಿಂದಲೂ ಹೆಸರಾದದ್ದಿರುವದಿಲ್ಲ. ಆದ್ದರಿಂದ ನಾವು ಇಲ್ಲಿ ಇಳಿಯದಿದ್ದದ್ದೇ ವಿಹಿತವಾಯಿತು. ಈ ಊರಲ್ಲಿ ಯೇಸೂಕ್ರಿಸ್ತನ ಕ್ರಾಸಿನಂಥ ಮೂರೇ ಉದ್ದನ್ನ ಓಣಿಗಳಿರುವದರಿಂದ ನಗರವು ಪ್ರೇಕ್ಷಣೀಯವಾಗಿಲ್ಲ. ಇಲ್ಲಿ ಯಾವ ತರದ ವ್ಯಾಪಾರೋದ್ಯೋಗಗಳೂ ವಿಶೇಷವಾಗಿಲ್ಲ. ಅಪವಾದಕ್ಕಾಗಿ ಈ ಊರ ಬಳಿಯಲ್ಲಿ ಮಕ್ಕಳು ಬರೆಯುವ ಸ್ಲೇಟ(ಪಾಟಿಗಳ)ಪೆನ್ಸಿಲ್ಲುಗಳನ್ನು ತಯಾರಿಸುವ ಕಾರಖಾನೆಯೂ ಹಂಚುಗಳ ಕಾರಖಾನೆಯೂ ಇರುತ್ತವೆ, ಎಂದು ಹೇಳಿದನು.

---

## ಬೆಂಗಳೂರ.

ತುಮಕೂರಿನಿಂದ ಹೊರಟ ಬಂಡಿಯು ವೇಗದಿಂದ ಸಾಗಿರುವಾಗ ಬಲಕ್ಕೆ ಕಾಣುವ ಎತ್ತರವಾದ ಗುಡ್ಡವನ್ನು ಕಂಡು ಇದರ ಬಳಿಯಲ್ಲಿಯೇ ಶಿವಗಂಗೆ ಎಂಬ ಶೃಂಗೇರಿಪೀಠದ ಉಪಮಠವಿರುವದೆಂದು ವರುಣನು ಸೂಚಿಸಿದನು. ಬೆಂಗಳೂರ ಸಿಟಿಯು ಸ್ಟೇಶನ್ನು ೭-೮ ಮೈಲು ದೂರದಲ್ಲಿರುವಾಗಲೇ ಆ ಬೆಳಗಿನ ಝಾವದ ಸಮಯದಲ್ಲಿ ಬೆಂಗಳೂರಲ್ಲಿಯ ವಿದ್ಯುದ್ದೀಪಗಳು ನಕ್ಷತ್ರಮಾಲಿಕೆಯಂತೆ ಕಂಗೊಳಿಸತೊಡಗಿದವು ಅವನ್ನು ನೋಡಿ ಬ್ರಹ್ಮನು ವರುಣನಿಗೆ ಇವೇನೆಂದು ಕೇಳಿದನು. ‘‘ಇವು ವಿದ್ಯುತ್ತಿನಿಂದ ಉರಿಯುವ ದೀಪಗಳಾದುದರಿಂದ ಇವಕ್ಕೆ ವಿದ್ಯುದ್ದೀಪಗಳೆನ್ನುವರು. ಬೆಂಗಳೂರಿನಿಂದ ಸರಾಸರಿ ೫೦ ಮೈಲು ಅಂತರದ ಮೇಲೆ ಶಿವಸಮುದ್ರವೆಂಬಲ್ಲಿ ಕಾವೇರಿಯು ಹೊಳೆಗೆ ಕೃತ್ರಿಮ ಧಬಧಬೆಯನ್ನು ಕಲ್ಪಿಸಿರುವರು. ಆ ಧಬಧಬೆಯಲ್ಲಿ ಎತ್ತರದಿಂದ ಬೀಳುವ ನೀರಿನ ಹೊಡ

ತಕ್ಕೆ ತಿರುಗುವಂಥ ಯಂತ್ರಗಳನ್ನು ಸ್ಥಾಪಿಸಿರುವರು ಆ ಯಂತ್ರಗಳ ಸಹಾಯದಿಂದ ಅಲ್ಲಿ ಪ್ರಚಂಡವಾದ ವಿದ್ಯುತ್ತು ಉತ್ಪನ್ನವಾಗುತ್ತಿದ್ದು, ಆದನ್ನು ಲೋಹ ಮಾರ್ಗ(ತಂತಿಯ ಕಂಬಗಳ)ದಿಂದ ಬೆಂಗಳೂರಿಗೂ, ಕೋಲಾರಿಗೂ ಒಯ್ಯುತ್ತಿರುವರು.'' ಎಂದು ವರುಣನು ಹೇಳುತ್ತಿರುವಷ್ಟರಲ್ಲಿ ದೇವತೆಗಳು ಕುಳಿತಿದ್ದ ಆ ಮೇಲ್‌ಟ್ರೇನು ವೇಗದಿಂದ ಸಾಗಿ, ಯಶವಂತಪುರವೆಂಬ ಬೆಂಗಳೂರ ಪಟ್ಟಣದ ಉತ್ತರದಿಕ್ಕಿನ ಅಗಸೀಬಾಗಿಲಿಗೆ ಬಂದು ಸೇರಿತು. ಆ ಬಂಡಿಯು ಅಲ್ಲಿ ೩-೪ ನಿಮಿಷಗಳವರೆಗೆ ನಿಲ್ಲಲು, ಎಷ್ಟೋ ಜನ ಪೋರ್ಟರರು ಬಂದು ಎಲ್ಲ ಡಬ್ಬಿಗಳ ಬಾಗಿಲುಗಳಿಗೂ ಬೀಗವನ್ನು ಹಾಕಿದರು. ಕೂಡಲೆ ಬಂಡಿಯು ತನ್ನ ಕರ್ಕಶ ಧ್ವನಿಗೆಯ್ಯುತ್ತ ಭರದಿಂದ ಹೊರಟಿತು.

ಯಶವಂತಪುರದಿಂದ ಮದ್ರಾಸ ಮತ್ತು ಸದರ್ನಮರಾಠಾ ರೇಲ್ವೆಮಾರ್ಗದ ಎಡಬದಿಗೆ ಒಂದು ಚಿಕ್ಕ ಅಗಲಳತೆಯ ಲೋಹಮಾರ್ಗವು ಹೋಗಿರುವದು; ಹಾಗು ಮುಂದೆ ಎರಡು ಮೈಲುಗಳಲ್ಲಿಯೇ ಆ ಚಿಕ್ಕಮಾರ್ಗದ ಬದಿಯಲ್ಲಿ ಒಂದು ನಿಲ್ಲುಮನೆ(ಸ್ಟೇಶನ್ನು) ಕಟ್ಟಲ್ಪಟ್ಟಿದೆ. ಅದನ್ನು ನೋಡಿ ಬ್ರಹ್ಮನು:— ಈ ಚಿಕ್ಕ ಲೋಹಮಾರ್ಗವು ಎಲ್ಲಿಂದ ಎಲ್ಲಿಯವರೆಗೆ ಹೋಗುತ್ತಿರುವದು? ಎಂದು ಪ್ರಶ್ನೆಮಾಡಿದನು. ''ಇದು ಬೆಂಗಳೂರ ಸಿಟಿಯಿಂದ ಹೊರಟು ಯಶವಂತಪುರ ಯಲಹಂಕಾಗಳ ಮೇಲೆ ಹಾಯ್ದು ಚಿಕ್ಕಬಳ್ಳಾಪುರದವರೆಗೆ ಹೋಗಿರುತ್ತದೆ. ಇದು ನ್ಯಾರೋ ಗೇಜವಾದ್ದರಿಂದ ಇದರ ಅಗಲಳತೆಯು ಚಿಕ್ಕದಾಗಿದೆ'' ಎಂದು ವರುಣನು ಉತ್ತರ ಕೊಟ್ಟನು.

''ಸ್ವಾಮಿ ಕೂಲಿ ಬೇಕೇ ಕೂಲಿ? ಸ್ವಾಮಿ ಝುಟಕಾ ಬೇಕೇ ಝುಟಕಾ?'' ಎಂದು ಒಮ್ಮೆಲೆ ಕೋಲಾಹಲ ಧ್ವನಿಯುಂಟಾದುದನ್ನು ಕೇಳಿ ಬ್ರಹ್ಮನು ಕಿಟಕಿಯೊಳಗಿಂದ ಹೊರಗ ನೋಡುತ್ತಾನೆ; ತಮ್ಮ ಬಂಡಿಯು ಒಂದು ಪ್ರಶಸ್ತವಾದ ಇಮಾರತಿನೊಳಗೆ ಸಾವಕಾಶವಾಗಿ ನಿಂತಿತು; ಬಳಿಕ ಅವರು ಗಾಡಿಯಿಂದಿಳಿದು ಸ್ಟೇಶನ್ನಿನ ಪಕ್ಕದಲ್ಲಿಯ ಪಾವಟಿಗೆಗಳನ್ನು ಹತ್ತಿ ಆಚೆಯ ಬದಿಗೆ ಹೋದರು. ನಂತರ ಒಬ್ಬ ಕೂಲಿಯು ಪೋರನ ತಲೆಯ ಮೇಲೆ ತಮ್ಮ ಸಾಮಾನುಗಳನ್ನು ಹೊರಿಸಿ ಆ ಬ್ರಹ್ಮಾದಿ ದೇವಗಣಗಳು ಒಂದು ಛತ್ರದಲ್ಲಿ

ಳಿಯಬೇಕೆಂದು ಆತನ ಹಿಂದಿಂದೆ ನಡೆದರು. ಆ ಹುಡುಗನು ಅವರನ್ನು ಸಮೀಪದ ಗುಬ್ಬಿ ತೋಟಪ್ಪನವರ ಛತ್ರಕ್ಕೆ ಕರೆದೊಯ್ದು ಬಿಟ್ಟು ತನ್ನ ಕೂಲಿಯ ದುಡ್ಡುಗಳನ್ನು ಇಸಕೊಂಡು ಹೋದನು. ಆ ಛತ್ರವು ಬಹು ವಿಸ್ತಾರವಾಗಿದ್ದರೂ, ಅಲ್ಲಿ ಸರ್ವ ಸಾಮಾನ್ಯರಿಗೆ, ಅದರಲ್ಲಿ ನಿಷ್ಠಾವಂತರಾದ ಬ್ರಾಹ್ಮಣರಿಗೆ ಇಳಿಯಲಿಕ್ಕೆ ಅನುಕೂಲವಿರುವದಿಲ್ಲೆನ್ನುತ್ತಾರೆ, ದೇವಗಣಗಳು ತಮ್ಮ ಸಾಮಾನುಗಳನ್ನು ಹಿತ್ತಟ್ಟಿಗಿಟ್ಟು, ಅದರ ಬಳಿಯಲ್ಲಿ ಇಂದ್ರನನ್ನು ಕಾವಲಿಗಾಗಿ ಕೂರಿಸಿ, ಸರತಿಯಂತೆ ಎಲ್ಲರೂ ಪ್ರಾತರ್ವಿಧಿಗಳನ್ನು ತೀರಿಸಿಕೊಂಡರು. ನಂತರ ಇಂದ್ರನೂ ಮುಗಿಸಿಕೊಂಡನು ಸ್ನಾನ-ಸಂಧ್ಯಾವಂದನೆ ಮಾಡಿಕೊಳ್ಳಲಿಕ್ಕೆ ಅಲ್ಲಿ ಸ್ವತಂತ್ರವಾದ ಜಾಗೆಯು ಸಿಗಲೊಲ್ಲದು. ಅದರಿಂದ ಅವರು ತಮ್ಮ ಗಂಟು-ಗದಡಿಗಳೊಡನೆ ಅಲ್ಲಿಂದ ಹೊರಟು ಕೆರೆಯ ದಡಿಯಲ್ಲಿರುವ *ಪೂರ್ಣಯ್ಯನ ಛತ್ರಕ್ಕೆ ಹೋದರು. ಆ ಛತ್ರದ ಒಳಗಿನ ಭಾಗವು ಕೇವಲ ಬ್ರಾಹ್ಮಣರಿಗೇ ಕಾದಿರಿಸಲ್ಪಟ್ಟಂತಾಗಿರುವದು. ಅಲ್ಲಿಯ ಕಾವಲುಗಾರನು ವಿಶೇಷ ಆಶೆಬುರುಕನಾಗಿದ್ದರಿಂದ ನಾರಾಯಣನು ಅವನಿಗೆ ಕೆಲ ದುಡ್ಡುಗಳನ್ನು ಕೊಡಲು, ಕೂಡಲೆ ಆತನು ಅವರಿಗೊಂದು ಪ್ರಶಸ್ತವಾದ ಕೊಠಡಿಯ ಬೀಗ ತೆಗೆದು ಕೊಟ್ಟನು. ವರುಣನು ಸಮೀಪದ ಕೋಠಿಯೊಳಗಿಂದ ತಮಗೆ ಬೇಕಾದ ಪಾತ್ರೆಗಳನ್ನು ಇಸಕೊಂಡು ಬಂದನು. ಬ್ರಹ್ಮನು ಸ್ನಾನ ಮಾಡಿ ತನ್ನ ಆಹ್ನಿಕ ಮುಗಿಸಿದನು. ನಾರಾಯಣನು ಅಕ್ಕಿ ಬೇಳೆ ಕಾಯಿಪಲ್ಲೆ ಮುಂತಾದ ಸಿಧಾಸಾಮಗ್ರಿಗಳನ್ನು ತಂದು ಕೊಡಲು, ಇಂದ್ರನು ಮಡಿಯುಟ್ಟು ಅಡಿಗೆಗೆ ಅನುವಾದನು.

ಭೋಜನಾನಂತರ ತುಸ ವಿಶ್ರಮಿಸಿ, ಅವರು ಪಟ್ಟಣವನ್ನು ನೋಡುವದಕ್ಕಾಗಿ ನಡೆದರು. ಆಗ ಸಾಯಂಕಾಲದ ೫ ಗಂಟೆಯಾದುದರಿಂದ ಆ ಛತ್ರದ ಬಳಿಯ ಪ್ರಮೋದೋದ್ಯಾನದಲ್ಲಿ ಹಿತ್ತಟ್ಟಿಗೆ ಸನಾಯಿಯು ಸುಸ್ವರವಾಗಿ ಬಾರಿಸಲ್ಪಡಹತ್ತಿತು. ಮತ್ತೊಂದು ಕಡೆಗೆ ನರ್ತಕಿಯರು ಕಿರುಗೆಜ್ಜೆಗಳ ಕಾಲುಸಪ್ಪಳ ಮಾಡಿ ಹಾಡತೊಡಗಿದ್ದರು ಇನ್ನೊತ್ತಟ್ಟಿಗೆ ಜಲತರಂಗದ ಮಂಜುಲವಾದ ನಾದವು ಆ ಪ್ರಮೋದೋದ್ಯಾನದೊಳಗೆ ವಿಹರಿಸುವ ನವತರುಣ-ತರುಣಿಯರನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳಹತ್ತಿತು. ನಮ್ಮ ಬ್ರಹ್ಮಾದಿ ದೇವತೆಗಳು ಆ ಉದ್ಯಾನದಲ್ಲಿ ಕೆಲ ನಿಮಿಷಗಳ

ವರೆಗೆ ವಿಹರಿಸಿ, ಊರೊಳಗೆ ನಡೆದರು ಅಷ್ಟರಲ್ಲಿ ದಾರಿಯಲ್ಲಿ ನಾಟಕಶಾಲೆಯ ಬಳಿಯಲ್ಲಿ ಬೇಂಡಬಾಜಾದ ಸಪ್ಪಳವೂ, ಸನಾಯಿಯ ಇಂಪಾದ ಸುಸ್ವರವೂ ಕೇಳಹತ್ತಿತು. ಸಮೀಪಕ್ಕೆ ಹೋಗಿ ನೋಡುತ್ತಾರೆ, ಆ ನಾಟ್ಯಮಂಟಪದಲ್ಲಿ ಅಂದು ಶಿರಹಟ್ಟಿಯ ಶ್ರೀಯುತ ವೆಂಕೋಬರಾಯರ ಕಂಪನಿಯ ಪದ್ಮಾವತೀ ಪರಿಣಯವು ಅಭಿನಯಿಸತಕ್ಕದ್ದಾಗಿತ್ತು. ಆ ನಾಟಕದ ಹಸ್ತಪತ್ರವನ್ನು ಓದಿ ನೋಡಿದ ಕೂಡಲೆ ಶ್ರೀಮನ್ನಾರಾಯಣನ ಕಾಲುಗಳು ಮುಂದೆ ಏಳದಾದವು. ವರುಣನ ಹೊರತು ಮಿಕ್ಕವರಿಗೆ ನಾರಾಯಣನ ಈ ಸ್ಥಿತಿಯು ಲಕ್ಷ್ಯಕ್ಕೆ ಬರಲಿಲ್ಲ 'ನಾರಾಯಣಾ, ಇಲ್ಲಿ ನಿಜವಾದ ಪದ್ಮಾವತೀ ಪರಿಣಯವಿದೆಯೆಂದು ತಿಳಿದಿರುವೆಯೇನು? ಛೀ, ಛೀ. ಇದೊಂದು ನಕಲು. ಅನಾಯಾಸವಾಗಿ ಇಲ್ಲಿಗೆ ಬರುವ ಪದ್ಮಾವತಿಯನ್ನು ವರಿಸಬೇಕೆಂದು ಕಲ್ಪಿಸಿಕೊಂಡಿರುವದರಿಂದಲೇ ನಿನ್ನಿಂದ ನಡೆಯುವದಾಗುವದಿಲ್ಲೆಂಬಂತೆ ಕಾಣುತ್ತದೆ' ಎಂದು ನುಡಿದು, ವರುಣನು ಖೊಳ್ಳನೆ ನಕ್ಕನು. ಆಗ ನಾರಾಯಣನು ನಾಚಿಕೊಂಡು ಪಿಟ್ಟೆಂದು ಉತ್ತರ ಕೊಡದೆ, ಅವರೊಡನೆ ಸಾಗಿದನು

ಅವರು ಅಂದು ಬಳೇಪೇಟೆ, ಅಕ್ಕಿಪೇಟೆ, ಅರಳೇಪೇಟೆ, ದೊಡ್ಡಪೇಟೆ, ನಗರತ್ತಪೇಟೆ, ಹಲಸೂರ ಪೇಟೆಗಳನ್ನು ಸುತ್ತಿಕೊಂಡು ಕೋಟೆಯ ಬದಿಯ ಮಾರ್ಕೇಟನ್ನೂ, ವಿಕ್ಟೋರಿಯಾ ಆಸ್ಪತ್ರೆ, ಕಣ್ಣಾಸ್ಪತ್ರೆಗಳನ್ನೂ ನೋಡಿದರು ಅಷ್ಟರಲ್ಲಿ ರಾತ್ರಿಯ ೯ ಗಂಟೆಯಾಯಿತು. ಊರಲ್ಲೆಲ್ಲ ವಿದ್ಯುದ್ದೀಪದ ಬೆಳಕು ಚಂದ್ರನ ಪ್ರಕಾಶಕ್ಕಿಂತಲೂ ಶ್ರೇಷ್ಠವಾಗಿ ಬಿದ್ದಿತ್ತಾದ್ದರಿಂದ ಅವರಿಗೆ ಅಲ್ಲಿ ತಿರುಗಾಡಲಿಕ್ಕೆ ಸ್ವಲ್ಪವಾದರೂ ಶ್ರಮವಾಗಲಿ, ತೊಂದರೆಯಾಗಲಿ ಆಗಲಿಲ್ಲ ಅವರು ಇನ್ನೂ ಕೆಲಹೊತ್ತಿನವರೆಗ ಅಲೆಯಬೇಕೆಂದಿದ್ದರು; ಆದರೆ ಪೂರ್ಣಯ್ಯನ ಛತ್ರದ ಬಾಗಿಲುಗಳು ರಾತ್ರಿಯ ಹತ್ತು ಗಂಟೆಯ ಮೇಲೆ ಮುಚ್ಚಲ್ಪಡುವವೆಂದು ವರುಣನು ಬ್ರಹ್ಮಾದಿಗಳಿಗೆ ಸೂಚಿಸಿದ್ದರಿಂದ, ಅವರು ಆಗ ಮತ್ತೆಲ್ಲಿಯೂ ಹೋಗದೆ ನೆಟ್ಟಗೆ ತಮ್ಮ ಬಿಡಾರಕ್ಕೆ ಬಂದರು; ಹಾಗು ತಮ್ಮ ಅಡಿಗೆ-ಊಟಗಳ ವ್ಯವಸ್ಥೆಯಲ್ಲಿ ಮಗ್ನರಾದರು.

ಮರುದಿನ ಬೆಳಿಗ್ಗೆ ಎದ್ದು ಪ್ರಾತರ್ವಿಧಿ, ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಪುನಃ ಊರೊಳಗೆ ಹೊರಟರು. ಅಂದು ಅವರು

ಚಾಮರಾಜಪೇಟೆ, ಶಂಕರಪುರದೊಳಗಿನ ಶ್ರೀ ಜಗದ್ಗುರು ಶಂಕರಾಚಾರ್ಯರ ವಿಶಾಲವಾದ ಮಠ, ಬಸವನಗುಡಿ, ಲಾಲ್‌ಬಾಗ, ತಮಾಸೆ ಬಂಗಲೆ ಮುಂತಾದವುಗಳನ್ನು ನೋಡಿ ಬಂದರು. ಮಧ್ಯಾಹ್ನದ ಊಟ-ವಿಶ್ರಾಂತಿಗಳಾದ ಬಳಿಕ ಅಠರಾ ಕಚೇರಿ, ಜನರಲ್ ಪೋಷ್ಟಆಫೀಸ, ಗವರ್ನಮೆಂಟ ಮುದ್ರಾಲಯಗಳನ್ನು ನೋಡ ಹೋದರು. ಅಠರಾ ಕಚೇರಿಯು ಇಮಾರತು ವಿಶಾಲವೂ ಭವ್ಯವೂ ಆಗಿರುವದು. ಅಲ್ಲಿ ಮೈಸೂರ ಸಂಸ್ಥಾನದ ಎಲ್ಲ ಮುಖ್ಯ ಮುಖ್ಯ ಕಚೇರಿಗಳಿರುತ್ತವೆ ಅಠರಾ ಕಚೇರಿಯು ಬಳಿಯಲ್ಲಿಯೇ ಸರ್ವೆ ಆಫೀಸು ಇರುತ್ತದೆ ಆ ಸರ್ವೇಆಫೀಸಿನಲ್ಲಿ ಉತ್ತರ ಕರ್ಣಾಟಕ ದೊಳಗಣ ಮರಾಠೀ ಬಲ್ಲ ಗುಮಾಸ್ತರೇ ಬಹಳ ಜನರಿರುತ್ತಾರೆ. ಆ ಕಚೇರಿಯು ಪಕ್ಕದಲ್ಲಿಯೇ ಎಲೆಕ್ಟ್ರಿಕ್ ಆಫೀಸು ಇರುತ್ತದೆ. ನಮ್ಮ ದೇವತೆಗಳು ಆ ಕಚೇರಿಯ ಬಳಿಗೆ ಹೋದಾಗ ಸಾಯಂಕಾಲದ ೬ ಗಂಟೆಯಾಗಿದ್ದುದರಿಂದ ಆ ಮನೆಯಲ್ಲಿ ಫಕ್ಕನೇ ಸಾವಿರಾರು ಜ್ಯೋತಿಗಳು ಉರಿಯಹತ್ತಿದವು. ಕ್ಷಣಾರ್ಧದಲ್ಲಿ ನಜರು ಹರಿಯುವವರೆಗಿನ ಎಲ್ಲ ವಿದ್ಯುದ್ದೀಪಗಳೂ ಒಮ್ಮೆಲೆ ಹೊತ್ತಿದವು.

ವಿದ್ಯುದ್ದೀಪಗಳು ಹೀಗೆ ಒಮ್ಮೆಲೆ ಹತ್ತಿ ಕೆಲ ನಿಮಿಷಗಳಾದ ಮೇಲೆ ದೇವತೆಗಳು ತಮ್ಮ ಬಿಡಾರದ ಕಡೆಗೆ ಸಾಗಿದರು ಕೆಲ ದಾರೀ ಕ್ರಮಿಸಿ ಅವರು ಒಳ್ಳೇ ದಟ್ಟಾಗಿ ಗಿಡಗಳುಳ್ಳ ಮಾರ್ಗದಲ್ಲಿ ನಡೆದಿರಲು, ಎಲ್ಲಕಡೆಯ ಜ್ಯೋತಿಗಳೂ ನಂದಿಹೋದವು. ತಾವು ಎತ್ತ ನಡೆದಿರುವೆವೆಂಬದು ಕೂಡ ಅವರಿಗೆ ತಿಳಿಯದಾಯಿತು. ಎಷ್ಟೋ ಹೊತ್ತಾದರೂ ಆ ದೀಪಗಳು ಹೊತ್ತಲಿಲ್ಲ. ಆಗ ಅವರು ಮುಂದುಗಾಣದವರಾಗಿ ಆ ಮಾರ್ಗದ ಪಕ್ಕದ ಒಂದು ಕಟ್ಟೆಯ ಮೇಲೆ ಕುಳಿತರು. ಈ ದೀಪಗಳು ಹೀಗೆ ಒಮ್ಮೆಲೆ ನಂದಿದ ಕಾರಣವೇನೆಂದು ಕೇಳಿದ ಬ್ರಹ್ಮನ ಪ್ರಶ್ನಗೆ ವರುಣನು:—“ಅಜ್ಞಾ, ಈ ವಿದ್ಯುತ್ತು ಕೇವಲ ಚಂಚಲವಾದ ವಸ್ತುವೆಂಬದು ಪ್ರಸಿದ್ಧವೇ ಇದೆ. ಯಾವದೊಂದು ಚಂಚಲತ್ವಕ್ಕೆ ವಿದ್ಯುತ್ತನ್ನೇ ಉದಾಹರಣವಾಗಿ ಹೇಳುವದುಂಟು ಹೀಗಿದ್ದು ಈ ಇಂಗ್ಲಿಷ ರಾಜ್ಯದ ನವಯುಗದಲ್ಲಿ ಇಂಥ ಕೇವಲ ಚಂಚಲವಾದ ವಸ್ತುವನ್ನೇ ಸ್ಥಿರವೆಂದು ತಿಳಿದು ಎಲ್ಲ ನಿತ್ಯದ ವ್ಯವಹಾರಗಳೂ ನಡೆದಿರುತ್ತವೆ. ವಿದ್ಯುದ್ದೀಪಗಳ ಆಗರದಲ್ಲಿ (ಎಲೆಕ್ಟ್ರಿಕ್ ಆಫೀಸಿನಲ್ಲಿ) ಯಾವದೊಂದು ಅನಾ

ಹುತವಾಗಲಿ, ಯಂತ್ರಗಳ ನಾದುರಸ್ತಾಗಲಿ ಸಂಭವಿಸಿರಬಹುದು. ಅದರಿಂದಲೇ ಊರೊಳಗಿನ ಎಲ್ಲ ದೀಪಗಳೂ ಹೀಗೆ ಒಮ್ಮೆಲೆ ಶಾಂತವಾದವು. ಅಲ್ಲಿಯ ಆ ಪ್ರಸಂಗವು ಸುಧಾರಿಸಿದ ಕೂಡಲೆ ಮತ್ತೆ ಈ ದೀಪಗಳು ಹತ್ತುತ್ತವೆ'' ಎಂದು ನುಡಿಯುವಷ್ಟರಲ್ಲಿ ಒಮ್ಮೆಲೆ ಎಲ್ಲ ಕಡೆಯ ದೀಪಗಳೂ ಉರಿಯಹತ್ತಿದವು. ಕೂಡಲೆ ದೇವಗಣಗಳು ಕುಳಿತ ಸ್ಥಳದಿಂದೆದ್ದು ತಮ್ಮ ಬಿಡಾರಕ್ಕೆ ನಡೆದರು.

ಮರುದಿನ ಬೆಳಗ್ಗೆ ಅವರು ಕ್ಯಾಂಟೋನ್‌ಮೆಂಟ(ದಂಡಿನ ಠಾಣ್ಯ)ದ ಕಡೆಗೆ ಹೋದರು. ಅಲ್ಲಿಯ ವಿಸ್ತಾರವಾದ ಹಾಗು ಶೋಭಾಯಮಾನವಾದ ರಸ್ತೆಗಳನ್ನು ನೋಡಿ, ತನ್ನ ಅಮರಾವತಿಯಲ್ಲಿಯೂ ಇಂಥ ರಾಜಬೀದಿಗಳನ್ನೇ ಕಟ್ಟಿಸಬೇಕೆಂದು ಇಂದ್ರನು ಗೊತ್ತು ಮಾಡಿಕೊಂಡನು. ಬರುವಾಗ ಅವರು ಸೆಂಟ್ರಲ್ ಕಾಲೇಜನ್ನೂ, ಮಲ್ಲೇಶ್ವರಂ ಎಂಬ ಹೊಸ ಉಪನಗರವನ್ನೂ ನೀರಿಕ್ಷಿಸಿ ತಮ್ಮ ಬಿಡಾರಕ್ಕೆ ನಡೆದರು. ಇವರ ಬಿಡಾರದ ಸಮೀಪದಲ್ಲಿಯೇ ಇರುವ ಭೆಂಡೀಬಝಾರವೆಂಬ ಸೂಳೆಯರ ಕೇರಿಯಲ್ಲಿ ಹಾದು ಬರುವಾಗ, ಅಲ್ಲಿಯ ಕೆಲವು ಮನೆಗಳ ಮುಂದಿನ ಜಾಹೀರಾತಿನ ಹಲಿಗೆಗಳನ್ನು ಕಂಡು ಬ್ರಹ್ಮನು ಥಕ್ಕಾದನು! ಅವರು ಅಲ್ಲಿ ಕ್ಷಣ ಸಹ ನಿಲ್ಲದೆ, ಶೀಘ್ರವಾಗಿ ತಮ್ಮ ಸ್ಥಳಕ್ಕೆ ಬಂದರು.

ಆ ರಾತ್ರಿ ವರುಣನು ಬೆಂಗಳೂರ ಅರ್ವಾಚೀನ ಹಾಗು ಅಧುನಿಕ ಇತಿಹಾಸವನ್ನು ತಿಳಿಸಿ, "ಮೈಸೂರ ಸಂಸ್ಥಾನವು ಬ್ರಿಟಿಶರ ಕೃಪಾಛತ್ರಕ್ಕೊಳಪಟ್ಟಂದಿನಿಂದ ಮೈಸೂರ ಸಂಸ್ಥಾನದ ಖರ್ಚಿನಿಂದ ಇಲ್ಲಿ ಇಂಗ್ಲಿಷರ ದೊಡ್ಡ ದಂಡು ಇರಿಸಲ್ಪಟ್ಟಿರುತ್ತದೆ. ಈ ಪಟ್ಟಣವು ಹಿಂದುಸ್ತಾನದೊಳಗಿನ ೪ನೇ ತರಗತಿಯ ಪಟ್ಟಣವಾದರೂ, (ಜನಸಂಖ್ಯೆ ೨ ಲಕ್ಷ) ಇಲ್ಲಿರುವ ವಿದ್ಯುತ್ತಿನ ಹಾಗು ನೀರಿನ ಸೌಕರ್ಯವು ಈ ದೇಶದೊಳಗಿನ ಯಾವ ೧ನೇ ತರಗತಿಯ ಪಟ್ಟಣದಲ್ಲಿ ಕೂಡ ಇರಲಿಕ್ಕಿಲ್ಲವೆಂದು ಧಾರಳವಾಗಿ ಹೇಳಬಹುದು. ಅಜ್ಞಾ, ನಿನ್ನ ಕಾವೇರಿಯನ್ನು ಬೆಂಗಳೂರ-ಮೈಸೂರಲ್ಲಿ ದುಡಿಸಿಕೊಳ್ಳುವಷ್ಟು ಬೇರೆಡೆಯಲ್ಲಿ ದುಡಿಯ ಹಚ್ಚುವದಿಲ್ಲ. ಇಲ್ಲಿಯ ಎಲ್ಲ ಯಂತ್ರಗಳಿಗೂ ಕಾವೇರಿ ಪ್ರವಾಹದಲ್ಲುಂಟಾಗುವ ವಿದ್ಯುತ್ತೇ ಸಹಾಯಕವಾಗಿರುತ್ತದೆ'' ಎಂದು ವರುಣನು ಹೇಳುತ್ತಿರುವಷ್ಟರಲ್ಲಿ ಹಗಲೆಲ್ಲ ತಿರುಗಾಡಿ ದಣಿದು ಬಂದ ನಮ್ಮ ಆ ದೇವಗಣಗಳಿಗೆ ಪೂರ್ಣಯ್ಯನ

ಛತ್ರದೊಳಗಿನ ಸ್ವಚ್ಛವೂ ವಿಶಾಲವೂ ಆದ ಆ ಪಡಸಾಲೆಯಲ್ಲಿ ಚೆನ್ನಾಗಿ ನಿದ್ದೆಹತ್ತಿತು.

ಅವರು ಇನ್ನೊಂದು ದಿವಸವಿದ್ದು ಬೆಂಗಳೂರ ಉಪನಗರಗಳನ್ನು ನೋಡಬೇಕೆಂದಿದ್ದರು; ಆದರೆ ನಾಲ್ಕನೇ ದಿನ ಬೆಳಗ್ಗೆ ಆ ಛತ್ರದ ಕಾವಲುಗಾರನು ಇವರೆಡೆಗೆ ಬಂದು:—ಸ್ವಾಮಿಽ, ನೀವು ಇಲ್ಲಿಗೆ ಬಂದು ಮೂರು ದಿನಗಳಾದವು. ಈ ಛತ್ರದ ಪಾರುಪತ್ಯಗಾರರು ಮೂರು ದಿನಗಳಿಗಿಂತ ಹೆಚ್ಚು ಕಾಲ ಪ್ರಯಾಣಿಕರನ್ನು ಇಲ್ಲಿ ಇರಗೊಡುವದಿಲ್ಲ ಆದುದರಿಂದ ತಾವು ಇಂದೇ-ಈಗಲೇ ಇಲ್ಲಿಂದ ದಯಮಾಡಿಸಬೇಕು, ಎಂದು ಮೈಸೂರ ದೇಶದ ಔಪಚಾರಿಕ ಶಬ್ದಗಳಿಂದ ನಮ್ಮ ದೇವತೆಗಳಿಗೆ ಉಚ್ಚಾಟನೆ ಕೊಟ್ಟನು. ಬ್ರಹ್ಮನಿಗಾದರೂ ದೇವಲೋಕಕ್ಕೆ ತೀವ್ರ ಹೋಗುವದಿದ್ದುದರಿಂದ ಅವನು ಹೊರಡಿರೆಂದು ತಮ್ಮವರನ್ನು ಕಟ್ಟಿಕೊಂಡು ಸ್ಟೇಶನ್ನಿಗೆ ನಡೆದನು

---

## ಕೋಲಾರ.

ಪುಟ್ಟಣ್ಣಯ್ಯನ ಛತ್ರದಿಂದ ಹೊರಟ ಬ್ರಹ್ಮಾದಿ ದೇವಗಣಗಳು ಸ್ಟೇಶನ್ನಿಗೆ ಹೋಗುತ್ತಿರಲು, ತಾವು ಮುಂದೆ ಎಲ್ಲಿಗೆ ಹೋಗಬೇಕೆಂಬ ವಿಷಯವಾಗಿ ಅವರಲ್ಲಿ ವಾದವುಂಟಾಯಿತು ಆಗ

ನಾರಾಯಣ:— ನಾವು ಈಗ ಹ್ಯಾಗೂ ಕರ್ಣಾಟಕಕ್ಕೆ ಬಂದು ಬಿಟ್ಟಿರುತ್ತೇವೆ. ಪುನಃ ಇತ್ತ ಕಡೆಗೆ ಬರುವದೆಂದೋ ಏನೋ? ಆದುದರಿಂದ ನಾವು ಇಲ್ಲಿ ಇನ್ನೂ ಕೆಲವು ದಿವಸ ಸಂಚರಿಸಿ, ಕೋಲಾರ, ಶಿವಸಮುದ್ರ, ಪುರೋಡೆ,(ಫ್ರೇಂಚರಾಜ್ಯ) ಶ್ರೀರಂಗಪಟ್ಟಣ, ಕನ್ನಂಬಾಡಿ, ಮೈಸೂರ, ನಂಜನಗೂಡು ಮುಂತಾದವುಗಳನ್ನು ನೋಡಿಕೊಂಡು ಹೋಗೋಣ.

ಬ್ರಹ್ಮ:—ಛೀ, ನಾರಾಯಣಾ, ನೀನು ಆಗಾಗ್ಗೆ ಎಷ್ಟೋ ಸಾರೆ ಅವತರಿಸುತ್ತಿದ್ದರೂ ಇಲ್ಲಿಯ ಮೋಹವು ನಿನಗೆ ಇನ್ನೂ ಬಿಡದೆ? ಸಾಕು, ಇಷ್ಟು ದಿನಗಳ ವರೆಗೆ ಕಂಡಕಂಡಲ್ಲಿ ಅಂಡಲೆದದ್ದು ಸಾಕಪ್ಪಾ-ಸಾಕು. ನಡೆಯಿರಿನ್ನು. ಬೇರೆ ಕಡೆಗೆಲ್ಲಿಗೂ ಹೋಗದೆ, ತಮ್ಮ ಕಾವಕ್ಕನನ್ನು ಯಾವ ಸ್ಥಳದಲ್ಲಿ ಒಳ್ಳೇ ಬಿಗು

ವಾಗಿ ಕಟ್ಟುತ್ತಿರುವರೋ, ಅಲ್ಲಿಗೆ ಹೋಗಿ, ಆಕೆಯ ಕಷ್ಟನಿವಾರಣಕ್ಕೆ ಉಪಾಯವನ್ನು ಮಾಡಿ, ಶೀಘ್ರವಾಗಿ ನಮ್ಮ ನಮ್ಮ ಬಿಡಾರುಗಳ ಹಾದಿಯನ್ನು ಹಿಡಿಯೋಣ ಹೀಗೆ ಮೂರು ತಿಂಗಳುಗಟ್ಟಲೆ ಮನೆ-ಮಾರು ಬಿಟ್ಟು ತಿರುಗಲಿಕ್ಕೆ ನಾವೇನು ಸಂನ್ಯಾಸಿಗಳೋ? ನಮ್ಮ ಹೆಂಡಿರು-ಮಕ್ಕಳು ನಮ್ಮ ವಿಷಯವಾಗಿ ಚಿಂತಾಮಗ್ನರಾಗಿರಲಿಕ್ಕಿಲ್ಲವೆ? ಎಂದು ಹೇಳಿ, ಕನ್ನಂಬಾಡಿಯ ಕಡೆಗೇ ಹೋಗಬೇಕೆಂದು ಹಟ ಹಿಡಿದನು.

ಆದರೆ ನಾರಾಯಣ-ಇಂದ್ರಾದಿಗಳು ತಮ್ಮ ತಮ್ಮೊಳಗೆ ಸಂಕೇತ ಮಾಡಿಕೊಂಡು ಮೊದಲು ಕೋಲಾರಕ್ಕೆ ಹೋಗಿ, ಅಲ್ಲಿಂದ ಶಿವಸಮುದ್ರದ ಮೇಲೆ ಹಾಯ್ದು, ಕನ್ನಂಬಾಡಿಯ ಕಡೆಗೆ ಹೋಗುವದನ್ನು ನಿರ್ಧರಿಸಿದರು; ಹಾಗು ಕನ್ನಂಬಾಡಿಗೇ ಹೋಗುವದೆಂದು ಬ್ರಹ್ಮನೆದುರಿಗೆ ಬಹಿರಂಗವಾಗಿ ನುಡಿದು, ಸ್ಟೇಶನ್ನಿಗೆ ಬಂದು ಕೋಲಾರಿನ ತಿಕೀಟುಗಳನ್ನು ತಕ್ಕೊಂಡರು.

ಬೆಂಗಳೂರಸಿಟಿಯಿಂದ ಕೋಲಾರಿಗೆ ಎರಡು ಮಾರ್ಗಗಳಿಂದ ಹೋಗಬಹುದಾಗಿದೆ ಮದ್ರಾಸದ ಕಡೆಗೆ ಹೋಗುವ ದೊಡ್ಡ ರೈಲಿನಲ್ಲಿ ಕುಳಿತು, ಬೌರಿಂಗಪೇಟೆಯ ಜಂಕ್ಶನ್ನಿನಲ್ಲಿಳಿದು ಕೋಲಾರಕ್ಕೆ ಹೋಗುವ ದಾರಿಯು, ಮೊದಲಿನ ದಾರಿಯು; ಬೆಂಗಳೂರ ಸಿಟಿಯಿಂದ ಚಿಂತಾಮಣಿಗಳ ಮೇಲೆ ಹಾಯ್ದು ಹೋಗುವ ಚಿಕ್ಕ ರೈಲಿನ ಮಾರ್ಗವು ಹೊಸದಾದದ್ದು. ಈ ಹೊಸ ಮಾರ್ಗದಿಂದಲೆ ಹೋದರೆ ಬ್ರಹ್ಮನಿಗೆ ಕೋಲಾರಿಗ ಹೋಗುವ ಮೊದಲಿನ ದಾರಿಯ (ದೊಡ್ಡ ರೈಲಿನ) ಸಂಶಯವು ಬರಲಿಕ್ಕಿಲ್ಲ; ಮೇಲಾಗಿ ಈ ಮಾರ್ಗವೂ ಹೊಸದಾದ್ದರಿಂದ ಇಲ್ಲಿ ಕೆಲವು ಹೊಸ ನೋಟಗಳೂ ಕಾಣಬಹುದೆಂದು ಯೋಚಿಸಿ, ವರುಣನು ನಾರಾಯಣಾದಿಗಳ ಆಲೋಚನೆಯ ಮೇರೆಗೆ ಕೋಲಾರಿಗೆ ಹೋಗುವ ಚಿಕ್ಕ ರೈಲಿನ ತಿಕೀಟುಗಳನ್ನೇ ಕೊಂಡುಕೊಂಡು ಬಂದನು. ಗಾಡಿ ಹೊರಡಲು ಇನ್ನೂ ಕೆಲವು ಅವಕಾಶವಿದ್ದಿತು. ಅಷ್ಟರಲ್ಲಿ ಬೆಂಗಳೂರ ಶೀತಹವೆಯ ಮೂಲಕವೋ ಏನೋ, ಬ್ರಹ್ಮನಿಗ ಮತ್ತೆ ಬಹಿರ್ದಿಶೆಗೆ ಹೋಗಬೇಕಾಯಿತು. ಆಗ ವರುಣಾದಿಗಳು ಅವನಿಗೆ ನೀರು ತಂದು ಕೊಟ್ಟು ಅವನನ್ನು ಆ ಸ್ಟೇಶನ್ನಿನ ಆಚೇಬದಿಯ ಶೌಚಕೂಪಕ್ಕೆ ಕಳಿಸಿದರು. ಬ್ರಹ್ಮಶೌಚವು ಅತಿ ತಡವೆಂದು ಮೊದಲೇ ಪ್ರಸಿದ್ಧಿಯುಂಟು. ಇಂಥ

ದರಲ್ಲಿ ರೈಲಿನ ಅವಸರಕ್ಕೆ ಅವನಿಂದ ಬಗೆ ಹರಿಯುವದು ಹೇಗೆ?

ಬ್ರಹ್ಮದೇವರ ಶೌಚವು ಮುಗಿದು ಅವರು ಬೆಂಗಳೂರಸಿಟಿಯ ಸ್ಟೇಶನ್ನಿನ ಪ್ಲಾಟಫಾರ್ಮಿಗೆ ಬರುವಷ್ಟರಲ್ಲಿ ಕೋಲಾರ ಕಡೆಗೆ ಹೋಗುವ ಗಾಡಿಯೂ, ಮೈಸೂರ ಕಡೆಗೆ ಹೋಗುವ ಮೇಲ್ ಟ್ರೇನೂ ಹೋಗಿ ಬಿಟ್ಟದ್ದವು. ಪ್ಲಾಟಫಾರ್ಮಿನಲ್ಲಿ ಕೋಲಾರ-ಮೈಸೂರಗಳ ಕಡೆಯಿಂದ ಬಂದ ಗಾಡಿಗಳು ನಿಂತಿದ್ದವು. ಕೋ-ಲಾರ ಗಾಡಿ ಯಾವುದೆಂದು ನಾರಾಯಣನು ಗಾಡಿಯಿಂದ ಇಳಿದು ಬಂದ ಒಬ್ಬ ಪ್ರಯಾಣಿಕನನ್ನು ಕೇಳಲು, ಅವನು:—ಇಗೋ, ಇದೆಂದು ಸಮೀಪದಲ್ಲಿ ನಿಂತಿದ್ದ ಬಂಡಿಯ ಕಡೆಗೆ ಬೊಟ್ಟು ಮಾಡಿ ತೋರಿಸಿದನು. ಆಗ ಅವರೆಲ್ಲರೂ ಅವಸರದಿಂದ ಆ ರೈಲನ್ನೇ ಹತ್ತಿದರು. ಅಷ್ಟರಲ್ಲಿ ಟ್ರೇನ್ ಎಕ್ಸಾಮಿನರರ ಸಿಪಾಯಿಗಳು ಬಂದು ನಮ್ಮ ದೇವತೆಗಳನ್ನು ಕುರಿತು:—ಯಾಕಯ್ಯಾ, ಇಳಿಯುವದಿಲ್ಲವೆ? ಎಲ್ಲ ಜನರು ಇಳಿದು ಹೋದರೂ ನೀವು ಹೀಗೆ ಇಲ್ಲಿಯೇ ಕುಳಿತಿರುವುದೇಕೆ? ನೀವು ಬಹುಶಃ ತಿಕೀಟುಗಳಿಲ್ಲದೆ ಪ್ರವಾಸ ಮಾಡುವ ಬೋಕಡ ಪ್ಯಾಸೆಂಜರರಾಗಿ ಕಾಣುತ್ತೀರಿ ನಡೆಯಿರಿ, ನಿಮ್ಮನ್ನು ಪೋಲೀಸರ ಕೈವಶ ಮಾಡುವೆನೆಂದು ಗದ್ದರಿಸಲು, ದೇವಗಣಗಳು ತಮ್ಮಲ್ಲಿಯ ತಿಕೀಟುಗಳನ್ನು ತೆಗೆದು ಅವನಿಗೆ ತೋರಿಸುತ್ತ ಪಿಟ್ಟೆನ್ನದೆ ಆ ಗಾಡಿಯಿಂದ ಇಳಿದರು; ಹಾಗು ಸಮೀಪದಲ್ಲಿಯೇ ನಿಂತಿದ್ದ ಬೇರೊಂದು ಗಾಡಿಯಲ್ಲಿ ಸ್ಥಳ ಹುಡುಕಿಕೊಂಡು ಹತ್ತುವಷ್ಟರಲ್ಲಿ ಆ ಗಾಡಿಯು 'ಕೂ' ಎಂದು ಕೂಗಿ ವೇಗದಿಂದ ಹೊರಟಿತು.

ಬ್ರಹ್ಮನು ಪಕ್ಕದಲ್ಲಿಯೇ ಇದ್ದುದರಿಂದ, ಈ ಗಾಡಿಯು ಕೋಲಾರಿಗೆ ಹೋಗುವದೋ ಇಲ್ಲವೋ ಎಂಬ ವಿಷಯವನ್ನು ಬೇರೆ ಪ್ರಯಾಣಿಕರಿಂದ ಕೇಳಿ ತಿಳಕೊಳ್ಳುವ ಧೈರ್ಯವು ಆ ನಾರಾಯಣಾದಿ ದೇವತೆಗಳಲ್ಲಿ ಯಾರಿಗೂ ಆಗಲಿಲ್ಲ. ಆ ಗಾಡಿಯು ಬೆಂಗಳೂರ ಸಿಟಿಯಿಂದ ಹೊರಟದ್ದು, ನಡುವೆ ಯಶವಂತಪೂರ ಹಾಗು ಇನ್ನೆರಡು ಸ್ಟೇಶನ್ನುಗಳಲ್ಲಿ ನಿಲ್ಲಲೇ ಇಲ್ಲ. ಚಿಕ್ಕಬಾಣಾವರವೆಂಬ ವಾಟರಿಂಗ ಸ್ಟೇಶನ್ನಿನಲ್ಲಿ ನಿಲ್ಲಲು, ಅಲ್ಲಿ ಇಳಿಯುವವರೂ, ಅಲ್ಲಿಂದ ತುಮಕೂರ, ಅರ್ಸಿಕೇರೆಗಳ ಕಡೆಗೆ ಏರುವವರೂ ಬಹು ಜನರು ಆ ಪ್ಲಾಟಫಾರ್ಮಿನ ಮೇಲೆ ಸೇರಿದರು. ತುಮಕೂರ, ಅರ್ಸಿಕೇರೆ ಮುಂತಾದ ಊರುಗಳ ಹೆಸರುಗಳನ್ನು ಕೇಳಿ ನಾರಾಯಣಾದಿ ದೇವ

ತೆಗಳ ತಲ್ಲಣವು ಹಾರಿತು! ಯೋಚಿಸಿದ್ದೊಂದು ಕಡೆಗೆ; ಈಗ ತಾವು ಬಂದದ್ದು ಬೇರೆ ಕಡೆಗೆ. ಹೀಗೆ ಆದುದರಿಂದ ಅವರು ಅಲ್ಲಿಯೇ ಇಳಿದರು. ಒಳಗಿನ ಹುಳುಕನ್ನಾವದನ್ನೂ ಅರಿಯದ ಬ್ರಹ್ಮನಿಗೆ ಈ ಗುಂಭವು ತಿಳಿಯಲಿಲ್ಲ. ಅವನು ಇದೇ ಏನು, ಕನ್ನಂಬಾಡಿಗೆ ಹೋಗುವ ಸ್ಟೇಶನ್ನು? ಎಂದು ತನ್ನ ಗೊಗ್ಗರದನಿಯಿಂದ ತಮ್ಮವರನ್ನು ಕೇಳಿಕೊಳ್ಳಲು, ಸಮೀಪದಲ್ಲಿಯೇ ನಿಂತಿದ್ದ ಒಬ್ಬ ಚಪಲ ಪ್ರಯಾಣಿಕನು ನಸುನಕ್ಕು:— ಸ್ವಾಮಿ, ತಾತಂದಿರೇ, ಇದು ಮೈಸೂರ ಮಾರ್ಗವಲ್ಲ. ಬೆಂಗಳೂರಿಂದ ಅರ್ಸೀಕೇರೆಯ ಕಡೆಗೆ ಹೋಗುವ ದಾರಿಯಾಗಿದ್ದು, ಈ ಸ್ಟೇಶನ್ನಿಗೆ ಚಿಕ್ಕಬಾಣಾವರವೆಂದೆನ್ನುವರು. ಬೆಂಗಳೂರಸಿಟಿಯಲ್ಲಿ ಗಾಡಿ ಏರುವಾಗ ತಾವು ಚೆನ್ನಾಗಿ ವಿಚಾರಿಸಲಿಲ್ಲೆಂಬಂತೆ ಕಾಣುತ್ತದೆ. ಹೋಗಿರಿ, ಈಗಾದರೂ ಏನಾಯಿತು. ಅಗೋ, ಆಚೆಕಡೆಗಿರುವ ಕಂಬಿಯ ಮೇಲಿನ ಬೇರೆ ರೈಲನ್ನಾರೋಹಿಸಿರಿ. ಅದು ಇನ್ನು ಒಂದು ಗಂಟೆಗೆ ಬೆಂಗಳೂರಿಗೆ ತಲುಪುವದು. ಅಲ್ಲಿ ಸಾಯಂಕಾಲದ ವರೆಗೆ ನಿರೀಕ್ಷಿಸಿದರೆ, ಕನ್ನಂಬಾಡಿಗೆ ಹೋಗುವ ಬೇರೆ ರೈಲು ನಿಮಗೆ ದೊರಕೀತು, ಎಂದನು.

ಬ್ರಹ್ಮನನ್ನು ಠಕ್ಕಿಸಿ ಕನ್ನಂಬಾಡಿಗೆಂದು ಕೋಲಾರಿಗೆ ಕರೆದೊಯ್ದು ನಡೆದಿದ್ದ ನಾರಾಯಣಾದಿಗಳು, ಆಗ ಮನಸ್ಸಿನಲ್ಲಿ ಬಹಳವಾಗಿ ವಿಷಾದಿಸಿದರು. ತಮ್ಮಂಥ ತಿಳಿದವರೇ ಬ್ರಹ್ಮಸಂಕಲ್ಪಕ್ಕೆ ವಿರುದ್ಧವಾಗಿ ನಡೆಯ ಹೋಗಿ ಹೀಗೆ ಮುಖಭಂಗಿತರಾಗುತ್ತಿರುವಾಗ, ಪಾಪ! ಭೂಲೋಕದ ಪ್ರಾಣಿಗಳು ಅಜ್ಞಾನದಿಂದ ಬ್ರಹ್ಮಸಂಕಲ್ಪಕ್ಕೆ ವಿರುದ್ಧವಾಗಿ ನಡೆಯ ಹೋಗಿ ನಾನಾಯಾತನೆಗಳನ್ನು ಭೋಗಿಸುತ್ತಿರುವದರಲ್ಲಿ ಆಶ್ಚರ್ಯವೇನೆಂದು ಅವರು ಹಳಹಳಿಸಿದರು. ಅವರು ಕೂಡಲೆ ಬ್ರಹ್ಮನನ್ನು ಆ ಪಕ್ಕದಲ್ಲಿಯ ಬೇರೆ ರೈಲಿಗೆ ಕರೆದೊಯ್ದು ಅದನ್ನಾರೋಹಿಸಿ, ನಡೆದ ವೃತ್ತಾಂತವನ್ನೆಲ್ಲ ಬಿಚ್ಚು ಮಾಡಿ ಅವನಿಗೆ ಹೇಳಿದರು. "ತಮ್ಮಗಳಿರಾ, ಸಾಕ್ಷಾತ್ ಪ್ರಭುವೇ ಬ್ರಹ್ಮಸಂಕಲ್ಪವನ್ನನುಸರಿಸಿ ನಡೆಯುತ್ತಿರಲು, ನೀವುಗಳು ಹೀಗೆ ವಿಪರೀತವಾಗಿ ಆಚರಿಸಿದ್ದು ಶುದ್ಧ ತಪ್ಪು. ಆಗಲಿ, ಆಗಿ ಹೋದ ಮಾತಿಗೆ ಮಾಡುವದೇನು?'' ಎಂದು ನುಡಿದು ಅವರನ್ನು ಸಮಾಧಾನಪಡಿಸಿದನು.

ಬಳಿಕ ಅವರು ಕೋಲಾರಿಗೆ ಹೋಗಬೇಕೆಂಬ ಹಂಬಲವನ್ನೇ

ಬಿಟ್ಟು ವರುಣನಿಂದ ಅಲ್ಲಿಯ ವಿಶೇಷವನ್ನು ಕೇಳಿಕೊಳ್ಳಲಾರಂಭಿಸಿದರು; ಆಗ ವರುಣನು:— ಮೈಸೂರ ಪ್ರಾಂತದಲ್ಲಿ ಕೋಲಾರ ಜಿಲ್ಲೆಯು ಹಿಂದುಬಗೆಯ ರುಕ್ಷಪ್ರಾಂತವೇ ಎಂದು ಅನ್ನಬಹುದು. ಆದರೆ ಅಲ್ಲಿ ಹೊರಟಿರುವ ಬಂಗಾರದ ಖಣಿಗಳ ಮೂಲಕ ಈಚೆಗೆ ಆ ಪ್ರಾಂತವು ವಿಶೇಷವಾಗಿ-ಕೋಲಾರ ಪಟ್ಟಣದ ಸಮೀಪದ-ಪ್ರದೇಶವು ಪ್ರೇಕ್ಷಣೀಯವಾಗಿರುತ್ತದೆ. ಕೋಲಾರದ ಬಳಿಯ ಖಣಿಗಳಿಂದ ಬಂಗಾರ ತೆಗೆಯುವ ಗುತ್ತಿಗೆಯನ್ನು ಹಬ್ಬ ಯುರೋಪಿಯನ್ನ ಕಂಪನಿಯವರು ಹಿಡಿದಿದ್ದು, ಮೈಸೂರ ಸರಕಾರಕ್ಕೆ ಆ ಖಣಿಯ ಮಾಲಕಿಯ ಸಲುವಾಗಿ ಪ್ರತಿವರ್ಷ ಎಷ್ಟೋ ಲಕ್ಷರೂಪಾಯಿಗಳ ಆದಾಯವಾಗುತ್ತಿದೆ. ಮೊದಲು ಅಲ್ಲಿ ಸ್ಟೀಮ ಎಂಜಿನ್ನುಗಳ ಸಹಾಯದಿಂದ ಖಣಿಗಳನ್ನು ತೋಡಿ ಒಳಗಿನ ಬಂಗಾರದ ಅಂಶಗಳ ಕಲ್ಲುಗಳನ್ನು ತೆಗೆಯುತ್ತಿದ್ದರು ಆದರೆ ಆ ಖಣಿಗಳ ಕೆಲಸಕ್ಕಾಗಿ ಈಚೆಗೆ ೨೦ ವರ್ಷಗಳಿಂದ ಮೈಸೂರ ಸೀಮೆಯೊಳಗಿನ ಶಿವಸಮುದ್ರದಲ್ಲಿ ಕಾವೇರಿಯ ಪ್ರವಾಹದಿಂದ ಉತ್ಪನ್ನವಾಗುವ ವಿದ್ಯುತ್ತನ್ನು ಉಪಯೋಗಿಸುತ್ತಿರುವದರಿಂದ, ಖಣಿಗಳ ಕೆಲಸಕ್ಕೆ ಖರ್ಚು ಕಡಿಮೆ ಹತ್ತುವದಲ್ಲದೆ, ಹೆಚ್ಚು ಸೌಕರ್ಯವೂ ಉಂಟಾಗಿರುತ್ತದೆ. ಅಲ್ಲಿಯ ಗುಡ್ಡಗಳಲ್ಲಿ ಬಂಗಾರದ ಕಲ್ಲುಗಳಿಗಾಗಿ ತೋಡಿದ ಖಣಿಗಳ ಆಳವು ಕೆಲವು ಕಡೆಗೆ ೨-೩ ಮೈಲುಗಳ ವರೆಗೆ ಹೋಗಿರುತ್ತವೆ; ಬೇರೆ ಕೆಲವು ಖಣಿಗಳಲ್ಲಿ ೫-೬ ಮೈಲುಗಳ ತನಕ ತಗ್ಗು ತೋಡಿ ಬಂಗಾರದ ಕಲ್ಲುಗಳನ್ನು ತೆಗೆಯುತ್ತಿರುವರು. ಅಷ್ಟು ದೂರದ ವರೆಗಿನ ನಿರ್ವಾತಪ್ರದೇಶದಲ್ಲಿ(ಹಗೆಗಳಲ್ಲಿ) ಹೋಗಿ ಬರುವದಕ್ಕೆ ವಿದ್ಯುತ್ತಿನ ಬಹು ಶೀಘ್ರವಾಗಿ ಏರಿಳಿಯುವ ತೊಟ್ಟಿಲಗಳನ್ನಿಟ್ಟಿರುವರು; ಹಾಗು ಆ ತೆಗ್ಗುಗಳಲ್ಲಿ ಲೋಹದ ಕಂಬಿಗಳ ಮೇಲೆ ನಡೆಯುವ ಟ್ರಾಲಿಗಳೂ, ವಿದ್ಯುದ್ದೀಪಗಳೂ ಏರ್ಪಟ್ಟಿರುತ್ತವೆ. ಆ ಖಣಿಯೊಳಗೆ ಕೆಲಸ ಮಾಡುವವರ ಶ್ವಾಸೋಚ್ಛ್ವಾಸಕ್ಕೆ ಮೇಲುಗಡೆಯ ಯಂತ್ರಗಳ ಸಹಾಯದಿಂದ ಕೃತ್ರಿಮ ಹವೆಯು ಪೂರೈಸಲ್ಪಡುತ್ತದೆ. ಆ ಖಣಿಗಳಲ್ಲಿ ಹೊರಡುವ ದೊಡ್ಡ ದೊಡ್ಡ ಪ್ರವಾಹಗಳ ನೀರನ್ನು ಮೇಲಕ್ಕೆಳೆದು ಚೆಲ್ಲುವ ಎಷ್ಟೋ ಯಂತ್ರಗಳು ಹಗಲಿರುಳೆನ್ನದೆ ಹಿಂದೇಸವನೆ ವೇಗದಿಂದ ಕೆಲಸ ಮಾಡುತ್ತಿರುತ್ತವೆ. ಆ ಖಣಿಗಳಲ್ಲಿಯ ಬಂಗಾರದ ಕಲ್ಲುಗಳು ಲೋಹಮಾರ್ಗ,

ಜಲಮಾರ್ಗಗಳಿಂದ ವಿಲಾಯತಿಗೆ ಸಾಗಿಸಲ್ಪಟ್ಟು, ಅಲ್ಲಿ ಅವನ್ನು ಪುಡಿಮಾಡಿ ಕರಗಿಸಿ ನೀರು ಮಾಡಿ, ಅದರಿಂದ ಶುದ್ಧವಾದ ಬಂಗಾರ ಮಿಶ್ರಬಂಗಾರ, ಇತರ ಧಾತು ಮುಂತಾದವುಗಳನ್ನು ತೆಗೆಯುತ್ತಾರೆ. ಇಲ್ಲಿ ಬಂಗಾರ ಕರಗಿಸಿ ಶುದ್ಧಿ ಮಾಡುವದರಿಂದ ಹಿಂದೀ ಜನರು ಆ ಕಸಬನ್ನು ತಿಳಿದರೆ, ತಮ್ಮ ಹೊಟ್ಟೆಯ ಮೇಲೆ ಎಲ್ಲಿ ಕಲ್ಲು ಬಂದೀತೆಂಬ ಭಯದಿಂದಲೋ ಏನೋ, ಆ ಬ್ರಿಟಾನಿಯನ್ನರು ಆ ಬಂಗಾರದ ಕಲ್ಲುಗಳನ್ನು ಏಳೆಂಟು ಸಾವಿರ ಮೈಲುಗಳಾಚೆಯಲ್ಲಿರುವ ತಮ್ಮ ಮಾತೃಭೂಮಿಗೇ ಸಾಗಿಸುತ್ತಿರುವರು!

ಆ ಕೋಲಾರದ ಖಣಿಗಳಲ್ಲಿ ಹಿಂದುಸ್ತಾನದ ಎಲ್ಲ ಪ್ರಾಂತಗಳ ಇಷ್ಟೇ ಅಲ್ಲ, ಎಷ್ಟೋ ಪರದ್ವೀಪಸ್ಥ ಕೆಲಸುಗಾರರೂ ದುಡಿಯುತ್ತಿರುವರು. ಆ ಖಣಿಗಳನ್ನು ನೋಡಹೋಗಲಿಕ್ಕೆ ಎಲ್ಲರಿಗೂ ಪರವಾನಿಗೆ ಇರದ್ದರಿಂದ ನಾವು ಅಲ್ಲಿಗೆ ಹೋಗದಿರುವದೊಂದು ವಿಹಿತ ಕಾರ್ಯವೇ ಆದಂತಾಯಿತು; ಅಲ್ಲಿ ಕೆಲಸ ಮಾಡುವವರು ತಮ್ಮ ಅರಿವೆ-ಅಂಚಡಿಗಳನ್ನು ಆ ಖಣಿಗಳ ಮುಖ್ಯ ದ್ವಾರಪಾಲಕನ ವಶದಲ್ಲಿರಿಸಿ, ಕೇವಲ ಕೌಪೀನವನ್ನು ಧರಿಸಿ ಖಣಿಗಳಲ್ಲಿಯ ಕೆಲಸ ಮಾಡಬೇಕೆಂದೂ, ಬರುವಾಗ ತಮ್ಮ ಅಂಗಝಡತಿಯನ್ನು ಅಲ್ಲಿಯ ಅಮಲದಾರರಿಂದ ಮಾಡಿಸಿದ ತರುವಾಯ ತಮ್ಮ ತಮ್ಮ ಪೋಷಾಕುಗಳನ್ನು ಧರಿಸಿ ಮನೆಗೆ ಬರಬೇಕೆಂದೂ ನಿಯಮಗಳುಂಟೆಂದು ಕೇಳಿದ್ದೇನೆ. ಇದರಲ್ಲಿ ಸತ್ಯವೆಷ್ಟೋ ಅಸತ್ಯವೆಷ್ಟೋ ಎಂಬದನ್ನು ಪ್ರತ್ಯಕ್ಷ ದರ್ಶಿಗಳೇ ಹೇಳಬಲ್ಲರು. ಇರಲಿ. ಅಲ್ಲಿ ದುಡಿಯುವ ಸಾವಿರಗಟ್ಲೆ ಕೆಲಸುಗಾರರಲ್ಲಿ ಮೇಲಿಂದ ಮೇಲೆ ಒದಗಿಬರುವ ಅಪಘಾತಗಳ ಮೂಲಕ ಪ್ರತಿವರ್ಷ ಕನಿಷ್ಠಪಕ್ಷ ನೂರಾರು ಜನರಾದರೂ ಆ ಖಣಿಗೆ ಬಲಿಯಾಗುತ್ತಿದ್ದು, ಆ ಬಡಜನರ ಕುಟುಂಬಗಳು ಅನನ್ಯಗತಿಕಗಳಾಗುತ್ತಿರುವವಂತೆ!

ಹೀಗೆ ದೇವಗಣಗಳು ಕೋಲಾರ ಖಣಿಯ ವಿಷಯವನ್ನು ಕೇಳುತ್ತಿರುವಾಗ ಅವರ ರೈಲು ಬೆಂಗಳೂರ ಸಿಟಿಯಲ್ಲಿ ಬಂದು ನಿಂತಿತು. ತಮ್ಮಲ್ಲಿ ಯೋಗ್ಯ ತಿಕೀಟುಗಳಿರದ್ದರಿಂದ ಅವರು ತಿಕೀಟ ಕಲೇಕ್ಟರರ ಕಣ್ಣುತಪ್ಪಿಸಿ ಹಿಮ್ಮಗ್ಗಲಿನಿಂದ ಇಳಿದು ಊರೊಳಗೆ ನಡೆದರು; ಮತ್ತು ಬ್ರಹ್ಮಸಂಕಲ್ಪಕ್ಕೆ ವಿರುದ್ಧವಾಗಿ ನಡೆಯಹೋಗಿ ಪಶ್ಚಾತ್ತಾಪಪಟ್ಟ ಅವರು ಅರಳೇಪೇಟೆಯ ಮಾರ್ಗವಾಗಿ

ಸಾಗಿರಲು, ಶಿವಸಮುದ್ರಕ್ಕೆ ಹೋಗುವ ಒಂದು ಮೋಟಾರುಕಾರು ಅವರ ಕಣ್ಣಿಗೆ ಬಿದ್ದಿತು. ಕೂಡಲೆ ಅವರು ಮೋಟಾರ ಡ್ರಾಯವ್ಹರನಿಗೆ ಸಂಜ್ಞೆ ಮಾಡಿ, ಅದನ್ನು ನಿಲ್ಲಿಸಿ, ತಾವೆಲ್ಲರೂ ಅದರಲ್ಲಿ ಹತ್ತಿ ಶಿವಸಮುದ್ರದ ಕಡೆಗೆ ಸಾಗಿದರು.

---

## ಶಿವಸಮುದ್ರಮ್.

ಬೆಂಗಳೂರಿಂದ ಬೆಳಿಗ್ಗೆ ೯ ಕ್ಕೆ ಹೊರಟ ಮೋಟಾರಕಾರು ತನ್ನ ಸ್ವಾಭಾವಿಕ ಗತಿಯಿಂದ ಸಾಗಿ, ಮಧ್ಯಾಹ್ನದ ೧೨ ಗಂಟೆಗೆ ನಮ್ಮ ದೇವತೆಗಳನ್ನು ಶಿವಸಮುದ್ರಮ್‌ದ ಹೈಡ್ರೋ ಎಲೆಕ್ಟ್ರಿಕ್‌ಪಾವರ ಸ್ಟೇಶನ್ನಿನೆದುರಿಗಿನ ಟ್ರಾವ್ಹಲರ್ಸ ಬಂಗಲೆಗೆ ತಂದು ಬಿಟ್ಟಿತು. ಆಗ ಈ ನಟ್ಟಡವಿಯೊಳಗಿನ ಪ್ರದೇಶದಲ್ಲಿ ತಮ್ಮ ಊಟ-ಉಪಚಾರಗಳ ಗತಿಯೇನೆಂದು ಬ್ರಹ್ಮನು ವರುಣನನ್ನು ಕೇಳಲು,

ವರುಣನು:—ಅಜ್ಜಾ, ಈ ಬಂಗಲೆಯಲ್ಲಿ ನಮಗೆ ಬೇಕಾದ ಪಾತ್ರೆ-ಪಡಗುಗಳು ಸಿಗುವವಲ್ಲದೆ, ಇಳಕೊಳ್ಳಲಿಕ್ಕೆ ಪ್ರಶಸ್ತವಾದ ಕೋಣೆಯೂ ಕೊಡಲ್ಪಡುವದು. ಇಲ್ಲಿಯೇ ಸಮೀಪದಲ್ಲಿರುವ ಪಬ್ಲಿಕ್‌ಸ್ಟೋರಿನಲ್ಲಿ ಅಕ್ಕಿ, ಬೇಳೆ, ಕಾಯಿಪಲ್ಲೆ ಮೊದಲಾದ ಎಲ್ಲ ಸಾಮಾನುಗಳೂ ಸಿಗುತ್ತವೆ. ಅಂದಮೇಲೆ ಊಟದ ಬಗ್ಗೆ ಯೋಚನೆಯೇಕೆ? ಎಂದಂದು, ತಮ್ಮ ಸಾಮಾನುಗಳನ್ನು ವ್ಯವಸ್ಥೆಯಿಂದಿರಿಸಿ, ಅಲ್ಲಿಯ ಚೀಫ ಅಪರೇಟರರ ಕಚೇರಿಗೆ ಹೋಗಿ, ತಮಗೆ ಬೇಕಾಗಿರುವ ಸ್ಥಳ ಹಾಗು ಬೇರೆ ಸಾಮಾನುಗಳ ಬಗ್ಗೆ ಕೇಳಿಕೊಳ್ಳಲು, ಕೂಡಲೆ ಅಲ್ಲಿಯ ಗುಮಾಸ್ತನೊಬ್ಬನು ಬಂಗಲೆಯ ವರೆಗೆ ಬಂದು ಇವರ ಇಷ್ಟಾರ್ಥವೆಲ್ಲವನ್ನೂ ಪೂರೈಸಿದನು.

ನಮ್ಮ ದೇಶದಲ್ಲಿ ಎಲ್ಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಟ್ರಾವ್ಹಲರ್ಸ ಬಂಗಲೆಗಳು ಈಚೀಚೆಗೆ ಕಟ್ಟಲ್ಪಟ್ಟಿರುತ್ತವೆ; ಆದರೆ ಇಲ್ಲಿಯ ಬಂಗಲೆಗಳು ಕೇವಲ ಯುರೋಪಿಯನ್ನ ಹುದ್ದೇದಾರರ ಸಲುವಾಗಿಯೇ ಆಗಿವೆಯೆಂದು ಬಹು ಜನರ ತಿಳುವಳಿಕೆಯಾಗಿರುತ್ತದೆ. ಜನರು ಹಾಗೆ ತಿಳಕೊಳ್ಳಲಿಕ್ಕೆ ಉಂಟಾಗುವ ಸಬಲ ಕಾರಣಗಳೇ ಅದಕ್ಕೆ ಆಧಾರವಾಗಿವೆ. ಇಲ್ಲಿಯ ಬಂಗ್ಲೆಗಳಲ್ಲಿ ಸರ್ವಸಾಮಾ

ಸ್ಯರನ್ನು ಇಳಿಗೊಡುವದಿಲ್ಲ; ಹಾಗು ಇವರಿಗೆ ಬೇಕಾಗುವ ಅನುಕೂಲತೆಗಳೂ ಇರುವದಿಲ್ಲ; ಯುರೋಪಿಯನ್ನರಿಗೆ ಅನುಕೂಲವಾಗುವಂತೆಯೇ ನಮ್ಮಲ್ಲಿಯ ಬಂಗ್ಲೆಗಳ ವ್ಯವಸ್ಥೆಯಿರುತ್ತದೆ; ಆದರೆ ಮೈಸೂರ ದೇಶದಲ್ಲಿಯ ಟ್ರಾವ್ಹಲರ್ಸಬಂಗ್ಲೆ (ಛತ್ರ)ಗಳು ಪರದೇಶದ ಜನರಿಗಿಂತ ನಮ್ಮವರ ಸೌಕರ್ಯದ ಕಡೆಗೇ ಹೆಚ್ಚು ಲಕ್ಷ್ಯಗೊಟ್ಟು ಕಟ್ಟಲ್ಪಟ್ಟಿರುತ್ತವಲ್ಲದೆ, ಅಲ್ಲಿ ಪ್ರಯಾಣಿಕರಿಗೆ ಸರ್ವಸಾಧಾರಣವಾಗಿ ಬೇಕಾದ ಪಾತ್ರೆ, ಉರುವಲು ಮುಂತಾದವುಗಳೂ ಸಿಗುತ್ತವೆ.

ನಂತರ ದೇವಗಣಗಳು ಸವಿಪದ ಸ್ವಚ್ಛವಾದ ತಣ್ಣೀರಿನ ನಲ್ಲಿಯಲ್ಲಿ ಮನದಣಿ ಸ್ನಾನಮಾಡಿ ಅಡಿಗೆ ಊಟಗಳನ್ನು ತೀರಿಸಿದರು. ತುಸ ಹೊತ್ತು ವಿಶ್ರಮಿಸಿ, ಶಿವಸಮುದ್ರದೊಳಗಿನ ಪಾವರ ಹಾವುಸನ್ನು ನೋಡಹೋದರು. ಶಿವಸಮುದ್ರವು ಬೆಂಗಳೂರಿಂದ ೫೦-೬೦ ಮೈಲುಗಳ ಮೇಲೆ, ಬೆಂಗಳೂರ-ಮೈಸೂರ ರೇಲ್ವೆಲಾಯಿನಿನೊಳಗಿನ ಮದ್ದೂರ ಎಂಬ ಸ್ಟೇಶನ್ನಿನಿಂದ ಸರಾಸರಿ ೪೦ ಮೈಲುಗಳ ಮೇಲೆ ಕಟ್ಟಡವಿಯುಲ್ಲಿರುತ್ತದೆ ಕೊಡಗು ಪ್ರಾಂತದೊಳಗಿನ ನೀಲಗಿರಿ ಗುಡ್ಡಗಳ ಸಾಲಿನಲ್ಲಿ ಉಗಮವಾದ ಕಾವೇರೀ ಹೊಳೆಯು ಮೈಸೂರ ಪ್ರಾಂತದೊಳಗಿಂದ ಹರಿಯುತ್ತ ಬಂದು, ಈ ಶಿವಸಮುದ್ರದ ಬಳಿಯಲ್ಲಿ ೪೦೦ ಫೂಟು ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ; ಹಾಗು ಅಲ್ಲಿಂದ ಮುಂದೆ ಮದ್ರಾಸ ಇಲಾಖೆಯನ್ನು ಹೊಕ್ಕು ಹರಿಯುತ್ತ ಸಮುದ್ರಕ್ಕೆ ಕೂಡುತ್ತದೆ. ವರ್ಷಗಟ್ಲೆ ಇಷ್ಟು ಎತ್ತರದಿಂದ ಬಿದ್ದು ಪುಕ್ಕಟೆಯಾಗಿ ಹರಿಯುವ ಈ ನೀರಿನ ಉಪಯೋಗವನ್ನು ಯಾವ ಬಗೆಯಿಂದ ಸಾರ್ಥಕವಾಗಿ ಮಾಡಿಕೊಳ್ಳಬೇಕೆಂಬ ಕಲ್ಪನೆಯು ಮೈಸೂರ ದೇಶದ ಸುಪ್ರಸಿದ್ಧ ದಿವಾಣರಾಗಿದ್ದ ಪ ವಾ ಸರ ಶೇಷಾದ್ರಿ ಅಯ್ಯರರೆಂಬ ಕುಶಾಗ್ರಬುದ್ಧಿಯವರ ಮನಸ್ಸಿನಲ್ಲಿ ಎಲ್ಲಕ್ಕೂ ಮೊದಲು ಪ್ರಾದುರ್ಭವಿಸಿತು. ಬಳಿಕ ಅವರು ಆ ನೀರಿನ ಉಪಯೋಗವನ್ನು ಮಾಡಿಕೊಂಡು ಹೇಗೆ ಲಾಭಪಡೆಯಬೇಕೆಂಬ ವಿಷಯವಾಗಿ ಯುರೋಪ, ಅಮೇರಿಕೆಗಳ ಪ್ರಸಿದ್ಧ ಸಂಶೋಧಕರೊಡನೆ ಪತ್ರವ್ಯವಹಾರ ಮಾಡಿ ಒಂದು ಸ್ಕೀಮು (ಯೋಜನೆಯು)ನ್ನು ಗೊತ್ತು ಮಾಡಿದರು ಅವರ ಆ ಸ್ಕೀಮು ಎಷ್ಟೋ ಜನ ಪ್ರಸಿದ್ಧ ಇಂಜಿನಿಯರಿಗೆ ಕೂಡ ಯಶಸ್ವಿಯಾಗಬಹುದೆಂದು ಖಾತ್ರಿಯಾಗಲಿಲ್ಲ; ಹೈಡ್ರೋ ಇಲೆಕ್ಟ್ರಿಕ್‌ಪಾವರ ಸ್ಟೇಶನ್ನು

ಅಲ್ಲಿ ಇಸವಿ ಸನ್ ೧೮೯೯ರಲ್ಲಿ ಕಟ್ಟಲ್ಪಟ್ಟಿತು. ಅದರ ಗುತ್ತಿಗೆಯು ಅಮೇರಿಕೆಯ ಜನೆರಲ್ ಇಲೆಕ್ಟ್ರಿಕ್ ಕಂಪನಿಗೆ ಕೊಡಲ್ಪಟ್ಟಿತು. ಶಿವಸಮುದ್ರದ ಇಲೆಕ್ಟ್ರಿಕ್ ಸ್ಟೇಶನ್ನು ಹಿಂದುಸ್ಥಾನದೊಳಗೆ ಇಷ್ಟೇ ಅಲ್ಲ; ಎಲ್ಲ ಬ್ರಿಟಿಶ ವಸಹಾತುಗಳಲ್ಲಿಯು ಮೊದಲನೇ ಹೈಡ್ರೋ ಇಲೆಕ್ಟ್ರಿಕ್‌ಪಾವರ ಸ್ಟೇಶನ್ನಾಗಿರುತ್ತದೆ. ೧೯೦೨ರಲ್ಲಿ ಆ ಪಾವರ ಹೌಸು ಸಂಪೂರ್ಣವಾಗಿ, ಅಲ್ಲಿ ವಿದ್ಯುತ್ತು ಉಂಟಾಗಲಾರಂಭಿಸಿತು; ಹಾಗು ಆಗಿನಿಂದಲೇ ಆ ವಿದ್ಯುತ್ತು ಅಲ್ಲಿಂದ ೯೨ ಮೈಲು ದೂರದಲ್ಲಿರುವ ಕೋಲಾರ ಖಣಿಗಳಿಗೆ ಪೂರೈಸಲ್ಪಡಹತ್ತಿತು.

ದೇವಗಣಗಳು ಇಳಕೊಂಡಿದ್ದ ಬಂಗಲೆಯ ಕಡೆಯಿಂದಲೇ ಶಿವಸಮುದ್ರದ ಧಬಧಬೆಯು ಹಳ್ಳೇ ಮನೋಹರವಾಗಿ ಕಾಣುತ್ತಿತ್ತು. ಶಿವಸಮುದ್ರವು ಅರಣ್ಯಮಧ್ಯದಲ್ಲಿರುವದರಿಂದ ಸುತ್ತಲೂ ದೊಡ್ಡ ದೊಡ್ಡ ಗುಡ್ಡಗಳೂ, ಅವುಗಳ ದರಿ-ಕಂದರಗಳಲ್ಲಿ ಹುಲಿ, ಚಿರ್ಚ ಮುಂತಾದ ಹಿಂಸ್ರಪಶುಗಳೂ ಇರುತ್ತವೆ ಆದಬಾದ ನಮ್ಮ ದೇವಗಣಗಳು ಆ ಸಾಯಂಕಾಲದ ಸಮಯದಲ್ಲಿ ನವಿೂಪಕ್ಕೆ ಹೋಗಿ ಧಬಧಬೆಯನ್ನು ನೋಡುವ ಉಸಾಬರಿಯನ್ನು ಮಾಡಲಿಲ್ಲ

ಈಗ ಶಿವಸಮುದ್ರದ ಇಲೆಕ್ಟ್ರಿಕ್‌ಪಾವರ ಹೌಸ ಎಲ್ಲಿ ಕಟ್ಟಲ್ಪಟ್ಟಿರುತ್ತದೆಯೋ, ಅಲ್ಲಿ ಹಿಂದಕ್ಕೆ ಜನವಸತಿ ಇರಲಿಕ್ಕಿಲ್ಲವೆಂಬದು ಸಹಜವು; ಆದರೆ ಈಚೆಗೆ ಅಲ್ಲಿ ೧೦೦೦ದ ವರೆಗೆ ಜನವಸತಿಯಿರುತ್ತದೆ. ಆ ವಸತಿಯೆಲ್ಲ ಅಲ್ಲಿಯ ಪಾವರಹೌಸಿನಲ್ಲಿ ದುಡಿಯುವ ಕೆಲಸಗಾರರದೇ ಆಗಿರುತ್ತದೆ. ಮೈಸೂರ ಸರಕಾರದಿಂದ ಆ ಜನರಿಗೆ ಅವರವರ ದರ್ಜೆಯ ಪ್ರಕಾರ ಇರಲಿಕ್ಕೆ ಮನೆಗಳೂ, ನೀರಿನ ನಲ್ಲಿಗಳೂ, ವಿದ್ಯುಲ್ಲಾಯಿಟುಗಳೂ ಪುಕ್ಕಟೆಯಾಗಿ ಕೊಡಲ್ಪಟ್ಟಿರುತ್ತವೆ. ಶಿವಸಮುದ್ರವು ಅರಣ್ಯಮಧ್ಯದಲ್ಲಿರುವದರಿಂದ ಅಲ್ಲಿ ಮಲೇರಿಯಾದ ಉಪದ್ರವವು ಬಹಳ.

ಯಾವ ಸ್ಥಳದಲ್ಲಿ ಕಾವೇರಿಹೊಳೆಯು ೪೦೦ ಅಡಿಗಳಿಂದ ಕೆಳಕ್ಕೆ ದುಮುಕುತ್ತಿದೆಯೋ ಆ ಸ್ಥಳವು ಪಾವರಹೌಸ ಕಟ್ಟಲಿಕ್ಕೆ ಅನುಕೂಲವಾಗಿರುವದಿಲ್ಲಾದ್ದರಿಂದ ಅದನ್ನು ಆ ಸ್ಥಳದಿಂದ ಸರಾಸರಿ ಮುಕ್ಕಾಲು ಮೈಲಿನ ಮೇಲೆ ನದಿಯ ಪಾತ್ರದ ಬಳಿಯಲ್ಲಿ ಕಟ್ಟಿರುತ್ತಾರೆ. ಶಿವಸಮುದ್ರದಿಂದ ಸರಾಸರಿ ೪ ಮೈಲಿನ ಅಂತ

ರದ ಮೇಲೆ ಕಾವೇರಿಹೊಳೆಗೆ ಒಂದು ಒಡ್ಡು ಕಟ್ಟಿರುತ್ತಾರೆ; ಹಾಗು ಅಲ್ಲಿಂದ ಸಮಾಂತರದ ಮೇಲೆ ಎರಡು ಕಾಲುವೆಗಳನ್ನು ಕಲ್ಪಿಸಿ, ಅವನ್ನು ಶಿವಸಮುದ್ರದ ವರೆಗೆ ತಂದಿರುತ್ತಾರೆ ಆ ಕಾಲುವೆಗೆಳನ್ನು ಒಂದು ಕೊಳ(ಟಾಕಿ)ದಲ್ಲಿ ತಂದು ಬಿಟ್ಟಿರುತ್ತಾರೆ. ಆ ಕೊಳದ ಎರಡನೆಯ ಮಗ್ಗಲಿಗೆ ಆ ಗುಡ್ಡದ ಕಟವಾಡಿಯಿರುತ್ತದೆ. ಆ ಭಯಂಕರ ಕಟವಾಡಿಯು ಕೆಳಗಿನ ನದಿಯ ಪಾತ್ರದ ವರೆಗೆ ನೀಟಾಗಿರುತ್ತದೆ. ಆ ಕೊಳಗಳೊಳಗಿನ ನೀರು ದೊಡ್ಡ ದೊಡ್ಡ ನಳಗಳಿಂದ ಕೆಳಗಿನ ಪಾವರಹೌಸಿಗೆ ಒಯ್ಯಲ್ಪಟ್ಟಿದೆ. ಆ ನಳಗಳಲ್ಲಿ ನೀರನ್ನು ಹೆಚ್ಚು ಕಡಿಮೆಯಾಗಿ ಬಿಡುವ ಸಲುವಾಗಿ ಅದರ ಬಾಯಿಗೆ ಯಂತ್ರಗಳ ಸಹಾಯದಿಂದ ಮುಚ್ಚು-ತೆರೆಯಲಿಕ್ಕೆ ಬರುವ ಪಡದೆಗಳಂಥ (Gates) ಬಾಗಿಲುಗಳ ಯೋಜನೆಯನ್ನು ಮಾಡಿರುತ್ತಾರೆ. ವಿದ್ಯುತ್ತು ಉತ್ಪನ್ನವಾಗಲಿಕ್ಕೆ ಎಷ್ಟು ನೀರು ಅವಶ್ಯಕವೋ, ಅಷ್ಟೇ ನೀರನ್ನು ಆ ಕಾಲುವೆಯೊಳಗಿಂದ ಬಿಡುತ್ತಾರೆ. ಬೇಸಿಗೆಯಲ್ಲಿ ನೀರು ಕಡಿಮೆ ಬೀಳಬಾರದೆಂದು ಹೆಚ್ಚು ನೀರನ್ನು ಒಡ್ಡಿನಲ್ಲಿ ಸಂಚಯಿಸುತ್ತಾರೆ ಮಳೆಗಾಲದಲ್ಲಿ ಮಾತ್ರ ಒಡ್ಡಿನ ಮೇಲೆ ಹಾಯ್ದು ಹೋಗುವ ನೀರೆಲ್ಲ ಹರಿದು ಬಂದು ಆ ೪೦೦ ಫೂಟು ಎತ್ತರದ ಧಬಧಬೆಯ ಮೇಲಿಂದ ಕೆಳಗೆ ದುಮುಕುತ್ತದೆ ಆದ್ದರಿಂದ ಅದರ ನೈಸರ್ಗಿಕ ಸೊಬಗು ಮಳೆಗಾಲದಲ್ಲಿ ಮಾತ್ರ ಕಾಣಬರುವದು.

ಮೇಲೆ ವಿವರಿಸಿದ ನಳಗಳೊಳಗಿಂದ ನೀರು ಕೆಳಗ ಧುಮುಕುವಲ್ಲಿ ಒಂದು ಪ್ರಚಂಡ ವ್ಯಾಸದ ತಿರುಗುವ ಗಾಲಿಯು ನಿಲ್ಲಿಸಲ್ಪಟ್ಟಿದೆ. ಆ ಗಾಲಿಯ ಅಚ್ಚಿಗೆ ಉಕ್ಕಿನಿಂದ ಜೋಡಿಸಲ್ಪಟ್ಟ ದೊಡ್ಡ ದೊಡ್ಡ ಪಡದೆಗಳಿರುತ್ತವೆ ಆ ನಳದೊಳಗಿಂದ ಒಳ್ಳೇ ವೇಗವಾಗಿ ಬರುವ ನೀರು ಆ ಪಡದೆಗಳ ಮೇಲೆ ಬೀಳುವದರಿಂದ ಆ ಅಚ್ಚು ತಿರುಗುತ್ತದೆ; ಹಾಗು ಅಚ್ಚಿಗೆ ಹೊಂದಿಸಲ್ಪಟ್ಟ ಆ ಪ್ರಚಂಡ ವ್ಯಾಸದ ಗಾಲಿಯೂ ತಿರುಗಹತ್ತುತ್ತದೆ ಆ ಗಾಲಿಗೆ ತೊಗಲಿನ ಪಟ್ಟಿಗಳನ್ನು ಜೋಡಿಸಿರುವದರಿಂದ ದೊಡ್ಡ ದೊಡ್ಡ ಎಂಜಿನ್ನುಗಳು ನಡೆಯುತ್ತವೆ ಅವುಗಳ ಶಕ್ತಿಯಿಂದ ಪ್ರಚಂಡವಾದ ವಿದ್ಯುತ್ತು ಉತ್ಪನ್ನವಾಗುತ್ತದೆ. ಆ ವಿದ್ಯುತ್ತನ್ನು ಉಂಟು ಮಾಡಿ ಶೇಖರಿಸಿಡಲಿಕ್ಕೂ, ಅದನ್ನು ಬೇಕಾದ ಕಡೆಗೆ ಸಾಗಿಸಲಿಕ್ಕೂ

ಕಾವೇರಿತೀರದಲ್ಲಿ ಒಂದು ಬಹುದೊಡ್ಡ ಹಾಲ್ ಕಟ್ಟಿಸಲ್ಪಟ್ಟಿರುತ್ತದೆ. ಆ ಹಾಲಿನಲ್ಲಿಯು ೧೫ ಇಂಜಿನುಗಳೂ ಅವಕ್ಕೆ ಜೋಡಿಸಲ್ಪಟ್ಟ ವಿದ್ಯುಜ್ಜನಕಗಳೂ ಪ್ರೇಕ್ಷಣೀಯಗಳಾಗಿವೆ. ಆ ಹದಿನೈದು ಇಂಜಿನಗಳು ಸರಾಸರಿ ೨೫ ಸಾವಿರ ಹಾರ್ಸಪಾವರಿನಿಂದ ತಿರುಗುತ್ತಿರುತ್ತವೆ ಶಿವಸಮುದ್ರದಲ್ಲಿ ದಿನಾಲು ೧೬ ಸಾವಿರ ಹಾರ್ಸಪಾವರಿನ ವಿದ್ಯುತ್ತು ಉತ್ಪನ್ನವಾಗುತ್ತಿರುತ್ತದೆ ಅಲ್ಲಿ ಉತ್ಪನ್ನವಾಗುವ ಎಲ್ಲ ವಿದ್ಯುತ್ತು ತಾಮ್ರದ ಮೂರು ಸಮಾಂತರ ಪಟಲುಗಳ ದ್ವಾರಾ ಗುಡ್ಡದ ಮೇಲಿರುವ ಟ್ರಾನ್ಸಫರಿಂಗ ಸ್ಟೇಶನ್ನಿಗೆ ಒಯ್ಯಲ್ಪಡುತ್ತದೆ

ಗುಡ್ಡದ ಮೇಲಿರುವ ಆ ಸ್ಟೇಶನ್ನಿನಲ್ಲಿ ನಟ್ಟನಡುವೆ ಬಹುದೊಡ್ಡದಾದ ಒಂದು ಸಂಗಮರವರೀಕಲ್ಲಿನ ಮೇಜು ಇರುತ್ತದೆ. ಅದಕ್ಕೆ ಅಲ್ಲಲ್ಲಿ ಅಂಗಿಗಳ ಗುಂಡಿಗಳಂಥ ದೊಡ್ಡ ದೊಡ್ಡ ಸಂಗಮರವರಿ ಬಟನ್ನುಗಳು ಜೋಡಿಸಲ್ಪಟ್ಟಿದ್ದು, ಪ್ರತಿಯೊಂದು ವಿದ್ಯುಜ್ಜನಕದಿಂದ ಎಷ್ಟು ವಿದ್ಯುತ್ತು ಉತ್ಪನ್ನವಾಗುವದೆಂಬದು ಅವುಗಳನ್ನು ನೋಡಿದರೆ ತಿಳಿದು ಬರುತ್ತದೆ; ಮತ್ತು ಹೊರಗೆ ಎಲ್ಲೆಲ್ಲಿಗೆ ಎಷ್ಟೆಷ್ಟು ವಿದ್ಯುಚ್ಛಕ್ತಿಯು ಪೂರೈಸಲ್ಪಡುತ್ತದೆಂಬದೂ, ಈ ವರೆಗೆ ಎಷ್ಟು ಶಕ್ತಿಯು ಉತ್ಪನ್ನವಾಗಿ ವೆಚ್ಚವಾಯಿತೆಂಬದೂ ಅಲ್ಲಿಯೇ ಒತ್ತಟ್ಟಿಗಿರುವ ಅಂಥ ಬೇರೊಂದು ಮೇಜಿನ ಮೇಲಿನ ಬಟ್ಟನ್ನುಗಳಿಂದ ತಿಳಿದುಬರುತ್ತದೆ.

ದೇವತೆಗಳು ಮರುದಿನ ಶಿವಸಮುದ್ರದೊಳಗಿನ ಮೇಲೆ ವಿವರಿಸಿದ ಎಲ್ಲ ನೋಟಗಳನ್ನು ಕಣ್ಣಾರೆ ಕಂಡು ಸಂಜೆಯ ಮುಂದೆ ಒಂದು ಝಟಕಾಬಂಡಿಯನ್ನು ಮಾಡಿಕೊಂಡು ಮದ್ದೂರ ಸ್ಟೇಶನ್ನಿಗೆ ನಡೆದರು.

---

## ಫ್ರೆಂಚರಾಕ್ಸ (ಹಿರೋಡೆ)

ಶಿವಸಮುದ್ರದಿಂದ ಹೊರಟ ದೇವಗಣಗಳು ಮದ್ದೂರ ವರೆಗಿನ ೧೦ ಮೈಲಿನ ಪ್ರವಾಸವನ್ನು ಆ ಮೈಸೂರ ಸೀಮೆಯ ಝಟಕಾಬಂಡಿಯಲ್ಲಿ ಮೈಗೆಲ್ಲ ಝಟಕಾ ಹೊಡಿಸಿಕೊಳ್ಳುತ್ತ ಕ್ರಮಿಸಿ ಸಾಯಂಕಾಲದ ೮ ಗಂಟೆಗೆ ಮದ್ದೂರ ಸ್ಟೇಶನ್ನಿಗೆ ಬಂದು ಸೇರಿದರು.

ಮದ್ದೂರಿಂದ ಹಿರೋಡೆಗೆ ಹೋಗುವ ರೈಲು ರಾತ್ರಿ ೩ ಗಂಟೆಯು ಸಮಯಕ್ಕೆ ಬರುವದಿತ್ತು. ಆದ್ದರಿಂದ ದೇವಗಣಗಳು ಸಮೀಪದ ಛತ್ರದಲ್ಲಿ ಸಾಯಂಕಾಲದ ಆಹ್ನಿಕವನ್ನು ತೀರಿಸಿಕೊಂಡರು; ಹಾಗು ಸ್ಟೇಶನ್ನಿನಲ್ಲಿಯ ಪ್ರಶಸ್ತವಾದ ಹಿಂದೂ ಹೋಟಲಲ್ಲಿ ಉಪಹಾರವನ್ನು ಮಾಡಿಕೊಂಡು, ವೇಟಿಂಗರೂಮಿನಲ್ಲಿ ಪವಡಿಸಿದರು. ಅಂದು ಅವರು ೪೦ ಮೈಲಿನ ಪ್ರವಾಸವನ್ನು ಝಟಕಾ ಬಂಡಿಯಲ್ಲಿ ಮಾಡಿ ಬಂದುದರಿಂದ ಅವರ ಮೈ ನೋವಾಗಿದ್ದವು. ಅದರಿಂದ ಅವರಿಗೆ ಗಾಢವಾಗಿ ನಿದ್ರೆಹತ್ತಿತ್ತು. ಅವರು ಹೋಗುವ ರೈಲು ಬಂದು ಪ್ಲಾಟಫಾರ್ಮಿನ ಮೇಲೆ ನಿಂತರೂ ಅವರಿಗೆ ಎಚ್ಚರವಾಗಲಿಲ್ಲ. ಮದ್ದೂರಲ್ಲಿ ಪ್ರತಿಯೊಂದು ಗಾಡಿಗಳು ಸರಾಸರಿ ಅರ್ಧತಾಸಿನ ವರೆಗೆ ನಿಲ್ಲುವವಾದ್ದರಿಂದ ಅಂದು ಅವರಿಗೆ ಆ ಗಾಡಿಯು ಸಿಕ್ಕಿತು. ಗಾಡಿ ಬಂದು ನಿಂತಮೇಲೆ ಇಳಿದ ಪ್ರಯಾಣಿಕರ ಗದ್ದಲದ ಮೂಲಕ ವೃದ್ಧನಾದ ಬ್ರಹ್ಮನಿಗೆ ಮೊದಲು ಎಚ್ಚರವಾಯಿತು ಕೂಡಲೆ ಅವನು ನಾರಾಯಣಾದಿ ಸಂಗಡಿಗರನ್ನು ಎಬ್ಬಿಸಿದನು. ಬಳಿಕ ಅವರು ಅವಸರದಿಂದ ಎದ್ದು ಫ್ರೆಂಚರಾಕ್ಸಿನ ತಿಕೀಟುಗಳನ್ನು ಕೊಂಡುಕೊಂಡು ಗಾಡಿಯನ್ನು ಹತ್ತಿದರು. ಅಷ್ಟರಲ್ಲಿ ಗಾಡಿಯೂ ಹೊರಟಿತು; ಆದರೆ ತಿಕೀಟು ಕೊಳ್ಳುವಾಗ ವರುಣನು ತಿಕೀಟ ಮಾಸ್ತರನ ಕಡೆಗೆ ಕೊಟ್ಟ ೧೦ ರೂಪಾಯಿಗಳ ನೋಟಿನಲ್ಲಿ ಮದ್ದೂರಿನಿಂದ ಹಿರೋಡೆಯ ನಾಲ್ಕು ತಿಕೀಟಿನ ಬಗ್ಗೆ ೨ ರೂಪಾಯಿ ಮುರಕೊಂಡು ಬಾಕಿ ೮ ರೂಪಾಯಿಗಳನ್ನು ಅವನು ಇವನಿಗೆ ಕೊಡಲಿಲ್ಲ. ಇವನಾದರೂ ನಿದ್ರೆಗಣ್ಣಿನಲ್ಲಿ ಕೊಡೆಂದು ಅವನನ್ನು ಕೇಳಲಿಲ್ಲ. ಗಾಡಿಯಲ್ಲಿ ಕುಳಿತ ಬಳಿಕ ದೇವಗಣಗಳಲ್ಲಿ ದುಡ್ಡಿನ ಲೆಕ್ಕ ನಡೆದಾಗ ಮದ್ದೂರಲ್ಲಿಯ ಮೈಸೂರ ಸೀಮೆಯ ಮಾಸ್ತರನು ತಮಗೆ ಚೆನ್ನಾಗಿ ಕೈ ತೋರಿಸಿದನೆಂದು ಅಂದುಕೊಂಡು ಬಹಳವಾಗಿ ಹಳಹಳಿಸಿದರು!

ಸರಾಸರಿ ಐದು ಗಂಟೆಗೆ ಆ ಗಾಡಿಯು ಫ್ರೆಂಚರಾಕ್ಸಿಗೆ ಬಂದಿತು. ಆಗ ಬೇಸಿಗೆಯ ಕಾಲವಾದ್ದರಿಂದ ಆ ವೇಳೆಗೆ ನಿಚ್ಚಳವಾಗಿ ಕಾಣಿಸಹತ್ತಿತು. ಕೂಡಲೆ ದೇವತೆಗಳು ಗಾಡಿಯಿಂದಿಳಿದು ಸಮೀಪದ ಛತ್ರಕ್ಕೆ ಹೋದರು. ಫ್ರೆಂಚರಾಕ್ಸ (ಹಿರೋಡೆ) ಎಂಬ ಊರು ಅಷ್ಟೊಂದು ದೊಡ್ಡದಲ್ಲ. ೧೮ನೇ ಶತಕದ ಅಂತ್ಯಭಾಗದಲ್ಲಿ ಆ ಊರ ಹತ್ತರ ಫ್ರೆಂಚರಿಗೂ ಇಂಗ್ಲಿಷರಿಗೂ ಕಡುಕಾಳಗವಾಯಿತು.

ತು. ಆ ಕಾಳಗದಲ್ಲಿ ಇಂಗ್ಲಿಷರಿಗೆ ಜಯವಾಗಲು ಬಹುದೂರದ ವರೆಗೆ ಕಾಣುವಂಥ ಒಂದು ಎತ್ತರವಾದ ವಿಜಯಸ್ತಂಭವು ಆ ಫ್ರೆಂಚ ರಾಕ್ಸ=ಫ್ರೆಂಚರು ತಳವೂರಿದ್ದ ಗುಡ್ಡದ ಬದಿಯಲ್ಲಿ (ಹಿರೋಡೆ ಯೆಂಬ ಗ್ರಾಮದ ಹತ್ತರ) ಇಂಗ್ಲಿಷರಿಂದ ನಿಲ್ಲಿಸಲ್ಪಟ್ಟಿರುತ್ತದೆ.

ದೇವಗಣಗಳು ಛತ್ರದಲ್ಲಿ ಪ್ರಾತರ್ವಿಧಿ, ಸ್ನಾನ ಆಹ್ನಿಕಗೆ ಳನ್ನು ಮುಗಿಸಿಕೊಂಡರು; ಹಾಗು ಹತ್ತು ಗಂಟೆಯಾಗುವಷ್ಟರಲ್ಲಿ ಅಡಿಗೆ-ಊಟಗಳನ್ನೂ ತೀರಿಸಿಕೊಂಡರು. ನಂತರ ಅವರು ಆ ರಣ ಭೂಮಿಯನ್ನು ನೋಡಹೋದರು. ಆ ವಿಸ್ತಾರವಾದ ಕಾಳು ರಣಭೂಮಿಯಲ್ಲಿ ಈಗ ವಿಶೇಷವೇನೂ ಇರುವದಿಲ್ಲ. ಆ ವಿಜಯ ಸ್ತಂಭದ ಮೇಲೆ "ಇಂಥ ಇಸವಿಯಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಇಲ್ಲಿ ದೊಡ್ಡ ಯುದ್ಧವಾಯಿತು. ಫ್ರೆಂಚರಿಗೆ ಟೀಪೂಸುಲ್ತಾನನ ಪ್ರಚಂಡ ಸೈನ್ಯದ ಬೆಂಬಲವಿದ್ದರೂ ಇಂಗ್ಲಿಷವೀರರು ತಮ್ಮ ಅಲ್ಪ ಸೈನ್ಯದಿಂದಲೇ ಅವರನ್ನು ಹಣ್ಣುಗಾಯಿ-ನೀರಗಾಯಿ ಮಾಡಿ ಬಿಟ್ಟ ರು; ಹಾಗು ರಣದೇವತೆಯು ಜಯಶಾಲಿಯಾದ ತಮಗೇ ಮಾಲೆ ಹಾಕಿದಳು," ಇತ್ಯಾದಿ ಸಂಗತಿಗಳು ಬರೆಯಲ್ಪಟ್ಟಿವೆಯಂತೆ! ಅವ ನ್ನೆಲ್ಲ ನೋಡಿಕೊಂಡು ಬರುತ್ತಿರುವಾಗ ಬ್ರಹ್ಮನ ಲಕ್ಷ್ಯವು ನೈಋತ್ಯ ದಿಕ್ಕಿನ ಎತ್ತರವಾದ ಗುಡ್ಡದ ಕಡೆಗೆ ಹೋಗಲು, ಅಲ್ಲಿ ವಿಸ್ತಾರ ವಾಗಿ ಹಬ್ಬಿದ ನೀರು, ಅದರ ಸುತ್ತಲೂ ಎಷ್ಟೋ ರಾಹುಟಿ, ಚಿಕ್ಕ ಚಿಕ್ಕ ಗುಡಿಸಲು ಹಾಗು ಜನಸಮುದಾಯ ಇವುಗಳನ್ನು ನೋಡಿ ದನು. ಆಗ ಅವನು ವರುಣನನ್ನು ಕುರಿತು ಆ ವಿಷಯವಾಗಿ ಕೇಳಿ ಕೊಳ್ಳಲು, ವರುಣನು:—ಅಜ್ಜಾ, ಇಲ್ಲಿಂದ ೪-೫ ಮೈಲುಗಳ ಮೇಲೆ ಕಾವೇರಿ ಹೊಳೆಗೆ ಕನ್ನಂಬಾಡಿಯ ಹತ್ತರ ಭವ್ಯವಾದ ಕಟ್ಟು ಕಟ್ಟು ತ್ತಿರುವರು. ಆ ಕೆಲಸಕ್ಕೆ ಸಂಬಂಧಿಸಿದ ಉತ್ತರಕಡೆಯ (ನಾರ್ಥ ಬ್ಯಾಂಕ)ನೋಟವೇ ಇದು ನಾವು ಹ್ಯಾಗೂ ಇನ್ನು ಕೆಲದಿನಗಳಲ್ಲಿ ಅಲ್ಲಿಗೇ ಹೋಗಬೇಕಾಗಿದೆ, ನಡೆಯಿರಿ, ಎಂದನು.

ಅಂದು ಸಾಯಂಕಾಲ ಅವರು ಅಲ್ಲಿಯ ಛತ್ರದಲ್ಲಿಯೇ ಭೋಜನಾದಿಗಳನ್ನು ಮಾಡಿಕೊಂಡು ಮಲಗಿದರು. ನಸುಕಿನಲ್ಲಿ ಎದ್ದು, ಒಂದು ಝಟಕಾಬಂಡಿಯನ್ನು ಮಾಡಿಕೊಂಡು, ಅಲ್ಲಿಗೆ ಸಮೀಪವಾಗಿರುವ ಮೇಲುಕೋಟೆ ಎಂಬಲ್ಲಿಗೆ ಹೋಗಿ ಅಲ್ಲಿಯ ದೇವಸ್ಥಾನಗಳನ್ನು ನೋಡಿಕೊಂಡು ಮಧ್ಯಾಹ್ನಕ್ಕೆ ಹಿರೋಡೆಗೆ

ಬರುವಷ್ಟರಲ್ಲಿ ಶ್ರೀರಂಗಪಟ್ಟಣದ ಕಡೆಗೆ ಹೋಗುವ ಶಟಲ್ (ಮಿಕ್ಸಡ)ಗಾಡಿಯು ಸ್ಟೇಶನ್ನಿನಲ್ಲಿ ಬಂದು ನಿಂತಿತ್ತು. ಕೂಡಲೆ ತಿಕೀಟುಗಳನ್ನು ಕೊಂಡುಕೊಂಡು ಅವರು ಆ ಗಾಡಿಯನ್ನು ಆರೋಹಿಸಿದರು. ಮುಂದೆ ಅರ್ಧಗಂಟೆಯೊಳಗೆ ಆ ಮಂದಗತಿಯ ರೈಲು ಪಟ್ಟಣದ ಸ್ಟೇಶನ್ನಿಗೆ ಬಂದಿತು.

---

## ಶ್ರೀರಂಗಪಟ್ಟಣ.

ಪಟ್ಟಣದ ಸ್ಟೇಶನ್ನಿನಲ್ಲಿ ಪ್ರತಿಯೊಂದು ಗಾಡಿಗೂ ಏರಿಳಿಯುವ ಪ್ಯಾಸೆಂಜರರ ಗದ್ದಲವು ವಿಶೇಷವಾಗಿರುತ್ತದೆ. ಆ ಮಾನದಿಂದ ಅಲ್ಲಿಯ ಸ್ಟೇಶನ್ನಿನ ಇಮಾರತು ಚಿಕ್ಕದೆಂದೇ ಹೇಳಬಹುದು. ದೇವಗಣಗಳು ಗಾಡಿಯಿಂದಿಳಿದ ಕೂಡಲೆ ವರುಣನು ಅವರನ್ನು ಊರೊಳಗೆ ಕರಕೊಂಡು ಹೋಗಹತ್ತಿದನು. ಅಷ್ಟರಲ್ಲಿ ಸಮೀಪದಲ್ಲಿಯೇ ತುಸ ಮುಂದಕ್ಕೆ ಕಾಣುವ ಭವ್ಯವಾದ ಮಂದಿರವನ್ನು ಕಂಡು ಬ್ರಹ್ಮನು:—ಇದೇನು? ಇಷ್ಟು ದೊಡ್ಡ ಈ ಮಂದಿರದಲ್ಲಿ ಯಾರು ವಾಸಿಸುತ್ತಿರುವರು? ಎಂದು ಪ್ರಶ್ನ ಮಾಡಿದನು. ಕೂಡಲೆ ವರುಣನು ಊರ ಕಡೆಗೆ ಹೋಗುವ ದಾರಿಯನ್ನು ಬಿಟ್ಟುಕೊಟ್ಟು ಆ ಭವ್ಯವಾದ ಮಂದಿರದ ಕಡೆಗೆ ನಡೆದು:—ಅಜ್ಜಾ, ಇದು ಸುಪ್ರಸಿದ್ಧ ಶ್ರೀರಂಗನಾಥಸ್ವಾಮಿಯ ಮಂದಿರವು. ಇಲ್ಲಿ ಶ್ರೀರಂಗನಾಥನು ಶೇಷಶಾಯಿಯಾಗಿದ್ದು, ಶ್ರೀಲಕ್ಷ್ಮೀಮಾತೆಯು ಆತನ ಪಾದದೆಡೆಯಲ್ಲಿ ಕುಳಿತು ಪಾದವಂದನೆಗಳನ್ನು ಮಾಡುತ್ತಿರುವಳು, ಎಂದು ಹೇಳುತ್ತಿರುವಷ್ಟರಲ್ಲಿ ಅವರೆಲ್ಲರೂ ಆ ಗುಡಿಯ ವಿಶಾಲವಾದ ಪ್ರಾಕಾರವನ್ನು ಸೇರಿದರು.

ಉತ್ತರ ಕರ್ನಾಟಕಕ್ಕಿಂತ ದಕ್ಷಿಣಕರ್ನಾಟಕ, ಮೈಸೂರ, ಮದ್ರಾಸ ಸೀಮೆಗಳಲ್ಲಿಯ ಎಲ್ಲ ದೇವಸ್ಥಾನಗಳು ದೊಡ್ಡವೂ, ಉತ್ಪನ್ನಾದಿಗಳಿಂದ ಪುಷ್ಟವೂ ಆಗಿರುವವಲ್ಲದೆ, ಅವುಗಳಲ್ಲಿಯ ವ್ಯವಸ್ಥೆಯೂ ತಕ್ಕಮಟ್ಟಿಗೆ ಚೆನ್ನಾಗಿರುತ್ತದೆ. ಇನ್ನು ಮನುಷ್ಯಸ್ವಭಾವದ ವೈಚಿತ್ರ್ಯದಂತೆ ಕೆಲಕೆಲವು ದೇವಸ್ಥಾನಗಳಲ್ಲಿಯ

ಅಪ್ರಮಾಣಿಕ ವ್ಯವಸ್ಥಾಪಕ-ಪೂಜಾರಿಗಳ ಮೂಲಕ ನಮ್ಮ ಈ ಬರವಣಿಗೆಯು ನಿರಾಧಾರವೆಂದು ಕಂಡು ಬಂದರೂ, ಉಳಿದ ಬಹು ದೇವಸ್ಥಾನಗಳಲ್ಲಿ ಹಳ್ಳೀ ವ್ಯವಸ್ಥೆಯಿರುತ್ತದೆನ್ನಲಿಕ್ಕೆ ಬಾಧಕವಿಲ್ಲ.

ದೇವತೆಗಳು ಶ್ರೀರಂಗನಾಥನ ಧೂಲಿದರ್ಶನ ಮಾಡಿಕೊಂಡು ಆ ಭವ್ಯದೇವಾಲಯದಲ್ಲಿ ಅತ್ತಿತ್ತ ತಿರುಗಿ ನೋಡಿ, ಊರೊಳಗೆ ನಡೆದರು. ತುಸ ದೂರ ಹೋಗುವಷ್ಟರಲ್ಲಿ ಅವರ ಬಲಕ್ಕೆ ಕಾಮನ ಬಿಲ್ಲಿನಂಥ ಒಂದು ಡೊಂಕಾದ ಸೇತುವೆಯು ಕಾಣಿಸಿತು ಕೂಡಲೆ ದೇವಗಣಗಳು ಅದರ ಬಳಿಗೆ ಹೋಗಿ ನೋಡುತ್ತಾರೆ ಅದೊಂದು ಇಟ್ಟಂಗಿಯಿಂದ ಕಟ್ಟಲ್ಪಟ್ಟ ೩೦-೩೨ ಮೊಳ ಉದ್ದವಾದ ನಡುಮಟ ಎತ್ತರವಾದ ಪೂಲಾಗಿದ್ದು, ಅದಕ್ಕೆ ನಡುವೆ ಒಂದೂ ಕಂಬವಿಲ್ಲ ಅದು ಕಾಮಿನಬಿಲ್ಲಿನ ಹಾಗೆ ನಡುವೆ ತುಸ ಎತ್ತರವಾಗಿದ್ದು ಎರಡೂ ಮಗ್ಗಲು ಇಳಕಲಾಗಿರುತ್ತದೆ. ಅದರ ಮೇಲೆ ಹತ್ತಿ ಅಡ್ಡಾಡಿದರೆ ಅದು ಜೋಕಾಲಿಯಂತೆ ತುಸ ಅಲ್ಲಾಡಹತ್ತುತ್ತದೆ. ಅದನ್ನು ಟೀಪೂಸುಲ್ತಾನನ ಕಾಲದಲ್ಲಿ ಒಬ್ಬ (ವೆಲ್ಲಸ್ಲೀ) ಫ್ರೆಂಚ ಕಾರಾಗೀರನು ಕಟ್ಟಿರುವನು. ಈಗ ನೂರುವರ್ಷಗಳಿಂದ ಅದನ್ನು ಯಾರೂ ದುರಸ್ತ ಮಾಡದಿದ್ದರೂ, ಆ ವೆಲ್ಲಸ್ಲೀಬ್ರಿಡ್ಜು ಇದ್ದಹಾಗೇ ಇರುತ್ತದೆ. ಅದನ್ನು ನೋಡಿಕೊಂಡು ದೇವತೆಗಳು ಒಂದೇಒಂದು ಓಣಿಯಿಂದ ಯುಕ್ತವಾದ ಆ ಉದ್ದನ್ನ ಊರ ಆಚೆಬದಿಗಿರುವ ದರ್ಯಾದೌಲತ್ತಬಾಗಕ್ಕೆ ಹೋದರು. ಟೀಪೂಸುಲ್ತಾನನ ವಿಲಾಸ ಮಂದಿರವೇ ಆ ದರ್ಯಾದೌಲತ್ತಬಾಗವಾದ್ದರಿಂದ ಅದರ ಕಟ್ಟಡವೂ, ಸುತ್ತುಮುತ್ತಲಿನ ಉಪವನವೂ ಬಹು ಅಂದವಾಗಿರುವವು. ದೇವಗಣಗಳು ಅದನ್ನೆಲ್ಲ ನೋಡಿಕೊಂಡು ನದೀತೀರದಿಂದ ಬರುವಾಗ ಉತ್ತರದಿಕ್ಕಿನ ಘಾಟನ ಬಳಿಯಲ್ಲಿ ಇಂಗ್ಲಿಷರೊಡನೆ ಕಾದುವಾಗ ಟೀಪುವು ಎಲ್ಲಿ ಸತ್ತು ಬಿದ್ದಿದ್ದನೋ ಆ ಸ್ಥಳವನ್ನೂ, ಇತರ ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಿಕೊಂಡು ಪುನಃ ಸ್ಟೇಶನ್ನಿನ ಬಳಿಗೆ ಬಂದರು. ಅಲ್ಲಿ ತುಸ ವಿಶ್ರಮಿಸಿ ಸ್ಟೇಶನ್ನಿನ ಪಶ್ಚಿಮಭಾಗದಲ್ಲಿರುವ ಮದ್ದಿನ ಕೋಠಿಗಳನ್ನು ನೋಡಿದರು. ನಂತರ ವರುಣನು ಅವರಿಗೆ ಶ್ರೀರಂಗಪಟ್ಟಣವನ್ನು ಟೀಪುವು ಯಾವಾಗ ಕಟ್ಟಿಸಿದನೆಂಬದನ್ನೂ, ಶ್ರೀರಂಗನಾಥನು ಟೀಪುವಿಗೆ ಒಲಿದಿದ್ದ ಸಂಗತಿಯನ್ನೂ, ಪೂರ್ಣಯ್ಯನಂಥ ಅದ್ವಿತೀಯ ಮಂತ್ರಿಯಲ್ಲಿ ದ್ರೋಹವನ್ನು

ಬಗೆದದ್ದರಿಂದ ಮುಂದೆ ಟೀಪುವು ಯಾವ ಅನರ್ಥಕ್ಕೆ ಈಡಾಗಬೇಕಾಯಿತೆಂಬ ವಿಷಯವನ್ನೂ ತಿಳಿಸಿದನಲ್ಲದೆ, ಇಂಗ್ಲಿಷರಿಗೂ ಟೀಪೂವಿಗೂ ಆದ ಮೂರು ಕಾಳಗಗಳ ಇತ್ಯರ್ಥವನ್ನು ತಿಳಿಸಿ, ಟೀಪುವಿನ ತರುವಾಯ ಇಂಗ್ಲಿಷರು ಈ ಮೈಸೂರ ರಾಜ್ಯವನ್ನು ವಿಜಯನಗರದ ಮೂಲವಂಶಜರಿಗೆ ಕೊಟ್ಟ ವಿಷಯವನ್ನೂ ನಿವೇದಿಸಿದನು.

ಬಳಿಕ ಅವರು ಅಂದೇ ರಾತ್ರಿಯ ಗಾಡಿಗೆ ಅಲ್ಲಿಂದ ಮುಕ್ಕಾಲು ಮೈಲಿನ ಮೇಲಿರುವ ಪಶ್ಚಿಮವಾಹಿನಿಯೆಂಬ ಕಾವೇರಿಯ ಪುಣ್ಯತಮತೀರ್ಥದ ಸ್ಟೇಶನ್ನಿನಲ್ಲಿಳಿದು, ಮರುದಿನ ಅಲ್ಲಿ ಸ್ನಾನ-ತರ್ಪಣಾದಿಗಳನ್ನು ತೀರಿಸಿಕೊಂಡರು; ಹಾಗು ಪ್ರಾತಃಕಾಲದ ಒಂಬತ್ತು ಗಂಟೆಯ ರೈಲಿನಲ್ಲಿ ಕುಳಿತು ಮೈಸೂರ ರಾಜಧಾನಿಗೆ ನಡೆದರು.

---

## ಮೈಸೂರ.

ಆ ಗಾಡಿಯು ಬಹು ಮಂದವಾಗಿ ಸಾಗುತ್ತ, ನಡನಡುವೆ ನಿಲ್ಲುತ್ತ ಸರಿಯಾಗಿ ಹತ್ತುಗಂಟೆಗೆ ಮೈಸೂರ ರೇಲ್ವೆಸ್ಟೇಶನ್ನಿಗೆ ಬಂದು ನಿಂತಿತು. ಕೂಡಲೆ ದೇವಗಣಗಳು ಇಳಿದು, ತಮ್ಮ ಗಂಟು ಮೊಟ್ಟೆಗಳನ್ನು ಹೊತ್ತುಕೊಂಡು ಸಮೀಪದಲ್ಲಿರುವ ನಂಜರಾಜ ಬಹದ್ದೂರರ ಛತ್ರಕ್ಕೆ ನಡೆದರು. ದಾರಿಯಲ್ಲಿ ರೇಲ್ವೆಲಾಯಿನ್ನಿನ ಪಕ್ಕದಲ್ಲಿ ಒಂದು ಶ್ರೀಮಂತರಿಗೆನುಕೂಲವಾದ ಸುಧಾರಿಸಿದ ಹೋಟೆಲು ಅವರಿಗೆ ಕಾಣಿಸಿಕೊಂಡಿತು ನಾರಾಯಣಾದಿಗಳ ಮನಸ್ಸಿನಲ್ಲಿ ಆ ಛತ್ರದಲ್ಲಿಯೇ ಇಳಕೊಳ್ಳಬೇಕೆಂದಿತ್ತು; ಆದರೆ ವೈದಿಕಾಚರಣೆಯಲ್ಲಿ ಕೇವಲ ನಿಷ್ಠಾವಂತನಾದ ಬ್ರಹ್ಮನಿಗೆ ಆ ಸರ್ವಸಂಕರಮಯವಾದ ನೂತನ ಹೋಟಲು ಹಿಗ್ಗುವ ಬಗೆ ಹೇಗೆ? ಅದರಿಂದ ಅವರು ಮನದಲ್ಲಿ ಮಿಡುಕುತ್ತ ಅವನ ಬೆನ್ನು ಹತ್ತಿ ನಂಜರಾಜ ಬಾಹದ್ದರರ ಛತ್ರಕ್ಕೇ ನಡೆದರು. ಆ ಪ್ರಶಸ್ತವಾದ ಛತ್ರದ ಪಾರುಪತ್ಯಗಾರನು ಇವರಿಗೆ ಬೇಕಾಗಿದ್ದ ಬೇರೆ ಅನುಕೂಲತೆಗಳೆನ್ನೆಲ್ಲವನ್ನೂ ಒದಗಿಸಿ ಕೊಟ್ಟನು ಕೂಡಲೆ ಅವರು ಸ್ನಾನ-ಆಹ್ನಿಕ-ಅಡಿಗೆ-ಊಟಗಳಲ್ಲಿ ಮಗ್ನರಾದರು.

ಭೋಜನೋತ್ತರ ತುಸ ವಿಶ್ರಮಿಸಿ, ಬಳಿಕ ಅವರು ನಗರ ಪ್ರೇಕ್ಷಣೆಗಾಗಿ ಹೊರಟರು. ಛತ್ರಕ್ಕೆ ಸಮೀಪದಲ್ಲಿರುವ ಗೆಸ್ಟನ ಹೌಸುಗಳು ಮೊದಲು ಅವರಿಗೆ ಸಿಕ್ಕವು ಅವನ್ನು ನೋಡಿಕೊಂಡು ಅವುಗಳ ಪ್ರಶಸ್ಥ ಪ್ರಾಕಾರ, ಸುಶೋಭಿತಗಳಾದ ಕಟ್ಟಡ, ಉಪವನ ಮುಂತಾದವುಗಳ ವಿಷಯವಾಗಿ ಸೋಜಿಗಪಡುತ್ತ ನಡೆದಿರಲು, ಹೆಂಗಸರ ಆಸ್ಪತ್ರಿಯನ್ನು ಕಂಡರು. ಲೇಡೀಮೆಡಿಕಲ್ ಆಫೀಸರರಿಂದ ಪರವಾನಿಗೆ ತಕ್ಕೊಂಡು ಅಲ್ಲಿ ಗಂಡಸರು ನೋಡಬಹುದಾದ ಎಲ್ಲ ಭಾಗಗಳನ್ನೂ ನೋಡಿದರು. ಇಂಥ ಆಸ್ಪತ್ರಿಯನ್ನು ತನ್ನ ರಾಜ್ಯದಲ್ಲಿ ಕೂಡಲೆ ಸ್ಥಾಪಿಸುವ ಎತ್ತುಗಡೆ ಮಾಡುವದೆಂದು ಇಂದ್ರನು ಮನಸಾ ನಿಶ್ಚಯಿಸಿಕೊಂಡನು.

ಮುಂದೆ ಹೋಗುವಷ್ಟರಲ್ಲಿ ಅವರಿಗೆ ಒಂದು ವಿಶಾಲವಾದ ಕಟ್ಟಡವು ಹತ್ತಿತು. ಅದು 'ಮಹಾರಾಣೀ ಕಾಲೇಜ' ಎಂಬಭಿಧಾನದ ವಿದ್ಯಾಲಯವಾಗಿತ್ತು. ಅದರಲ್ಲಿ ಎಲ್ಲರಿಗೂ ಪ್ರವೇಶವಿರದ್ದರಿಂದ ಇಂದ್ರನು ತಮ್ಮೂರ ಮೇನಿಕೆ, ರಂಭೆ ಮೊದಲಾದ ಲಲನಾಮಣಿಗಳ ಅಪ್ತ್ವವನ್ನು ಸಿದ್ಧಮಾಡಿಕೊಟ್ಟು, ಆ ಶಾಲೆಯನ್ನು ನೋಡಿ ಬರುವ ಪರವಾನಿಗೆಯನ್ನು ಪಡಕೊಂಡನು. ಒಳಗೆ ಪ್ರವೇಶಿಸಿ ನೋಡುತ್ತಾರೆ, ಅಲ್ಲಿ ೮-೧೦ ವರ್ಷಗಳ ವಯಸ್ಸಿನ ಬಾಲಿಕೆಯರಿಂದ ೩೦-೩೫ ವರ್ಷ ವಯಸ್ಸಿನ ಪ್ರೌಢಸ್ತ್ರೀಯರ ವರೆಗೆ ನೂರುಗಟ್ಲೆ ವಿದ್ಯಾರ್ಥಿನಿಯರಿದ್ದರು. ಅವರಲ್ಲಿ ಕೆಲವರು ಕೇವಲ ದೇಶೀಯ ಪೋಷಾಕನ್ನು ಧರಿಸಿದ್ದರು; ಬೇರೆ ಕೆಲವರು ದೇಶೀ-ವಿದೇಶೀಯ ಮಿಶ್ರ ಡ್ರೆಸ್ಸನ್ನು ಹಾಕಿಕೊಂಡಿದ್ದರು. ಇನ್ನುಳಿದ ಕೆಲವರು ಕಾಲಿನಿಂದ ಕುತ್ತಿಗೆಯ ವರೆಗೆ ಅಪ್ ಟು ಡೇಟ ಇಂಗ್ಲಿಷ ಡ್ರೆಸ್ಸನ್ನು ತೊಟ್ಟುಕೊಂಡಿದ್ದರೂ, ತಲೆಗೆ ಮಾತ್ರ ವಿದೇಶೀಯಪದ್ಧತಿಯ ಹ್ಯಾಟುಗಳನ್ನು ಹಾಕಿಕೊಂಡಿರಲಿಲ್ಲ. ನಾನಾತರದ ಪೂಮಾಲೆಗಳು ಅವರ ಕೇಶಭಾರವನ್ನು ಅಮ್ಮಡಿಸಿದ್ದವು.

ಆ ನೋಟವನ್ನು ನೋಡುತ್ತ ನಡೆದಿದ್ದ ಬ್ರಹ್ಮನಿಗೆ ಹೇಗೆ ಹೇಗೋ ಅನಿಸಿದ್ದರಿಂದ, ತನ್ನ ತಲೆ ನೋಯುವದೆಂದು ನೆವ ಹೇಳಿ ಸಂಗಡಿಗರನ್ನು ಅಲ್ಲಿಂದ ಹೊರಡಿಸಿಕೊಂಡು ತಮ್ಮ ಬಿಡಾರದ ಕಡೆಗೆ ನಡೆದನು. ಅಷ್ಟರಲ್ಲಿ ಸಾಯಂಕಾಲವೂ ಆದ್ದರಿಂದ ಅಂದು ಅವರು ಮತ್ತಾವ ಕಡೆಗೂ ಹೋಗದೆ, ನೆಟ್ಟಗೆ ಛತ್ರಕ್ಕೆ ಬಂದು

ತಮ್ಮ ನಿತ್ಯನಿಯಮಗಳಲ್ಲಿ ತೊಡಗಿದರು.

ಮರುದಿನ ಬೆಳಗಿನ ಝಾವದಲ್ಲಿ ಶ್ರೀ ಚಾಮುಂಡೇಶ್ವರಿಯ ದರ್ಶನಕ್ಕೆ ಹೋಗುವದೆಂದು ಆ ರಾತ್ರಿಯೇ ನಿರ್ಧರಿಸಿ ಮಲಗಿದ್ದ ಅವರು, ಬೆಳಗಿನ ೪ ಗಂಟೆಗೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿ ಕೊಂಡು ಬೆಟ್ಟಕ್ಕೆ ನಡೆದರು. ಮೈಸೂರಿಂದ ಬೆಟ್ಟದ ತುದಿಯ ವರೆಗೆ ಕಾಲುದಾರಿಯಿಂದ ೩-೪ ಮೈಲು ದಾರಿಯಾಗಬಹುದು. ಮೋಟಾರ ಮಾರ್ಗದಿಂದ ೭-೮ ಮೈಲುಗಳಾಗಬಹುದು. ಬೆಟ್ಟ ಹತ್ತುವಾಗ ಆಗುತ್ತಿದ್ದ ಆಯಾಸವನ್ನು, ಸುತ್ತಲಿನ ರಮ್ಯವಾದ ನೋಟವನ್ನು ನೋಡುತ್ತಲೂ ಆ ವಿಷಯಕ್ಕೆ ಚರ್ಚಿಸುತ್ತಲೂ ಅವರು ಕಳಕೊಳ್ಳುತ್ತಿದ್ದರು; ಸರಾಸರಿ ಆರೂವರೆ ಗಂಟೆಗೆ ಅವರು ಶ್ರೀ ಚಾಮುಂಡೇಶ್ವರಿಯ ದೇವಾಲಯದ ಬಳಿಗೆ ಹೋದರು. ಅಲ್ಲಿಯ ಚಿಕ್ಕ ಕೊಳದಲ್ಲಿ ಅವರೆಲ್ಲರೂ ಸ್ನಾನ-ಆಹ್ನಿಕಗಳನ್ನು ತೀರಿ ಸಿಕೊಂಡರು. ತದನಂತರ ಅಲ್ಲಿಯ ಮುಖ್ಯ ದೇವಿಯ ಹಾಗು ಇತರ ದೇವತೆಗಳ ದರ್ಶನ ಮಾಡಿಕೊಂಡು ಬಿಸಲಾಗುವದರೊಳಗೆ ಬೆಟ್ಟ ಇಳಿಯಹತ್ತಿದರು.

ಬ್ರಹ್ಮನು ಬೆಟ್ಟ ಹತ್ತುವಾಗಲೇ ಹತ್ತಿಪ್ಪತ್ತು ಪಾವಟಗೆಗೆ ಳಿಗೊಂದು ಸಲ ಕೂಡ್ರುತ್ತ ಹತ್ತಿದ್ದನು. ಇಳಿಯುವಾಗಂತೂ ಅವನಿಗೆ ಬಹಳ ತ್ರಾಸವಾಯಿತು ಕಾಲು ನಡುಗುವದರಿಂದ ಅವನು ಎಷ್ಟೋ ಸಾರೆ ಬೀಳತಕ್ಕವನೇ; ಆದರೆ ಇಂದ್ರ-ವರುಣರು ಅವನ ತೋಳುಗೈಯಲ್ಲಿ ಕೈಹಾಕಿ ಹಿಡಿದದ್ದರಿಂದ ಅವನು ಬೀಳಲಿಲ್ಲವಿಷ್ಟೇ. ಮಾರ್ಗಾಯಾಸದಿಂದಲೂ, ಬಿಸಿಲತಾಪದಿಂದಲೂ ಸಾಕು ಸಾಕಾಗಿ ಸರಾಸರಿ ಹನ್ನೊಂದು ಗಂಟೆಗೆ ಅವರು ತಮ್ಮ ಬಿಡಾರಕ್ಕೆ ಬಂದರು. ಬಳಿಕ ತುಸ ವಿಶ್ರಮಿಸಿ, ಅಡಿಗೆ-ಊಟ ಮಾಡಿಕೊಂಡು ಸಾಯಂಕಾ ಲಕ್ಕೆ ಪುನಃ ಊರೊಳಗೆ ನಡೆದರು

ಇಂದು ಅವರು ಪಕ್ಷಿನೋಟದಿಂದ ಮರಿಮಲ್ಲಪ್ಪನ ಹಾಯ್ ಸ್ಕೂಲ, ಜಗನ್ಮೋಹನ ಪ್ಯಾಲೇಸ, ಕರ್ಝನ್ ಪಾರ್ಕ, ಲ್ಯಾನ್ಸ್ ಡೌನ ಬಝಾರ, ದೇವರಾಜ ಮಾರ್ಕೆಟು, ದೊಡ್ಡಪೇಟೆ, ಶ್ರೀಕೃಷ್ಣ ರಾಜ ಆಸ್ಪತ್ರಿ, ಶ್ರೀಚಾಮರಾಜೇಂದ್ರ ಟೆಕ್ನಿಕಲ್‌ಸ್ಕೂಲ ಮುಂತಾ ದವುಗಳನ್ನು ನೋಡಿಕೊಂಡು ಬರುವಷ್ಟರಲ್ಲಿ ಬಹಳ ರಾತ್ರಿಯಾ ಯಿತು. ವಿದ್ಯುದ್ದೀಪಗಳ ಅನುಕೂಲತೆಯು ಅಲ್ಲಿರದಿದ್ದರೆ, ಅವರು

ಅಂದು ಮನೆಗೆ ಬರುತ್ತಿದ್ದರೋ ಇಲ್ಲವೋ ಯಾರಿಗೆ ಗೊತ್ತು?

ಮರುದಿನ ಪ್ರಾತಃಕಾಲದಲ್ಲಿದ್ದು, ಅವರು ಅರಮನೆಯನ್ನು ನೋಡಹೋದರು. ಮೊದಲಿನ ದಿವಸ ಶ್ರೀಮನ್ನಾರಾಯಣನು ಯಾರ ವಶೀಲೆಯಿಂದಲೋ ಅರಮನೆಯ ಕಂಟ್ರೋಲರರಿಂದ ಒಳಗೆ ಹೋಗಿ ನೋಡುವ ಪ್ಯಾಸುಗಳನ್ನು ಸಂಪಾದಿಸಿದ್ದರಿಂದ ಇಂದು ಅವರಿಗೆ ಆ ರಾಜಭುವನವನ್ನು ನೋಡಲಿಕ್ಕೆ ಯಾವ ತರದ ಅಂತರವೂ ಆಗಲಿಲ್ಲ. ಮೈಸೂರ ಪುರಾತನದ ಅರಮನೆಯು ಸರಾಸರಿ ೨೫-೩೦ ವರ್ಷಗಳ ಹಿಂದೆ ಯಾವ ಆಕಸ್ಮಿಕ ಕಾರಣದಿಂದಲೋ ಬೆಂಕಿ ಬಿದ್ದು, ಸಂಪೂರ್ಣವಾಗಿ ಸುಟ್ಟು ಹೋಯಿತು. ಅವಶೇಷವೇನೂ ಉಳಿಯಲಿಲ್ಲ. ಅಪವಾದಕ್ಕೆ ಅಂಬಾವಿಲಾಸ ತೊಟ್ಟಿ ಎಂಬ ಪ್ರಾಚೀನ ನೋಡತಕ್ಕ ಭಾಗವು ಉಳಿದಿರುತ್ತದೆ. ದರ್ಬಾರ ಹಾಲ್ ಅಥವಾ ಸಭಾಮಂಟಪವು ಬಹು ರಮ್ಯವಾಗಿ ಕಟ್ಟಲ್ಪಟ್ಟಿದ್ದು, ಅದರಲ್ಲಿ ಬೇರೆ ಬೇರೆ ದರ್ಜೆಯ ಜನರು ಕೂಡ್ರುವ ವ್ಯವಸ್ಥೆಯು ಬಹು ಚನ್ನಾಗಿ ಮಾಡಲ್ಪಟ್ಟಿರುತ್ತದೆ. ಮಹಾರಾಜರು ಕೂಡ್ರುವ ಸಿಂಹಾಸನವು ಒಳ್ಳೇ ಸುಶೋಭಿತವಾಗಿರುತ್ತದೆ. ಮೈಸೂರ ಅರಮನೆಯಂಥ ಭವ್ಯ ಹಾಗು ಸುಂದರ ಕಟ್ಟಡವು ಇಡೀ ಕರ್ನಾಟಕದಲ್ಲಿ ಅದೇಕೆ, ದಕ್ಷಿಣ ಹಿಂದುಸ್ಥಾನದಲ್ಲಿ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅಮೇರಿಕೆ, ಜರ್ಮನಿ, ಜಪಾನ ಮುಂತಾದ ದೇಶಗಳ ಪ್ರಸಿದ್ಧ ಕಾರಾಗಿರರಿಂದ ಆ ಹೊಸ ಅರಮನೆಯು ಕಟ್ಟಲ್ಪಟ್ಟಿರುತ್ತದೆ. ಸೋನೇರಿ ಮುಲಾಮಿನ ಕೆಲಸಗಳಂತೂ ಬಹು ಉತ್ಕೃಷ್ಟವಾಗಿರುತ್ತವೆ. ಅರಮನೆಯ ಸ್ವರ್ಣವರ್ಣದ ಭವ್ಯವಾದ ಶಿಖರವನ್ನೂ, ಅದನ್ನು ಸುತ್ತುವರಿದಿದ್ದ ನಾನಾ ವರ್ಣದ ವಿದ್ಯುದ್ದೀಪಗಳ ಗೋಲಕಾಕೃತಿಗಳನ್ನೂ ಕಣ್ಣಾರೆ ಕಂಡ ಜನರಿಗೆ ಆ ವೈಭವವನ್ನು ಎಷ್ಟು ಸಾರೆ ಹೇಳಿಕೊಂಡರೂ ಸಾಕಾಗುವದಿಲ್ಲ. ನಮ್ಮ ದೇವತೆಗಳು ಆ ಅರಮನೆಯೊಳಗಿನ ಪ್ರತಿಯೊಂದು ಭಾಗವನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿದರು. ತದನಂತರ ಕರುಹಟ್ಟಿ, ಅಶ್ವಶಾಲೆ, ಗಜಶಾಲೆ ಮುಂತಾದವುಗಳನ್ನು ನೋಡಹೋದರು. ಆ ಕರುಹಟ್ಟಿ(ಗೋಶಾಲೆ)ಯಲ್ಲಿಯ ನಾನಾ ದೇಶದ ನಾನಾ ವರ್ಣದ ವಿಚಿತ್ರ ಕೋಡು ಕೊಂಬುಗಳುಳ್ಳ ಆಕಳುಗಳನ್ನೂ ಕರುಗಳನ್ನೂ ನೋಡಿದವರು ಧನ್ಯರೆಂತಲೇ ಹೇಳಲಾಗುವದು. ಪ್ರತಿಯೊಂದು

ಆಕಳಿಗೆ ಸ್ವಚ್ಛವಾದ ಸಾಕಷ್ಟು ಘರಸುಗೆಲ್ಲಿನ ಸ್ಥಳವು ಏರ್ಪಡಿಸಲ್ಪಟ್ಟದ್ದು, ಪ್ರತ್ಯೇಕವಾದ ಕುಡಿಯುವ ನಳಗಳೂ, ಸಂರಕ್ಷಣೆಗಾಗಿ ಬೇರೆ ಬೇರೆ ಆಳುಗಳೂ ಯೋಜಿಸಲ್ಪಟ್ಟಿರುವದರಿಂದ ಆ ಗೋವುಗಳು ಬಹು ಆನಂದದಿಂದ ಅಲ್ಲಿ ಜೀವಿಸುತ್ತವೆ. ವನ್ಯ ಹಿಂಸ್ರಪಶುಗಳ ಬೆದರಿಕೆಯು ಕಡಿಮೆಯಾಗಬೇಕೆಂಬದಕ್ಕಾಗಿ ಆ ಗೋಶಾಲೆಯು ಪ್ರಾಕಾರದ ಮಧ್ಯದಲ್ಲಿಯು ಒಂದು ದೊಡ್ಡ ಕಟಾಂಜನದ ಕೋಣೆಯಲ್ಲಿ ಒಂದು ಹುಲಿಯು ಜೊತೆಯೂ ಬೇರೆ ಕಡೆಗೆ ಚಿರ್ತ ಮೊದಲಾದ ಬೇರೆ ಪ್ರಾಣಿಗಳೂ ಸಂರಕ್ಷಿಸಲ್ಪಟ್ಟವೆ ದೇವಾನುದೇವತೆಗಳಲ್ಲಿ ಪಾರ್ವತೀ-ಪರಮೇಶ್ವರರು ಒಡೆದು ಕಾಣುತ್ತಿರುವ ಹಾಗೆ, ಆ ಗೋಶಾಲೆಯುಲ್ಲಿ ಪಟ್ಟದ ಆಕಳು-ಕರಗಳೇ ಪ್ರಾಮುಖ್ಯವಾಗಿ ಮೆರೆಯುತ್ತಿರುತ್ತವೆ

ಗೋಶಾಲೆಯಂತೆ ಅಶ್ವಶಾಲೆ- ಗಜಶಾಲೆಗಳಲ್ಲಿಯೂ ನೋಡತಕ್ಕಂತೆ ಸುವ್ಯವಸ್ಥೆಯಿದ್ದು, ಅವುಗಳಲ್ಲಿಯು ಪಟ್ಟದ ಕುದರೆ, ಪಟ್ಟದ ಆನೆಗಳು ನಯುನಮನೋಹರವಾಗಿ ವಿರಾಜಿಸುತ್ತಿರುತ್ತವೆ.

ಇಷ್ಟು ಕಡೆಗೆ ಅಡ್ಡಾಡಿ ನೋಡುವಷ್ಟರಲ್ಲಿ ಮಧ್ಯಾಹ್ನದ ೧೨ ಗಂಟೆಯಾಯಿತು. ಆಗ ಅವರು ಮನೆಗೆ ಹೋಗಿ ಸ್ವಯಂ ಪಾಕ ಮಾಡಿಕೊಂಡು ಊಟ ಮಾಡುವ ಗೋಜಿಗೆ ಹೋಗದೆ, ಆರಮನೆಗೆ ಸಮೀಪದಲ್ಲಿಯೇ ಇರುವ ಶ್ರೀಮನ್ ಮಹಾರಾಜರ ಛತ್ರದಲ್ಲಿ ಆವೊತ್ತಿನ ಮಧ್ಯಾಹ್ನವನ್ನು ತೀರಿಸಬೇಕೆಂದು ಅಲ್ಲಿಗೆ ಹೋದರು. ಕೊಡಗ್ಯೆ ಧೊರೆಯು ಕೈಸಡಿಲು ಬಿಟ್ಟು ಆ ಛತ್ರಕ್ಕೆ ಹಣ ಕೊಟ್ಟು ಸಹಾಯ ಮಾಡುತ್ತಿದ್ದರೂ, ಅಲ್ಲಿಯ ಕ್ಷುಲ್ಲಕ ವ್ಯವಸ್ಥಾಪಕರಿಂದ ಅಂದು ನಮ್ಮ ದೇವತೆಗಳಿಗೆ ಸುಖವಾಗಲಿಲ್ಲ. ಯಾಕಂದರೆ, ಇವರು ನಾಲ್ವರನ್ನೂ ಕಂಡು ಆ ಛತ್ರದ ಅಡಿಗೆಯವನು ಮೂಗು ಮುರಿದು:—ಏನಯ್ಯಾ? ಈ ಆಯಾತ ಸಮಯದಲ್ಲಿ ಊಟಕ್ಕೆ ಬಂದು ಕೂಡಲಿಕ್ಕೆ ಇದೇನು ಹೋಟಲೆಂದು ತಿಳಿದಿರುವಿರಾ? ನಿಮ್ಮಲ್ಲಿ ಪಾರುಪತ್ಯಗಾರರ ಪ್ಯಾಸುಗಳಿವೆಯೆ? ಪ್ಯಾಸುಗಳಿದ್ದರೂ ನೀವು ಅವನ್ನು ಈ ಮೊದಲು ನನಗೇಕೆ ತೋರಿಸಲಿಲ್ಲ? ತೋರಿಸಿದ್ದರೆ ನಿಮಗೆ ಸಾಲುವಷ್ಟು ಹೆಚ್ಚು ಅನ್ನವನ್ನು ಕುಚ್ಚಿಡುತ್ತಿದ್ದೆನು! ತಡವಾಗಿ ಬಂದುದರಿಂದ ಇಂದು ನಿಮಗೆ ಇಲ್ಲಿ ಅನುಕೂಲವಾಗದು. ಬರುವದಿದ್ದರೆ ನಾಳೆಯಿಂದ ಬೆಳಿಗ್ಗೇ ಪಾರುಪತ್ಯ

ಗಾರರ ಚೀಟಿತಕ್ಕೊಂಡು ಇಲ್ಲಿಗೆ ಬನ್ನಿರಿ, ಎಂದು ಹೇಳಿದನು.

ಅದನ್ನು ಕೇಳಿ ವರಣನು ಹೆಚ್ಚಿಗೇನೂ ಮಾತಾಡದೆ, ಬ್ರಹ್ಮಾದಿಗಳಿಗೆ ಅಲ್ಲಿಯೇ ಕೂಡ್ರಹೇಳಿ ಸಮೀಪದಲ್ಲಿರುವ ಪಾರುಪತ್ಯಗಾರನ ಮನೆಗೆ ಹೋಗಿ ಅವನಿಂದ ಕೆಲವು ಕೀಳುಮಾತುಗಳನ್ನಾಡಿಸಿಕೊಂಡು, ತನ್ನ ವಂಶಪರಂಪರೆಯನ್ನೂ ಕುಲ ಗೌಂವಾದಿಗಳನ್ನೂ ಹೇಳಿ ಊಟದ ಪರವಾನಿಗೆಯ ಚೀಟಿಯನ್ನು ತಂದು ಅಡಿಗೆಯವನ ಕೈಗಿತ್ತನು. ಅದರಿಂದಂತೂ ಆ ಅಡಿಗೆಯವನು ಅಂತರಂಗದಲ್ಲಿ ಬಹಳವಾಗಿ ಕ್ಷುಬ್ಧನಾದನು; ಆದರೆ ಆಡಿ ತೋರಿಸಲಿಕ್ಕೆ ಮಾರ್ಗವಿಲ್ಲದ್ದರಿಂದ ಇವರಿಗೆ ಹಂಜಕ್ಕಿಯನ್ನ ಹಾಗು ಹುಳಿಗೊಡ್ಡ ಸಾರು ಮಾಡಿ ಹಾಕಿದನು!

---

## ನಂಜನಗೂಡ.

ಭೋಜನಾನಂತರ ದೇವತೆಗಳು ಲಕ್ಷ್ಮೀಪುರ, ಚಾಮರಾಜಪುರ ಮುಂತಾದ ಭಾಗಗಳನ್ನು ನೋಡಿಕೊಂಡು, ಚಾಮರಾಜಪುರದ ಸ್ಟೇಶನ್ನಿನಿಂದಲೆ ನಂಜನಗೂಡಿಗೆ ಹೋಗುವ ಸಾಯಂಕಾಲದ ಕಟಲನ್ನೇರಿ ಶ್ರೀ ನಂಜುಂಡೇಶ್ವರನ ದರ್ಶನಕ್ಕೆ ನಡೆದರು. ಆ ರೈಲು ಸರಾಸರಿ ೭ ಗಂಟೆಗೆ ನಂಜನಗೂಡ ಟೌನಸ್ಟೇಶನ್ನಿಗೆ ತಲುಪಿತು. ಅಲ್ಲಿ ಒಂದೆರಡು ದಿನ ನಿಂತು ಊರನ್ನು ನೋಡಿ ಬರುವಷ್ಟು ಅವಕಾಶವು ದೇವಗಣಗಳಿಗೆ ಇರದ್ದರಿಂದ, ಅವರು ಕೂಡಲೆ ಓಡುತ್ತೋಡುತ್ತ ಹೋಗಿ ಕಪಿಲಾಹೊಳೆಯ ದಂಡೆಯಲ್ಲಿರುವ ಶ್ರೀ ನಂಜುಂಡೇಶ್ವರನ ಭವ್ಯ ಮಂದಿರವನ್ನು ಪ್ರವೇಶಿಸಿ, ದರ್ಶನ ಲಾಭವನ್ನು ಪಡೆದರು; ಹಾಗು ಅದೇ ಕಾಲಿನಿಂದ ತಿರುಗಿ ಸ್ಟೇಶನ್ನಿಗೆ ಬಂದು, ಮೈಸೂರ ಕಡೆಗೆ ಹೋಗಲನುವಾಗಿದ್ದ ರೈಲನ್ನಾರೋಹಿಸಿದರು. ಗಾಡಿಯಲ್ಲಿ ಕುಳಿತಾಗ ವರಣನು ಶ್ರೀ ನಂಜುಂಡೇಶ್ವರನ ವೈಭವವನ್ನೂ, ಶ್ರೀ ಮೈಸೂರ ಮಹಾರಾಜರಿಂದ ಆ ದೇವಸ್ಥಾನಕ್ಕಿರುವ ಉತ್ಪನ್ನವನ್ನೂ, ನಂಜನಗೂಡಿನಿಂದ ಈರೋಡಿಗೆ ಹಾಕಲಿಕ್ಕಿರುವ ರೇಲ್ವೆ ಮಾರ್ಗದ ವೃತ್ತಾಂತವನ್ನೂ, ಕಪಿಲಾಹೊಳೆಗೆ ಮಹಾಪೂರವು ಬಂದು ಆ ಪ್ರಾಂತದಲ್ಲಿ ಆಗುತ್ತಿರುವ ಅನಾಹುತವನ್ನೂ

ವಿವರಿಸಿ ಹೇಳುತ್ತಿರುವಷ್ಟರಲ್ಲಿ ಆ ಗಾಡಿಯು ಮೈಸೂರ ಸ್ಟೇಶನ್ನಿಗೆ ಬಂದಿತು. ಕೂಡಲೆ ದೇವಗಣಗಳು ಆ ಗಾಡಿಯಿಂದ ಇಳಿದು ಸಾಗರದ ಕಟ್ಟೆಯ ಕಡೆಗೆ ಹೋಗಲು ಹೊರಟಿರುವ ಬೇರೆ ರೈಲನ್ನು ಆರೋಹಿಸಿದರು. ಆ ಗಾಡಿಯು ಬೆಳಗಿನ ಮುಂತಾದ ಒಂದೆರಡು ಚಿಕ್ಕ ಸ್ಟೇಶನ್ನುಗಳಲ್ಲಿ ತುಸ ತುಸ ನಿಲ್ಲುತ್ತ "ಕೃಷ್ಣರಾಜಸಾಗರ" ವೆಂಬ ಸ್ಟೇಶನ್ನಿಗೆ ಬಂದು ತಲುಪಿತು.

## ಕೃಷ್ಣರಾಜಸಾಗರ.

### (ಕನ್ನಂಬಾಡಿ)

ಕೂಡಲೆ ನಮ್ಮ ದೇವತೆಗಳು ಗಾಡಿಯಿಂದಿಳಿದು ಸುತ್ತಲೂ ನೋಡುತ್ತಾರೆ, ತಮ್ಮನ್ನು ಎಲ್ಲ ದಿಕ್ಕಿನಿಂದಲೂ ನೀರು ಆವರಿಸಿರುತ್ತದೆ. ಆಗ ಆ ನಡುರಾತ್ರಿಯಲ್ಲಿ ಅವರು ಬೇರೆ ಕಡೆಗೆ ಹೋಗಿ ಮಲಗುವ ಆಲೋಚನೆ ಮಾಡಲಿಲ್ಲ. ಅಲ್ಲಿಯೇ ಆ ಸಾಗರಕಟ್ಟೆಯ ಸ್ಟೇಶನ್ನಿನಲ್ಲಿ ವೇಟಿಂಗ ರೂಮಿನೊಳಗೆ ಪವಡಿಸಿದರು ಮರುದಿನ ಬೆಳಿಗ್ಗೆ ಎದ್ದು ಆ ಕೃಷ್ಣರಾಜಸಾಗರದ ಸೌಥ ಬ್ಯಾಂಕಿನ (ದಕ್ಷಿಣ ದಿಕ್ಕಿನ ಕಡೆಯ) ಮಹಾ ನೀರಿನಲ್ಲಿ ಸ್ನಾನ-ಆಹ್ನಿಕಗಳನ್ನು ತೀರಿಸಿಕೊಂಡರು; ಹಾಗು ಕ್ರಮವಾಗಿ ಆ ಕನ್ನಂಬಾಡಿಯ ಕಟ್ಟೆಯನ್ನು ನೋಡತೊಡಗಿದರು.

ಕನ್ನಂಬಾಡಿಯ ಕಟ್ಟೆಯು ಬಹು ವಿಸ್ತಾರವಾಗಿ ಕಟ್ಟಲ್ಪಡುತ್ತದೆ. ಕಾವೇರಿ ಹೊಳೆಯ ದಕ್ಷಿಣೋತ್ತರ ದಿಕ್ಕುಗಳಲ್ಲಿರುವ ಎರಡು ಪ್ರಚಂಡ ಗುಡ್ಡಗಳ ಮಧ್ಯದಲ್ಲಿ ಪಾತ್ರದ ತಳದಿಂದ ೧೨೦ ಫೂಟು ಎತ್ತರವಾದ ಒಡ್ಡನ್ನು ಕಟ್ಟಿ, ಆ ಹೊಳೆಯ ನೀರನ್ನು ಅರವತ್ತು ಮೈಲುಗಳಿಗಿಂತಲೂ ಹೆಚ್ಚಾದ ಕ್ಷೇತ್ರದಲ್ಲಿ ಸಂಚಯಿಸಹತ್ತಿರುವರು; ಹಾಗು ಆ ನೀರಿನಿಂದ ಶಿವಸಮುದ್ರದ ಹತ್ತರ ಇದ್ದ ಧಬಧಬೆಯಂಥ ಕೃತ್ರಿಮ ಧಬಧಬೆಯನ್ನು ಕಲ್ಪಿಸಿಕೊಂಡು, ಅದರಿಂದ ಬಹು ದೊಡ್ಡ ಪ್ರಮಾಣದಿಂದ ವಿದ್ಯುತ್ತನ್ನು ಉತ್ಪನ್ನ ಮಾಡುವದೂ, ಆ ನೀರನ್ನು ದೂರ ದೂರದ ವರೆಗಿನ ರುಕ್ಷಪ್ರಾಂತಗಳಿಗೆ ಪೂರೈಸಿ, ಅಲ್ಲಿ ಉತ್ತಮ ಬೆಳೆ ತಂದುಕೊಳ್ಳುವದೂ

ಮೈಸೂರ ಸಂಸ್ಥಾನದ ಉದ್ದೇಶವಾಗಿರುತ್ತದೆ. ಇಷ್ಟು ದೊಡ್ಡ ಒಡ್ಡನ್ನು ಮೈಸೂರ ಸರಕಾರದವರು ಕಟ್ಟಿ ಕಾವೇರಿಹೊಳೆಯನ್ನು ತರುಬಿದರೆ ಬೇಸಿಗೆಯಲ್ಲಿ ತಮ್ಮ ಪೈರುಗಳಿಗೂ ಇತರ ಬಳಿಕೆಗೂ ನೀರು ಸಾಲದೆಂದು ಮದ್ರಾಸ ಸೀಮೆಯವರು ನಮ್ಮ ಬಾದಶಹರ ವರೆಗೆ ತಕರಾರು ಒಯ್ದರು; ಆದರೆ ಅವರ ಆ ತಕರಾರು ಕಡೆಗೂ ನಡೆಯಲಿಲ್ಲ.

ಅಲ್ಲಿ ಇಷ್ಟು ದೊಡ್ಡ ಒಡ್ಡು ಕಟ್ಟಹತ್ತಿದಂದಿನಿಂದ ಕಾವೇರಿಯ ನೀರು ಮುಂದಕ್ಕೆ ಹೋಗದಿರುವದು ಸ್ವಾಭಾವಿಕವಾಗಿದೆ; ಆದರೆ ಒಡ್ಡಿಗೆ ಹನ್ನೆರಡು ಖಿಂಡಿಗಳನ್ನು ಕಲ್ಪಿಸಿದ್ದು, ಬೇಕಾದಾಗ ಬೇಕಾದಷ್ಟು ಖಿಂಡಿಗಳನ್ನು ತೆರೆದು ಸಾಕಷ್ಟು ನೀರನ್ನು ಮುಂದಕ್ಕೆ ಹರಿಬಿಡಲು ಮಾಡಿದ ಯೋಜನೆಯು ಒಳ್ಳೇಹೊಗಳತಕ್ಕದ್ದಾಗಿರುತ್ತದೆ.

ಬ್ರಹ್ಮಾದಿಗಳು ಆ ಕಟ್ಟೆಯ ಕಟ್ಟಡವನ್ನು ನೋಡಿ ಚಕಿತರಾದರು. ಯಾಕಂದರೆ, ಅಂಥ ದೊಡ್ಡ ಹಾಗು ವ್ಯವಸ್ಥಿತ ಕಟ್ಟಡವನ್ನು ಅವರು ಬರೇ ಕರ್ಣಾಟಕದಲ್ಲಿಯೇ ಏಕೆ, ಇಡಿ ಹಿಂದುಸ್ಥಾನದಲ್ಲಿ ಕೂಡ ನೋಡಿರಲಿಲ್ಲ. ಇಂಥ ಜಂಗೀ ಕಟ್ಟಡವು ಈವರೆಗೆ ಜಗತ್ತಿನೊಳಗೆ ಇದೇ ಮೊದಲನೆಯದೆಂದು ಸರ್ವಗಾಮಿಯಾದ ವರುಣನು ಅವರಿಗೆ ತಿಳಿಸಿದನು. ಕೃಷ್ಣರಾಜಸಾಗರ ಕಟ್ಟೆಯ ಕಾಮಗಿರಿಯಲ್ಲಿ ಇನ್ನೊಂದು ಮಹತ್ವವೇನಂದರೆ, ಅದು ಪ್ರಾರಂಭದಿಂದಲೂ ನಮ್ಮ ದೇಶೀಯ, ವಿಶೇಷವಾಗಿ ಕರ್ಣಾಟಕಸ್ಥ ಎಂಜಿನಿಯರರಿಂದಲೇ ಕಟ್ಟಲ್ಪಡುತ್ತಿರುವದು. ದೊಡ್ಡ ದೊಡ್ಡ ಬಂಡೆಗಳನ್ನು ಆ ಒಡ್ಡಿನ ಮೇಲೆ ಚೆಲ್ಲುವರು ಅವುಗಳ ಮೇಲೆ ಯಂತ್ರ ಸಹಾಯದಿಂದ ಮಾಡಿದ ಗಚ್ಚನ್ನು ಹಾಕುವರು; ಹಾಗು ಅವುಗಳನ್ನು ವಿದ್ಯುಲ್ಲತೆಯಿಂದ ನಡೆಯುವ ಯಂತ್ರಗಳಿಂದ ಧುಮುಸ ಮಾಡಿ ಸರಿಮಾಡುವರು.

ಆ ಕೃಷ್ಣರಾಜಸಾಗರದ ಬಳಿಯಲ್ಲಿಯೇ ಕಾವೇರಿ ರಿಝುರ್ವಾಯರ ಎಂಬಲ್ಲಿ ೩-೪ ಸಾವಿರ ಹಾರ್ಸಪಾವರದ ಯಂತ್ರಗಳನ್ನು ಹಚ್ಚಿ ವಿದ್ಯುಲ್ಲತೆಯನ್ನುಂಟುಮಾಡಿ ಅದನ್ನು ಮೈಸೂರಿಗೂ, ಕನ್ನಂಬಾಡಿಯ ಕಟ್ಟಡಗಳ ಕಾಮಗಾರಿಗೂ ಪೂರೈಸುತ್ತಾರೆ.

ದೇವಗಣಗಳು ಒಡ್ಡಿನ ಮೇಲೆ ಹತ್ತಿ ನೋಡುತ್ತಿರುವಾಗ 'ಸ್ಟೀಮ ಲಾಂಚ' ಎಂಬ ಹೆಸರಿನ ಉಗೆಯಂತ್ರಗಳಿಂದ ನಡೆಯುವ

ರಲ್ಲಿ ನಿನ್ನ ಬಂಧವಿಮೋಚನೆಯ ಯಾವದೊಂದು ಸುಲಭ ಉಪಾಯ ವನ್ನು ಮಾಡಿಯೇ ಹೋಗುತ್ತೇನೆ, ಎಂದು ಹೇಳಿ, ಮೋರೆಯ ಮೇಲೆ ಕೈ ಎಳೆದು, ಆ ಕಾವಳ್ಗನನ್ನು ಕಳಿಸಿದನು.

ಬಳಿಕ ಅವರು ಪುನಃ ಆ ಹಡಗಿನ ಮೇಲೆ ಹತ್ತಿ ಅಲ್ಲಿಯ ಅವ ರ್ಣನೀಯ ಸೊಬಗನ್ನು ನೋಡತೊಡಗಿದರು. ಅಷ್ಟರಲ್ಲಿ ಶ್ರೀ ಸೂರ್ಯನಾರಾಯಣನು ಅಸ್ತಾಚಲವನ್ನೇರಿ, ಇಡಿ ಹಗಲೆಲ್ಲ ಹಿಂದೇ ಸವನೆ ದಾರಿ ಶ್ರಮಿಸಿ ಬಂದುದರಿಂದ ಉಂಟಾದ ತಾಪವನ್ನು ಕಳ ಕೊಳ್ಳುವದಕ್ಕೋ ಏನೋ ಎನುವಂತೆ, ಆಚೆಬದಿಗಿರುವ ವಿಶಾಲ ವಾದ ಸಾಗರದಲ್ಲಿ ದುಮುಕಿ ಕಾಣದಂತಾದನು! ಸೂರ್ಯದೇ ವನೇ ವಿಶ್ರಾಂತಿಗೆ ಮನಸು ಮಾಡಿ ಸ್ವಕಾರ್ಯ ರಹಿತನಾದ ಬಳಿಕ ಪಕ್ಷಿ ಪಾಮರರ ಪಾಡೇನು? ಅವರೂ ದಿನಚರ್ಯವನ್ನು ಬಿಟ್ಟು ಕೊಟ್ಟು, ಸಖಿಯರೊಂದಿಗೆ ನಿಶಾಚರಣೆಗೆ ಪ್ರಾರಂಭ ಮಾಡಲುದ್ಯು ಕ್ತರಾದರು. ಇಷ್ಟರಲ್ಲಿ ಆ ಸಾಗರದ ಕಟ್ಟೆಯ ಮೇಲೆ ದೃಷ್ಟಿ ಹರಿಯುವ ವರೆಗೆ ಎಲ್ಲ ಕಡೆಯಲ್ಲಿಯೂ ನಾನಾವರ್ಣದ ವಿದ್ಯು ದ್ದೀಪಗಳು ಉರಿಯಲಾರಂಭಿಸಿದವು ಹಡಗಿನ ಮೇಲಿನ ವಿಶಾಲ ವಾದ ಸ್ಥಳದಲ್ಲಿ ಪಶ್ಚಿಮದಿಕ್ಕಿನ ಮಂದಮಾರುತನು ತನ್ನ ಕರಗ ಳನ್ನು ಸಮೀಪದ ವಿಶಾಲವಾದ ಸಾಗರದ ಜಲದಲ್ಲಿ ಅದ್ದಿ ಸಿಂಪಡಿ ಸುವಂತೆ ಸುಗಂಧಯುಕ್ತ ತುಷಾರಗಳನ್ನು ಹಾರಿಸುತ್ತಿದ್ದನು ಸುತ್ತಲೂ ನಾನಾಬಣ್ಣದ ಚಿತ್ರ-ವಿಚಿತ್ರ ದೀಪಗಳಿದ್ದವು ಈ ಆನಂದಮಯ ಸಾಮ್ರಾಜ್ಯದಲ್ಲಿ ನಮ್ಮ ದೇವಗಣಗಳು ಕೆಲಕಾಲ ವನ್ನು ಕಳೆದು, ದೇಶಭ್ರಮಣ ವಿರಹಿತರಾಗಿರಲು, ಅವರೆದುರಿಗೆ ಒಂದು ಜ್ಯೋತಿರ್ಮಯ ವಿಮಾನವು ಒಂದು ನಿಂತಿತು ಆ ವಿಮಾನದ ಸಾರಥಿಯಾದ ಮಾತಲಿಯು ಲಗುಬಗೆಯಿಂದ ಬಂದು ಇಂದ್ರನಿಗೆ ಬೊಗ್ಗಿ ಸಲಾಮು ಹೊಡೆದು:— ಮಹಾಪ್ರಭೋ, ತಾವುಗಳು ಬಹಳ ದಿವಸಗಳಾದರೂ ಬಾರದ್ದರಿಂದ ಸ್ವರ್ಗರಾಜ್ಯದಲ್ಲಿ ಅರಾಜ ಕತೆಯುಂಟಾಗಿರುತ್ತದೆ. ಪಾಮರದವರಲ್ಲಿ ಜಗಳ-ತಂಟೆಗಳು ಉತ್ಪ ನ್ನವಾಗಿರುತ್ತವೆ. ಈ ಕಾರಣದ ಮೂಲಕ ತಮ್ಮಲ್ಲಿ ನಿಷ್ಠಾವಂ ತರಾದ ಸಕಲ ಪ್ರಜೆಗಳೂ ಅನ್ನ ನೀರುಗಳನ್ನು ಬಿಟ್ಟುಕೊಟ್ಟಿ ರುತ್ತಾರೆ; ಹಾಗು ಅದರಿಂದ ಹಲಕೆಲವರ ಪ್ರಾಣಗಳೂ ಹಾರ ಹತ್ತಿವೆ! ಇದಕ್ಕೋಸ್ಕರ ಯುವರಾಜರಾದ ಜಯಂತಪ್ರಭುಗಳು

ತಮ್ಮನ್ನು ಕರಕೊಂಡು ಬರುವ ಸಲುವಾಗಿ ನನ್ನನ್ನಿಲ್ಲಿಗೆ ಕಳಿಸಿ ಕೊಟ್ಟಿರುತ್ತಾರೆ

ಮಾತಲಿಯ ಆ ನುಡಿಗಳನ್ನು ಕೇಳಿ ಬ್ರಹ್ಮನು ಕಾವೇರಿಯ ಬಂಧವಿಮೋಚನೆಯ ವಿಚಾರವನ್ನು ಅಲ್ಲಿಗೇ ನಿಲ್ಲಿಸಿ, ತಡವರಿಸುತ್ತ ಎಲ್ಲಕ್ಕೂ ಮೊದಲು ಹೋಗಿ ಆ ಯಾನವನ್ನು ಆರೋಹಿಸಿದನು ನಾರಾಯಣಾದಿಗಳಲ್ಲೂ ತಮ್ಮ ತಮ್ಮ ದೇಶಗಳ ವಿಷಯವಾಗಿ ಆಲೋಚನೆಯುಂಟಾದುದರಿಂದ ಅವರೂ ವಿಮಾನವನ್ನು ಹತ್ತಿದರು ಇಂದ್ರನ ಅಪ್ಪಣೆಯ ಮೇರೆಗೆ ಮಾತಲಿಯು ವಿಮಾನವನ್ನು ಸ್ವರ್ಗಾಭಿಮುಖವಾಗಿ ವೇಗದಿಂದ ಬಿಟ್ಟನು. ಸ್ವರ್ಗಲೋಕವು ಸಮೀಪಿಸಿದ ಹಾಗೆ ಅವರ ಶುಭಾಗಮನಕ್ಕಾಗಿ ಸ್ವರ್ಗಲೋಕದಿಂದ ಹಾರಿಸಲ್ಪಡುವ ತೋಪುಗಳ(ಗುಡುಗುಗಳ) ಧ್ವನಿಯು ಸ್ಪಷ್ಟವಾಗಿ ಕೇಳತೊಡಗಿತು. ಅಮರಾವತಿಯು ಸಮೀಪಿಸಲು, ಅಲ್ಲಿಯ ರಮಣಿಯರು ಬೆಳಗುವ ಪಂಚಾರತಿಗಳ(ಮಿಂಚುಗಳ) ಪ್ರಕಾಶದಲ್ಲಿ ಆ ವಿಮಾನವು ಇಂದ್ರನ ರಾಜಭುವನಕ್ಕೆ ತಲುಪಿತು.



# ದೇವಲೋಕದೊಳಗಿನ ಸಭೆ.

ಇಂದ್ರಾದಿ ದೇವತೆಗಳು ಸ್ವನಗರಿಗೆ ಹೋಗಿ ನಾಲ್ಕಾರು ದಿನಗಳ ವರೆಗೆ ವಿಶ್ರಾಂತಿ ಪಡೆದ ಬಳಿಕ, ಅಲ್ಲಿಯ ದೇವತೆಗಳೆಲ್ಲರೂ ಸೇರಿ ಭೂಲೋಕದೊಳಗಿನ ಕರ್ಣಾಟಕ ಪ್ರಾಂತದಲ್ಲಿ ಸಂಚರಿಸಿ ಬಂದ ತಮ್ಮ ಅಧಿಪತಿಯಾದ ಇಂದ್ರನಿಗೂ ಅವನ ಸಂಗಡ ಹೋಗಿದ್ದ ಬ್ರಹ್ಮ ನಾರಾಯಣಾದಿಗಳಿಗೂ ಮಾನಪತ್ರವನ್ನು ಅರ್ಪಿಸಿ, ಅಭಿನಂದನ ಮಾಡುವದಕ್ಕೋಸ್ಕರ ಒಂದು ಪ್ರಚಂಡಸಭೆಯನ್ನು ಕೂಡಿಸಿದರು. ಅಲ್ಲಲ್ಲಿ ಧ್ವಜ, ಸ್ತಂಭ, ಪತಾಕೆಗಳು ಮೆರೆಯಲಾರಂಭಿಸಿದವು. ಆ ಸಭೆಯ ಸ್ವಾಗತಾಧ್ಯಕ್ಷಸ್ಥಾನದಲ್ಲಿ ವಿಘ್ನನಾಶಕನಾದ ವಕ್ರತುಂಡನ ಯೋಜನೆಯಾಯಿತು. ಸತ್ಯ, ವೈಕುಂಠ, ಕೈಲಾಸ, ಪಾತಾಳ ಮುಂತಾದ ಲೋಕಗಳ ಕೋಟಿಗಟ್ಟಲೆ ದೇವತೆ-ಉಪದೇವತೆಗಳಿಗೆ ಸಭೆಯ ಉದ್ದೇಶಪತ್ರಿಕೆಗಳೂ ನಿಮಂತ್ರಣಪತ್ರಿಕೆಗಳೂ ರವಾನಿಸಲ್ಪಟ್ಟವು. ಗೊತ್ತಾದ ದಿವಸ ಗೊತ್ತಾದ ವೇಳೆಗೆ ನಿಮಂತ್ರಿತ ದೇವತೆಗಳೆಲ್ಲರೂ ಬಂದು ಸೇರಿದರು. ಅಪವಾದಕ್ಕೆ ಸ್ಮಶಾನವಾಸಿಯಾದ ಶಂಕರ, ಬ್ರಹ್ಮನಿಷ್ಠನಾದ ಶುಕ, ಯೋಗಾಸಕ್ತನಾದ ಪಾತಂಜಲಿ ಮೊದಲಾದ ವಿಕ್ಷಿಪ್ತ ಸ್ವಭಾವದ ಕೆಲವರು ಬರಲಿಲ್ಲ.

ಬ್ರಹ್ಮನು ಹಂಸಾರೂಢನಾಗಿ ಬಂದಿದ್ದನು. ನಾರಾಯಣನು ಗರುಡಾರೋಹಣ ಮಾಡಿ ಬಂದನು. ವಕ್ರತುಂಡನು ಮೂಷಕವಾಹನನಾಗಿಯೂ, ಕಾರ್ತಿಕೇಯನು ಮಯೂರಗಳ ರಥದಲ್ಲಿಯೂ, ಯಮನು ಕೋಣನ ಮೇಲೆ ಕುಳಿತೂ, ಇನ್ನುಳಿದವರು ತಮಗಿಷ್ಟವಾದ ವಾಹನಗಳಲ್ಲಿಯೂ ಸಭೆಗೆ ದಯಮಾಡಿಸಿದ್ದರು. ಆ ಮಾನಪತ್ರವನ್ನರ್ಪಿಸುವ ಸಭೆಗೆ ಬರೇ ಪುರುಷದೇವತೆಗಳೇ ಬಂದಿದ್ದರೆಂತಲ್ಲ; ಸಿಂಹಾರೋಹಣ ಮಾಡಿದ ಭಗವತಿ, ವೀಣಾಪಾಣಿಯಾದ ಸರಸ್ವತಿ, ಲಕ್ಷ್ಮೀ ಮುಂತಾದ ಪ್ರಮುಖ ಸ್ತ್ರೀದೇವತೆಗಳೂ ಬಂದಿದ್ದರು.

ಸಭೆಯ ಹೊತ್ತಾಗಲು ಪದ್ಧತಿಯ ಪ್ರಕಾರ ಸ್ವಾಗತಾಧ್ಯಕ್ಷ-ಅಧ್ಯಕ್ಷ ಮುಂತಾದವರ ಚುನಾವಣೆಯ ಕಾರ್ಯ ನೆರವೇರಿತು. ಸರ್ವೇಶ್ವರನಾದ ಶಂಕರನನ್ನೇ ಅಧ್ಯಕ್ಷನನ್ನಾಗಿ ಮಾಡಬೇಕೆಂದು ಮೊದಲು ನಿರ್ಧರಿಸಲ್ಪಟ್ಟಿತ್ತು; ಆದರೆ ಆಯುತ ಸಮಯದಲ್ಲಿ ಅವನು ಬಾರ

ದಿರಲು, ಆ ಮಾನವು ಸರ್ವವಿದ್ಯಾವಿಶಾರದಳಾದ ಸರಸ್ವತಿಯು ಪಾಲಿಗೆ ಹೋಯಿತು.

ಶ್ರೀಯುತ ಗಜಾನನನು ಸಭೆಗೆ ಬಂದ ದೇವತೆಗಳನ್ನೂ, ಸಭೆಗೆ ಕಾರಣರಾದ ಬ್ರಹ್ಮ, ನಾರಾಯಣ, ಇಂದ್ರ, ವರುಣಾದಿಗಳನ್ನೂ ಅಭಿನಂದಿಸಿದನು. ನಂತರ ಅವನಿಂದಲೇ ಅವರಿಗೆ ಕೊಡಲ್ಪಡುವ ಮಾನಪತ್ರವು ಓದಲ್ಪಟ್ಟಿತು. ಆ ಮಾನಪತ್ರದಲ್ಲಿ ಬರೆದಿದ್ದ ಮುಖ್ಯ ಸಂಗತಿಗಳಾವವೆಂದರೆ:—“ನಮ್ಮ ಈ ಇಂದ್ರಾದಿ ದೇವತೆಗಳು ಕರ್ನಾಟಕದಲ್ಲಿ ಬಹು ಕಷ್ಟಪಟ್ಟು ಸಂಚರಿಸಿ, ಅಲ್ಲಿಯ ಅನೇಕ ಹೊಸ ಶೋಧ-ಸುಧಾರಣೆಗಳನ್ನು ಕಂಡುಕೊಂಡು ಬಂದಿರುವದರಿಂದ, ನಾವು ಇವರ ಸಾಹಸಕ್ಕೂ ಗುಣಗ್ರಾಹತೆಗೂ ಈ ಪ್ರಚಂಡ ಸಭೆಯು ಮುಖಾಂತರ ಅಭಿನಂದಿಸುವೆವಲ್ಲದೆ, ಇವರು ಅಲ್ಲಿ ನೋಡಿ ಬಂದ ಸುಧಾರಣೆಗಳನ್ನು ಬೇಗನೆ ಇಲ್ಲಿ ಅಮಲಿನಲ್ಲಿ ತರಬೇಕೆಂದು ಇಚ್ಛಿಸುತ್ತೇವೆ” ಈ ಸಂಗತಿಯು ಸೋನೇರಿ ಅಕ್ಷರಗಳಿಂದ ಹಳ್ಳೀ ಆರ್ಟಪೇಪರಿನಲ್ಲಿ ಛಾಪಿಸಲ್ಪಟ್ಟದ್ದು, ಅದರ ಹಿಂದೊಂದು ಪ್ರತಿಯನ್ನು ಬೆಳ್ಳಿ-ಬಂಗಾರಗಳ ಕಟ್ಟುಗಳಲ್ಲಿಟ್ಟು ಶ್ರೀ ಸರಸ್ವತಿಯು ಬ್ರಹ್ಮ-ನಾರಾಯಣ-ಇಂದ್ರ-ವರುಣರಿಗೆ ಅರ್ಪಿಸಿದಳು!

ಸಭಾಧ್ಯಕ್ಷರ ಹಾಗು ಸಭಿಕರ ಆಭಾರ ಮನ್ನಿಸುವದಕ್ಕಾಗಿ ಆ ನಾಲ್ವರ ವತಿಯಿಂದಲೂ ಶ್ರೀ ಮನ್ನಾರಾಯಣನು ಕೆಲ ನಿಮಿಷಗಳ ವರೆಗೆ ಮಾತಾಡಿ, ತಾವು ನೋಡಿ ಬಂದ ಕರ್ನಾಟಕದೊಳಗಿನ ಎಲ್ಲ ಹೊಸ ಸುಧಾರಣೆಗಳನ್ನೂ-ತಾರಾಯಂತ್ರ, ಟಪಾಲಖಾತೆ, ರೈಲುಖಾತೆ, ಕರೆನ್ಸಿನೋಟ, ದವಾಖಾನೆ, ಇತರ ಎಲ್ಲ ಕಾರಖಾನೆ ಮುಂತಾದವುಗಳನ್ನು-ಈ ಲೋಕದೊಳಗೆ ಬೇಗನೆ ಅಮಲಿನಲ್ಲಿ ತರಲಾಗುವದು. ಈ ವ್ಯವಸ್ಥೆಯಿಂದ ನಮ್ಮೆಲ್ಲರಿಗೂ ಅಖಂಡ ಸುಖವಾಗಲಿ! ಎಂದನು.

ಸಂಪೂರ್ಣ.